ಹಿ.ಚಿ. ಬೋರಲಿಂಗಯ್ಯ

# ಉಜ್ಜನಿ ಚೌಡಮ್ಮ

## ಗ್ರಾಮದೇವತೆ ಅಧ್ಯಯನ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ

# ಉಜ್ಜನಿ ಚೌಡಮ್ಮ

ಜಾನಪದ ಮಾಲೆ

# ಉಜ್ಜನಿ ಚೌಡಮ್ಮ

## ಗ್ರಾಮದೇವತೆ ಅಧ್ಯಯನ

**ಹಿ.ಚಿ. ಬೋರಲಿಂಗಯ್ಯ**

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು – 560 018

UJJANI CHOWDAMMA - A study of Village deity by Hi. Chi. Boralingaiah, Professor, Kannada University, Hampi, Published by V.N. Mallikarjuna Swamy, Administrator, Kannada Pustaka Pradhikara (Kannada Book Authority), Pampa Mahakavi Road, Chamarajpet, Bangalore - 560 018,

Pages : XII+163+8

O: G. Girija

ಈ ಆವೃತ್ತಿಯ ಗ್ರಂಥಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ

ಮೊದಲ ಮುದ್ರಣ : 1979

ಎರಡನೇ ಮುದ್ರಣ : 2001

ಮುಖಪುಟ ಚಿತ್ರ ಮತ್ತು ವಿನ್ಯಾಸ

ಬಿ. ವಿನೂತನ

ರೇಖಾ ಚಿತ್ರಗಳು

ಕೆ.ಕೆ. ಮಕಾಳಿ

ಛಾಯಾಚಿತ್ರಗಳು

ಕೆ.ಎಚ್. ರಾಮಯ್ಯ

ISBN 81-7713-085-4

ಬೆಲೆ : ಎಪ್ಪತ್ತು ರೂಪಾಯಿಗಳು

ಅಕ್ಷರ ಜೋಡಣೆ ಮತ್ತು ಮುದ್ರಣ

ಶಕ್ತಿ ಪ್ರಿಂಟರ್ ಅಂಡ್ ಪಬ್ಲಿಷರ್

ರಾಜಾಜಿನಗರ, ೬ನೇ ಬ್ಲಾಕ್

ಬೆಂಗಳೂರು - ೫೬೦ ೦೧೦

ದೂರವಾಣಿ : ೩೩೦೫೮೭೦

ಜಾನಪದ ವಿದ್ವಾಂಸ

ಪ್ರೊ. ಡಿ. ಲಿಂಗಯ್ಯ

ಅವರಿಗೆ

# ಮುನ್ನುಡಿ

ಕನ್ನಡ ಪುಸ್ತಕ ಪ್ರಾಧಿಕಾರವು ಪುಸ್ತಕೋದ್ಯಮದ ಅಭಿವರ್ಧನೆಗಾಗಿ ಸರ್ಕಾರದಿಂದ 'ಸ್ಥಾಪಿತವಾಗಿರುವ ಒಂದು ಅಧಿಕೃತ ಸಂಸ್ಥೆ, ಲೇಖಕ-ಪ್ರಕಾಶಕ-ಮಾರಾಟಗಾರ ಮತ್ತು ಓದುಗರ ನಡುವೆ ಮಧುರ ಮತ್ತು ಅರ್ಥಪೂರ್ಣ ಸಂಬಂಧವನ್ನು ಸ್ಥಾಪಿಸಿ, ಕನ್ನಡ ಪುಸ್ತಕಗಳ ಓದು ಕರ್ನಾಟಕದಲ್ಲಿ ಅತ್ಯಂತ ವ್ಯಾಪಕವಾಗಿ ಪ್ರಸರಿಸುವಂತೆ ಮಾಡುವುದು ಇದರ ಉದ್ದೇಶ. ಕರ್ನಾಟಕದಲ್ಲಿ ಆಯಾ ವರ್ಷ ಪ್ರಕಟವಾಗುವ ಉತ್ತಮ ಕೃತಿಗಳನ್ನು ಖರೀದಿಸಿ ಗ್ರಂಥಾಲಯಗಳ ಮೂಲಕ ಓದುಗರಿಗೆ ಮುಟ್ಟಿಸುವುದು ಮತ್ತು ಬಹು ವೇಗವಾಗಿ ಬೆಳೆಯುತ್ತಿರುವ ಜಗತ್ತಿನ ಸಾಹಿತ್ಯ, ಕಲೆ, ಜ್ಞಾನ, ವಿಜ್ಞಾನ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳ ಅರಿವನ್ನು ಕನ್ನಡಿಗರಿಗೆ ತಮ್ಮ ಭಾಷೆಯಲ್ಲೇ ದೊರೆಯುವಂತೆ ಸುಲಭ ಬೆಲೆಯಲ್ಲಿ ಸುಂದರವಾಗಿ ಗ್ರಂಥಗಳನ್ನು ಪ್ರಕಟಿಸುವುದು ಪ್ರಾಧಿಕಾರದ ಅತಿಮುಖ್ಯ ಕರ್ತವ್ಯಗಳಲ್ಲಿ ಒಂದು.

ಮೇಲಿನ ಉದ್ದೇಶಕ್ಕೆ ಅನುಗುಣವಾಗಿ ಪುಸ್ತಕ ಪ್ರಾಧಿಕಾರವು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಿಷ್ಠೆಯಿಂದ ನಡೆಸುತ್ತ ಬಂದಿದೆ. ಜನಪ್ರಿಯ ಪುಸ್ತಕ ಮಾಲೆ, ಮೂಲಭೂತ ಶಿಕ್ಷಣ ಮಾಲೆ, ವಿಜ್ಞಾನ ದೀಪ ಮಾಲೆ, ಮಕ್ಕಳ ಪುಸ್ತಕ ಮಾಲೆ ಮುಂತಾದ ವಿವಿಧ ಮಾಲಿಕೆಗಳ ಮೂಲಕ ನೂರಾರು ಅತ್ಯುತ್ತಮ ಕೃತಿಗಳನ್ನು ಈಗಾಗಲೇ ಪ್ರಕಟಿಸಿದ್ದು ಅವು ಜನ ಮನ್ನಣೆಗೆ ಪಾತ್ರವಾಗಿವೆ. ಇವುಗಳ ಜೊತೆಗೆ ಜಾನಪದ ಮಾಲೆ ಎಂಬ ಶೀರ್ಷಿಕೆಯ ಅಡಿಯಲ್ಲಿ ಜಾನಪದ ಕ್ಷೇತ್ರದ ಮೂಲ ಕೃತಿಗಳನ್ನು ಹಾಗೂ ಅವುಗಳಿಗೆ ಸಂಬಂಧಿಸಿದ ಸಂಶೋಧನೆ, ವಿಶ್ಲೇಷಣೆ, ಚಿಂತನೆಗಳನ್ನು ಪ್ರಕಟಿಸುತ್ತಿದೆ. ಜಾನಪದ ಕ್ಷೇತ್ರ ಅತ್ಯಂತ ವ್ಯಾಪಕವೂ ಮತ್ತು ಸೂಕ್ಷ್ಮವೂ ಆಗಿ ಬೆಳೆಯುತ್ತಿರುವ ಮತ್ತು ಕನ್ನಡ ಜಾನಪದ ವಿಶ್ವ ಜಾನಪದದ ಗಮನವನ್ನು ವಿಕೃತ ಪ್ರಮಾಣದಲ್ಲಿ ಸೆಳೆಯುತ್ತಿರುವ ಈ ಸಂದರ್ಭದಲ್ಲಿ ಕನ್ನಡ ಜಾನಪದಕ್ಕೆ ಸಂಬಂಧಿಸಿದ, ಅದರ ಚಿಂತನೆಗೆ ವಿಶಾಲ ವೇದಿಕೆಯನ್ನು ನಿರ್ಮಿಸುವ ಕಾರ್ಯವನ್ನು ಪ್ರಾಧಿಕಾರ ಈ ಮಾಲೆಯ ಮೂಲಕ ಕೈಗೊಂಡಿದೆ.

ಈ ಮಾಲೆಯಲ್ಲಿ ಇದೀಗ ಶ್ರೀ ಹಿ.ಚಿ. ಬೋರಲಿಂಗಯ್ಯ ಅವರ 'ಉಜ್ಜನಿ ಚೌಡಮ್ಮ' ಎಂಬ ಗ್ರಾಮದೇವತೆ ಅಧ್ಯಯನದ ಈ ಕೃತಿಯು ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ.

ನಮ್ಮ ನಾಡಿನ ಶ್ರೇಷ್ಠ ಜಾನಪದ ವಿದ್ವಾಂಸರಲ್ಲಿ ಒಬ್ಬರಾದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಹಿ.ಚಿ. ಬೋರಲಿಂಗಯ್ಯನವರು ಚಿಕ್ಕಂದಿನಿಂದ ಸ್ವತಹ ಕಂಡ ತಮ್ಮ ಹಬ್ಬದ ಅನುಭವಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಮೂಲಕ ನಮ್ಮ ನಾಡಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಿಂತನೆಗೆ ಹೊಸ ಆಯಾಮ ನೀಡಿದ್ದಾರೆ. ಭಾರತದ ಜಾತಿಪದ್ಧತಿಯೊಳಗಿನ ಒಳಸೂಕ್ಷ್ಮಗಳನ್ನು ಹಾಗೂ ಅದರ ಬೆಳವಣಿಗೆಯನ್ನು ಹಂತಹಂತವಾಗಿ ಇಲ್ಲಿನ ಪ್ರಸ್ತಾವನೆಯಲ್ಲಿ ಚಿತ್ರಿಸಲಾಗಿದೆ. ಚೌಡಮ್ಮನ ಹಬ್ಬದಲ್ಲಿ ನಡೆಯುವ ವಿಶಿಷ್ಟ ಹಾಗೂ ಅಪರೂಪದ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಭಾವೈಕ್ಯತೆಯನ್ನು ಸಾರುವ ಸಾಮೂಹಿಕ ಮನೋಧರ್ಮ ಕೂಡ ಅತ್ಯಂತ ಸೂಕ್ಷ್ಮವಾಗಿ ಹಲವು ಆಚರಣೆಗಳ ಮೂಲಕ ವ್ಯಕ್ತವಾಗುತ್ತದೆ.

ಶ್ರೀ ಬೋರಲಿಂಗಯ್ಯನವರು ಬಹಳ ಹಿಂದಿನಿಂದಲೂ ಜನಪದ ಅಧ್ಯಯನ ಮತ್ತು ಸಂಶೋಧನೆಗಳಿಗೆ ತಮ್ಮನ್ನು ಮನಃಪೂರ್ವಕವಾಗಿ ತೆತ್ತುಕೊಂಡವರು. ಗ್ರಾಮೀಣ ಪರಿಸರದಲ್ಲಿ ಜನ್ಮ ತಳೆದ ಈ ಸಂಶೋಧಕ ಬಾಲ್ಯದಿಂದಲೂ ಜನಪದ ಮಣ್ಣು, ಗಂಧ ಗಾಳಿಗಳಿಗೆ ಮೈಮನಸ್ಸುಗಳನ್ನು ಪೂರ್ಣವಾಗಿ ತೊಡಗಿಸಿಕೊಂಡವರು. ಅವರ ವಿದ್ಯಾರ್ಥಿ ಜೀವನದಲ್ಲಿಯೇ ಬರೆದ ಈ ಪ್ರಸಿದ್ಧ ಕೃತಿಯನ್ನು ಇದೀಗ ಹೊಸ ಪ್ರಸ್ತಾವನೆಯೊಂದಿಗೆ ಸಿದ್ಧಪಡಿಸಿಕೊಟ್ಟಿದ್ದಾರೆ.

ಈ ಮಾಲೆಗಾಗಿ 'ಉಜ್ಜನಿ ಚೌಡಮ್ಮ' ಕೃತಿಯನ್ನು ಪ್ರಕಟಿಸಲು ಸಮ್ಮತಿಸಿದ ಡಾ. ಹಿ.ಚಿ. ಬೋರಲಿಂಗಯ್ಯ ಅವರಿಗೆ, ಪ್ರಾಧಿಕಾರದ ಸದಸ್ಯ ಬಂಧುಗಳಿಗೆ ಹಾಗೂ ಸುಂದರವಾಗಿ ಮುದ್ರಿಸಿಕೊಟ್ಟ ಶಕ್ತಿ ಪ್ರಿಂಟರ್‌ನ ಮಾಲೀಕರು ಹಾಗೂ ಸಿಬ್ಬಂದಿ ವರ್ಗದವರಿಗೆ ವಂದನೆಗಳು.

ಬೆಂಗಳೂರು — ಡಾ. ಎಚ್. ಜೆ. ಲಕ್ಕಪ್ಪಗೌಡ

೧-೩-೨೦೦೧ — ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರ

# ಎರಡು ಮಾತು

ಬಿ.ಎ. ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದಾಗ ನಾನು ಬರೆದ ಈ ಪುಸ್ತಕ ನಾಡಿನ ಸಂಸ್ಕೃತಿ ಚಿಂತಕರು ಮತ್ತು ಜಾನಪದ ಅಧ್ಯಯನಕಾರರ ಮುಕ್ತಕಂಠದ ಪ್ರಶಂಸೆಗೆ ಕಾರಣವಾದದ್ದು ನನ್ನ ಸುಯೋಗ, ಬಹುಶಃ ಜಾನಪದ ಕ್ಷೇತ್ರವನ್ನು ನಾನು ಆಯ್ಕೆ ಮಾಡಿಕೊಳ್ಳಲು ಪ್ರೇರಣೆ ನೀಡಿದ್ದೇ ಈ ಪುಸ್ತಕದ ಖ್ಯಾತಿ ಎನ್ನಬಹುದು. ಆ ಸಂದರ್ಭದಲ್ಲಿ ನನ್ನನ್ನು ಪ್ರೇರೇಪಿಸಿದ ಪ್ರೊ. ಡಿ. ಲಿಂಗಯ್ಯ, ಡಾ. ಚಂದ್ರಶೇಖರ ಕಂಬಾರ, ಪ್ರೊ. ಕಾಳೇಗೌಡ ನಾಗವಾರ, ಡಾ. ಡಿ.ಆರ್. ನಾಗರಾಜ್, ಡಾ. ಸಿದ್ದಲಿಂಗಯ್ಯ, ಪ್ರೊ. ಕಿ.ರಂ. ನಾಗರಾಜ, ಪ್ರೊ. ಬರಗೂರು ರಾಮಚಂದ್ರಪ್ಪ, ಡಾ. ಕೆ.ವಿ. ನಾರಾಯಣ, ಪ್ರೊ. ಬಿ. ಆರ್. ರಾಮಚಂದ್ರೇಗೌಡ, ಶ್ರೀ ವೈ.ಕೆ. ರಾಮಯ್ಯ ಹಾಗೂ ನಮ್ಮನ್ನು ಅಗಲಿರುವ ಪ್ರೊ. ಜೀಶಂಪ ಮತ್ತು ಡಾ. ಬೆಸಗರಹಳ್ಳಿ ರಾಮಣ್ಣ ಅವರ ಅನನ್ಯ ಪ್ರೀತಿಗೆ,


ಈ ಪುಸ್ತಕ ಎರಡನೇ ಮುದ್ರಣದ ರೂಪದಲ್ಲಿ ಪ್ರಕಟವಾಗಲು ಕಾರಣರಾದ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ನನ್ನ ಆತ್ಮೀಯ ಹಿರಿಯರೂ ಆದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರಿಗೆ ಹಾಗೂ ಆಡಳಿತಾಧಿಕಾರಿ ಮತ್ತು ಗೆಳೆಯ ಶ್ರೀ ವಿ. ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೆ,

ನನ್ನ ಎಲ್ಲ ಬರವಣಿಗೆಗಳ ಪ್ರಥಮ ವಿಮರ್ಶಕರೂ ಸಹೋದ್ಯೋಗಿ ಮಿತ್ರರೂ ಆದ ಡಾ. ಕರೀಗೌಡ ಬೀಚನಹಳ್ಳಿ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಡಾ. ರಹಮತ್ ತರೀಕೆರೆ, ಡಾ. ಕೆ.ಸಿ. ಶಿವಾರೆಡ್ಡಿ ಮತ್ತು ಎ.ಎಸ್. ಪ್ರಭಾಕರ ಅವರಿಗೆ,

ಪುಸ್ತಕಕ್ಕೆ ಅಂದದ ರೇಖಾಚಿತ್ರ ಬರೆದುಕೊಟ್ಟ ಗೆಳೆಯ ಕೆ.ಕೆ. ಮಕಾಳಿ, ಮುಖಪುಟ ಚಿತ್ರ ಬರೆದ ನನ್ನ ಪುತ್ರ ಬಿ. ವಿನೂತನ, ಡಿ.ಟಿ.ಪಿ. ಮಾಡಿದ ಆರ್. ರವಿಶಂಕರ್ ಮತ್ತು ಅಂದವಾಗಿ ಮುದ್ರಿಸಿದ ಮಿತ್ರ ಸಿ.ವಿ.ಜಿ. ಚಂದ್ರು ಅವರಿಗೆ

ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಹಿ.ಚಿ. ಬೋರಲಿಂಗಯ್ಯ



## ಪರಿವಿಡಿ


೧. ಮುನ್ನುಡಿ

9. ಪ್ರಸ್ತಾವನೆ /೧

೩. ಉಜ್ಜನಿ ಚೌಡಮ್ಮ / ೨೭

೪. ಉಜ್ಜನಿ ಚೌಡಮ್ಮನ ಪದಗಳು / ೮೯

ಅನುಬಂಧ / ೧೪೬

೫. ನಿರೂಪಕರ ಪರಿಚಯ

೬. ಶಾಸನ

೭. ಅರ್ಥಕೋಶ



# ಪ್ರಸ್ತಾವನೆ

ದೇವರುಗಳ ಜಗತ್ತು ಅತ್ಯಂತ ಸಂಕೀರ್ಣವಾದುದು. ಈ ಜಗತ್ತಿನ ಸಾಂಸ್ಕೃತಿಕ ಮುಖ ಒಂದಾದರೆ ಸಾಮಾಜಿಕ ಮುಖ ಇನ್ನೊಂದು. ಇವೆರಡನ್ನು ಒಟ್ಟಾಗಿ ಇಷ್ಟೇ ನಾವು ನೋಡಬೇಕಾಗುತ್ತದೆ. ದೇವರು ಸೃಷ್ಟಿಯಾದದ್ದು ಹೇಗೆ? ಇದೊಂದು ಜಟಿಲ ಪ್ರಶ್ನೆ, ಲಕ್ಷಾಂತರ ವರ್ಷಗಳ ಮಾನವನ ಇತಿಹಾಸದಲ್ಲಿ ನಿರಂತರವಾಗಿ ವಿಕಾಸ ಹೊಂದುತ್ತಾ ಬಂದ ಅವನ ಪ್ರಜ್ಞೆ ಇವತ್ತಿಗೂ ಅದೇ ವಿಕಾಸದ ಹಾದಿಯಲ್ಲೇ ಇದೆ. ಮೆದುಳು ಬೆಳೆಯುತ್ತಾ ಹೋದಂತೆ ಅವನ ಪ್ರಜ್ಞೆ ಕೂಡ ಹಲವು ಹಂತಗಳಲ್ಲಿ ವಿಕಸಿಸುತ್ತಾ ನಡೆದಿದೆ. ಆದ್ದರಿಂದ ಸಾಂಸ್ಕೃತಿಕವಾಗಿ ಇವೊತ್ತು ನಮ್ಮ ಕಣ್ಣ ಮುಂದಿರುವ ಯಾವುದೇ ಅಂಶವೂ ದಿಢೀರನೆ ಅವತರಿಸಿದ್ದಂತೂ ಅಲ್ಲ. ಮಾನವಶಾಸ್ತ್ರದ ಆಳ ಅಧ್ಯಯನವಷ್ಟೇ ಇದಕ್ಕೆಲ್ಲ ಉತ್ತರಿಸಬೇಕು. ಇವತ್ತಿನ ಮನುಷ್ಯ ಯಾವ ರೀತಿಯಲ್ಲೇ ಬದುಕುತ್ತಿರಲಿ, ಎಷ್ಟೇ ನಾಗರೀಕನಾಗಿ ತನ್ನ ವ್ಯವಹಾರವನ್ನು ವಿಸ್ತರಿಸಿಕೊಂಡಿರಲಿ, ದೇವರು ಇಲ್ಲವೇ ಇಲ್ಲ ಎಂಬ ನಾಸ್ತಿಕವಾದವನ್ನು ಮಂಡಿಸುವಷ್ಟು ಪ್ರಜ್ಞಾವಂತನಾಗಿರಲಿ, ಆ ಎಲ್ಲ ಅನಿಸಿಕೆಗಳಿಗೆ ಒಂದು ಸುದೀರ್ಘ ಇತಿಹಾಸವಂತೂ ಇದೆ. ನಾಸ್ತಿಕವಾದ ಹುಟ್ಟುವುದು ಕೂಡ ಅಸ್ತಿತ್ವದಲ್ಲಿರುವ ಯಾವುದೋ ಒಂದರ ಆಧಾರದ ಮೇಲೆ ತಾನೆ? ಹೀಗೆಂದು ದೇವರು ಇದ್ದಾನೆ ಅಥವಾ ಇಲ್ಲ ಎಂಬ ತರ್ಕಮಂಡನೆಯ ಕಾರ್ಯವನ್ನು ನಾನಿಲ್ಲಿ ಮಾಡುತ್ತಿಲ್ಲ. ಆದರೆ ದೇವರನ್ನು ಮನುಷ್ಯನೇ ಸೃಷ್ಟಿಸಿದ ಪ್ರಕ್ರಿಯೆ ಹೇಗೆ ಆರಂಭವಾಯಿತು ಎಂಬುದೇ ಇಲ್ಲಿಯ ಪ್ರಶ್ನೆ.

ಮನುಷ್ಯ ಎರಡು ಕಾರಣಕ್ಕೆ ದೇವರನ್ನು ಕಲ್ಪಿಸಿಕೊಂಡ ಎಂಬ ವಾದಗಳಿವೆ. ಪ್ರಕೃತಿಯ ಎಲ್ಲ ವೈಚಿತ್ರಗಳನ್ನು ಬಿಡಿಸಲಾರದ ನಿಗೂಢಗಳನ್ನು ಗಮನಿಸಿದ ಆದಿಮ ಮನುಷ್ಯ ತನ್ನನ್ನೂ ಮೀರಿದ ಅಗೋಚರ ಶಕ್ತಿಯೊಂದಿದೆ ಎಂದು ನಂಬಿದ. ಆ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನ್ನ ಒಳ್ಳೆಯದನ್ನು ಸಾಧಿಸಿಕೊಳ್ಳಬೇಕು ಎಂಬುದು ಅವನ ಉದ್ದೇಶವಾಯಿತು. ಯಾಕೆಂದರೆ ನಿಸರ್ಗದ ಒಡಲಲ್ಲಿ ಬಾಳುತ್ತಿದ್ದ ಅವನಿಗೆ ಸಹಜವಾಗಿಯೇ ನೂರೆಂಟು ಕಂಠಕಗಳು ಎದುರಾಗುತ್ತಿದ್ದವು. ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನಗೆ ಒದಗುವ ಕಂಠಕಗಳಿಂದ ಪಾರಾಗಬೇಕು ಎಂಬುದು ಅವನ ತರ್ಕವಾಗಿತ್ತು. ಹೀಗಾಗಿ ಆರಂಭದ

ಅವನ ಕಲ್ಪನೆಯ ಹಿಂದೆ ತಾನು ದೇವರ ಕೃಪೆಯಿಂದ ದೊಡ್ಡವನಾಗಬೇಕು, ಸಂಪಾದಿಸಬೇಕು ಎಂಬ ಸ್ವಾರ್ಥಕ್ಕಿಂತ, ತನಗೆ ಒದಗುವ ಕಷ್ಟಗಳಿಂದ ಪಾರಾಗಬೇಕು ಎಂಬ ಸಹಜ ಉದ್ದೇಶವಿತ್ತು.

ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಬಗೆ ಹೇಗೆ? ಅವನು ಎರಡು ರೀತಿಯಲ್ಲಿ ದೈವವನ್ನು ಅಥವಾ ಆ ಶಕ್ತಿಯನ್ನು ಗೆಲ್ಲುವ ಪ್ರಯತ್ನ ಮಾಡಿದ :

೧. ಮಾಟದ ಮೂಲಕ ನಿಯಂತ್ರಿಸುವುದು, ೨. ಆರಾಧನೆಯ ಮೂಲಕ ಒಲಿಸಿಕೊಳ್ಳುವುದು.

ಮಾಟದ ಮೂಲಕ ಅಗೋಚರ ಶಕ್ತಿಯನ್ನು ನಿಯಂತ್ರಿಸಿ ತನ್ನ ಕಂಠಕಗಳನ್ನು ದೂರ ಮಾಡಿಕೊಳ್ಳುವ ಕಲ್ಪನೆ ಆದಿಮಾನವನದ್ದು. ಈ ಮಾಂತ್ರಿಕತೆಯೇ ಮುಂದೆ ವಿಜ್ಞಾನವಾಗಿ ಬೆಳೆಯಿತು ಎಂಬುದು ಅನೇಕ ಮಾನವ ಶಾಸ್ತ್ರಜ್ಞರ ವಾದ. ಮಾಂತ್ರಿಕ ಮನಸ್ಸು ವಿಜ್ಞಾನವನ್ನು ಬೆಳೆಸಿತು ಎಂಬುದು ನಿಜ. ಆದರೆ, ಈ ಮಾಂತ್ರಿಕತೆ ಪೂರಾ ವಿಜ್ಞಾನವಾಗಿ ಪರಿವರ್ತನೆಯಾಗಲಿಲ್ಲ. ಮಾಂತ್ರಿಕ ರೂಪದ ಅನೇಕ ಆಚರಣೆಗಳು ಹಾಗೇ ಉಳಿದು ಬಂದವು. ಅವು ಅನೇಕ ಆಚರಣಾ ಕ್ರಿಯೆಗಳ ರೂಪದಲ್ಲಿ, ಕಲೆಗಳ ರೂಪದಲ್ಲಿ, ವಿಧಿ ನಿಷೇಧಗಳ ರೂಪದಲ್ಲಿ ಇಂದಿಗೂ ನಮ್ಮ ಜನಪದ ಜೀವನದಲ್ಲಿ ಉಳಿದು ಬಂದಿದೆ.

ನಿರ್ದಿಷ್ಟ ದೇವರು ಅಥವಾ ನಿರ್ದಿಷ್ಟ ಧರ್ಮ ಉದಯಿಸುವ ಮೊದಲು ಮನುಷ್ಯ ನಿಸರ್ಗದ ಅನೇಕ ಸಚರಾಚರ ಪ್ರಾಣಿ ಸಮುದಾಯಗಳಲ್ಲಿ ತಾನೂ ಒಬ್ಬನಾಗಿ ಬದುಕುತ್ತಿದ್ದ. ಗುಂಪುಗುಂಪುಗಳಲ್ಲಿ ವಾಸಿಸುತ್ತಿದ್ದ ಅವರಿಗೆ, ತಮ್ಮ ತಮ್ಮ ಗುಂಪುಗಳ ಗುರುತು ಹೇಳಿಕೊಳ್ಳಲು ಏನಾದರೂ ಆಧಾರ ಬೇಕಾಗಿತ್ತು. ಆಯಾ ಪ್ರದೇಶದಲ್ಲಿ ತಮ್ಮನ್ನು ಪ್ರಭಾವಿಸಿದ ಪ್ರಾಣಿ, ಸಸ್ಯ, ನದಿ, ಬೆಟ್ಟ ಅಥವಾ ವಸ್ತುವಿನ ಹೆಸರನ್ನು ತಮ್ಮ ತಮ್ಮ ಗುಂಪಿನ ಲಾಂಛನವನ್ನಾಗಿ ಅವರು ಇಟ್ಟುಕೊಂಡರು. ಮುಂದೆ ಇದೇ ಅವರ ಕುಲಚಿಹ್ನೆಯಾಯಿತು. ಒಂದು ಮಾತನ್ನು ಇಲ್ಲಿ ಗಮನಿಸಬೇಕು, ಕುಲಚಿಹ್ನೆ ಅವರನ್ನು ಅವರು ಗುರುತಿಸಿಕೊಳ್ಳುವ ಸಾಧನವಾಗಿತ್ತೇ ಹೊರತು, ದೈವವಾಗಿರಲಿಲ್ಲ. ಆದರೆ, ಬರಬರುತ್ತಾ ಆಯಾ ಗುಂಗಲ್ಲಿ ಬಲಾಡ್ಯ ಮತ್ತು ದುರ್ಬಲ ಎಂಬ ಗುಂಪುಗಳಾದವು. ಒಂದು ಮತ್ತೊಂದನ್ನು ನಿಯಂತ್ರಿಸಬು ಸಿತು. ಸಮಾಜದಲ್ಲಿ ತನ್ನ ಸ್ಥಾನವನ್ನು ಮೇಲೇರಿಸಿಕೊಂಡ ಲಾಂಛನ ಇತಗರಿಗೂ ಅನುಸರಿಸಬೇಕಾದ ಅಥವಾ ಗೌರವಿಸಬೇಕಾದ ಸಂಗತಿಯಾಯಿತು. ಹೀಗೆ ಗೌರವಿಸಲ್ಪಟ್ಟ ಲಾಂಛನವೇ ಮುಂದೆ ದೈವವಾಗಿ ರೂಪು ಪಡೆದಿರಬೇಕು ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ. ಆದರೆ ಭಾರತದಲ್ಲಿನ ದೈವಾವಸ್ಥೆಗಳನ್ನು ಗಮನಿಸಿದರೆ ಈ ರೀತಿಯಲ್ಲಿ ಟೋಟೆಂಗಳು ದೈವಗಳಾಗಿರುವ ಉದಾಹರಣೆ ವಿರಳ. ಹಳೇ ಶಿಲಾಯುಗದ ಕಾಲದಿಂದ ಆರಂಭವಾಗಿ ಹೊಸ ಶಿಲಾಯುಗ ಮತ್ತು ಕಂಚಿನ ಯುಗದಲ್ಲಿ ನಮಗೆ ಅನೇಕ ರೀತಿಯ ದೇವರುಗಳ ಮೂರ್ತಿಗಳು ಸಿಕ್ಕಿವೆ.

ಗುಹೆಗಳಲ್ಲಿ ಮತ್ತು ಬಂಡೆಗಳ ಮೇಲೆ ಕೆತ್ತಿದ ಅನೇಕ ಆಕೃತಿಗಳು ದೊರಕಿವೆ. ದೇವರುಗಳ ಅಸ್ತಿತ್ವ ಅಷ್ಟು ಪ್ರಾಚೀನದಲ್ಲಿಯೇ ಇತ್ತು ಎಂಬುದಕ್ಕೆ ಅನೇಕ ಆಧಾರಗಳನ್ನು ಪುರಾತತ್ವ ಶಾಸ್ತ್ರಜ್ಞರು ನಿರೂಪಿಸಿದ್ದಾರೆ. ಹರಪ್ಪಾ ಮತ್ತು ಮಹೆಂಜದಾರೋ ಉತ್ಖನನದಲ್ಲಿ ಅನೇಕ ದೇವತೆಯರ ಆಕೃತಿಗಳು ಲಭ್ಯವಾಗಿವೆ. ಆದರೆ ಒಂದು ಅಂಶವನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಭಾರತದ ಪ್ರಾಚೀನ ಪರಂಪರೆಯಲ್ಲಿ ಕಂಡುಬರುವ ಬಹುತೇಕ ದೇವರುಗಳಲ್ಲಿ ಪ್ರಮುಖ ಸ್ಥಾನ ಮಾತೃ ದೇವತೆಯರದ್ದು. ಎಲ್ಲೆಲ್ಲಿಯೂ ಮಾತೃವೇ ಮುಖ್ಯ. ಇದಕ್ಕೆ ಕಾರಣಗಳೇನು? ಬಹುಶಃ ಭಾರತದಲ್ಲಷ್ಟೇ ಅಲ್ಲ, ಇಡೀ ಜಗತ್ತಿನ ದೈವಕಲ್ಪನೆಯಲ್ಲಿಯೂ ಮಾತೃವಿಗೇ ಪ್ರಥಮ ಸ್ಥಾನ.

ದೇವರುಗಳ ಸೃಷ್ಟಿಯಲ್ಲಿ ಕನಿಷ್ಠ ನಾಲ್ಕು ಹಂತಗಳನ್ನು ಗುರುತಿಸಬಹುದು ಎಂಬುದು ನನ್ನ ಅಭಿಪ್ರಾಯ. ಮನುಷ್ಯ ನಾಗರೀಕನಾಗಲು ಹವಣಿಸಿದ ಮೊದಲ ಘಟ್ಟ ಆಹಾರ ಸಂಗ್ರಹಣೆ. ಅಂದರೆ ತನಗೆ ಬೇಕಾದ ಅಗತ್ಯ ವಸ್ತುಗಳನ್ನು ಅರಸುತ್ತಾ ಕಾಡಿನಿಂದ ಕಾಡಿಗೆ ಅಲೆಯುತ್ತಿದ್ದ ಮೃಗೀಯ ಜೀವನ ಅದು. ಆದರೂ ಹಾಗೆ ಲಭ್ಯವಾದ ಆಹಾರವನ್ನು ಒಂದು ಕಡೆ ಕೂಡಿಡುವ, ಸಂರಕ್ಷಿಸುವ ಬುದ್ಧಿಯನ್ನು ಉಪಯೋಗಿಸಿದ್ದೇ ಅವನು ನಾಗರೀಕತೆ ಕಡೆಗೆ ಮುಖ ಮಾಡಿದ ಪ್ರಥಮ ಹಂತ. ಒಂದು ಗುಂಪಿನ ಜನ ಒಟ್ಟಾಗಿ ವಾಸಿಸುವ ಮೂಲಕ ತಮಗೊಂದು ಅಸ್ತಿತ್ವ ಕಂಡುಕೊಳ್ಳುತ್ತಿದ್ದ ಕಾಲ ಅದು. ಅಲ್ಲಿ ಯಾರು ಗಂಡ ಅಥವಾ ಯಾರು ಹೆಂಡತಿ ಎಂಬ ಕಲ್ಪನೆ ಇರಲಿಲ್ಲ. ಸಮೂಹ ಜೀವನ ಅದು. ಮಕ್ಕಳನ್ನು ಹಡೆಯಬಲ್ಲ ಶಕ್ತಿ ಪಡೆದ ತಾಯಿ ಮಾತ್ರ ಅಲ್ಲಿ ಮುಖ್ಯ. ಅವಳಿಗೇ ಅಲ್ಲಿ ಪ್ರಾಧಾನ್ಯ. ಆಹಾರ ಸಂಗ್ರಹಣೆಗಾಗಿ ಹೊರಟ ಗಂಡಸು ಹಿಂತಿರುಗಿ ಬಂದಾಗ ಲಭ್ಯವಿದ್ದ ಹೆಂಗಸಿನ ಜೊತೆ ತನ್ನ ಲೈಂಗಿಕ ತೃಷೆ ತೀರಿಸಿಕೊಳ್ಳುತ್ತಿದ್ದ ಅಷ್ಟೇ. ಆದರೆ ಯಾರು ಮಗುವಿನ ತಾಯಿಯಾಗುತ್ತಾಳೋ ಅವಳಿಗೆ ವಿಶೇಷ ಸ್ಥಾನಮಾನ. ಅದರ ತಂದೆ ಯಾರು ಎಂಬುದು ಅಲ್ಲಿ ಮುಖ್ಯವೇ ಅಲ್ಲ. ಹೀಗಾಗಿ ತಾಯಿಯೇ ಸತ್ಯ. ಇಷ್ಟಲ್ಲದೆ ಗಂಡಸರು ಹೊರಗಿನಿಂದ ಸಂಗ್ರಹಿಸಿ ತಂದ ಆಹಾರಗಳನ್ನು ಸಂರಕ್ಷಿಸಿ ಇಡುವುದು, ಹೆತ್ತ ಮಕ್ಕಳನ್ನು ಪೋಷಿಸುವುದು ಮುಂತಾದಂತೆ ಇಡೀ ಸಮೂಹದ ಜವಾಬ್ದಾರಿ ತಾಯಿಯದೇ ಆಗಿತ್ತು. ಆದ್ದರಿಂದ ಮಾತೃವಿನ ಸ್ಥಾನ ನಿರ್ವಿವಾದವಾಗಿ ಪ್ರಾಮುಖ್ಯತೆ ಗಳಿಸಿತ್ತು. ಹೀಗಾಗಿ ಸೃಷ್ಟಿಗೆ ಕಾರಣಳಾದ ಮತ್ತು ಪೋಷಣೆಗೆ ಪೂರಕಳಾದ ಮಾತೃವನ್ನು ಗೌರವಿಸಿ, ಆರಾಧಿಸಿದ್ದು ಕೂಡ ಅಷ್ಟೇ ಸಹಜ. ಮಾತೃವಿನ ಆರಾಧನೆ ಆರಂಭವಾದ ಮೊದಲ ಹಂತ ಇದು, ಈ ಹಿನ್ನೆಲೆಯಲ್ಲಿ ದೈವ ಸೃಷ್ಟಿಯ ವಿವಿಧ ಹಂತಗಳನ್ನು ಹೀಗೆ ಪಟ್ಟಿಮಾಡಬಹುದು :

೧. ಮೇಲೆ ವಿವರಿಸಿದಂತೆ ಎಲ್ಲಕ್ಕೂ ಮಾತೃವೇ ಮೂಲ, ಅವಳೇ ಸತ್ಯ ಎಂಬ ಅನಾದಿಕಾಲದ ನಿಜಸ್ಥಿತಿಯ ಮೂಲಕ ರೂಪುಗೊಂಡ ಮಾತೃವಿನ ಆರಾಧನೆ. ಇದು ಆಹಾರ ಸಂಗ್ರಹಣೆಯ ಕಾಲದ ಮುಕ್ತ ಸ್ಥಿತಿಯಲ್ಲಿ ಆರಂಭಗೊಂಡದ್ದು.

೨. ಪ್ರಾಣಿಗಳನ್ನು ಪಳಗಿಸಿ ಪಶುಸಂಗೋಪನಾ ಕಾರ್ಯಕ್ಕೆಗೊಂಡ ಹಂತದಿಂದ ಪುರುಷ ಪ್ರಾಧಾನ್ಯ ಹೆಚ್ಚಾಯಿತು. ಪುರುಷ ಪ್ರಾಧಾನ್ಯತೆಯ ಜೊತೆಗೇ ಪುರುಷ ದೈವಗಳ ಸೃಷ್ಟಿಯೂ ಆಯಿತು. ಆಯಾ ಸಮುದಾಯದ ವೀರರು ದೈವಗಳಾಗಿ ರೂಪಾಂತರಗೊಂಡ ಸ್ಥಿತಿಯಲ್ಲಿ ಅವರ ಆರಾಧನೆಯೂ ವಿವಿಧ ರೀತಿಯಲ್ಲಿ ಆರಂಭಗೊಂಡಿತು.

೩. ಪುರುಷ ಹೊರಗೆ ಹೋದಾಗ ಮಕ್ಕಳ ಪೋಷಣೆ ಮಾಡಿಕೊಂಡು ಇರುತ್ತಿದ್ದ ಸ್ತ್ರೀ ಕೃಷಿಯ ಅನ್ವೇಷಣೆ ಮಾಡಿದಳು ಎಂಬುದು ಅನೇಕರ ಅಭಿಪ್ರಾಯ. ಸ್ತ್ರೀಯ ಗರ್ಭಧಾರಣಾ ಶಕ್ತಿ ಮತ್ತು ಭೂಮಿಯ ಸಸ್ಯಧಾರಣಾ ಶಕ್ತಿಯನ್ನು ಗೌರವಿಸಿ ಮಾನ್ಯ ಮಾಡಿದ ಕೃಷಿ ಹಂತದ ಚಟುವಟಿಕೆಗಳು ಸ್ತ್ರೀಯನ್ನು ಮತ್ತೆ ದೈವಸ್ಥಾನಕ್ಕೆ ಏರಿಸಿದವು. ಗ್ರಾಮದೇವತೆಗಳ ಸೃಷ್ಟಿ ಆರಂಭವಾದದ್ದು ಹೀಗೆ.

೪. ಕೃಷಿ ಚಟುವಟಿಕೆ ಒಂದು ಆರ್ಥಿಕ ಚಟುವಟಿಕೆಯಾಗಿ ಅಭಿವೃದ್ಧಿ ಹೊಂದಿದಂತೆ ಭೂಮಾಲಿಕತ್ವವೂ ತನ್ನ ನೆಲೆ ಕಂಡುಕೊಳ್ಳತೊಡಗಿತು. ಆಸ್ತಿಯ ಒಡೆತನದ ಕಲ್ಪನೆ ಬರುತ್ತಿದ್ದಂತೆ ತಮ್ಮ ಆಸ್ತಿ ತಮ್ಮ ಮಕ್ಕಳಿಗೇ ಸೇರಬೇಕೆಂಬ ನಂಬಿಕೆ ಬಲವಾಯಿತು. ಇಲ್ಲಿಯೇ ಪಾತಿವ್ರತ್ಯ ಎಂಬ ಹೊಸ ಮೌಲ್ಯ ಇಣುಕು ಹಾಕಿತು. ಭೂಮಿಯಂತೆಯೇ ಸ್ತ್ರೀ ಕೂಡ ಪುರುಷನ - ಆಸ್ತಿಯಾಗಿ ಪರಿವರ್ತಿತಳಾದಳು. ಪುರುಷ ಪ್ರಾಧಾನ್ಯ ಇಲ್ಲಿ ಮತ್ತೆ ತನ್ನ ಸಾರ್ವಭೌಮತ್ವ ಸ್ಥಾಪಿಸಿತು. ಆರ್ಯರ ಮುಖಂಡತ್ವದಲ್ಲಿ ಪುರುಷ ಪ್ರಧಾನ ಮೌಲ್ಯ ವಿಜೃಂಬಿಸಿ, ಪುರುಷ ದೈವಗಳ ಸೃಷ್ಟಿಯೂ ಆಯಿತು. ಆ ದೈವಗಳ ಪುರಾಣಗಳು ಲಿಖಿತವಾಗಿ ದಾಖಲಾದವು. ಮಾತೃವಿನ ಸಂಕೇತದ ದೇವತೆಗಳು ಪುರುಷ ದೈವಗಳ ಅಡಿಯಾಳಾಗಿಯೋ, ನಿಕೃಷ್ಟ ಸೇವಕಿಯಾಗಿಯೋ, ಇಲ್ಲವೇ ಆರ್ಯದೈವಗಳ ಹೆಂಡತಿಯರಾಗಿಯೋ ಕಾಣಿಸಿಕೊಂಡರು. ಇದು ಇವತ್ತಿನ ನಮ್ಮ ಕಣ್ಣಮುಂದಿನ ಸ್ಥಿತಿ.

ಇಷ್ಟೆಲ್ಲ ಪುರುಷ ಅವಸ್ಥಾಂತರಗಳ ನಡುವೆಯೂ ಮಾತೃದೇವತೆಯರ ಸ್ಥಾನವೇ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಅಧಿಕೃತವಾಗಿ ಉಳಿದಿರುವುದೊಂದು ವಿಶೇಷ. ಆರ್ಥಿಕ ಚಟುವಟಿಕೆ ಗಂಡಸಿನದಾಗುವ ಮೂಲಕ ಆ ರಂಗದಲ್ಲಿ ಪುರುಷ ಮುಖ್ಯವಾಗಿದ್ದಾನಾದರೂ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಸ್ತ್ರೀಯ ಪ್ರಾಧಾನ್ಯ ಕಡಿಮೆಯಂತೂ ಆಗಿಲ್ಲ. ಮನುಷ್ಯ ಸಮುದಾಯದ ಪಾಲನೆ, ಪೋಷಣೆ ಮತ್ತು ರಕ್ಷಕಿಯಾಗಿ ಮಾತೃದೇವತೆ (ಬೇಟೆ ಮತ್ತು ಆಹಾರ ಸಂಗ್ರಹಣೆ ಹಂತ), ಧಾನ್ಯ ದೇವತೆಯಾಗಿ ಮಾತೃದೇವತೆ (ಕೃಷಿ ಹಂತ) ರೋಗ ನಿಯಂತ್ರಕಳಾಗಿ ಮಾತೃದೇವತೆ (ಗ್ರಾಮಗಳ ಹುಟ್ಟಿನ ನಂತರದ ಸ್ಥಿತಿ) ಈ ರೀತಿಯಲ್ಲಿ ಪ್ರಾಚೀನದಿಂದ ಇಲ್ಲಿಯವರೆಗೆ ಮಾತೃದೇವತೆಯ ಸ್ಥಾನವೇ ಮಿಗಿಲಾಗಿ ಪರಿಗಣಿತವಾಗುತ್ತಾ ಬಂದಿರುವುದನ್ನು ನಾವು ಕಾಣುತ್ತೇವೆ. ದಕ್ಷಿಣ ಭಾರತದ ಇಡೀ ದ್ರಾವಿಡ ಸಮುದಾಯದಲ್ಲಂತೂ ಮಾತೃಮೂಲ ಕುಟುಂಬಗಳೇ ಇತ್ತೀಚಿನವರೆಗೂ ಅಸ್ತಿತ್ವದಲ್ಲಿದ್ದ ಕಾರಣ ಮಾತೃದೇವತೆಯರ ಪ್ರಾಮುಖ್ಯವೂ

ಅಷ್ಟೇ ಇತ್ತು. ದ್ರಾವಿಡ ಮೂಲದ ಬುಡಕಟ್ಟು ಸಮುದಾಯಗಳಿಂದ ನಾಗರೀಕ ಸಮುದಾಯಗಳವರೆಗೆ ಈ ಮಾತು ನಿಜ.

ಈ ಮಾತೃಮೂಲವಾದ ಆರಾಧನೆ ಬಹು ಪ್ರಾಚೀನವಾದುದು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಹಾಗೆ ನೋಡಿದರೆ ಇಡೀ ಜಗತ್ತಿನ ಆದಿಯೇ ಮಾತೃಮೂಲವಾದದ್ದು. ಕ್ರಿಶ್ಚಿಯನ್ ಪೂರ್ವದ ಇಡೀ ಯುರೋಪಿನಲ್ಲಿ ಮಾತೃದೇವತೆಯ ಆರಾಧನೆಯೇ ಪ್ರಬಲವಾಗಿತ್ತು. ಪ್ರಾಚೀನ ಗ್ರೀಸ್ ಮತ್ತು ರೋಂನಲ್ಲಿ ಕೂಡ ಇದು ನಿಚ್ಚಳವಾಗಿತ್ತು. ಹಾಗೆಯೇ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಖಂಡಗಳ ಮೂಲ ನಿವಾಸಿಗಳು ಇವತ್ತಿಗೂ ಮಾತೃ ಆರಾಧಕರು ಎಂಬುದನ್ನು ಸಾಬೀತುಪಡಿಸಲು ಅನೇಕ ಆಧಾರಗಳಿವೆ. ಏಷ್ಯಾದ ಪ್ರಮುಖ ಭೂಪ್ರದೇಶವೆನಿಸಿದ ಭಾರತ ಮಾತೃದೇವತೆಯರ ತವರು ಎಂದರೂ ನಡೆಯುತ್ತದೆ. ಆರ್ಯಪೂರ್ವ ಭಾರತದಲ್ಲಿ ದೇಶದ ಬಹುತೇಕ ಎಲ್ಲ ಪ್ರದೇಶಗಳೂ ಮಾತೃಮೂಲೀಯ ವಾಗಿದ್ದವು ಹಾಗೂ ಮಾತೃ ಆರಾಧನೆ ಅಭಾದಿತವಾಗಿತ್ತು. ಮಾನವನ ಆದಿಮ ಆರ್ಥಿಕ ಚಟುವಟಿಕೆ ಎನಿಸಿದ ಆಹಾರ ಸಂಗ್ರಹಣೆಯ ಕಾಲದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ ಸ್ತ್ರೀಯ ಸ್ಥಾನಮಾನ ತನ್ನ ಸೃಷ್ಟಿ ಶಕ್ತಿಯ ಜೊತೆಗೆ ಆಹಾರ ರಕ್ಷಣಾ ಶಕ್ತಿಯನ್ನು ಒಂದುಗೂಡಿಸಿಕೊಂಡು, ಆರ್ಥಿಕ ಚಟುವಟಿಕೆಯ ಆರಂಭಿಕ ಹಂತದ ಉದಯಕ್ಕೆ ಕಾರಣವಾಯಿತು. ಖ್ಯಾತ ಚಿಂತಕ ಡಿ.ಡಿ. ಕೋಸಾಂಬಿಯವರ ಪ್ರಕಾರ ಈ ಹಂತವೇ ಮಾತೃದೇವತೆಯರ ಉಗಮಕ್ಕೂ ಕಾರಣವಾಗಿರಬಹುದು. ಹೀಗೆ ಉಗಮಗೊಂಡ ದೇವತೆಯನ್ನು ಅಂದಿನ ಅಲೆಮಾರಿ ಸ್ವರೂಪದ ಜನರು ತಮ್ಮ ಕಾರ್ಯಕಲಾಪಗಳನ್ನು ಮುಗಿಸಿ ಬಂದು ಸೇರುತ್ತಿದ್ದ ಕೂಡು ಹಾದಿಗಳಲ್ಲಿ ಪ್ರತಿಷ್ಠಾಪಿಸುತ್ತಿದ್ದರು. ಅದಕ್ಕೆ ನರಬಲಿ ಅಥವಾ ರಕ್ತ ಬಲಿಯನ್ನು ನೀಡಲಾಗುತ್ತಿತ್ತು ಮತ್ತೊಬ್ಬ ಖ್ಯಾತ ಚಿಂತಕ ದೇವಿಪ್ರಸಾದ ಚಟ್ಟೋಪಾಧ್ಯಾಯ ಅವರ ಪ್ರಕಾರ ಹೀಗೆ ಉಗಮಗೊಂಡ ಮಾತೃದೇವತಾ ಪಂಥದ ಜನಪದ ರೂಪಗಳೇ ಗ್ರಾಮದೇವತೆಗಳು.3

ಮಾತೃವಿನ ಆರಾಧನೆ ಸುಮಾರು ಮೂವತ್ತು ಸಾವಿರ ವರ್ಷಗಳ ಹಿಂದೆಯೇ ಆರಂಭವಾಗಿರ ಬೇಕೆಂಬುದು ತಜ್ಞರ ಅಭಿಪ್ರಾಯ. ಭಾರತದಲ್ಲಿ ಹರಪ್ಪಾ ಸಂಸ್ಕೃತಿಯ ಅವಶೇಷಗಳ ಮೂಲಕ ಮಾತೃವಿನ ಆರಾಧನೆಯನ್ನು ಗುರುತಿಸುವ ಪ್ರಯತ್ನಗಳು ನಡೆದಿವೆ. "ಹರಪ್ಪಾ ಸಂಸ್ಕೃತಿಯಲ್ಲಿ ಒಂದು ಕುತೂಹಲಕರವಾದ ಮುದ್ರೆ ದೊರೆತಿದ್ದು ಇದು ಕೃಷಿ ದೃಶ್ಯಕ್ಕೆ ಸಂಬಂಧಿಸಿದ್ದಾಗಿದೆ. ಈ ಮುದ್ರಿಕೆಯಲ್ಲಿ ಒಂದು ಸ್ತ್ರೀ ವಿಗ್ರಹವಿದ್ದು ಆಕೆಯ ಗರ್ಭದಿಂದ ಒಂದು ಸಸ್ಯವು

---

೧. ಹೆಚ್ಚಿನ ವಿವರಕ್ಕೆ ನೋಡಿ - Cult of the Goddess - By James J. Preston, Vikas publishing house Pvt. Ltd., New Delhi 1980.

೨. Myth and Reality: D.D. Kosambi, Popular publication, Bombay, 1962.

ಹುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಇದರ ಇನ್ನೊಂದು ಬದಿಯಲ್ಲಿ ಸ್ತ್ರೀಪುರುಷರ ಚಿತ್ರಗಳಿವೆ. ಒಬ್ಬ ಮನುಷ್ಯನು ನೇಗಿಲಿನಂಥ ಆಯುಧವನ್ನು ಹಿಡಿದಿದ್ದಾನೆ. ಈ ಚಿತ್ರದಲ್ಲಿರುವ ಮನುಷ್ಯ ಉಳುಮೆ ಮಾಡುವ ರೈತನೆಂದು ಭಾವಿಸಲಾಗಿದೆ. ಗರ್ಭದಿಂದ ಸಸ್ಯವು ಹೊಮ್ಮುತ್ತಿರುವ ಸ್ತ್ರೀ ಚಿತ್ರವನ್ನು ಮಾತೃದೇವತೆಯೆಂದು ಹೇಳಲಾಗಿದೆ. ಈಕೆಯನ್ನು ಶಾಕಾಂಬರಿ ಎಂದು ಗುರುತಿಸುತ್ತಾರೆ. ಹೀಗೆ ಸಸ್ಯ ಸಂಬಂಧಿಯಾದ ದೇವತೆಯ ಇನ್ನೊಂದು ಮುದ್ರಿಕೆಯು ಹರಪ್ಪಾ ಸಂಸ್ಕೃತಿಯಲ್ಲೇ ದೊರಕಿದೆ. ಈ ಚಿತ್ರ ಒಂದು ಹೆಣ್ಣಿನದಾಗಿದ್ದು ಈಕೆ ಒಂದು ವೃಕ್ಷದ ಎರಡು ಕೊಂಬೆಗಳ ನಡುವೆ ನಿಂತಿದ್ದಾಳೆ. ಒಬ್ಬ ಭಕ್ತನು ಮರದ ಪಕ್ಕದಲ್ಲಿ ಭಾಗಿ ನಿಂತಿದ್ದಾನೆ. ಒಂದು ಮೇಕೆಯು ಭಕ್ತನ ಹಿಂದೆ ನಿಂತಿದೆ. ಇದರ ಕೆಳಭಾಗದಲ್ಲಿ ಏಳು ವಿಗ್ರಹಗಳನ್ನು ಕಾಣಬಹುದು. ಈ ಚಿತ್ರದ ಹೆಣ್ಣಿನ ವಿಗ್ರಹವನ್ನು ಮಾತೃದೇವತೆಯೆಂದು ಭಾವಿಸಲಾಗಿದೆ. ಇದರಲ್ಲಿನ ಏಳು ವಿಗ್ರಹಗಳನ್ನು ಕಡಿಮೆ ದರ್ಜೆಯ ಏಳು ದೇವತೆಗಳೆಂದು ಭಾವಿಸಲಾಗಿದೆ. ಇಲ್ಲಿರುವ ಮೇಕೆಗೆ ಮನುಷ್ಯನ ಮುಖವಿರುವುದರಿಂದ ಇದು ಬಲಿಗಾಗಿ ತಂದ ಪ್ರಾಣಿಯಲ್ಲವೆಂದು ವಿದ್ವಾಂಸರು ಭಾವಿಸುತ್ತಾರೆ.

ಇಂದು ಹಿಮಾಲಯದಿಂದ ಶ್ರೀಲಂಕಾವರೆಗೆ ಸವಿಸ್ತಾರವಾಗಿ ಚಾಚಿಕೊಂಡಿರುವ ಮಾತೃಮೂಲ ಪರಂಪರೆಯನ್ನು ನಾವು ಕಾಣುತ್ತೇವೆ. ಉತ್ತರ ಹಿಮಾಲಯದ ರೂಪ್‌ಕುಂಡದಲ್ಲಿರುವ 'ನಂದಾದೇವಿ' ಮಾತೃದೇವತೆಯಿಂದ ಹಿಡಿದು ಶ್ರೀಲಂಕಾದ ಪ್ರಸಿದ್ಧ ಮಾತೃ ದೇವತೆ 'ಪಟ್ಟಿನಿ'ವರೆಗೆ ದಕ್ಷಿಣ ಏಷ್ಯಾದ ಈ ಭೂಖಂಡದಲ್ಲಿ ನೆಲೆಗೊಂಡಿರುವ ಮಾತೃದೇವತೆಯರು ಅದೆಷ್ಟೋ. ನಮ್ಮ ಈಶಾನ್ಯ ಪೂರ್ವ ರಾಜ್ಯಗಳಾದ ಒರಿಸ್ಸಾ, ಬಂಗಾಳ ಮತ್ತು ಅಸ್ಸಾಂಗಳಲ್ಲಿ ದುರ್ಗೆ ಅತ್ಯಂತ ಜನಪ್ರಿಯ ಆರಾಧ್ಯದೈವ. ಅಸ್ಸಾಂನ ಕಾಮಾಕ್ಯ ಪ್ರತಿ ಋತುವಿನಲ್ಲೂ ಮೂರು ದಿನಗಳ ಕಾಲ ಋತುಮತಿಯಾಗುವ ಸಹಜ ಸ್ತ್ರೀ ದೈವ. ಬಹುಶಃ ದಕ್ಷಿಣ ಭಾರತದಲ್ಲಿ ಮಾತೃದೇವತೆ ಇಲ್ಲದಿರುವ ಹಳ್ಳಿಗಳೇ ಇಲ್ಲದಿಲ್ಲ. ಮಾತೃದೇವತೆ ಯೊಬ್ಬಳನ್ನು 'ಮನೆದೇವತೆ' ಎಂದು ಪೂಜಿಸಿದ ಶೂದ್ರ ಕುಟುಂಬಗಳೂ ಇಲ್ಲದಿಲ್ಲ. ಅಷ್ಟರ ಮಟ್ಟಿಗೆ ಈ ಮಾತೃ ಪರಂಪರೆ ದಕ್ಷಿಣದಲ್ಲಿ ತನ್ನ ಭದ್ರಭುನಾದಿಯನ್ನು ಕಂಡುಕೊಂಡಿದೆ. ಆದರೆ, ಈ ಆರಾಧನೆಯ ಸ್ವರೂಪ ಪ್ರಾಚೀನದಿಂದಲೂ ಒಂದೇ ತೆರನಾಗಿದೆ ಎಂದೇನೂ ಹೇಳುವಂತಿಲ್ಲ. ಸಮಾಜದಲ್ಲಿ ಉಂಟಾದ ಅನೇಕ ರೀತಿಯ ಅವಸ್ಥಾಂತರಗಳಿಗೆ ಅನುಗುಣವಾಗಿ ದೇವತೆಯರ ಅಸ್ತಿತ್ವ ದಲ್ಲಿಯೂ ಅನೇಕ ಬದಲಾವಣೆಗಳಾಗಿವೆ. ಸ್ತ್ರೀ ಪ್ರಧಾನವಾದ ವ್ಯವಸ್ಥೆ ಪುರುಷ ಪ್ರಧಾನವಾದ ಬಗೆ, ಅರಣ್ಯಗಳು ಕೃಷಿಭೂಮಿಗಳಾಗಿ ವಿಸ್ತರಿಸುತ್ತಾ ಬಂದಿದ್ದು, ಆಹಾರ ಸಂಗ್ರಹಣೆಯಿಂದ ಆಹಾರ ಉತ್ಪಾದನೆಗೆ, ಬೇಟೆಯಿಂದ ಪಶುಪಾಲನೆಗೆ, ಪಶುಪಾಲನೆಯಿಂದ ಕೃಷಿಗೆ ಬದುಕು ಬದಲಾದದ್ದು, ಸಮೂಹ ಕೃಷಿಯ ಸ್ವರೂಪ ಊಳಿಗಮಾನ್ಯ ಪದ್ಧತಿಗೆ

O. Quote: Macay E.J.H. Further excavations of Mahenjadaro: Pl XCIV 430 (ಉಲ್ಲೇಖ : ಗ್ರಾಮದೇವತೆಗಳು : ಸಿದ್ಧಲಿಂಗಯ್ಯ)



ರೂಪಾಂತರಗೊಂಡದ್ದು, ವಿವಿಧ ಉತ್ಪಾದನೆ ಮತ್ತು ಪೂರಕ ವೃತ್ತಿಗಳ ಜನರನ್ನು ಶ್ರೇಣೀಕರಣಕ್ಕೆ ಒಳಪಡಿಸಿದ್ದು ಮುಂತಾದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂಗತಿಗಳ ಕಾರಣದಿಂದಾಗಿ ಗ್ರಾಮಗಳ ಸ್ವರೂಪ ಬದಲಾದಂತೆ, ಗ್ರಾಮದೇವತೆಯರ ಆರಾಧನೆಯ ಸ್ವರೂಪವೂ ಬದಲಾಗಿದೆ. ಆದರೆ, ಈ ಬದಲಾವಣೆಯ ಸ್ವರೂಪ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಹೆಚ್ಚಾಗಿಯೇ ಆಯಿತು. ಆದ್ದರಿಂದಲೇ ಭಾರತದ ಸಾಮಾಜಿಕ ಮತ್ತು ಆರ್ಥಿಕ ಸ್ವರೂಪದ ತಾರತಮ್ಯಗಳು ಇಂದು ಕಣ್ಣಿಗೆ ರಾಚುವಷ್ಟು ಕಗ್ಗಂಟಾಗಿವೆ. ಆದರೆ, ಸಾಂಸ್ಕೃತಿಕ ಲೋಕದ ಮೇಲೆ ಅಂಥ ಪರಿಣಾಮಗಳು ಕಡಿಮೆ ಎಂದೇ ಹೇಳಬೇಕು. ಆದ್ದರಿಂದಲೇ ಗ್ರಾಮದೇವತೆಯರ ಆರಾಧನೆ ಸಾವಿರಾರು ವರ್ಷಗಳಿಂದ ಅಬಾದಿತವಾಗಿ ನಡೆಯುತ್ತಾ ಬಂದಿದೆ. ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳು ಹಬ್ಬ ಮತ್ತು ಆರಾಧನೆಯ ಸ್ವರೂಪದಲ್ಲಿ ಅಲ್ಪಸ್ವಲ್ಪ ಬದಲಾವಣೆ ಉಂಟುಮಾಡಿರಬಹುದು. ಆದರೆ, ಭಾರತದ ಶೂದ್ರಶಕ್ತಿಗೆ ಎಂಥ ನಿರೋಧಕ ಗುಣವಿದೆ ಎಂದರೆ, ತಮ್ಮ ಒಳ ಆವರಣಗಳಿಗೆ ದಕ್ಕೆ ಉಂಟಾದಾಗ ಅನೇಕ ಪರ್ಯಾಯ ಮಾರ್ಗಗಳನ್ನು ಕಂಡುಕೊಂಡು ತಮ್ಮತನ'ವನ್ನು ಅವರು ಉಳಿಸಿಕೊಂಡಿದ್ದಾರೆ. ಸಾಮಾಜಿಕವಾಗಿ ಅನಿಷ್ಟತಮವಾದ ಶ್ರೇಣೀಕರಣವಿದ್ದರೂ, ಸಾಂಸ್ಕೃತಿಕ ಅಸ್ತಿತ್ವದ ವಿಚಾರ ಬಂದಾಗ ಭಾವೈಕ್ಯತೆಯ ಹಾದಿ ತುಳಿದು ತಮ್ಮ ಅನನ್ಯತೆಯನ್ನು ಕಾಪಾಡಿಕೊಂಡ ಅನೇಕ ಉದಾಹರಣೆಗಳು ನಮ್ಮ ಆಚರಣೆಗಳಲ್ಲಿ ಕಾಣಸಿಗುತ್ತವೆ. ನಮ್ಮ ಆಚರಣೆ ಮತ್ತು ಆರಾಧನೆಗಳು ಒಂದು ರೀತಿಯಲ್ಲಿ ಸಮಾಜದ ಸಾಮಾಜಿಕ ಮುಖಕ್ಕೆ ಹಿಡಿದ ಕನ್ನಡಿಯೂ ಹೌದು, ಸಾಂಸ್ಕೃತಿಕ ಅನನ್ಯತೆಯ ಇತಿಹಾಸವೂ ಹೌದು. ಈ ಹಿನ್ನೆಲೆಯಲ್ಲಿ ಉಜ್ಜನಿ ಚೌಡಮ್ಮ'ನ ಆಚರಣಾ ವಿಧಾನಗಳನ್ನು ನಾವು ನೋಡಬೇಕಾಗಿದೆ.

“ಉಜ್ಜನಿ ಚೌಡಮ್ಮ' ಪುಸ್ತಕದ ಮೊದಲ ಆವೃತ್ತಿ ಪ್ರಕಟವಾಗಿ ಇಲ್ಲಿಗೆ ಸುಮಾರು ಇಪ್ಪತ್ತೊಂದು ವರ್ಷಗಳೇ ಸಂದಿವೆ. ಹಬ್ಬ ಮತ್ತು ಆರಾಧನೆಯ ಹೊರ ಚೌಕಟ್ಟು ಸ್ವಲ್ಪ ಬದಲಾಗಿದೆಯಾದರೂ, ಆಚರಣೆಗಳ ಒಳ ಆವರಣ ಈ ೨೧ ವರ್ಷಗಳಲ್ಲಿ ಯಾವ ಬದಲಾವಣೆಯನ್ನೂ ಕಂಡಿಲ್ಲ. ಹಾಗೆ ಬದಲಾಗಿರುವ ಸಂಗತಿಗಳನ್ನು ಆನಂತರ ಚರ್ಚಿಸುತ್ತೇನೆ. ಈಗ, ಕಳೆದ ೨೧ ವರ್ಷಗಳ ಹಿಂದೆ ನನ್ನ ಕ್ಷೇತ್ರಕಾರ್ಯದ ಮೂಲಕ ಯಾವ ಪಠ್ಯವನ್ನು ನಾನು ಸಿದ್ಧಪಡಿಸಿದ್ದೇನೋ ಅದೇ ಪಠ್ಯದ ಆಧಾರದ ಮೇಲೆ ನನ್ನ ವಿಶ್ಲೇಷಣೆಯನ್ನು ಮಾಡಬಯಸುತ್ತೇನೆ. ಈ ಪುಸ್ತಕದ ಮೊದಲ ಆವೃತ್ತಿ ಪ್ರಕಟವಾದಾಗ ನಾನಿನ್ನೂ ಅಂತಿಮ ಬಿ.ಎ. ವಿದ್ಯಾರ್ಥಿ. ಆಗಿನ ನನ್ನ ತಿಳಿವಿನ ಮಿತಿಯಲ್ಲಿ ಪ್ರಾಮಾಣಿಕವಾದ ಒಂದು ಪ್ರಯತ್ನವನ್ನು ಮಾಡಿದ್ದೆ. ನಾಡಿನ ನಾನಾ ವಿದ್ವಾಂಸರು ನನ್ನ ಪ್ರಯತ್ನವನ್ನು ಮುಕ್ತಕಂಠದಿಂದ ಸ್ವಾಗತಿಸಿದ್ದರು. ತಮ್ಮ ಅನೇಕ ಮೌಲಿಕ ಬರಹಗಳಲ್ಲಿ ಈ ಪುಸ್ತಕವನ್ನು ಉಲ್ಲೇಖಿಸಿದ್ದರು. ಹಾಗೆ

ನೋಡಿದರೆ, ಜಾನಪದ ಕೃತಿಯೊಂದು ಸಂಸ್ಕೃತಿ ಚಿಂತಕರು ಮತ್ತು ವಿದ್ವಾಂಸರ ವಲಯದಲ್ಲಿ ಇಷ್ಟರಮಟ್ಟಿಗಿನ ಆಧಾರ ಗ್ರಂಥವಾಗಿದ್ದು ನನಗೆ ಆಶ್ಚರ್ಯವನ್ನು ಉಂಟುಮಾಡಿತ್ತು. ಈ ಎಲ್ಲ ಸಂತಸಗಳ ನಡುವೆಯೂ ಈ ಗ್ರಂಥವನ್ನು ಮತ್ತೊಮ್ಮೆ ವಿಶ್ಲೇಷಿಸಿ ಪ್ರಕಟಿಸಬೇಕೆಂಬ ಮಹದಾಸೆ ನನ್ನ



ಅಂತರ್ಯದಲ್ಲಿ ಇತ್ತು. ಕನ್ನಡ ಪುಸ್ತಕ ಪ್ರಾಧಿಕಾರದವರ ಆಸಕ್ತಿಯ ಮೇರೆಗೆ ನನ್ನ ಆ ಅಭೀಪ್ಸ ಇಂದು ಈಡೇರುತ್ತಿದೆ.

*     *     *

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಹುಲಿಯೂರು ದುರ್ಗದಿಂದ ನಾಲ್ಕು ಮೈಲಿ ದೂರದಲ್ಲಿ ಇರುವ ಉಜ್ಜನಿ ಸುತ್ತಲೂ ಸಣ್ಣಪುಟ್ಟ ಗುಡ್ಡಗಳಿಂದ ಆವೃತವಾದ ಒಂದು ದೊಡ್ಡ ಊರು. ಉಜ್ಜನಿಯಿಂದ ಸುಮಾರು ಒಂದೆರಡು ಮೈಲಿಗಳ ದೂರದಲ್ಲಿ ಕಂಬದ ಗುಡ್ಡೆ, ಮಲ್ಲಪ್ಪನ ಗುಡ್ಡೆ, ಅಯ್ಯನ ಗುಡ್ಡ, ಬಾಳನ ಗುಡ್ಡೆ, ಅಕ್ಕಮ್ಮನ ಗುಡ್ಡೆ ಹಾಗೂ ಹೇಮಗಿರಿ ಬೆಟ್ಟಗಳಿವೆ. ಇವುಗಳಲ್ಲಿ ಮಲ್ಲಪ್ಪನ ಗುಡ್ಡೆ, ಅಯ್ಯನ ಗುಡ್ಡೆ ಮತ್ತು ಹೇಮಗಿರಿ ಬೆಟ್ಟಗಳಲ್ಲಿ ಪ್ರಾಚೀನ ಕಾಲದ ಗುಹಾಲಯಗಳಿವೆ. ಬಹು ಪ್ರಾಚೀನ ಕಾಲದಿಂದ ಮನುಷ್ಯವಾಸವಿರ ಬಹುದಾದ ಕುರುಹುಗಳೂ ಇವೆ. ಈ ಸಣ್ಣಪುಟ್ಟ ಗುಡ್ಡ ಬೆಟ್ಟಗಳ ಕುರುಚಲು ಕಾಡುಗಳ ನಡುವಿನ ಬಯಲುಗಳಲ್ಲಿ ಹಿತ್ತಲಪುರ, ಬೋರೇಗೌಡನ ಕೊಪ್ಪಲು, ಕಾಡುಬೋರನಹಳ್ಳಿ, ವಡ್ಡರಹಾಳು, ಬೆಣಚಕಲ್ಲು, ದೇವಸಂದ್ರ, ಎಲೆಕಡಕಲು, ಕಾಚಹಳ್ಳಿ, ಬ್ಯಾಡರಹಳ್ಳಿ, ಶಿವನಹಳ್ಳಿ, ಕೆಬ್ಬಳ್ಳಿ, ಚಲುವಸಂದ್ರ, ಹೊನ್ನಮಾಚನಹಳ್ಳಿ ಹಾಗೂ ನಿಡಸಾಲೆ ಮುಂತಾದ ಗ್ರಾಮಗಳಿವೆ. ಒಂದು ಕಾಲಕ್ಕೆ ಈ ಎಲ್ಲ ಸುತ್ತಲ ಹಳ್ಳಿಗಳಿಗೆ ಉಜ್ಜನಿಯೇ ಕೇಂದ್ರಸ್ಥಾನ. ವಿಜಯನಗರದ ಅರಸರ ಸಾಮಂತನೊಬ್ಬನ ಸಣ್ಣ ಪಾಳೆಯ ಪಟ್ಟು ಕೂಡಾ ಇದಾಗಿತ್ತು ಎಂಬುದು ಊರ ಮಧ್ಯೆ ನೆಟ್ಟಿರುವ ಶಾಸನದಿಂದ ತಿಳಿದುಬರುತ್ತದೆ. ನಾನು ಕಂಡಂತೆ, ಹೇಮಗಿರಿಯಿಂದ ಬ್ಯಾಡರಹಳ್ಳಿ ಯವರೆಗೆ ಸಂಪದ್ಭರಿತವಾದ ಅರಣ್ಯವಿತ್ತು. ಯಥೇಚ್ಚ ಶ್ರೀಗಂಧದ ಮರಗಳಿದ್ದವು. ತೇಗದ ಮರಗಳು ತಂತಾನೆ ಬೆಳೆದು ಆಕಾಶಕ್ಕೆ ಮುಖ ಮಾಡಿದ್ದವು. ಕಗ್ಗಲಿ, ದಿಂಡುಗ, ಹೆದ್ದರಣೆ, ತೂಪರ, ಮುತ್ತುಗ ಮುಂತಾದಂತೆ ನೂರಾರು ಜಾತಿಯ ಗಿಡಮರಗಳಿದ್ದವು. ಆದರೆ ಈಗ ಬರೀ ಬೋಳುಗುಡ್ಡಗಳು ನಮ್ಮನ್ನು ಸ್ವಾಗತಿಸುತ್ತವೆ.

ಇದು ಪ್ರಧಾನವಾಗಿ ಕೃಷಿ ಪ್ರದೇಶವಾದ್ದರಿಂದ ಒಕ್ಕಲಿಗ ಜಾತಿಯ ಪ್ರಾಬಲ್ಯ ಹೆಚ್ಚು. ಉಜ್ಜನಿಯಲ್ಲಿ ಒಕ್ಕಲಿಗರ ನಂತರದ ಸ್ಥಾನದಲ್ಲಿರುವವರು ಹೊಲೆಯರು, ಮಾದಿಗರ ಕೇರಿಯೂ ಪ್ರತ್ಯೇಕವಾಗಿದೆ. ಉಳಿದಂತೆ ಕುರುಬರು, ಬೆಸ್ತರು, ಅಗಸರು, ಅಕ್ಕಸಾಲಿಗರು, ಕ್ಷೌರಿಕರು, ಲಿಂಗಾಯತರು, ಶೆಟ್ಟರು ಹಾಗೂ ಬ್ರಾಹ್ಮಣರಿದ್ದಾರೆ. ಊರಿನ ಅಂದ,

ಆಕಾರ, ಚೌಡಮ್ಮನ ಗುಡಿ, ಅದರೊಳಗಿನ ವಿವರಗಳು ಇತ್ಯಾದಿಯಾಗಿ ಎಲ್ಲವನ್ನು ಮುಂದಿನ ಭಾಗದಲ್ಲಿ ಪರಿಚಯಿಸಲಾಗಿದೆ. ಕಳೆದ ದಶಕದಲ್ಲಿ ಹಳೆಯದಾದರೂ ಸುಂದರವಾಗಿದ್ದ ಚೌಡಮ್ಮನ `ಗುಡಿ'ಯನ್ನು ಒಡೆದು ಹೊಸ 'ದೇವಸ್ಥಾನ' ಕಟ್ಟಲಾಗಿದೆ. ಆಧುನಿಕ ಮನಸ್ಸುಗಳ ವಿಕಾರತೆಗೆ ಸಾಕ್ಷಿ ಎಂಬಂತೆ, ಹಣ ಕೊಟ್ಟವರ, ಸೇವೆ ಮಾಡಿದವರ ಹೆಸರುಗಳು ಮಾತ್ರ ಒಳಗೆ ರಾರಾಜಿಸುತ್ತಿದ್ದು, ಮೂಲದಲ್ಲಿ ಇದ್ದ ಸೌಂದರ್ಯ ಮಂಗಮಾಯವಾಗಿದೆ. ಆದ್ದರಿಂದ ಹಿಂದೆ ಇದ್ದ 'ಚೌಡಮ್ಮನ ಗುಡಿ'ಯ ಒಳ ಭಾಗದಲ್ಲಿದ್ದ ಬಹುಮುಖವಾದ ಸಾಂಸ್ಕೃತಿಕ ವಿವರಗಳನ್ನು



ಇಟ್ಟುಕೊಂಡು ನನ್ನ ಚರ್ಚೆಯನ್ನು ಮುಂದುವರಿಸಬಯಸುತ್ತೇನೆ.

ಚೌಡಮ್ಮನ ಗರ್ಭಗುಡಿಯ ನಂತರದ ಹೊರಗಿನ ಹಜಾರದಲ್ಲಿ 'ರಾಜಾ ವಿಕ್ರಮ' ನದೆಂದು ಹೇಳಲಾಗುವ ಪ್ರತಿಮೆ, ಅವನ ಮಂತ್ರಿ ಭಟ್ಟಿ'ಯ ಪ್ರತಿಮೆ, ಒಂದು ಬಿಳಿ ಕುದುರೆಯ ಚಿತ್ರಗಳು ಇದ್ದವು. ಇಷ್ಟಲ್ಲದೆ ಇಬ್ಬರು ದ್ವಾರಪಾಲಕರು, ನಾಲ್ಕು ಯಕ್ಷಿಯರು ಮುಂತಾದ ಗಾರೆಯ ಚಿತ್ರಗಳೂ ಇದ್ದವು. ರಾಜಾವಿಕ್ರಮ ಮತ್ತು ಅವನ ಮಂತ್ರಿಯ ಪ್ರತಿಮೆ ಎಂಬ ಕಲ್ಪನೆ ಇತ್ತೀಚಿನದ್ದು ಎಂದೇ ನನ್ನ ನಂಬಿಕೆ. ಯಾಕೆಂದರೆ ಒಂದು ಕುದುರೆಯ ಹಿಂದು ಮುಂದೆ ಕಡೆದು ನಿಲ್ಲಿಸಿದ್ದ ಆ ಪ್ರತಿಮೆಗಳು, ಒಂದಾನೊಂದು ಕಾಲದಲ್ಲಿ ಈಗಿನ ಉಜ್ಜನಿ ಜಾಗಕ್ಕೆ ವಲಸೆ ಬಂದು ನೆಲೆಗೊಂಡ ಪೂರ್ವಿಕರ ಪ್ರತಿಮೆಗಳಿರಬೇಕು ಎಂದು ಊಹಿಸಲು ಸಾಕಷ್ಟು ಅವಕಾಶಗಳಿವೆ. ನನ್ನ ಈ ಊಹೆಗೆ ಪುರಾವೆ ಒದಗಿಸಬಲ್ಲ ಕಥೆಯನ್ನು ಮುಂದಿನ ಪಠ್ಯದಲ್ಲಿ ವಿವರವಾಗಿ ನೀಡಲಾಗಿದೆ. ದೊಡ್ಡನಾರಸೀಗೌಡ ಮತ್ತು ಚಿಕ್ಕನಾರಸೀಗೌಡ ಎಂಬ ಇಬ್ಬರು ಅಣ್ಣ ತಮ್ಮಂದಿರು ವಿಜಯನಗರದ ಕಡೆಯಿಂದ ಹೊರಟು, ಈಗಿನ ಅಮೃತೂರು (ಕುಣಿಗಲ್ ತಾಲ್ಲೂಕಿನ ಒಂದು ದೊಡ್ಡ ಊರು) ಎಂಬ ಸ್ಥಳಕ್ಕೆ ಬಂದರೆಂದೂ, ಅಲ್ಲಿ ನಿಲ್ಲಲಾಗದೆ ಮತ್ತೊಂದು ಜಾಗವನ್ನು ಅರಸುತ್ತಾ ಬಂದು ಈಗಿನ ಉಜ್ಜನಿಯ ಸ್ಥಳದಲ್ಲಿ ನೆಲೆನಿಂತರೆಂದೂ ಆ ಕಥೆ ಹೇಳುತ್ತದೆ. ಉತ್ತಮವಾದ ಕೃಷಿ ಭೂಮಿಯನ್ನು ಹುಡುಕುತ್ತಾ ಹೀಗೆ ಸ್ಥಳದಿಂದ ಸ್ಥಳಕ್ಕೆ ಅಲೆಯುತ್ತಿದ್ದ ಪದ್ಧತಿ ಮಾನವ ಇತಿಹಾಸದಲ್ಲಿ ನಿರಂತರವಾಗಿ ನಡೆದಿದೆ. ಹಾಗೆ ಅಲೆಮಾರಿಗಳಾಗಿ ಬಂದ ಕೃಷಿಕರು ಬೆಟ್ಟಗುಡ್ಡಗಳ ನಡುವಿನ ಈ ಕಣಿವೆ ಪ್ರದೇಶಗಳಲ್ಲಿ ಖಾಯಂ ಆಗಿ ನೆಲೆ ನಿಂತಂತೆ ಕಾಣುತ್ತದೆ. ಬಹುಶಃ ಅವರು ವಿಜಯನಗರ ಸಾಮ್ರಾಜ್ಯ ಸ್ಥಾಪನೆಗಿಂತ ಮೊದಲೇ ಬಂದ ಕೃಷಿಕರಿರಬೇಕು. ಯಾಕೆಂದರೆ ೧೪೨೯ರಷ್ಟು ಹಿಂದಿನದಾದ ಉಜ್ಜನಿಯ ಶಾಸನದಲ್ಲಿ ಊರ ಗೌಡರು, "ಶ್ರೀ ಚವುಡೇಶ್ವರಿ ದೇವಿ'ಯ ಹೆಸರಿನಲ್ಲಿ ಪ್ರಮಾಣ ಮಾಡಿದ್ದಾರೆ. ಅಂದರೆ ಅಷ್ಟು ಪ್ರಾಚೀನದಲ್ಲಿಯೇ ಚೌಡಮ್ಮ ಊರದೇವತೆಯಾಗಿದ್ದಳು. ಆದ್ದರಿಂದ ಈ ಕಥೆ ಮಧ್ಯಕಾಲೀನ ಕರ್ನಾಟಕದ ಇತಿಹಾಸಕ್ಕಿಂತ ಹಿಂದಿನದು ಎಂದು ಊಹಿಸಬಹುದಾಗಿದೆ. ಕೃಷಿ ಭೂಮಿಯನ್ನು ಅರಸುತ್ತಾ ಬಂದ ಗೌಡರು, ನೆಲೆನಿಂತು ಊರನ್ನು ಕಟ್ಟಿದರು.

ಅಥವಾ ಅಷ್ವರಲ್ಲಿ ಆಗಲೇ ಇದ್ದ ಊರಿನ ಒಂದು ಭಾಗವಾಗಿ ಉಳಿದರು. ಉತ್ತರ ಭಾರತದ ಉಜ್ಜೈನಿಯ ವಿಕ್ರಮಾದಿತ್ಯನೇ ಈ ಪಟ್ಟಣ ನಿರ್ಮಾಣ ಮಾಡಿದ ಎಂಬುದು ಒಂದು ಪುರಾಣ ಅಷ್ಟೆ. ಹಾಗೆಯೇ, ಚೌಡಮ್ಮನ ಪ್ರತಿಷ್ಠಾಪನೆಯೂ ವಿಕ್ರಮನಿಂದ ನಡೆದುದಲ್ಲ. ಬದಲಾಗಿ ವಲಸೆಗಾರರಾಗಿ ಬಂದ ಕೃಷಿ ಮೂಲ ಬುಡಕಟ್ಟಿನ ಆ ಜನರೇ ತಮ್ಮ ಜೊತೆಗೆ ಅವರ ಮನೆದೇವತೆಯಾದ ಚೌಡಮ್ಮನನ್ನೂ ಹೊತ್ತು ತಂದರು!

ಅಲೆಮಾರಿ ಸಂಸ್ಕೃತಿಯ ಜನವರ್ಗಗಳು ಅನುಸರಿಸುತ್ತಿದ್ದ ಸಹಜ ಸಂಪ್ರದಾಯವಿದು. ತಾವು ನಂಬಿದ ದೈವವನ್ನು ತಾವು ಹೋದೆಡೆಯಲ್ಲೆಲ್ಲವೂ ಹೊತ್ತೊಯ್ಯುವುದು ಅಂದಿನ ಪದ್ಧತಿ, ಉಜ್ಜನಿಗೂ ಹೀಗೇ ತಮ್ಮ ದೈವದೊಡನೆ ಬಂದು, ಮುಂದೆಲ್ಲೂ ಹೋಗದೆ, ಅಲೆಮಾರಿ



ಜೀವನಕ್ಕೆ ವಿದಾಯ ಹೇಳಿ, ಒಂದು ಕಡೆ ಖಾಯಂ ಆಗಿ ನೆಲೆನಿಂತ ಕೃಷಿಕರ ಅಲಿಖಿತ ಚರಿತ್ರೆ ಇದು.

ಆದರೆ, ಹೀಗೆ ಅಲೆಮಾರಿಗಳಾಗಿ ಬಂದವರು ಯಾರು? ಉಜ್ಜನಿಯಲ್ಲಿ ಇಂದು ಇರುವ ಸಕಲೆಂಟು ಜಾತಿಗಳೂ ಹೀಗೇ ಪಸರಿಸುತ್ತಾ ಬಂದು ನೆಲೆ ನಿಂತವರೇ? ಇವೆಲ್ಲ ಅಷ್ಟು ಸುಲಭವಾಗಿ ದೊರಕುವ ಉತ್ತರಗಳಲ್ಲ. ಆದರೂ ಮಾನವ ಇತಿಹಾಸದುದ್ದಕ್ಕೆ ನಡೆದು ಬಂದ ಜೀವನ ವಿಧಾನಗಳ ಹಿನ್ನೆಲೆಯಲ್ಲಿ ಇನ್ನಷ್ಟು ವಿವರಗಳನ್ನು ಇಲ್ಲಿ ಚರ್ಚಿಸಬಹುದು. ಇದಕ್ಕೆ ಪೂರಕವಾಗಿ ಚೌಡಮ್ಮನ ಹಬ್ಬದ ವಿವರಗಳನ್ನು ನಾವಿಲ್ಲಿ ಅವಲೋಕಿಸಬೇಕಾಗುತ್ತದೆ. ಚೌಡಮ್ಮನ ಹಬ್ಬದ ಕೊಂಡದಲ್ಲಿ 'ನಿಗದಿಪಡಿಸಿದ ಇಂತಿಷ್ಟು ಜನ ಓಡುತ್ತಾರ. ಅವರ ವಿವರಗಳು ಹೀಗಿವೆ :

೧. ದೂಪುಂಡಿಗೆ ಗುಡ್ಡ, ೨. ಕರಗದ ಪಾಲಿನ ಕರಗ ಹೊತ್ತ ಗುಡ್ಡ, ೩. ಕರಡಿ ಪಾಲಿನ ಚೌಡಮ್ಮನ ಪ್ರತೀಕವಾದ ಮೆರೆ ದೇವರನ್ನು ಹೊತ್ತ ಗುಡ್ಡ, ೪. ಆರು ಜನ ಹೆಬ್ಬಾರ ಗುಡ್ಡರು.

ಮೇಲಿನ ಮೂರು ಪಂಗಡಗಳಿಗೆ ಸೇರಿದ ಗುಡ್ಡರು ಒಕ್ಕಲಿಗ ಜಾತಿಗೆ ಸೇರಿದವರಾದರೆ, ನಾಲ್ಕನೆಯ ಪಂಗಡದ ಹೆಬ್ಬಾರ ಗುಡ್ಡರು ಮೂಲತಃ ಹೊಲೆಯರು. ಆದರೆ, ಈ ಹಬ್ಬದ ಸಂದರ್ಭಕ್ಕೆ ಶಾಸ್ತ್ರೋ ಜನಿವಾರ ಧರಿಸಿ ಬ್ರಾಹ್ಮಣರಾದವರು! ಇದೊಂದು ಅಪರೂಪದ, ವಿಶಿಷ್ಟವಾದ ಸಂಪ್ರದಾಯ. ಈ ಬಗೆಗಿನ ಚರ್ಚೆಯನ್ನು ಆ ನಂತರ ಮುಂದುವರೆಸುತ್ತೇನೆ. ಈಗ 'ಕರಡಿ ಮತ್ತು ಕರಗದ ಪಾಲಿನ ಕಥೆ'ಗೆ ಮರಳೋಣ.

ಈ ಪುಸ್ತಕದಲ್ಲಿ ನೀಡಲಾಗಿರುವ ಕಥೆಯ ಪ್ರಕಾರ ಅಣ್ಣ ತಮ್ಮಂದಿರಾದ ನಾರಸೀಗೌಡ ಮತ್ತು ಚೆಲುವೇಗೌಡರ ಸಂತತಿಯೇ ಮುಂದೆ ಕರಗ ಮತ್ತು ಕರಡಿ ಪಾಲಿನ 'ಪೈಕಿ'ಗಳಾಗಿ ಮಾರ್ಪಟ್ಟವು. ಇದು ಕೂಡ ಕಾಲ

ಕ್ರಮೇಣ ಹುಟ್ಟಿಕೊಂಡ ಕಥೆ. ಆದರೆ ಈ ರೀತಿ ಸೃಷ್ಟಿಗೊಂಡ ಕಥೆಯಲ್ಲಿಯೂ ನಿಜದ ಒಂದು ಎಳೆ ಇದೆ. ಅದೇನೆಂದರೆ, ಕರಗದ ಪಾಲು ಮತ್ತು ಕರಡಿ ಪಾಲಿನ ಈ ಮನೆತನಗಳು, ಬೇರೆಬೇರೆ ಸ್ಥಳಗಳಿಂದ, ಬೇರೆಬೇರೆ ಕಾಲಗಳಲ್ಲಿ ಬಂದು ಉಜ್ಜನಿಯಲ್ಲಿ ನೆಲೆ ನಿಂತಿವೆ. ಮೂಲತಹ ಕೃಷಿಕರಾದ ಈ ಎರಡೂ ಪಂಗಡಗಳು ಕ್ರಮೇಣ ಒಂದು ಒಪ್ಪಂದಕ್ಕೆ ಬಂದಂತೆ ಕಾಣುತ್ತವೆ. ಕರಡಿ ಪಾಲಿನವರಾಗಿ ಇಂದು ಚೌಡಮ್ಮನನ್ನು ಹೊತ್ತು ಕೊಂಡ ಹಾಯುವ ಪೈಕಿಯವರು ಬಹುಶಃ ಉತ್ತರದ ವಿಜಯನಗರದ ಕಡೆಯಿಂದಲೂ, ಕರಗ ಹೊತ್ತು ಕೊಂಡ ಹಾಯುವ ಕರಗದ ಪಾಲಿನವರು ಬಹುಶಃ ದಕ್ಷಿಣದ ತಮಿಳುನಾಡಿನ ಕಡೆಯಿಂದಲೂ ವಲಸೆ ಬಂದು ಈಗಿನ ಉಜ್ಜನಿಯಲ್ಲಿ ನೆಲೆಗೊಂಡಿರಬಹುದು. ಇಲ್ಲಿ ಇನ್ನೊಂದು ಊಹೆಯೂ ಸಾಧ್ಯವಿದೆ. ಕರಗದ ಪಾಲಿನವರು ಉಜ್ಜನಿಯ ಮೂಲನಿವಾಸಿ ಕುಟುಂಬಗಳೂ ಆಗಿರಬಹುದು. ಯಾಕೆಂದರೆ ಕರಗದ ಆರಾಧನೆ ಅತ್ಯಂತ ಪ್ರಾಚೀನವಾದುದು.

ಕರಗದ ಆಚರಣೆ ಮತ್ತು ಕುಣಿತ ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಅತ್ಯಂತ ಜನಪ್ರಿಯವಾದುದಾಗಿದೆ. 'ಜಲ' ಮತ್ತು 'ಫಲ'ದ ಸಂಕೇತವಾದ ಈ ಕರಗ ಮೂಲದಲ್ಲಿ



ಆರಾಧಿಸುತ್ತಿದ್ದ ಕರಗದಮ್ಮ ಅಲ್ಲದೆ ಮತ್ತೇನೂ ಅಲ್ಲ ಎಂದೂ ಹೇಳಬಹುದಾಗಿದೆ. ಆದರೆ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಅದಕ್ಕೆ ಆದಿಶಕ್ತಿ' ಆರಾಧನೆಯ ಸ್ವರೂಪ ಬಂದಿದೆ. ಕರಗದಾಚರಣೆ ಎಂದರೆ ಆದಿಶಕ್ತಿಯ ಆಚರಣೆ ಎಂದು ನಂಬಲಾಗಿದ್ದು, ಆಕೆಯನ್ನು ಕರಗದಮ್ಮ ಎಂದು ಕರೆಯಲಾಗಿದೆ. ೧೪೨೯ರ ಚಿಕ್ಕಬಳ್ಳಾಪುರದ ತಾಮ್ರ ಶಾಸನದಲ್ಲಿ -

ನಮಗೆ ಕುಲದೈವ ಭೈರವ ಜನಕ ತಾನು

ಮನೆದೇವರು ಕರಗದಮ್ಮನ ಪತಿ ತಾನಾದ

ಕಾರಣ ನಮಗೆ ದೇವತಾಂತರವಿಲ್ಲ......

ಎಂಬ ಉಲ್ಲೇಖವಿದೆ. ಅದಲ್ಲದೆ ಇದೇ ಶಾಸನದಲ್ಲಿ ಕರಗ ಹೊರುವ ಗುಡ್ಡನಿಗೆ ದಾನವಿಟ್ಟ ವಿವರವೂ ಇದ್ದು ಅದನ್ನು 'ಮಾನ್ಯದ ಹೊಲ' ಎಂದು ಕರೆಯಲಾಗಿದೆ.

ಕರಗಕ್ಕೂ ಬೆಂಗಳೂರು ನಿರ್ಮಾತೃ ಕೆಂಪೇಗೌಡರಿಗೂ ಸಂಬಂಧ ಕಲ್ಪಿಸುವ ಐತಿಹ್ಯ ರೂಪದ ನಂಬಿಕೆ ಹೀಗಿದೆ : “ಹದಿನಾಲ್ಕನೇ ಶತಮಾನದ ಕಾಲದಲ್ಲಿ ತಮಿಳುನಾಡಿನಿಂದ ರೈತ ಕುಟುಂಬವೊಂದು ವಲಸೆ ಬಂದು

ಕರ್ನಾಟಕದ ನಂದಿದುರ್ಗದಲ್ಲಿ ನೆಲೆಸಿತು. ಇವರಿಗೆ ತಮಿಳು ಮತ್ತು ತೆಲುಗು ಭಾಷೆಗಳು ಗೊತ್ತಿದ್ದವು. ಹಾಗೆಯೇ ಇವರು ಭೈರವನ ಆರಾಧಕರೂ ಆಗಿದ್ದರು. ರಣಭೈರೇಗೌಡ ಇವರ ನಾಯಕ. ಇವನೇ ಬೆಂಗಳೂರಿನ ನಿರ್ಮಾತೃ ಕೆಂಪೇಗೌಡನ ಪೂರ್ವಜರು ಎಂಬ ನಂಬಿಕೆ. ರಣಭೈರೇಗೌಡ ಈಗಿನ ದೇವನಹಳ್ಳಿ ತಾಲ್ಲೂಕಿನ ಅವರ ಗ್ರಾಮದಲ್ಲಿ ವಾಸಿಸುತ್ತಿದ್ದ. ಮಲ್ಲಭೈರೇಗೌಡ, ವೀರೇಗೌಡ ಹಾಗೂ ಸಣ್ಣ ಭೈರೇಗೌಡ ಅವನ ಅಣ್ಣ ತಮ್ಮಂದಿರು. ಇವರು ಬೆಂಗಳೂರಿನ ಸುತ್ತಮುತ್ತ ನೆಲೆಸಿದರು. ಹಾಗೆಯೇ ಸಣ್ಣ ಸಣ್ಣ ಪಾಳೇಗಾರಿಕೆಯನ್ನೂ ಸ್ಥಾಪಿಸಿದರು. ಚಿಕ್ಕಬಳ್ಳಾಪುರ, ದೊಡ್ಡ ಬಳ್ಳಾಪುರ, ಕೋಲಾರ, ಯಲಹಂಕ, ಬೆಂಗಳೂರು, ಆನೇಕಲ್ಲು, ಮಾಗಡಿ ಆ ಕಾಲದ ಪಾಳೇಗಾರಿಕೆಯ ಕೇಂದ್ರ ಗಳಾಗಿದ್ದವು. ಮುಂದೆ ೧೪೧೮ರಿಂದ ೧೪೩೩ರವರೆಗೆ ಜಯಗೌಡ ಎಂಬುವನು ಯಲಹಂಕದಲ್ಲಿ ಪಾಳೇಗಾರಿಕೆ ಆರಂಭಿಸಿದ. ಆತ ರಣಭೈರೇಗೌಡನ ಮಗ. ಇವನ ಮೊಮ್ಮಗನೇ ಬೆಂಗಳೂರನ್ನು ಕಟ್ಟಿಸಿದ ಕೆಂಪೇಗೌಡ. ಹೀಗೆ, ಈ ಗೌಡರು ಹೋದಲ್ಲಿಗೆ ಕರಗವೂ ಹೋಯಿತು. ಹೀಗಾಗಿ ಗೌಡರಿಗೂ ಮತ್ತು ಕರಗಕ್ಕೂ ಬಹಳ ನಂಟು ಬೆಳೆದು ಬಂದಿದೆ.

ಚೌಡಮ್ಮನ ಕೊಂಡದಲ್ಲಿ ಓಡುವ ಧೂಪುಂಡಿಗೆ ಹಿಡಿದ ಗುಡ್ಡ ಹೇಮಗಿರಿಯ ಭೈರವನ ಭಕ್ತ. ಬೋರೇದೇವರು ಎಂದು ಕರೆಯಲಾಗುವ ಭೈರವನ ಪ್ರತಿರೂಪವಾಗಿ ಧೂಪುಂಡಿಗೆ ಗುಡ್ಡ ಕೊಂಡದಲ್ಲಿ ಓಡುತ್ತಾನೆ. ಬಹುಶಃ ಕರಗದ ಮನೆತನದವರು ಕೂಡ ಭೈರವನ ಆರಾಧಕರೇ ಆದುದರಿಂದ ಕರಗಕ್ಕೂ, ಭೈರವನ ಧೂಪುಂಡಿಗೆಗೂ ಅವಿನಾಭಾವ ಸಂಬಂಧ. ಬೆಂಕಿಯ

೧. ಪ್ರೊ. ಹಿ.ಚಿ. ಬೋರಲಿಂಗಯ್ಯ, ಕರ್ನಾಟಕ ಜನಪದ ಕಲೆಗಳ ಕೋಶ; ಕನ್ನಡ ವಿಶ್ವವಿದ್ಯಾಲಯ, ಹಂಪಿ.



ಅಗ್ನಿಷ್ಟಿಕೆಯ ಪ್ರತಿರೂಪವೆನಿಸಿದ ಧೂಪುಂಡಿಗೆಯು ವಲಸೆಗಾರರಾದವರು ತಮ್ಮ ಜೊತೆಗೆ ಬೆಂಕಿಯ ಕೆಂಡಗಳನ್ನು ಕಾಪಾಡಿಕೊಂಡು ತರುತ್ತಿದ್ದ ಪ್ರಾಚೀನ ತಂತ್ರದ ಭಾಗವಾಗಿಯೂ ಇರಬಹುದು.

ಒಟ್ಟಿನಲ್ಲಿ ಕರಗವೆಂಬುದು ತಮಿಳುನಾಡಿನಿಂದ ವಲಸೆಬಂದ ಕೃಷಿಕರ ಆರಾಧನೆಯ ಪ್ರತೀಕವಿರಬಹುದು. ಅಥವಾ ಮೂಲದಿಂದಲೇ ಉಜ್ಜನಿಯಲ್ಲಿ ನಲೆಸಿದ್ದ ಮಾತೃ ಮೂಲದವರ ಆರಾಧನಾ ಪ್ರತೀಕವಿರಬಹುದು. ಕರಗವೆಂಬುದು ತಮಿಳುನಾಡಿನಿಂದ ಬಂದಿರಲಿ ಅಥವಾ ಅದೇ ನೆಲದ ಮೂಲದ ಆರಾಧನೆಯೇ ಇರಲಿ, ಅದೊಂದು ಫಲಸಮೃದ್ಧಿಯ ಸಂಕೇತವೆನಿಸಿದ ಆಚರಣೆ ಎಂಬುದರಲ್ಲಿ ಎರಡು ಮಾತಿಲ್ಲ. ಕರಗದ ಆರಾಧನೆಯನ್ನು ಕುರಿತು ಹಲವು ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಡಾ. ಚಂದ್ರಶೇಖರ ಕಂಬಾರರು ಕರಗ

ಶುದ್ಧಾಂಗವಾಗಿ ಪ್ರಾರಂಭದಲ್ಲಿ ಸಮೃದ್ಧಿ ಸೂಚಕವಾದ ಯೋನಿ ಪೂಜೆಯಾಗಿತ್ತೆಂಬುದರಲ್ಲಿ ಸಂದೇಹವಿಲ್ಲ" ಎಂದು ಹೇಳುತ್ತಾರೆ. ತಮಿಳುನಾಡಿನಿಂದ ವಲಸೆ ಬಂದ ಕೆಂಪೇಗೌಡನ ವಂಶಸ್ಥರು ಉಜ್ಜನಿಗೆ ತೀರಾ ಸಮೀಪದಲ್ಲಿರುವ ಮಾಗಡಿ ಮತ್ತು ಹುಲಿಯೂರು ದುರ್ಗಗಳಲ್ಲಿಯೂ ತಮ್ಮ ಪಾಳೆಯಪಟ್ಟುಗಳನ್ನು ಸ್ಥಾಪಿಸಿದ್ದರು ಎಂಬುದನ್ನು ನೋಡುವಾಗ ಕರಗವನ್ನು ಹೊತ್ತು ಮೆರೆಯುವ ಹಕ್ಕು ಪಡೆದ ಕರಗದ ಪಾಲಿನ ಪೈಕಿಯವರು ತಮಿಳುನಾಡು ಕಡೆಯಿಂದ ವಲಸೆ ಬಂದ ಕೃಷಿಕರೇ ಇರಬಹುದು ಎಂಬ ಊಹೆಗೆ ಬಲ ಸಿಗುತ್ತದೆ. ಆದರೆ, ಕರಗ ಕೃಷ್ಣನ ಪ್ರತೀಕ ಎಂಬ ವಕ್ಷಗಳ ಕಲ್ಪನೆಗೆ ಇಲ್ಲಿ ಯಾವುದೇ ಆಧಾರವಿಲ್ಲ. ಚೌಡಮ್ಮ- ಕೃಷ್ಣನ ದಾಂಪತ್ಯದ ವೈದಿಕ ಕಲ್ಪನೆ ಈ ಊಹೆಯನ್ನು ಹೆಣೆದಿದೆ ಅಷ್ಟೆ.

ಚೌಡಮ್ಮನನ್ನು ಹೊತ್ತು ಮೆರೆಯುವ ಹಕ್ಕು ಪಡೆದ 'ಕರಡಿ ಪಾಲಿನ ಪೈಕಿಯ ಬಗ್ಗೆ ಮತ್ತಷ್ಟು ವಿಚಾರ ಮಾಡಬಹುದು. ಈ ಕರಡಿ ಪಾಲಿನವರು ಉತ್ತರದ ಕಡೆಯಿಂದ ದಕ್ಷಿಣಕ್ಕೆ ವಲಸೆ ಬಂದು ನೆಲೆನಿಂತರು ಎಂಬ ಕಥೆಯನ್ನು ನಾವು ಈಗಾಗಲೇ ನೋಡಿದ್ದೇವೆ. ಹಾಗೆಯೇ 'ಚೌಡಮ್ಮ ಭೂಮಿಗೆ ಬಂದು ನೆಲೆಸಿದ' ಕಥೆಯೊಂದನ್ನು ಸ್ವಲ್ಪ ಧ್ಯಾನದಿಂದ ಓದಿ ನೋಡ ಬೇಕಾಗುತ್ತದೆ. ಆ ಕಥೆಯ ಮೂಲಕ ಅವಳು 'ಸಪ್ತಮಾತೃಕೆ'ಯರಲ್ಲಿ ಒಬ್ಬಳು ಎಂಬುದಂತೂ ಖಚಿತಗೊಳ್ಳುತ್ತದೆ. ಯಾವುದೇ ಪಶುಪಾಲಕರು ಮತ್ತು ವಲಸೆಗಾರರು ಸಪ್ತಮಾತೃಕೆಯರನ್ನು ಆರಾಧಿಸುತ್ತಾರೆ ಎಂಬ ವಿದ್ವಾಂಸರ ಅಭಿಪ್ರಾಯವನ್ನು ಇಲ್ಲಿ ತಾಳೆ ಹಾಕಲೇಬೇಕಾಗುತ್ತದೆ. ಪಶ್ಚಿಮ ಭಾರತದ ವಲಸೆಗಾರರು ಮತ್ತು ಪಶುಪಾಲಕರನ್ನು ಕುರಿತು ವಿಕೃತ ಅಧ್ಯಯನ ನಡೆಸಿರುವ ಸೊಂಥಯ್ಯ ಎಂಬ ವಿದ್ವಾಂಸ, ವಲಸೆಗಾರರಲ್ಲಿ ಪ್ರಚಲಿತವಿರುವ ಸಪ್ತಮಾತೃಕೆಯರ ಆರಾಧನೆ ಕುರಿತು ವಿಶೇಷ ಬೆಳಕು ಚೆಲ್ಲುತ್ತಾರೆ. ಅವರ ಪ್ರಕಾರ ಅಕ್ಕ ತಂಗಿಯರೆನಿಸಿದ ಈ 'ಏಳು ಜನ ಸೋದರಿಯರು' ಅರ್ಥಾತ್ ಸಪ್ತಮಾತೃಕೆಯರು ವಲಸೆಗಾರ ಬುಡಕಟ್ಟುಗಳ ಆರಾಧ್ಯ ದೈವಗಳಾಗಿದ್ದವು ಮತ್ತು ಅವರು ಹೋದೆಡೆಯಲ್ಲೆಲ್ಲಾ

---

೧.Pastorol Dieities in western India - Gunter - Diet & sontneimer

ಅವರ ದೇವತೆಯರನ್ನು ಹೊತ್ತೊಯ್ಯುತ್ತಿದ್ದರು. ಈ ಅಂಶಕ್ಕೆ ಪೂರಕವಾದ ಮೂರು ವಿವರಗಳು ಚೌಡಮ್ಮನ ಸಂಬಂಧದಲ್ಲಿಯೂ ಸಿಗುತ್ತವೆ. ಒಂದನೆಯದು ಉತ್ತರದಿಂದ ವಲಸೆ ಬಂದ ಕೃಷಿ ಕುಟುಂಬದ ಕಥೆ, ಎರಡನೆಯದು ಚೌಡಮ್ಮನ ಗರ್ಭಗುಡಿಯ ಹೊರಗಿನ ಪಾಳಿಯಲ್ಲಿ ಇದ್ದ ವಲಸೆಗಾರರ ಸಂಕೇತವೆನಿಸಿದ ಕುದುರೆಯ ಚಿತ್ರ, ಮೂರನೆಯದು ಚೌಡಮ್ಮನ ಜೊತೆಗೆ ಭೂಮಿಗೆ ಬಂದವರೆಂದು ನಂಬಲಾದ ಒಟ್ಟು ಏಳು ಜನ ಅಕ್ಕತಂಗಿಯರು. ಉಜ್ಜನಿ ಚೌಡಮ್ಮನನ್ನು ಹೊರತುಪಡಿಸಿದಂತೆ ಉಳಿಕೆ ಆರು ಜನ ಚೌಡಮ್ಮಗಳು ನಿಡಸಾಲೆ, ಯಮ್ಮನಹಳ್ಳಿ, ಕಸ್ಸುಗೆರೆ, ಬೇಗೂರು, ಕೊಳ್ಳೇಗಾಲ ಮತ್ತು ಹೊನ್ನಗಾನಹಳ್ಳಿಗಳಲ್ಲಿ ನೆಲೆಸಿದರೆಂದು ಕಥೆ ನಿರೂಪಿಸುತ್ತದೆ. ಆದರೆ, ಈಗ ನಿಡಸಾಲೆ ಚೌಡಮ್ಮನ ಸಂಬಂಧ ಮಾತ್ರ ಹಬ್ಬದ ಸಂದರ್ಭದಲ್ಲಿ ವಿಶೇಷವಾಗಿ ಕಂಡುಬರುತ್ತದೆಯೇ ಹೊರತು ಉಳಿಕೆ ಚೌಡಮ್ಮಗಳ ಸಂಬಂಧ ಏನೂ ಉಳಿದಿಲ್ಲ.

ಹೀಗೇ, ಇಡೀ ದಕ್ಷಿಣ ಭಾರತದ ದೈವೇತಿಹಾಸದಲ್ಲಿ ಪ್ರಮುಖ ಅಂಶವಾಗಿ ಕಾಣಿಸಿಕೊಳ್ಳುವ ಏಳು ಜನ ಅಕ್ಕತಂಗಿಯರು ದೇವತೆಗಳಾಗಿ' ನೆಲೆಗೊಳ್ಳುವ ಪುರಾಣ ಉಜ್ಜನಿಯಲ್ಲಿಯೂ ಇದೆ. ಮೇಲೆ ನಾನು ವಿವರಿಸಿದ ಈ ಮೂರು ಅಂಶಗಳು ಮೂಲದಲ್ಲಿ ಅಲೆಮಾರಿ ಪಶುಪಾಲಕರೋ ಅಥವಾ ವಲಸೆಗಾರ ಕೃಷಿಕರೋ ಆಗಿದ್ದ ಜನವರ್ಗದ ದೇವತೆಯಾಗಿದ್ದ ಚೌಡಮ್ಮ, ಆ ಜನವರ್ಗ ಒಂದು ಕಡೆ ನೆಲೆನಿಂತ ಮೇಲೆ ಅವರ ಅದಿದೈವವಾಗಿ ತಾನೂ ಖಾಯಂ ಆಗಿ ನೆಲೆಗೊಂಡಂತೆ ಕಾಣುತ್ತದೆ. ಈ ಕ್ರಿಯೆ ಇಂದು ನಿನ್ನೆ ನಡೆದದ್ದಲ್ಲ. ೧೪ನೇ ಶತಮಾನದಷ್ಟು ಹಿಂದಿನ ಶಾಸನದಲ್ಲಿಯೇ 'ಚಉಡೇಶ್ವರಿ' ಎಂದು ಉಲ್ಲೇಖಿಸಲ್ಪಟ್ಟಿರುವ ಈ ದೈವ ಮತ್ತು ಆಕೆಯ ಪರಿವಾರ ಬಹುಶಃ ಒಂದು ಸಾವಿರ ವರ್ಷಗಳಷ್ಟು ಹಿಂದೆಯೇ ಈ ನೆಲಕ್ಕೆ ಬಂದು ನೆಲೆಗೊಂಡಿರಬಹುದೆಂದು ಊಹಿಸಬಹುದಾಗಿದೆ. ಇದು ಐತಿಹ್ಯಗಳ ಆಧಾರದ ಮೇಲಿನ ಊಹೆಯೇ ಹೊರತು ಇತಿಹಾಸದ ಆಧಾರದಿಂದ ಮಾಡಿದ್ದಲ್ಲ ಎಂಬುದನ್ನು ನೆನಪಿಡಬೇಕು.

ಉಜ್ಜನಿ ಚೌಡಮ್ಮನ ಹಬ್ಬ ಬಹುಶಃ ಕರ್ನಾಟಕದಲ್ಲಿಯೇ ವಿಶಿಷ್ಟವಾದದ್ದು ಎಂಬ ನಂಬಿಕೆ ನನ್ನದು. ಉಜ್ಜನಿಯಲ್ಲಿ ಮೂರು ರೀತಿಯ ಸ್ತ್ರೀ ದೇವತೆಗಳಿರುವುದು ಈ ವಿಶಿಷ್ಟತೆಗೆ ಕಾರಣವಾಗಿದೆ. ಆ ಮೂರು ದೇವತೆಗಳೆಂದರೆ ಚೌಡಮ್ಮ, ಹೆಬ್ಬಾರಮ್ಮ ಮತ್ತು ಮಾರಮ್ಮ. ಹೆಬ್ಬಾರಮ್ಮ ಮತ್ತು ಮಾರಮ್ಮ ಒಂದೇ ರೀತಿಯ ಪುರಾಣಗಳನ್ನು ತಳಕು ಹಾಕಿಕೊಂಡ ದೈವಗಳಾಗಿ ನಮಗೆ ಆಶ್ಚರ್ಯವನ್ನುಂಟು ಮಾಡುತ್ತವೆ. ಆದ್ದರಿಂದಲೇ ಉಜ್ಜನಿಯಲ್ಲಿ ಮಾರಮ್ಮನಿಗೆ ಹೆಚ್ಚು ಪ್ರಾಶಸ್ತ್ಯವಿಲ್ಲ. ಮಾರಿಹಬ್ಬವೂ ಇಲ್ಲ. ಒಂದು ಸಣ್ಣ ಗುಡಿ ಮಾತ್ರವಿದೆ. ಚೌಡಮ್ಮನ ಹಬ್ಬದಲ್ಲಿ ಹೆಚ್ಚು ಕಡಿಮೆ ಸಮಪಾತ್ರ ಪಡೆದ ದೇವತೆ ಎಂದರೆ ಹೆಬ್ಬಾರಮ್ಮ.

ಹೆಬ್ಬಾರಮ್ಮ ಮುಖ್ಯವಾಗಿ ಹೊಲೆಯರ ದೇವತೆ. ಹೆಬ್ಬಾರಮ್ಮನ ಗುಡಿಯೂ ಹೊಲಗೇರಿಯಲ್ಲಿಯೇ ಇದೆ. ಈ ದೇವತೆಗೆ ಸಂಬಂಧಿಸಿದ ಪುರಾಣ ಹೆಚ್ಚು ಕಡಿಮೆ ಮಾರಮ್ಮನ

ಪುರಾಣವನ್ನು ಹೋಲುತ್ತದೆ. ಆದ್ದರಿಂದಲೇ ಇಲ್ಲಿ ಮಾರಮ್ಮನಿಗೆ ಹೆಚ್ಚು ಪ್ರಾಶಸ್ತ್ಯವಿಲ್ಲ. ಉಜ್ಜನಿಯ ವಿಶಿಷ್ಟತೆ ಏನು ಎಂದರೆ, ಹೆಬ್ಬಾರಮ್ಮನ ಭಕ್ತರಾದ ಹೊಲೆಯರು ಚೌಡಮ್ಮನ ಹಬ್ಬದಲ್ಲಿ ಪ್ರಧಾನಪಾತ್ರ ವಹಿಸುವುದು. ಹದಿನೆಂಟು ದಿನಗಳ ಕಾಲ ನಿಗದಿಪಡಿಸಲಾದ ಹೊಲೆಯರು ಶಾಸ್ತ್ರೋಕ್ತವಾಗಿ ಜನಿವಾರ ಹಾಕಿ ಬ್ರಾಹ್ಮಣರಾಗುವ ಪದ್ಧತಿ ಅತ್ಯಂತ ಅಪರೂಪವಾದುದ್ದು. ಬ್ರಾಹ್ಮಣ ಪುರೋಹಿತನ ನೇತೃತ್ವದಲ್ಲಿಯೇ ಈ ಜನಿವಾರ ಶಾಸ್ತ್ರ ನೆರವೇರುತ್ತದೆ. ಹೀಗೆ ನೇಮ ನಿಯಮಗಳನ್ನು ಪಾಲಿಸಿ ಬ್ರಾಹ್ಮಣರಾದ ಹೊಲೆಯರು ತಮ್ಮ ದೈವದ ಪ್ರತೀಕವಾದ ಹೆಬ್ಬಾರೆಗಳನ್ನು ಹೊತ್ತು ಚೌಡಮ್ಮನ ಕೊಂಡದಲ್ಲಿ ಓಡಲು ಅರ್ಹರಾಗುತ್ತಾರೆ!

ದೇಶಾದ್ಯಂತ ಪ್ರಚಲಿತದಲ್ಲಿರುವ ಮಾರಿ ಪುರಾಣವನ್ನು ಹೋಲುವ ಹೆಬ್ಬಾರಮ್ಮನ ಪುರಾಣ ಒಂದು ಕಾಲದಲ್ಲಿ ನಡೆದಿರಬಹುದಾದ ಬ್ರಾಹ್ಮಣ ಕನ್ಯೆ ಮತ್ತು ಹೊಲೆಯರ ಹುಡುಗನ 'ವರ್ಣಸಂಕರದ' ಪ್ರಸಂಗದ ಆಶಯವೇ ಇರಬಹುದೇ? ಮಾರಿ ಪುರಾಣದಲ್ಲಿ ಸುಳ್ಳು ಹೇಳಿ ವರ್ಣಸಂಕರ ಸಾಧಿಸಿದ ಹೊಲೆಯ ಯುವಕನನ್ನು ಕೋಣನ ರೂಪದಲ್ಲಿ ಬಲಿ ಪಡೆಯುವ ಪ್ರತೀಕಾರದ ಆಶಯವಿದೆ. ಆದರೆ, ಹೆಬ್ಬಾರಮ್ಮನ ಪುರಾಣ ಸ್ವಲ್ಪ ಬದಲಾವಣೆಯ ಹಾದಿ ತುಳಿದಿದ್ದು ಪ್ರತೀಕಾರದ ಬದಲು ಹಾಗೆ ಸಂಕರದಿಂದ ಹುಟ್ಟಿದ ಮಕ್ಕಳನ್ನು ಬ್ರಾಹ್ಮಣರನ್ನಾಗಿ ಪರಿವರ್ತಿಸುವ ಆಶಯ ವ್ಯಕ್ತಪಡಿಸುತ್ತದೆ. ಇದು ನಿಜವೋ ಎಂಬಂತೆ ಆರು ಜನ ಹೊಲೆಯ ಕುಲದ ಗುಡ್ಡರು ಶಾಸ್ತ್ರೋಕ್ತವಾಗಿ ಜನಿವಾರ ಧರಿಸಿ ಬ್ರಾಹ್ಮಣರಾಗುತ್ತಾರೆ. ಆದರೆ ಇದು ತಾತ್ಕಾಲಿಕ ಮಾತ್ರ ಎಂಬುದು ಇಲ್ಲಿ ಮುಖ್ಯ. ಇಲ್ಲಿ ಎರಡು ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಒಂದು : ಹೀಗೆ ಜನಿವಾರ ಧರಿಸಿ ಬ್ರಾಹ್ಮಣರಾದ ಹೊಲೆಯರ ಸಾಮಾಜಿಕ ಸ್ಥಾನಮಾನದಲ್ಲಿ ಏನಾದರೂ ಬದಲಾವಣೆ ಆಗಿದೆಯೆ? ಎರಡು : ಬ್ರಾಹ್ಮಣರಾಗಿ ಪರಿವರ್ತನೆ ಹೊಂದಿದಾಕ್ಷಣ ಬ್ರಾಹ್ಮಣರಿಗೆ ಇರುವ 'ಗುಡಿಪ್ರವೇಶ'ದ ಹಕ್ಕು ಲಭ್ಯವಾಗುತ್ತದೆಯೇ? ವಾಸ್ತವವಾಗಿ ಈ ಎರಡೂ ಪ್ರಶ್ನೆಗಳಿಗೆ ಒಂದೇ ಉತ್ತರ - ಇಲ್ಲ ಎಂಬುದು. ಹಬ್ಬದ ಕಂಬ ಇಕ್ಕಿದ ದಿನದಿಂದ, ಹಬ್ಬ ಮುಗಿದು ಹೆಬ್ಬಾರೆ ಕಣ್ಣು ಕಳಚುವವರೆಗಿನ ಆ 'ಮುಟ್ಟು ಚಿಟ್ಟೆ'ನ ಅವಧಿಯಲ್ಲಿ ಅವರು 'ಪವಿತ್ರ'ರಾಗುತ್ತಾರೆಂಬ ನಂಬಿಕೆ ಜನರಿಗೆ ಇದ್ದರೂ, ಅವರನ್ನು ಬ್ರಾಹ್ಮಣರನ್ನಾಗಿ ಸ್ವೀಕರಿಸುವ ಅಥವಾ ಗುಡಿ ಇತ್ಯಾದಿ ಒಳ ಆವರಣಗಳಿಗೆ ಪ್ರವೇಶ ನೀಡುವ ದೊಡ್ಡತನವನ್ನು ಮಾತ್ರ ಸವರ್ಣೀಯ ಸಮಾಜ ತೋರಿಲ್ಲ. ಚೌಡಮ್ಮನ ಕೊಂಡದಲ್ಲಿ ಓಡುವ ಅವಕಾಶ ಮಾತ್ರ ಅವರಿಗುಂಟು. ಬಹುಶಃ ಕೊಂಡದಲ್ಲಿ ಓಡುವವರು ಶೂದ್ರರಲ್ಲದೆ ಬ್ರಾಹ್ಮಣರಾಗಿದ್ದ ಪಕ್ಷದಲ್ಲಿ ಆ ಅವಕಾಶ ಹೆಬ್ಬಾರ ಗುಡ್ಡರಿಗೆ ಇರುತ್ತಿರಲಿಲ್ಲವೇನೋ.

ಕೊಂಡ ಹಾಯುವ ಮತ್ತು ಕೊಂಡ ಹಾಯ್ದ ನಂತರ ನಡೆಯುವ ಅಭಿನಯಾತ್ಮಕ ಆಚರಣಾ ವಿಧಿಯೊಂದನ್ನು ನಾವು ಗಮನಿಸಲೇಬೇಕು. ಚೌಡಮ್ಮನ ಕೊಂಡ ಎಂದರೆ ಅದು ಸಾಮಾನ್ಯವಾದ ಬೆಂಕಿಯ ರಾಶಿಯಲ್ಲ. ನಾನಾ ವಿಧವಾದ ಬೃಹತ್ ಮರಗಳ ರಾಶಿಯೇ ಅಲ್ಲಿ

ಬೇಯುತ್ತದೆ. ಅಗಾಧ ಕೆಂಡದ ರಾಶಿ ಕೊಂಡದ ಕುಳಿಯಲ್ಲಿ ತುಂಬುತ್ತದೆ. ಅದನ್ನು ಹಾಯ್ದು ಬರಬೇಕಾದರೆ ಖಂಡಿತವಾಗಿಯೂ ಎಂಟೆದೆ ಬೇಕು. ಆದರೆ ಅದು ಮಾನಸಿಕ ಸ್ಥೈರ್ಯದ ಮೇಲೆ ಅವಲಂಬಿತವಾಗುತ್ತದೆ. ಆದ್ದರಿಂದಲೇ ಕೊಂಡದ ಸಂದರ್ಭಕ್ಕಿಂತ ೧೫ ದಿನಗಳ ಮೊದಲೇ ನೇಮನಿಯಮಗಳಿಗೆ ಒಳಗಾಗುವ ವಿವಿಧ ಗುಡ್ಡರು ಮನೆಮಠಗಳನ್ನು ಬಿಟ್ಟು, ಗುಡಿ ಸೇರುತ್ತಾರೆ. ನಿಯಮಿತ ಆಹಾರ ಮತ್ತು ಅನೇಕ ನಿಷೇಧಗಳನ್ನು ಅನುಸರಿಸಿ, ಮಾನಸಿಕ ಸಮತೋಲನಕ್ಕೆ ಒಳಗಾಗಿ, ಒಂದು ರೀತಿಯಲ್ಲಿ ಸಾಮಾನ್ಯ ಮನುಷ್ಯರನ್ನು ಮೀರಿದ ಮಧ್ಯಂತರ ಜಗತ್ತೊಂದನ್ನು ಪ್ರವೇಶಿಸುತ್ತಾರೆ. ಅದೊಂದು ರೀತಿಯ ತಪಸ್ಸು ಎಂದರೂ ನಡೆಯುತ್ತದೆ.

ಆ ನಿಗಿನಿಗಿಸುವ ಬೃಹತ್ ಕೆಂಡದ ರಾಶಿಯಲ್ಲಿ ಮೊದಲಿಗೆ ನಿಡಸಾಲೆ ಚೌಡಮ್ಮನ ಗುಡ್ಡ ಪೂಜೆಯನ್ನು ಹೊತ್ತು ಓಡುತ್ತಾನೆ. ಆನಂತರ ಕರಗದ ಗುಡ್ಡ, ತದನಂತರ ಉಜ್ಜನಿ ಚೌಡಮ್ಮನ ಗುಡ್ಡ ಪೂಜೆಯನ್ನು ಹೊತ್ತು ಓಡುತ್ತಾರೆ. ಅದರ ನಂತರ ಧೂಪುಂಡಿಗೆ ಹಿಡಿದ ಭೈರವನ ಗುಡ್ಡ. ಕಡೆಯಲ್ಲಿ ಎರಡು ಹೆಬ್ಬಾರೆಗಳನ್ನು ಹೊತ್ತ ಇಬ್ಬರು ಗುಡ್ಡರು. ಕಟ್ಟಕಡೆಯಲ್ಲಿ ಬರಿಗೈಯ್ಯನ ನಾಲ್ವರು ಹೆಬ್ಬಾರೆ ಗುಡ್ಡರು ಕೊಂಡ ಹಾಯುತ್ತಾರೆ. ಚೌಡಮ್ಮನ ಗುಡ್ಡರು, ಕರಗ ಮತ್ತು ಧೂಪುಂಡಿಗೆ ಗುಡ್ಡರು ದೇವಸ್ಥಾನದ ಹಜಾರದೊಳಕ್ಕೆ ಪ್ರವೇಶಿಸುತ್ತಾರೆ. ಅವರಿಗೆ ತೀರ್ಥ ಕೊಟ್ಟು ಉಪಚರಿಸಲಾಗುತ್ತದೆ. ಈ ಗುಡ್ಡರ ಹಿಂದೆಯೇ ಕೊಂಡ ಹಾಯ್ದು ಬರುವ ಆರು ಜನ 'ಬ್ರಾಹ್ಮಣರೆನಿಸಿಕೊಂಡ' ಹೆಬ್ಬಾರೆ ಗುಡ್ಡರಿಗೆ ದೇವಸ್ಥಾನದ ಹಜಾರದೊಳಕ್ಕೆ ಪ್ರವೇಶವಿಲ್ಲ! ಕೆಂಡದಲ್ಲಿ ಓಡಿ ಆವೇಶಭರಿತರಾಗಿ ದೇವಸ್ಥಾನದ ಒಳಗ್ಗೆ ನುಗ್ಗಲು ಆ ಆರು ಜನರೂ ಪ್ರಯತ್ನಿಸುತ್ತಾರೆ. ಅವರ ಮೈಮೇಲೆ ದೇವರ ಪ್ರವೇಶವಾಗಿರುತ್ತದೆ ಎಂದು ನಂಬಲಾಗುತ್ತದೆ. ಹಾಗೆ ಆವೇಶದಿಂದ ಅವರು ಒಳನುಗ್ಗಲು ಪ್ರವೇಶಿಸಿದಷ್ಟೂ ಅವರನ್ನು ಬಾಗಿಲಲ್ಲೇ ತಡೆಯುವ ಪ್ರಯತ್ನಗಳಾಗುತ್ತವೆ. ನಿಗದಿಪಡಿಸಿದ ಸವರ್ಣಿಯ ವ್ಯಕ್ತಿಗಳು ಬಾಗಿಲಲ್ಲಿ ನಿಂತು ಅವರನ್ನು ನಿಯಂತ್ರಿಸುತ್ತಾರೆ. ಇದು ಪ್ರತಿ ವರ್ಷ ನಡೆಯುವ ಒಂದು ಅಭಿನಯಾತ್ಮಕ ಆಚರಣೆ, ದೇವಸ್ಥಾನದ ಒಳಗಿಂದ ಬ್ರಾಹ್ಮಣ ಪೂಜಾರಿ ಬಂದು ಹೆಬ್ಬಾರೆ ಗುಡ್ಡರ ಮೇಲೆ ಚೌಡಮ್ಮನ ತೀರ್ಥವನ್ನು ಹಾಕಿದ ಮೇಲೆ ನಿಧಾನಕ್ಕೆ ಆವೇಶ ತಗ್ಗುತ್ತದೆ. ನುಗ್ಗುವ ಕ್ರಿಯೆ ನಿಲ್ಲುತ್ತದೆ. ಹೆಬ್ಬಾರೆಗಳನ್ನು ಹೊತ್ತ ಗುಡ್ಡರು ತಮ್ಮ 'ಮನೆದೇವರ ಗುಡಿ' ಎನಿಸಿದ ಹೆಬ್ಬಾರಮ್ಮನ ಗುಡಿಗೆ ಹಿಂತಿರುಗುತ್ತಾರೆ.

ಈ ಪ್ರಸಂಗ ವಿಚಾರಕ್ಕೆ ಅರ್ಹವಾದುದು. ಜನಿವಾರ ಧಾರಣೆಯೇ ಒಂದು ಅಪರೂಪದ ಪ್ರಸಂಗ. ಅದರ ಜೊತೆಗೆ ಈ ಅಭಿನಯಾತ್ಮಕ ಆಚರಣೆ ಮತ್ತೊಂದು ವಿಶಿಷ್ಟ ಪ್ರಸಂಗ. ಇದರ ಹಿಂದಿನ ತರ್ಕ ಏನು? ಘರ್ಷಣೆಯೋ ಇಲ್ಲವೇ ಸಾಮರಸ್ಯವೋ? ಇದು ಅಷ್ಟು ಸುಲಭವಾಗಿ ಬಗೆಹರಿಸಿಕೊಳ್ಳಬಹುದಾದ ಪ್ರಶ್ನೆ ಅಲ್ಲ. ಯಾಕೆಂದರೆ ಯಾವುದೇ ಆಚರಣೆ ಆರಾಧನೆಗಳು ನೂರಾರು ವರ್ಷಗಳ ದೀರ್ಘ ಕಾಲದಲ್ಲಿ ಹಲವು ರೀತಿಯ ಬದಲಾವಣೆಗೆ ಒಳಗಾಗುತ್ತಾ ಆಯಾ ಕಾಲದ ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುತ್ತಿರುತ್ತವೆ. ಅದು ಪ್ರಾಚೀನ ವ್ಯವಸ್ಥೆಯ ಪಳೆಯುಳಿಕೆಯ ರೀತಿಯೂ ಇರಬಹುದು ಅಥವಾ ಕಾಲಘಟ್ಟವೊಂದರಲ್ಲಿ

ಬದಲಾವಣೆಗೊಂಡ ಅಥವಾ ಹೇರಲ್ಪಟ್ಟ ಸಾಮಾಜಿಕ ಮೌಲ್ಯವೂ ಇರಬಹುದು. ಈ ಹಿನ್ನೆಲೆಯಲ್ಲಿ ಕೆಲವು ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಬೇಕಾಗುತ್ತದೆ. ೧೯೭೯ರಲ್ಲಿ ಪ್ರಥಮ ಬಾರಿಗೆ ಪ್ರಕಟಗೊಂಡ ನನ್ನ ಈ ಗ್ರಂಥವನ್ನು ಉಲ್ಲೇಖಿಸಿ ವಿದ್ವಾಂಸರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಹೀಗಿವೆ :

"ಕೆಲವು ಆಚರಣೆಗಳು ಸಮಾಜದ ಮೂಲಭೂತ ಒಪ್ಪಿಗೆಗಳ ವಿರುದ್ಧ ಬಂಡಾಯವನ್ನು ಸಾರುತ್ತವೆ. ಸಮಾಜದ ಸಂಘಟನೆಯಲ್ಲಿಯ ಎಲ್ಲ ವೈರುಧ್ಯಗಳೂ, ಘರ್ಷಣೆಗಳೂ ಈ ಆಚರಣೆಯಲ್ಲಿ ಅಭಿನೀತವಾಗುತ್ತವೆ. ಒಂದು ಘಟನಾವಳಿಯ ಚಕ್ರವೇ ಇಲ್ಲಿ ತಿರುಗುತ್ತದೆ. ಇದನ್ನೆ ಬಂಡುಕೋರ ವಿಧಿಗಳು ಎಂದು ಕರೆಯುವುದು.... ತುಮಕೂರು ಜಿಲ್ಲೆ 'ಉಜ್ಜನಿ ಚೌಡಮ್ಮನ ಹಬ್ಬ ಇಂಥದೊಂದು ಬಂಡುಕೋರ ವಿಧಿಯ ರಚನೆಯೊಂದನ್ನು ಒಳಗೊಂಡಿದೆ ಎಂದು ನನಗನ್ನಿಸುತ್ತದೆ. ಜಾತಿ ಪದ್ಧತಿಯ ಪಿರಮಿಡ್ಡಿನೊಳಗಿನ ಎಲ್ಲ ಘರ್ಷಣೆಗಳೂ ಒಂದಲ್ಲ ಒಂದು ರೀತಿಯಲ್ಲಿ ಇಲ್ಲಿ ರಿಚುಯಲೈಸ್ ಆಗುತ್ತವೆ. ಮೇಲು ನೋಟಕ್ಕೆ ಅಗಾಧ ಆಕಾರರಾಹಿತ್ಯತೆಯನ್ನು ಹೊಂದಿರುವ ಈ ಆಚರಣೆಯಲ್ಲಿ, ಎಲ್ಲ ಆಚರಣೆಯಲ್ಲಿ ಇರುವ ಹಾಗೆ, ಕೆಲವು ಬಾಗಿಲುಗಳಿವೆ. ಇವುಗಳ ಮೂಲಕ ಈ ಆಚಣೆಯ ಆಶಯವನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಇಲ್ಲಿ ಮುಖ್ಯ ಸಂಗತಿ ಎಂದರೆ, ಹರಿಜನರು ಜನಿವಾರ ಹಾಕಿ, ನಿರ್ದಿಷ್ಟ ಅವಧಿಗೆ ಬ್ರಾಹ್ಮಣರಾಗುವುದು. ಮತ್ತೆ ಇನ್ನೊಂದು ಕಡೆ ಹರಿಜನರು ಆವೇಶದಿಂದ ಗುಡಿಗೆ ನುಗ್ಗಲು ಪ್ರಯತ್ನಿಸುತ್ತಾರೆ. ಅವರನ್ನು ಸವರ್ಣೀಯರು ತಡೆದು ನಿಲ್ಲಿಸುತ್ತಾರೆ. ಹರಿಜನರಿಗೆ ಕೊಟ್ಟ ಬ್ರಾಹ್ಮಣ್ಯದ ಮಿತಿ ಇದು. ಜನಿವಾರ ಕಳಚುವವರೆಗೆ ಅವರು ತಮ್ಮ ಜಾತಿಯೊಂದಿಗೆ ಯಾವುದೇ ರೀತಿಯ ಸಂಬಂಧವನ್ನು ಇಟ್ಟುಕೊಳ್ಳಬಾರದು. ಈ ಆಚರಣೆಯ ಉಳಿದ ವಿವರಗಳ ಹಿಂದೆ ಇರುವ ಸಂಗತಿಗಳನ್ನು ಅಧ್ಯಯನ ಮಾಡಿದರೆ ಈ ಆಚರಣೆ ಒಂದು ಬಂಡುಕೋರ ರಿಚುಯಲ್ ಇರಬಹುದು ಎಂಬುದು ಸ್ಪಷ್ಟವಾಗುತ್ತದೆ."

ಡಾ. ಡಿ. ಆರ್. ನಾಗರಾಜ್

(ಅಮೃತ ಮತ್ತು ಗರುಡ, ಪುಟ 64-65)

" ತುಳಿಯಲ್ಪಟ್ಟ ಜಾತಿಗಳ ಜನ ವಿವಿಧ ಆಚರಣೆಗಳ ಮೂಲಕ ಶೋಷಕ ಸಮಾಜಕ್ಕೆ ತಮ್ಮ ಪ್ರತಿಭಟನೆ ಸಲ್ಲಿಸಿದ್ದಾರೆ..... ಉಜ್ಜನಿ ಚೌಡಮ್ಮನ ಹಬ್ಬದಲ್ಲಿ ಆರು ಜನ ಹೊಲೆಯರಿಗೆ ಜನಿವಾರ ಧಾರಣೆ ಮಾಡಿದ ನಂತರ ಅವರ ಮೇಲೆ ದೇವತೆ ಬರುತ್ತದೆ. ಅವರು ಚೌಡಮ್ಮನ ಗುಡಿಯನ್ನು ನುಗ್ಗಲು ಓಡುತ್ತಾರೆ. ಆದರೆ ಗುಡಿಯ ಬಾಗಿಲಿನಲ್ಲೇ ಮೇಲು ಜಾತಿಯ ಜನ ಈ ದೇವರುಗಳನ್ನು ತಡೆಯುತ್ತಾರೆ. ದೇವರು ಮೈದುಂಬಿದ್ದರೂ ಮೈದುಂಬಲು ಆರಿಸಿಕೊಂಡಿರುವ ವ್ಯಕ್ತಿಗಳು ಹೊಲೆಯರಾಗಿರುವುದು ಇದಕ್ಕೆ ಕಾರಣ" .

ಡಾ. ಸಿದ್ದಲಿಂಗಯ್ಯ (ಕರ್ನಾಟಕ ಜಾನಪದ, ಪುಟ. ೧೯೦)

"ಹರಿಜನರಿಗೆ ಜನಿವಾರ ಹಾಕುವ ವಿಧಿ ಊರಮ್ಮನನ್ನು ಬ್ರಾಹ್ಮಣಿಯೆಂದು ಸಾಧಿಸುವ ಹಟದ ಪರಮಾವಧಿಯಿದ್ದಂತಿದೆ.... ಬಲಿ ಕೊಡುವುದು, ಮಾಂಸಾಹಾರ ಮದ್ಯಗಳನ್ನು ನಿಷೇದಿಸುವಲ್ಲಿ



ಸಫಲರಾದ ವೈದಿಕರು ಪ್ರಬಲರಾದ ಹೊಲೆಯರಿಗೆ ಜನಿವಾರ ಹಾಕುವ ಒತ್ತಾಯಕ್ಕೆ ಒಳಗಾಗಿರುವುದು ಸ್ಪಷ್ಟವಿದೆ. ಇಲ್ಲಿ ಹೆಬ್ಬಾರಮ್ಮ, ಚೌಡಮ್ಮ, ಮಾರಮ್ಮರಿಗಿರುವ ಸಂಬಂಧವನ್ನು ಶೋಧಿಸ ಬೇಕಾಗಿದೆ..... ದ್ರಾವಿಡಾಂಶಗಳ ಜತೆ ವೈದಿಕ ಪರಂಪರೆಯೂ ಸೇರಿದ್ದು ಚೌಡಮ್ಮನನ್ನು ದೇವಗಣ, ರಾಕ್ಷಸ ಗಣಗಳೆರಡಕ್ಕೂ ಸೇರಿದವಳೆಂದು ಹೇಳುವಲ್ಲಿ ಸ್ಪಷ್ಟವಿದೆ .

ಎಸ್. ಎಸ್. ಹಿರೇಮಠ

(ಜಾತ್ರೆಗಳು - ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ - ಪು. ೧೪೫-೧೪೬)

"ಗ್ರಾಮದೇವತೆಗಳ ಆಕರ್ಷಕವೂ, ಕೋಲಾಹಲವೂ ಆದ ಜಗತ್ತಿನಲ್ಲಿ, ನಮ್ಮ ಸಂಸ್ಕೃತಿಯ ನಿಜರೂಪವು ಎಷ್ಟೊಂದು ಮಾರುವೇಷಗಳಲ್ಲಿ ಅಡ್ಡಾಡಿಕೊಂಡಿದೆ ಎಂದು ಹುಡುಕುವ ಕುತೂಹಲದಲ್ಲಿ, ನನ್ನ ಗಮನವು ಮುಖ್ಯವಾಗಿ ಜಾತಿಯೂ, ಭೂಮಾಲೀಕತನವೂ ಯಜಮಾನಿಕೆ ನಡೆಸುತ್ತಿರುವ ಹಳ್ಳಿಗಳಲ್ಲಿ ಈ ಜಾತ್ರೆಗಳು ದಲಿತ ವರ್ಗದ ಚಲನೆಯನ್ನು ಯಾವ ಕಡೆ ನಿರ್ದೇಶಿಸುತ್ತಿವೆ ಎಂಬ ಕಡೆ ಇದೆ...... ಉಜ್ಜನಿ ಚೌಡಮ್ಮನ ಜಾತ್ರೆಯಲ್ಲಿ ಆರು ಜನ ಹೊಲೆಯರಿಗೆ ಕ್ಷೌರ ಮಾಡಿಸಿ, ಉಡುದಾರ ತೆಗೆಸಿ, ಅರಿಸಿಣ-ಸೀಗೇಕಾಯಿಯಿಂದ ಹೊಟ್ಟೆಯ 'ಹೊಲೆ' ಯನ್ನು ತೊಳೆಸಿ, ಬಾವಿ ದಡದಲ್ಲಿ ಹೋಮ ಮಾಡಿಸಿ ಜನಿವಾರ ಹಾಕಲಾಗುತ್ತದೆ. ಹದಿನಾಲ್ಕು ದಿನ ಸ್ವಜಾತಿ ಜನರಿಂದ ಅವರು ಸಂಪರ್ಕ ಕಳೆದುಕೊಂಡು ಬ್ರಾಹ್ಮಣರಾಗುತ್ತಾರೆ. ಆದರೆ ಜಾತ್ರೆ ಮುಗಿದೊಡನೆ, ಜನಿವಾರ ಕಳೆದುಕೊಂಡು ಮೊದಲಿನ ಹೊಲೆಯರಾಗುತ್ತಾರೆ. ಇಂಡಿಯಾದ ಸಮಾಜವು ಜಾತಿ ವೈಷಮ್ಯಗಳ ನಡುವೆಯೇ ರೂಪಿಸಿಕೊಂಡ ಆಂತರಿಕ ಸಾಮರ್ಥ್ಯದ ಮಾದರಿಯಿದು. ಈ 'ಸಾಮರಸ್ಯ' ದಲ್ಲಿ ಕೆಳಜಾತಿಗಳು 'ಮೇಲು' ಜಾತಿಗೆ ಸಮಾನವಾದ ಹಕ್ಕುಗಳನ್ನು ಪಡೆದರೂ, ಅವು ತಾತ್ಕಾಲಿಕವಾಗಿವೆ. ವಾಸ್ತವ ಬದುಕಿನಲ್ಲಿ ಅವರ ಸ್ಥಾನಮಾನಗಳು ಏನೂ ಬದಲಾಗುವುದಿಲ್ಲ.

ಡಾ. ರಹಮತ್ ತರೀಕೆರೆ

(ಪ್ರತಿ ಸಂಸ್ಕೃತಿ : ಪು. ೭೮ ಮತ್ತು ೮೮).

ಈ ಅಭಿಪ್ರಾಯಗಳನ್ನು ಪರಿಶೀಲಿಸುವ ಮೊದಲು, ಸ್ವಲ್ಪ ಹಿಂದೆ ಹೋಗಬಯಸುತ್ತೇನೆ. ಚೌಡಮ್ಮನನ್ನು ಬಹುಶಃ ಉತ್ತರದಿಂದ ಬಂದ ಕೃಷಿ ಮೂಲದ ವಲಸೆಗಾರರೇ ಪ್ರತಿಷ್ಠಾಪಿಸಿರ ಬಹುದು ಎಂಬ ಅಭಿಪ್ರಾಯವನ್ನು ನಾನು ಮಂಡಿಸಿದ್ದೇನೆ. ಆಗ ಚೌಡಮ್ಮನ ರೂಪ ಯಾವ ರೀತಿ ಇದ್ದಿರಬಹುದು? ನಮ್ಮ ಬಹುತೇಕ ಗ್ರಾಮದೇವತೆಯರು ನಿರ್ದಿಷ್ಟ ರೂಪವಿಲ್ಲದ ರೀತಿಯಲ್ಲಿ ಇಂದೂ ಕಾಣಸಿಗುತ್ತಾರೆ. ಒಂದು ಮರದ ತುಂಡು, ಒರಟಾದ ಕಲ್ಲಿನ ಆಕೃತಿ, ಕುಂಬಾಕಾರದ ಮಣ್ಣಿನ ಮಡಿಕೆ, ಬೆಳೆದು ನಿಂತ ಹುತ್ತ, ಮರದ ಆಶ್ರಯದಲ್ಲಿ ನೆಟ್ಟ ಕಲ್ಲು ಅಥವಾ ಒಣಮರ, ಕೆರೆಯ ದಂಡೆಯ ವೃಕ್ಷ, ಬೆಟ್ಟದ ಮೇಲಿನ ಕೋಡುಗಲ್ಲು ಇವೆಲ್ಲವೂ ದೈವಗಳ ಸಂಕೇತಗಳೇ ಆಗಿ ಕಾಣಬರುತ್ತವೆ. ನಿಸರ್ಗದ ಸಹಜ ಆಕೃತಿಗಳನ್ನೇ ದೈವಗಳು ಎಂದು ಪೂಜಿಸಿದ ಪ್ರಾಚೀನ ಹಂತದ ಪಳೆಯುಳಿಕೆಗಳು ಕೂಡ ಇನ್ನೂ ನಮ್ಮ ಮುಂದಿವೆ. ಬಹುಶಃ ಚೌಡಮ್ಮನನ್ನು ಮೊದಲಿಗೆ ಪ್ರತಿಷ್ಠಾಪಿಸಿದ ಸಂದರ್ಭದಲ್ಲಿ, ಅದು ಕೂಡ ಒಂದು ಕಲ್ಲೋ,



ಮರವೋ ಅಥವಾ ಹುತ್ತದ ರೂಪವೋ ಇರಬಹುದು ಎಂದು ಊಹಿಸಬಹುದು. ಇದು ನೂರಾರು ವರ್ಷಗಳ ಹಿಂದಿನ ಮಾತು. ಚೌಡಮ್ಮನ ಆಕೃತಿಯ ಊಹೆಯನ್ನು ಕನಿಷ್ಠ ಒಂದು ಸಾವಿರ ವರ್ಷಗಳ ಹಿಂದಕ್ಕೆ ತೆಗೆದುಕೊಂಡು ಹೋಗಬಹುದು, ಇದಕ್ಕೆ ಪುರಾವೆ ಎಂದರೆ ಈಗಿನ ಗುಡಿಯ ಈಶಾನ್ಯ ದಿಕ್ಕಿಗೆ ಇರುವ ಹೊನ್ನರಳೀಮರದ ಕಟ್ಟೆ, ಅರಳಿ ಮತ್ತು ಬೇವಿನ ಮರಗಳು ಪ್ರಧಾನವಾಗಿ ಇರುವ ಈ ಸ್ಥಳ ಹಲವಾರು ರೀತಿಯ ಸಸ್ಯಸಂಕುಲಗಳ ಪುಟ್ಟ ವನ. ಆ ವನದ ನಡುವಿನ ಅರಳಿ ಮತ್ತು ಬೇವಿನ ಮರದ ಬುಡದಲ್ಲಿ ಬಹುಶಃ ಮೊದಲಿನ ಚೌಡಮ್ಮನ ಆವಾಸ ಸ್ಥಾನವಿತ್ತು ಎಂದು ಊಹಿಸಬಹುದು. ಯಾಕೆಂದರೆ, ಪ್ರತಿ ವರ್ಷದ ಹಬ್ಬದಲ್ಲಿಯೂ ಕಂಬ ಇಕ್ಕಿದ ದಿನದಿಂದ ಕೊಂಡ ಹಾಯುವವರೆಗೆ ಚೌಡಮ್ಮನ ಮೆರೆದೇವರ ಜೊತೆ ಇತರೆ ದೇವರುಗಳೂ ಸೇರಿ ಹೊನ್ನರಳಿಮರದ ಕಟ್ಟೆಯನ್ನು ಸುತ್ತಿ, ಸ್ವಲ್ಪ ಹೊತ್ತು ದೇವರನ್ನು ಅಲ್ಲಿ ಇಳಿಸಿ ವಿಶ್ರಾಂತಿ ಪಡೆದು, ಆನಂತರ ದೊಡ್ಡ ಗುಡಿಗೆ ಬರಬೇಕು. ಪ್ರಾಚೀನದಲ್ಲಿ ಆ ನಿಸರ್ಗವೇ ಚೌಡಮ್ಮನ ಆರಾಧನಾ ಸ್ಥಳ, ತೀರಾ ಆರಂಭದಲ್ಲಿ ನಿಸರ್ಗದ ಜೊತೆಗಿನ ಚೌಡಮ್ಮನ ಕಲ್ಪನೆ ಇದು.

ಉಜ್ಜನಿಯ ಊರೊಳಗೆ ಇರುವ ಮನೆದೇವರ ಗುಡಿ ಎರಡನೇ ಹಂತದ್ದು. ಏನೇನೂ ಆಕಾರವಿಲ್ಲದ ಆ ಪುಟ್ಟ ಗುಡಿಯಲ್ಲಿ ಇರುವ ಅಸ್ಪಷ್ಟ ಆಕೃತಿಯೇ ಚೌಡಮ್ಮ, ಆ ಗುಡಿಯ ಆವರಣವನ್ನು ಈಗಲೂ ಚೌಡಮ್ಮನ ಪ್ರತಿರೂಪವಾದ ಪೂಜೆಗಳನ್ನು ಇಳಿಸಿಕೊಳ್ಳಲು, ಹಾಗೂ ಹಬ್ಬದ ಸಂದರ್ಭದಲ್ಲಿ ಕರಗವನ್ನು ಪೂಜಿಸಿ ಇಡಲು ಬಳಸಲಾಗುತ್ತದೆ. ಆದ್ದರಿಂದ ಆ ಮನೆದೇವರ ಗುಡಿ ಮತ್ತು ಅಲ್ಲಿರುವ ಆಕೃತಿಯೇ ಎರಡನೇ ಹಂತದ ಚೌಡಮ್ಮನ ಆವಾಸ ಸ್ಥಾನ ಎಂಬುದು ನನ್ನ ನಂಬಿಕೆ.

ಹೀಗೆ ನಿಸರ್ಗದಿಂದ ಗುಡಿಯ ಆವರಣದೊಳಕ್ಕೆ ವರ್ಗಾವಣೆಗೊಂಡು ಪ್ರತಿಷ್ಠಾಪನೆಗೊಂಡ ಚೌಡಮ್ಮ ನಂತರದ ನೂರಾರು ವರ್ಷಗಳ ಅಂತರದಲ್ಲಿ ತನ್ನ ಭಕ್ತರ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಾ ಬಂದಿದ್ದಾಳೆ. ಬಹುಶಃ 'ಉಜ್ಜನಿ' ಎಂಬ ಈಗಿನ ಸ್ಥಳಕ್ಕೆ ಈ ಹೆಸರು ನಿಖರವಾಗಿ ಯಾವಾಗ ಬಂತೋ ಗೊತ್ತಿಲ್ಲ. ಆದರೆ, ಮೊದಲಿಗೆ ವಲಸೆಗಾರರ ವಸತಿಸ್ಥಳವಾಗಿ, ಕ್ರಮೇಣ ಬೆಳವಣಿಗೆಯಾಗುತ್ತಾ ವಿವಿಧ ಜನಜಾತಿಗಳು ಸೇರ್ಪಡೆಯಾಗುತ್ತಾ ಒಂದು ಪೂರ್ಣಪ್ರಮಾಣದ ಗ್ರಾಮವಾಗಿ ರೂಪುಗೊಂಡಿತೋ, ಇಲ್ಲವೇ ಅದಕ್ಕೂ ಮೊದಲೇ ಒಂದು ಗ್ರಾಮದ ಸ್ವರೂಪದಲ್ಲಿ ಇದ್ದಿತೋ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಕೆಲವು ವಿದ್ವಾಂಸರ ಪ್ರಕಾರ ಭಾರತದ ಮೂಲ ಕೃಷಿಕರು ಹೊಲೆ ಮಾದಿಗರು, ಅಲೆಮಾರಿಗಳಾಗಿದ್ದ ಕುಮರಿ ಬೇಸಾಯದ ಕೃಷಿಕ ವರ್ಗ ಮತ್ತು ಪಶುಪಾಲಕ ವರ್ಗ ಖಾಯಂ ಆಗಿ ನೆಲೆನಿಂತ ನಂತರ, ಅವರ ಪ್ರಾಬಲ್ಯದಿಂದಾಗಿ ಹೊಲೆಮಾದಿಗರು ಭೂಮಿಯನ್ನು ಬಿಟ್ಟುಕೊಟ್ಟು, ಕೇವಲ ಶ್ರಮದಾಯಕ ಕಾಯಕ ಮಾಡುವ ಕೆಳಹಂತಕ್ಕೆ ಮೀಸಲಾಗಬೇಕಾಯಿತು. “ಹೀಗೆ ದ್ರಾವಿಡರಲ್ಲಿ ಹೊಲೆಮಾದಿಗರು ಮತ್ತು ವಲಸೆಗಾರ ಕುಲಗಳು ಎಂಬ ಎರಡು ಮುಖ್ಯ ವಿಭಾಗಗಳನ್ನು



ಮಾಡಲು ಸಾಧ್ಯವಿದೆ. ಕೃಷಿಕರಾಗಿದ್ದ ಹೊಲೆಮಾದಿಗರು ಅನೇಕ ಅಮ್ಮಂದಿರನ್ನು ಪೂಜಿಸುತ್ತಿದ್ದು ಸಹಜವಾಗಿದ್ದಂತೆ ಪಶುಪಾಲಕರಾಗಿದ್ದ ಗೊಲ್ಲ, ಬೇಡ, ಕುರುಬ, ಗೊಂಡರಾದಿ ದ್ರಾವಿಡರು ಪುರುಷ ದೇವರುಗಳನ್ನು ಪ್ರಧಾನವಾಗಿ ಆರಾಧಿಸುತ್ತಿದ್ದರು. ಆದರೆ ಅವರೂ ಕೃಷಿಕರಾಗಿ ಮಾರ್ಪಟ್ಟಿದ್ದರಿಂದ ತಮ್ಮ 'ಮಾರಿ', ಸಪ್ತಮಾತೃಕೆಯರು ಮೊದಲಾದ ಮಾತೃದೇವತೆಗಳನ್ನು ಕೃಷಿ ದೇವತೆಗಳನ್ನಾಗಿ ಒಪ್ಪಿಕೊಳ್ಳಬೇಕಾಯಿತು. ದಲಿತರಿಂದ ಕೃಷಿ, ವಲಸೆಗಾರ ಕುಮಿ ಬೇಸಾಯಗಾರರಿಗೆ ಹಸ್ತಾಂತರವಾಗಿ, ದಲಿತರು ಅಸ್ಪೃಶ್ಯ ಸ್ಥಿತಿಗೆ ಇಳಿಸಲ್ಪಟ್ಟ ನಂತರ ಹಬ್ಬಗಳೂ ಅವರ ಕೈತಪ್ಪಿ ನೆಲೆನಿಂತ ಕೃಷಿಕರ ಪಾಲಾದವು. ಅವು ಬದಲಾದ ಸನ್ನಿವೇಷಗಳಿಗೆ ತಕ್ಕಂತೆ ತಾವೂ ಮಾರ್ಪಾಟಾದವು.” (ಎಸ್. ಎಸ್. ಹಿರೇಮಠ - - ಜಾತ್ರೆಗಳು)

ಈ ಮೇಲಿನ ಸಿದ್ಧಾಂತವನ್ನು ಒಪ್ಪಿಕೊಳ್ಳುವುದಾದರೆ ಉಜ್ಜನಿ ಪ್ರದೇಶದ ಮೂಲಪುರುಷರು ಕೂಡ ಹೊಲೆಮಾದಿಗರೇ ಎಂದು ನಂಬಬೇಕಾಗುತ್ತದೆ. ಆದರೆ ಈ ಸಿದ್ಧಾಂತ ಇನ್ನೂ ಅನೇಕ ರೀತಿಯ ಜಿಜ್ಞಾಸೆಗೆ ಒಳಗಾಗಿ, ಪುರಾವೆ ಮತ್ತು ಆಧಾರಗಳ ಸಮೇತ ಗಟ್ಟಿಗೊಳ್ಳಬೇಕಾಗಿದೆ. ಆದ್ದರಿಂದ, ಮೂಲದಲ್ಲಿ ಹೊಲೆಮಾದಿಗರೇ ಇಲ್ಲಿನ ವಾಸಿಗಳಾಗಿದ್ದು, ಆನಂತರ ಬಂದ ವಲಸೆಗಾರ ಕೃಷಿಕರು ಪ್ರಬಲರಾಗಿ ಬೆಳೆದಿರಬಹುದು. ಅಥವಾ ಮೊದಲಿಗೆ ಅರಣ್ಯ ಪ್ರದೇಶವಾಗಿರಬಹುದಾದ ಈಗಿನ ಉಜ್ಜನಿ ಪ್ರದೇಶಕ್ಕೆ ಪ್ರಪ್ರಥಮ ಬಾರಿಗೆ ಬಂದು ನೆಲೆನಿಂತ ಕೃಷಿಕರು ಉಜ್ಜನಿಯನ್ನು ಗ್ರಾಮವನ್ನಾಗಿ ಬೆಳೆಸಿರಬಹುದು. ಈ ಹಂತಗಳಲ್ಲಿ ಹೊಲೆಮಾದಿಗರೂ ಸೇರಿದಂತೆ ಇತರೆ

ಜನವರ್ಗಗಳು ಹೊರಗಿನಿಂದ ಬಂದು ಇಲ್ಲಿ ತಮ್ಮ ತಮ್ಮ ನೆಲೆ ಕಂಡುಕೊಂಡಿರಬಹುದು ಎಂಬುದು ಇನ್ನೂ ಜಿಜ್ಞಾಸೆಗೆ ಒಳಪಟ್ಟಿದೆ. ಮೂಲದವರು ಯಾರು ಎಂಬ ವಿಷಯವನ್ನು ಇಲ್ಲಿಗೆ ಬಿಡೋಣ.

ದೈವಾರಾಧನೆಯ ಎರಡನೇ ಹಂತ ಎಂದು ನಾನು ಬಣ್ಣಿಸಿದ ಊರೊಳಗಿರುವ ಮನೆದೇವರಗುಡಿ ಆರಂಭದಲ್ಲಿ ಒಂದು ಸೀಮಿತ ಉದ್ದೇಶ ಇಟ್ಟುಕೊಂಡು ಕಟ್ಟಲ್ಪಟ್ಟದ್ದು. ಆದರೆ ಗ್ರಾಮ ದೊಡ್ಡದಾಗುತ್ತಾ ಬಂದಂತೆ, ಹಾಗೆಯೇ ಸುತ್ತಲ ಪ್ರದೇಶಗಳಲ್ಲಿ ಇತರೆ ಪುಟ್ಟ ಗ್ರಾಮಗಳೂ ಹುಟ್ಟಿಕೊಂಡು, ಉಜ್ಜನಿಯ ಜೊತೆ ಸಂಪರ್ಕ ಸಾಧಿಸಿದಂತೆ, ಅಥವಾ ಅಲ್ಲಿನ ವಿವಿಧ ಪೈಕಿಗಳು ಆ ಗುಡ್ಡಬೆಟ್ಟಗಳ ಇತರ ಪ್ರದೇಶಗಳಿಗೆ ವಿಸ್ತರಿಸಿಕೊಂಡು, ಹಳ್ಳಿಗಳನ್ನು ನಿರ್ಮಾಣ ಮಾಡಿಕೊಂಡಂತೆ (ಬಹುಶಃ ಇಂದು ಉಜ್ಜನಿ ಸುತ್ತಮುತ್ತ ಇರುವ ಹಲವಾರು ಹಳ್ಳಿಗಳು ಹೀಗೆ ವಿಸ್ತರಣೆಗೊಂಡವುಗಳೇ ಇರಬೇಕು) ಚೌಡಮ್ಮನ ಭಕ್ತರ ಸಂಖ್ಯೆಯೂ ಜಾಸ್ತಿಯಾಯಿತು. ಕೃಷಿ ಕುಟುಂಬಗಳನ್ನು ಆಶ್ರಯಿಸಿ ಬದುಕುವ ಇತರೆ ಜನವರ್ಗಗಳೂ, ಚೌಡಮ್ಮನನ್ನೇ ಮನೆ ದೇವರನ್ನಾಗಿ ಸ್ವೀಕರಿಸಿ, ದೈವದ ಪ್ರಭಾವ ಒಂದು ನಿರ್ದಿಷ್ಟ ಜಾತಿ, ಗುಂಪು ಅಥವಾ ಪಂಗಡವನ್ನು ದಾಟಿ ಬೆಳೆಯುತ್ತಾ ಹೋಗಿದೆ. ಹೀಗೆ, ಹೇಮಗಿರಿ ಎಂಬ ಬೆಟ್ಟವೂ ಸೇರಿದಂತೆ ವಿವಿಧ ಗುಡ್ಡಗಾಡು ಪ್ರದೇಶದ ಆ ಸ್ಥಳದಲ್ಲಿ ಕ್ರಮೇಣ ಪಾಳೇಗಾರರು ಅಥವಾ ಸ್ಥಳೀಯ ನಾಯಕರು ರೂಪುಗೊಂಡಿರಬೇಕು. ಹೀಗೆ ರೂಪುಗೊಂಡ ಆ ನಾಯಕ



ಹೊರಗಿನ ಇತರ ಅರಸರು ಅಥವಾ ರಾಜರ ಜೊತೆ ಸಂಬಂಧ ಬೆಳೆಸಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿರುವುದು ಸಹಜವೇ. ಇಂಥ ಒಂದು ಸಂದರ್ಭದಲ್ಲಿ ಚೌಡಮ್ಮನ ದೊಡ್ಡ ಗುಡಿಯ ನಿರ್ಮಾಣವೂ ಆದಂತೆ ಕಾಣುತ್ತದೆ. ಗುಡಿಯಷ್ಟೇ ನಿರ್ಮಾಣವಾಗಲಿಲ್ಲ, ಅಷ್ಟರಲ್ಲಾಗಲೇ ಹೊರಜಗತ್ತಿನ ಪ್ರಭಾವದಿಂದ ಯಾವ ಯಾವ ದೈವಕ್ಕೆ ಯಾವ ಯಾವ ರೂಪ ಎಂಬ ಪ್ರಮಾಣಬದ್ಧ ಹಾಗೂ ನಿರ್ದಿಷ್ಟವಾದ ಆಕಾರವೊಂದನ್ನು ನೀಡಬೇಕೆಂಬ ತಿಳುವಳಿಕೆ'ಯೂ ಬಂದಿರಬಹುದು. ಶಾಕ್ತಪಂಥದ ಪ್ರಭಾವ ಅಷ್ಟರಲ್ಲಾಗಲೇ ಸಾಕಷ್ಟು ಮಟ್ಟಿಗೆ ನಮ್ಮ ನೆಲದ ಮೇಲೂ ಆಗಿತ್ತು ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಅಷ್ಟರಲ್ಲಾಗಲೇ ದೇವಿಯರನ್ನು ಚಾಮುಂಡಿ ಅಥವಾ ದುರ್ಗೆಯ ರೂಪವೆಂದು ಸಾರಾಸಗಟಾಗಿ ಕಾಣುವ ಒಂದು ನಂಬಿಕೆ ಬೇರೂರಿತ್ತು. ಆದ್ದರಿಂದಲೇ ಹೊಸದಾಗಿ ಕಟ್ಟಿದ ದೊಡ್ಡ ಗುಡಿಯಲ್ಲಿ ಎಂಟು ಕೈಗಳ ಶಂಖ ಜಾಗಟೆಗಳನ್ನು ಹೊಂದಿದ ದುರ್ಗೆಯ ರೂಪದ ತಾಯಿಯನ್ನು ಪ್ರತಿಷ್ಠಾಪಿಸಿ ಏಕರೂಪತೆಯನ್ನು ಆರೋಪಿಸಲಾಯಿತು. ಗರ್ಭಗುಡಿಯ ಹೊರಗಿನ ಹಜಾರದಲ್ಲಿ ತಮ್ಮ ಮೂಲ ವಂಶಸ್ಥರ ಚಿತ್ರಗಳನ್ನು ಮತ್ತು ಅವರ ವಲಸೆಯ ಸಂಕೇತವೆನಿಸಿದ ಕುದುರೆಯ ಚಿತ್ರವನ್ನೂ ಮಾಡಿಟ್ಟರು. ಅವರು ನಂಬುವ ಇತರೆ ಶಕ್ತಿಗಳ ಸಂಕೇತವಾಗಿ ಇಬ್ಬರು ಬೃಹತ್ ರಾಕ್ಷಸರನ್ನು ಕೂಡ ಗುಡಿಯಲ್ಲಿ ನಿರ್ಮಿಸಲಾಯಿತು.

ಇದಿಷ್ಟು ಚೌಡಮ್ಮನ ಸಾಂಸ್ಕೃತಿಕ ಆವರಣದ ಒಂದು ಹಂತ. ಇನ್ನು ಎರಡನೇ ಹಂತ ಹೆಬ್ಬಾರಮ್ಮ ಮತ್ತು ಹೆಬ್ಬಾರಮ್ಮನ ಭಕ್ತರಾದ ಹೊಲೆಯರ ಪ್ರವೇಶ. ಇದು ಸುಲಭವಾಗಿ ಅರ್ಥೈಸಲು ಅಥವಾ ಊಹಿಸಲು ಸಾಧ್ಯವಿಲ್ಲದ ರೀತಿಯ ಸಂಕೀರ್ಣವಾದ ಒಂದು ಹಂತ. ಹೆಬ್ಬಾರಮ್ಮನ ಭಕ್ತರಾದ ಹೊಲೆಯರು ಚೌಡಮ್ಮನ ಭಕ್ತರಾಗಿಯೂ ಮುಂದುವರಿದಿರು ವುದರಲ್ಲಿ ಆಶ್ಚರ್ಯವೇನೂ ಇಲ್ಲ. ಯಾಕೆಂದರೆ ಭಾರತದ ಸಾಂಸ್ಕೃತಿಕ ಚರಿತ್ರೆಯೇ ಅಂಥದ್ದು. ದೈವ ಯಾವುದಾದರೂ ಅದಕ್ಕೆ ತಮ್ಮ ಭಕ್ತಿಯನ್ನು ಸಮರ್ಪಿಸುವ ಪ್ರಾಂಜಲ ಮನಸ್ಸು ಭಾರತೀಯ ಕೆಳವರ್ಗದ ಒಂದು ವಿಶೇಷ. ಅದೊಂದು ರೀತಿಯ ಮುಗ್ಧಭಾವ. ಬಹುಶಃ ಚೌಡಮ್ಮನಿಗೆ ಗುಡಿ ಇಲ್ಲದ ಸಂದರ್ಭದಲ್ಲಿಯೇ, ಚೌಡಮ್ಮನ ಆಕೃತಿ ನಿಸರ್ಗದ ಒಂದು ಭಾಗವಾಗಿ ಮರದ ಕೆಳಗಿನ ಕಟ್ಟೆಯಲ್ಲಿ ಇದ್ದಾಗಲೇ ಹೊಲೆಯರು ಕೂಡ ಚೌಡಮ್ಮನನ್ನು ಆರಾಧಿಸಲು ಆರಂಭಿಸಿರಬಹುದು. ಯಾವಾಗಲೂ ತಮಗಿಂತ ಮೇಲ್‌ಸ್ಥರದವರು ಪೂಜಿಸುವ ದೈವಗಳನ್ನ ಕೆಳಸ್ಥರದವರು ಬಹುಬೇಗ ಒಪ್ಪಿಕೊಂಡು ತಾವೂ ಆರಾಧಿಸುವುದು ಸರ್ವೆಸಾಮಾನ್ಯ. ಪ್ರಸ್ತುತ ರಾಘವೇಂದ್ರಸ್ವಾಮಿ, ಸತ್ಯನಾರಾಯಣ, ಧರ್ಮಸ್ಥಳ ಮಂಜುನಾಥ ಇತ್ಯಾದಿ ದೈವಗಳು ಹೇಗೆ ಈಗಿನ ಕೆಳವರ್ಗದ ಜನರಲ್ಲೂ ತಮ್ಮ ಪ್ರಸಿದ್ಧಿಯನ್ನು ಕಂಡುಕೊಳ್ಳುತ್ತಾ ಇವೆಯೋ ಹಾಗೆ, ಇದು ಮಾನಸಿಕ ಕೀಳರಿಮೆಯಿಂದ ಉಂಟಾಗುವ ಪ್ರಕ್ರಿಯೆಯೂ ಇರಬಹುದು, ತಮಗಿಂತ ಮೇಲಿನವರ ಸಾಮಾಜಿಕ ಒತ್ತಡ ತಂತ್ರಗಳೂ ಇದಕ್ಕೆ ಕಾರಣವಿರಬಹುದು.



ಬಹುಶಃ ಉಜ್ಜನಿಯಲ್ಲೂ ಹೀಗೇ ಆಗಿರಬೇಕು. ಹೊಲೆಯರು ಚೌಡಮ್ಮನ ಭಕ್ತರಾಗಿ ಮುಂದುವರಿದಿದ್ದು ನಿಜವಾದರೂ, ಹೆಬ್ಬಾರಮ್ಮನನ್ನು ತಮ್ಮ ದೈವ ಎಂದು ಇತರ ಜನವರ್ಗ ಸ್ವೀಕರಿಸಿರುವುದು ಕಂಡು ಬರುವುದಿಲ್ಲ. ಅದು ಹೊಲಗೇರಿಗೇ ಇಂದಿಗೂ ಸೀಮಿತ.

ಹೀಗೆ ಚೌಡಮ್ಮನನ್ನೂ ತಮ್ಮ ದೈವ ಎಂದು ಪೂಜಿಸುತ್ತಾ ಬಂದ ಹೊಲೆಯರಿಗೆ, ಗುಡಿಯ ನಿರ್ಮಾಣದ ನಂತರ ಒಳ ಪ್ರವೇಶಿಸುವ ಹಕ್ಕನ್ನು ನಿರಾಕರಿಸಿರುವಂತೆ ಕಾಣುತ್ತದೆ. ಇದಕ್ಕೆ ಕಾರಣ ಶ್ರೇಣೀಕರಣದ ಜಾತಿ ವ್ಯವಸ್ಥೆ ಎನ್ನದೆ ಬೇರೆ ದಾರಿಯೇ ಇಲ್ಲ. ಅದರಲ್ಲೂ, * ಮಧ್ಯಮ ವರ್ಗವೆನಿಸಿದ ಒಕ್ಕಲಿಗರು ಮತ್ತು ಇತರೆ ಕೆಳವರ್ಗವೆನಿಸಿದ ಕುರುಬರು, ಅಗಸರು, ಉಪ್ಪಾರರು, ಕ್ಷೌರಿಕರು, ಅರಸರು ಇತ್ಯಾದಿ ಜನವರ್ಗಗಳ ಕೈಯ್ಯಲ್ಲೇ ಚೌಡಮ್ಮನ ಗುಡಿಯ ಪಾರುಪತ್ಯವಿದ್ದರೆ ಈಗಿರುವಷ್ಟರ ಮಟ್ಟಿಗೆ ಹೊಲೆಯರಿಗೆ ನಿಷೇಧವಿರುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಬಹುಶಃ ಉಜ್ಜನಿಯಲ್ಲಿ ಪಾಳೇಗಾರ ಅಥವಾ ಸ್ಥಳೀಯ ಅರಸರ ಅರಸೊತ್ತಿಗೆ ಆರಂಭವಾದ ಮೇಲೆ, ದೇವಸ್ಥಾನದ ಕಾರುಬಾರನ್ನು ಬ್ರಾಹ್ಮಣ ಪುರೋಹಿತರಿಗೆ ವಹಿಸಿದಂತೆ ಕಾಣುತ್ತದೆ. ಗುಡಿಯ ಬದಲು ದೇವಸ್ಥಾನದ ನಿರ್ಮಾಣ ಕೂಡ ಅರಸರಿಂದಲೇ ಆಗಿದೆ. ವೇದಶಾಸ್ತ್ರ ಪಾರಂಗತರಾದ ಬ್ರಾಹ್ಮಣರು 'ಗುಡಿ'ಯಾಗಿದ್ದುದನ್ನು 'ದೇವಸ್ಥಾನ'

ಎಂದು ಪರಿಗಣಿಸಿ ಅಲ್ಲಿ ಅನೇಕ ನಿಯಮಗಳನ್ನು ಒತ್ತಾಯಪೂರ್ವಕವಾಗಿ ಹೇರಿರಬಹುದು. ಈ 'ಗುಡಿ' ದೇವಸ್ಥಾನವಾಗಿ ಪರಿವರ್ತಿತವಾಗಿ ಅದರ ನಿರ್ವಹಣೆಯ ಅಧಿಕಾರ ಶೂದ್ರ ಸಮುದಾಯದಿಂದ ಬ್ರಾಹ್ಮಣ ಪೂಜಾರಿಗಳ ಕೈಗೆ ಹಸ್ತಾಂತರಗೊಂಡ ಮೇಲೆ ಉಜ್ಜನಿಯ ಚೌಡಮ್ಮನ ಹಬ್ಬದಲ್ಲಿ ಆಗಿರುವ ಬದಲಾವಣೆಗಳನ್ನು ಗಮನಿಸಬೇಕು.

ಪ್ರಪ್ರಥಮವಾಗಿ ವೈದಿಕ ನಂಬಿಕೆಯ ಪ್ರಕಾರ ಅಸ್ಪಶ್ಯರೆನಿಸಿದ ಹೊಲೆಮಾದಿಗರಿಗೆ ದೇವಸ್ಥಾನದ ಪ್ರವೇಶಾವಕಾಶವನ್ನು ನಿರಾಕರಿಸಲಾಗಿದೆ. ಎರಡನೆಯದಾಗಿ ಇಡೀ ಹಬ್ಬದ ಸ್ವರೂಪವನ್ನು ವೈದಿಕೀಕರಣಗೊಳಿಸಲು ಪ್ರಯತ್ನಿಸಲಾಗಿದೆ. ಮೂರನೆಯದಾಗಿ ಗ್ರಾಮದೇವತೆ ಚೌಡಮ್ಮನ ಹುಟ್ಟನ್ನು ತ್ರಿಪುರಾಪುರಿ ಎಂಬ ಪಟ್ಟಣದ ಜೊತೆಗೆ ಬೆಸೆದು, ಚೌಡಮ್ಮನ ಗಂಡ ಅವತಾರ ಪುರುಷರಲ್ಲಿ ಒಬ್ಬನಾದ ಕೃಷ್ಣ ಎಂದು ಪ್ರತಿಪಾದಿಸುವ ಪುರಾಣಗಳನ್ನು ಸೃಷ್ಟಿಸಲಾಗಿದೆ.

ಬಹುಶಃ ಇಂಥ ತೀವ್ರಸ್ವರೂಪದ ಬದಲಾವಣೆಗಳನ್ನ ಹಾಗೂ ದೇವಸ್ಥಾನದ ಪ್ರವೇಶದ ಹಕ್ಕು ಕಿತ್ತುಕೊಂಡ ಪಟ್ಟಭದ್ರರ ಪಿತೂರಿಯನ್ನು ಬಹುಸಂಖ್ಯೆಯಲ್ಲಿದ್ದ ಹೊಲೆಯರು ಪ್ರಶ್ನಿಸಿರಬಹುದು ಎಂದು ತರ್ಕಿಸಿದರೆ ಅದು ಅತಿಶಯೋಕ್ತಿ ಆಗಲಾರದು ಎಂದು ನಾನು ಭಾವಿಸುತ್ತೇನೆ. 'ಬಲಿ' ಇತ್ಯಾದಿ ಮೂಲಾಚರಣೆಗಳನ್ನು ನಿಗ್ರಹಿಸಿದ್ದಲ್ಲದೆ, ವೈದಿಕೀಕರಣಗೊಂಡ ಹಬ್ಬದ ಬಹುಮುಖ್ಯ ಆಚರಣೆಯಲ್ಲಿ ಅಸ್ಪೃಶ್ಯರಾದ ಹೊಲೆಯರು ಭಾಗವಹಿಸಕೂಡದು ಎಂಬ ನಿಷೇಧ ಹೇರಲಾಗಿದೆ ಎಂದು ಊಹಿಸಬಹುದು. ವೈದಿಕರ ಈ ಹಿತೋಪದೇಶಕ್ಕೆ ಮಧ್ಯಮವರ್ಗದ



ಕೃಷಿಕರು ಹಾಗೂ ಕೆಳವರ್ಗಗಳ ಇತರ ಜನವರ್ಗ ಒಪ್ಪಿ ಹೊಲೆಯರನ್ನು ದೂರವಿಡಲು ಪ್ರಯತ್ನಿಸಿರುವಂತೆ ಕಾಣುತ್ತದೆ. ಬಹುಶಃ ಅದಕ್ಕಿಂತ ಹಿಂದೆ ಎಲ್ಲರಂತೆ, ಅಥವಾ ತಮ್ಮ ಪಾಡಿಗೆ ತಾವು ಚೌಡಮ್ಮನನ್ನು ಆರಾಧಿಸುತ್ತಿದ್ದ ಹೊಲೆಯರಿಗೆ, ಮೇಲೆ ವಿವರಿಸಿದ ರೀತಿಯಲ್ಲಿ ಇದ್ದಕ್ಕಿದ್ದಂತೆ ದೇವಸ್ಥಾನದ ಪ್ರವೇಶದ ಹಕ್ಕು ಹಾಗೂ ಹಬ್ಬಾಚರಣೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಹಕ್ಕು ಎರಡನ್ನೂ ನಿರಾಕರಿಸಿದ ಹಿನ್ನೆಲೆಯಲ್ಲಿ, ಸ್ವಾಭಿಮಾನಿ ದಲಿತರಿಂದ ಉಂಟಾದ ಕೋಭೆ ಮತ್ತು ಪ್ರತಿಭಟನೆ ಹಲವು ವರ್ಷಗಳ ಕಾಲ ಮುಂದುವರೆದಿರುವಂತೆ ಕಾಣುತ್ತದೆ. ಬಹುಶಃ ಆ ಪ್ರತಿಭಟನೆಯ ಬಿಸಿ ಆರದೇ ಹೋದಾಗ, ಅದನ್ನು ಶಮನಗೊಳಿಸುವುದು ಸಾಧ್ಯವಾಗದೇ ಹೋದಾಗ, ಕೋಪೋದ್ರಿಕ್ತ ಹೊಲೆಯರ ಮೈಗೆ ಜನಿವಾರ ತೊಡಿಸಿ, ತಾತ್ಕಾಲಿಕ ಬ್ರಾಹ್ಮಣರನ್ನಾಗಿ ಪರಿವರ್ತಿಸಿ ಹಬ್ಬದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶ ಮಾಡಿಕೊಡುವ ಮಧ್ಯಸ್ತಿಕೆ ನ್ಯಾಯವೊಂದು ನಡೆದಂತೆ ತೋರುತ್ತದೆ. ಆದರೂ, ಹಬ್ಬದ ಸಂದರ್ಭದಲ್ಲಿ ದೇವಸ್ಥಾನದ ಹೊರಗಿನ ವ್ಯವಹಾರಗಳಲ್ಲಿ ಜನಿವಾರ ಧರಿಸಿದ ಹೊಲೆಯರಿಗೆ

ಭಾಗವಹಿಸುವ ಹಕ್ಕು ದಕ್ಕಿತಾದರೂ, ದೇವಸ್ಥಾನದ ಒಳ ಪ್ರವೇಶದ ಹಕ್ಕನ್ನು ಬ್ರಾಹ್ಮಣರೂ ಮೊದಲ್ಗೊಂಡಂತೆ ಎಲ್ಲಾ ಸವರ್ಣಿಯರೂ ಸೇರಿ ತಡೆದಂತೆ ಕಾಣುತ್ತದೆ. ಹಾಗೆ ವಿಫಲಗೊಂಡ ದಲಿತರ ಆಶಯಗಳು ಒಂದು ಆಚರಣೆಯ ರೂಪ ಪಡೆದು ಪ್ರತಿವರ್ಷದ ಹಬ್ಬದಲ್ಲಿ ಪುನರಭಿನೀತವಾಗುತ್ತಿದೆ ಅನ್ನಿಸುತ್ತದೆ. ಈ ಸಂದರ್ಭದಲ್ಲಿ ಕನ್ನಡದ ಖ್ಯಾತ ಸಂಸ್ಕೃತಿ ಚಿಂತಕ ಡಾ. ಡಿ. ಆರ್. ನಾಗರಾಜ್ ಹೇಳಿದ ಮಾತುಗಳನ್ನು ಮತ್ತೆ ನೆನಪಿಸಿಕೊಳ್ಳಬೇಕೆನಿಸುತ್ತದೆ. “ಕೆಲವು ಆಚರಣೆಗಳು ಸಮಾಜದ ಮೂಲಭೂತ ಒಪ್ಪಿಗೆಗಳ ವಿರುದ್ಧ ಬಂಡಾಯವನ್ನು ಸಾರುತ್ತವೆ. ಸಮಾಜದ ಸಂಘಟನೆಯಲ್ಲಿಯ ಎಲ್ಲ ವೈರುಧ್ಯಗಳೂ, ಘರ್ಷಣೆಗಳೂ ಈ ಆಚರಣೆಯಲ್ಲಿ ಅಭಿನೀತಗೊಳ್ಳುತ್ತವೆ. ಒಂದು ಘಟನಾವಳಿಯ ಚಕ್ರವೇ ಇಲ್ಲಿ ತಿರುಗುತ್ತದೆ. ಇದನ್ನೇ ಬಂಡುಕೋರ ವಿಧಿಗಳು ಎಂದು ಕರೆಯುವುದು.” ನಾನು ಮೇಲೆ ಉಲ್ಲೇಖಿಸಿದ ಎಲ್ಲ ಚಿಂತಕರು ಮತ್ತು ವಿದ್ವಾಂಸರ ಅಭಿಪ್ರಾಯಗಳನ್ನು ಈ ಪೀಠಿಕೆಯ ಹಿನ್ನೆಲೆಯಲ್ಲಿಯೇ ನೋಡಬೇಕಾಗುತ್ತದೆ.

ಈ ಪ್ರಸ್ತಾವನೆ ಮುಗಿಸುವ ಮುನ್ನ ಚೌಡಮ್ಮನ ಹಬ್ಬದಲ್ಲಿ ನೆರವೇರಿಸಲಾಗುವ ಇತರೆ ಕೆಲವು ಆಚರಣೆಗಳನ್ನು ಕುರಿತು ಕ್ವಚಿತ್ತಾಗಿ ಹೇಳುವ ಪ್ರಯತ್ನ ಮಾಡುತ್ತೇನೆ. ಚೌಡಮ್ಮನ ಹಬ್ಬದ ಬಹುಮುಖ್ಯ ಭಾಗವೆಂದರೆ 'ಕೊಂಡ', ಕೊಂಡದ ಬಗೆಗಿನ ಸುದೀರ್ಘ ವಿವರಣೆಯನ್ನು ಮುಂದಿನ ಪಠ್ಯದಲ್ಲಿ ನೀಡಲಾಗಿದೆ. ಆದ್ದರಿಂದ ಕೊಂಡದ ಹಿನ್ನೆಲೆ ಬಗೆಗೆ ಇಲ್ಲಿ ಒಂದಿಷ್ಟು ಹೇಳಬಹುದು ಅನ್ನಿಸುತ್ತದೆ. ನನ್ನ ಬಾಲ್ಯದಿಂದ ಇಲ್ಲಿಯವರೆಗೆ 'ಕೊಂಡ'ದ ಕಾರಣಗಳನ್ನು ಹುಡುಕುತ್ತಲೇ ಬಂದಿದ್ದೇನೆ. ಆರ್ಯರ ಯಜ್ಞದ ಪ್ರಭಾವದಿಂದ ಹುಟ್ಟಿಕೊಂಡ ಆಚರಣೆಯಂತೂ ಇದಲ್ಲ. ಹಿಂದೆ 'ಸತಿ'ಯರಾದ ಹೆಣ್ಣು ಮಕ್ಕಳ ತ್ಯಾಗದ ನೆನಪನ್ನು ತಂದುಕೊಡುವ ಸಾಂಕೇತಿಕ 'ಚಿತೆ' ಇದಿರಬಹುದೇ ಎಂಬ ಆಲೋಚನೆಯೂ ಬರುತ್ತದೆ.

ಹಾಗಾಗಿದ್ದಲ್ಲಿ ಇದು ಸಾಂಕೇತಿಕವಾಗಿ ಬೆಂಕಿ ತುಳಿಯುವ ಸಾಧಾರಣ ಆಚರಣೆ ಆಗಿರಬೇಕಾಗಿತ್ತು. ಆದರೆ ಚೌಡಮ್ಮನ ಕೊಂಡದಲ್ಲಿ ಬೇಯಿಸಲಾಗುವ ಅಸಾಧಾರಣ ಮೊತ್ತದ ಬೃಹತ್ ಮರಗಳ ರಾಶಿ ಪರಿಸರ ಪ್ರೇಮಿಗಳಲ್ಲಿ ದಿಗಿಲು ಹುಟ್ಟಿಸುತ್ತದೆ. ಸುತ್ತಲ ಹನ್ನೆರಡು ಊರುಗಳ ಪ್ರತಿ ಮನೆಯಿಂದಲೂ ಕೊಂಡದ ಸೌದೆಯ ಹೇರುಗಳು ಬಂದು ಬೀಳುತ್ತವೆ. ಇದು ಸಾಲದೆಂಬಂತೆ ಅಲಂಕೃತ ಬಂಡಿಗಳಲ್ಲಿ ಹಾಗೂ ಇತ್ತೀಚೆಗೆ ಲಾರಿಗಳಲ್ಲಿ ಕೂಡ ಸೌದಗಳು ಹರಕೆಯ ರೂಪದಲ್ಲಿ ಬರುತ್ತವೆ. ಹಾಗಾದರೆ ಈ ಆಚರಣೆ ಯಾವ ಕಾರಣಕ್ಕಾಗಿ ಹುಟ್ಟಿಕೊಂಡಿತು? ನನ್ನ ತಿಳುವಳಿಕೆಯ ಪ್ರಕಾರ, ಪ್ರಾಚೀನದಲ್ಲಿ ಇದ್ದ ದಟ್ಟಾರಣ್ಯವನ್ನು ಬಯಲು ಮಾಡುವ ಉದ್ದೇಶ ಇದರ ಹಿಂದೆ ಇದ್ದಂತಿದೆ.

ನಾನು ಈಗಾಗಲೇ ವಿವರಿಸಿದಂತೆ ದೂರದ ಪ್ರದೇಶಗಳಿಂದ ಬಂದು ಇಲ್ಲಿ ಬೀಡುಬಿಟ್ಟ ಕೃಷಿಕರು ತಮ್ಮ ಸುತ್ತಮುತ್ತ ಇದ್ದ ದಟ್ಟಾರಣ್ಯವನ್ನು ಕರಗಿಸಿ ಕೃಷಿ ಭೂಮಿಯನ್ನು ಹಸನು ಮಾಡಿಕೊಳ್ಳಬೇಕಾಗಿತ್ತು. ಆದ್ದರಿಂದ ಪ್ರತಿವರ್ಷದ ಹಬ್ಬದಲ್ಲಿ ಇಡೀ ಸಮುದಾಯ ಕಾಡನ್ನು ಕಡಿದು ಕೊಂಡ ಅಣಿಮಾಡುವ ಕಾಯಕಕ್ಕೆ ನಿಲ್ಲುತ್ತಿತ್ತು ಎಂದು ಊಹಿಸಬಹುದು. ಈ ಮೂಲಕ ದಟ್ಟಾರಣ್ಯದ ನಡುವೆ ಕೃಷಿ ಭೂಮಿ ಸಿದ್ಧಪಡಿಸುವ ಸಾಮೂಹಿಕ ಯತ್ನ ನಡೆಯುತ್ತಿತ್ತು. ಬರಬರುತ್ತಾ ಇದು ಒಂದು ಆಚರಣೆಯಾಗಿ ರೂಪುಗೊಂಡಿತು. ಕೇವಲ ಇತ್ತೀಚೆಗೆ, ಅಂದರ ನನ್ನ ಬಾಲ್ಯದಲ್ಲಿ ಉಜ್ಜನಿ ಸುತ್ತಿನ ಬೆಟ್ಟಗುಡ್ಡಗಳಲ್ಲಿ ಇದ್ದ ಸಮೃದ್ಧ ಅರಣ್ಯ ನೆನಪಿಸಿಕೊಂಡರೂ ಈ ಮಾತು ನಿಜ ಅನ್ನಿಸುತ್ತದೆ. ಇನ್ನೂ ಹಿಂದೆ ಎಂಥ ದಟ್ಟಾರಣ್ಯ ಇದ್ದಿರಬಹುದು?

ಈ ಕೊಂಡದ ಮೂಲ ಆಶಯ ಏನೇ ಇರಲಿ, ಇಂದು ಎಲ್ಲರೂ ಯೋಚನೆ ಮಾಡಬೇಕಾದ ಒಂದು ಸಂಗತಿ ಇದೆ. ಹಿಂದಿನ ಜನರು 'ಕೊಂಡ'ವನ್ನು ಯಾವ ಕಾರಣಕ್ಕಾದರೂ ಹುಟ್ಟು ಹಾಕಿರಲಿ, ಆದರೆ ಇಂದು ಅರಣ್ಯವೇ ಇಲ್ಲದಿರುವಾಗ, ಇಷ್ಟು ಬೃಹತ್ ಪ್ರಮಾಣದ ಕೊಂಡದ ನಿರ್ಮಾಣ ಅಗತ್ಯವಿದೆಯೆ? ಹೊಲ, ಗದ್ದೆ, ತೋಟಗಳಲ್ಲಿ ಬೆಳೆದ ಮರಗಳನ್ನೂ ಕಡಿದು ಸುತ್ತಲ ಪರಿಸರವನ್ನು ಹಸಿರಿಲ್ಲದ ಬಟಾಬಯಲು ಮಾಡಿ ಎಂದು ಚೌಡಮ್ಮ ಕೂಡ ಖಂಡಿತ ಹೇಳಲಾರಳು ಅಲ್ಲವೇ? ಆದ್ದರಿಂದ ಹಿಂದಿನ ಹಿರಿಯರ ಉದ್ದೇಶಪೂರ್ವಕವಾದ ಕೊಂಡದ ಆಚರಣೆಗೂ ಇಂದಿನ ಉದ್ದೇಶರಹಿತವಾದ ಕೇವಲ ನಂಬಿಕೆಗೂ ಇರುವ ಅಂತರವನ್ನು ನಾವು ಅರಿಯಬೇಕಾಗುತ್ತದೆ. ಹಿಂದಿನ ಹಿರಿಯರು ತಮ್ಮ ಅಸ್ತಿತ್ವಕ್ಕಾಗಿ ಕಾಡು ಕಡಿದು, ಕೊಂಡ ಹಾಕಿ ತಮ್ಮ ವ್ಯವಸಾಯ ಭೂಮಿಯನ್ನು ಸಿದ್ಧಪಡಿಸಿಕೊಂಡರು. ಆದರೆ ಇಂದು ನಾವು ಬಟಾಬಯಲಿನ ಹೊಲಗದ್ದೆಗಳಲ್ಲಿ ಅಲ್ಲೊಂದು ಇಲ್ಲೊಂದು ಇರುವ ಮರಗಿಡಗಳನ್ನೇ ಕಡಿದು ನಿಸರ್ಗದ ನಾಶ ಮಾಡುವ ಮೂಲಕ ನಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳಹೊರಟಿದ್ದೇವೆ. ಆದ್ದರಿಂದಲೇ ಸಾಂಸ್ಕೃತಿಕ ಆಚರಣೆಗಳನ್ನು ನೆರವೇರಿಸುವಾಗ, ಬದಲಾದ ಪರಿಸರದ ಸಾಮಾಜಿಕ


ಎಚ್ಚರವೂ ಇರಬೇಕಾಗುತ್ತದೆ. ಜನಪದ ಆಚರಣೆಗಳು ಕಾಲಮಾನಕ್ಕೆ ಅನುಗುಣವಾಗಿ ಬದಲಾಗುತ್ತಲೇ ಬಂದಿವೆ. ಎಷ್ಟೋ ಆಚರಣೆಗಳು ಕೇವಲ ಸಾಂಕೇತಿಕವಾಗಿ ಮಾತ್ರ ಉಳಿದಿವೆ. ಚೌಡಮ್ಮನ ಕೊಂಡ ಕೂಡ ಹಾಗೆ ಒಂದು ಸಾಂಕೇತಿಕ ಆಚರಣೆಯಾಗಿ ಮಾತ್ರ ಉಳಿಯಲಿ ಎಂಬ ಸದುದ್ದೇಶದಿಂದ ಇಷ್ಟು ವಿವರಣೆಯನ್ನು ನೀಡಲಾಯಿತು.

ಚೌಡಮ್ಮನ ಹಬ್ಬದಲ್ಲಿ ನಡೆಯುವ ಇನ್ನಿತರ ಆಚರಣಾ ವಿಧಿಗಳು ಬಹುತೇಕ ಇತರೆ ಗ್ರಾಮದೇವತೆಗಳ ಹಬ್ಬಗಳಲ್ಲಿಯೂ ನಡೆಯುವ ಕ್ರಿಯೆಗಳನ್ನೇ ಹೋಲುವುದರಿಂದ ಇಲ್ಲಿ ಹೆಚ್ಚಿನ ಚರ್ಚೆಗಾಗಿ ಕೈಗೆತ್ತಿಕೊಂಡಿಲ್ಲ. ಆದರೆ, ನಾನೀಗಾಗಲೇ ತಿಳಿಸಿದಂತೆ ಸುಮಾರು ಇಪ್ಪತ್ತೆರಡು ವರ್ಷಗಳ ಹಿಂದೆ ಬರೆದ ಈ ಗ್ರಂಥ ಇದಾದ್ದರಿಂದ ಇಂದು ಆಗಿರುವ ಬದಲಾವಣೆಗಳೇನು ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿಬಿಡುತ್ತೇನೆ. ಈ ೨೦ ವರ್ಷಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಸುಂದರವಾಗಿದ್ದ ಹಳೇ ದೇವಸ್ಥಾನವನ್ನು ಒಡೆದು, ಹೊಸ ಮಾದರಿಯ ಆಧುನಿಕ ದೇವಸ್ಥಾನವನ್ನು ಲಕ್ಷಾಂತರ ರೂಪಾಯಿಗಳ ಖರ್ಚಿನಲ್ಲಿ ಕಟ್ಟಲಾಗಿದೆ. ದೇವಸ್ಥಾನದ ಒಳ ಹಜಾರದಲ್ಲಿ ಸಾಂಸ್ಕೃತಿಕವಾಗಿ ಹಾಗೂ ಐತಿಹಾಸಿಕವಾಗಿ ಮಹತ್ವವೆನಿಸಿದ್ದ ಯಾವ ಸ್ಮಾರಕಗಳನ್ನೂ ಉಳಿಸಿಲ್ಲ. ಇತ್ತೀಚೆಗೆ ನಗರಗಳಲ್ಲಿ ನಿರ್ಮಾಣವಾಗುತ್ತಿರುವ ಏಕರೂಪದ ಹಾಗೂ ಸೌಂದರ್ಯವೆಂಬುದು ಕಾಣೆಯಾದ ರಾಘವೇಂದ್ರ ಅಥವಾ ಗಣೇಶನ ಗುಡಿಗಳು ಇರುತ್ತವಲ್ಲ ಹಾಗೆ ಕಾಂಕ್ರೀಟ್ ಕಟ್ಟಡವನ್ನು ಕಟ್ಟಿ, ವಿಚಿತ್ರ ಬಣ್ಣಗಳನ್ನು ಹೊಡೆದು 'ನವೀಕರಣ' ಮಾಡಲಾಗಿದೆ. ಇನ್ನೂ ಸಾಲದೆಂಬಂತೆ, ಒಳಗಿನ ಹಜಾರದಲ್ಲಿರುವ ವಿವಿಧ ವಸ್ತುಗಳನ್ನು ಯಾರು ಯಾರು ಕೊಟ್ಟರು ಎಂಬ ದಾನಿಗಳ ನಾಮಫಲಕಗಳೇ ಪ್ರಧಾನ ಸ್ಥಾನ ಪಡೆದಿವೆ. ಟ್ಯೂಬ್‌ಲೈಟಿನ ಮೇಲೂ ದಾನಿಗಳ ಹೆಸರನ್ನು ಬರೆದು ವಿರೂಪಗೊಳಿಸಲಾಗಿದೆ. ಉಜ್ಜನಿ ಬೆಂಗಳೂರಿಗೆ ತೀರಾ ಹತ್ತಿರದಲ್ಲಿದೆ, ಅಂದರೆ ಸುಮಾರು ೮೫ ಕಿ.ಮೀ. ದೂರ ಇರಬಹುದು ಅಷ್ಟೆ. ಹೀಗಾಗಿ, ಉಜ್ಜನಿ ಮತ್ತು ಸುತ್ತಲ ಹಳ್ಳಿಗಳ ಪ್ರತಿ ಮನೆಯ ಒಬ್ಬೊಬ್ಬರಾದರೂ ಬೆಂಗಳೂರಲ್ಲಿ ನೆಲೆಸಿದ್ದಾರೆ. ಕೆಲವರು ಶ್ರೀಮಂತರೂ ಆಗಿದ್ದಾರೆ. ಹಣ ಇರುವವರ ಹರಕೆಗಳು ಚೌಡಮ್ಮನಿಗೆ ಹೆಚ್ಚಾಗುತ್ತಲೇ ಇವೆ. ಚೌಡಮ್ಮ ಒಂದು ರೀತಿಯಲ್ಲಿ ಬೆಂಗಳೂರಿಗರ ದೇವತೆಯಾಗಿ ಮಾರ್ಪಟ್ಟಿದ್ದಾಳೆ. ಕುಂಕುಮಾರ್ಚನೆ, ಸಹಸ್ರ ದೀಪಾರ್ಚನೆ, ಪುಷ್ಪಾರ್ಚನೆಗಳು ಹೊಸದಾಗಿ ಸೇರಿಕೊಂಡಿವೆ. ಜನಸಾಮಾನ್ಯರು, ಬಡವರು ನಿಬ್ಬೆರಗಾಗಿ ನೋಡುತ್ತಿರುವಂತೆ ಚೌಡಮ್ಮ ಅವರ ಕೈತಪ್ಪಿ ಹೋಗಿದ್ದಾಳೆ! ಹಬ್ಬಗಳಲ್ಲಿ ಹಿಂದೆ ನಡೆಯುತ್ತಿದ್ದ ಜನಪದ ಗೀತೆಗಳ, ಹಳ್ಳಿಯ ವಿವಿಧ ಹಾಡುಗಳ ಸಮೂಹಗಾನ ಮರೆಯಾಗಿ ಧ್ವನಿವರ್ಧಕಗಳು ಒದರುವ ಸಾಹಿತ್ಯವಿಲ್ಲದ ಸುಪ್ರಭಾತಗಳು ಎಲ್ಲೆಲ್ಲಿಯೂ ರಂಪ ಮಾಡುತ್ತಿವೆ. ಬೆಳದಿಂಗಳ ತಂಪು ಬೆಳಕಲ್ಲಿ ಜರುಗುತ್ತಿದ್ದ ಹಬ್ಬ ಈಗ ವಿದ್ಯುತ್ ದೀಪಗಳ ಚಿಣಮಿಣದಲ್ಲಿ ಹೊಸರಂಗು ಪಡೆದುಕೊಂಡಿದೆ.

ಇಷ್ಟೆಲ್ಲದರ ನಡುವೆಯೂ ಜನಸಾಮಾನ್ಯರ ದೃಷ್ಟಿಯಲ್ಲಿ, ಮುಗ್ಧ ಕೃಷಿಕರ ಭಾವನೆಗಳಲ್ಲಿ ಚೌಡಮ್ಮ, ಹೆಬ್ಬಾರಮ್ಮ ಹಾಗೂ ಹಬ್ಬಾಚರಣೆಗಳನ್ನು ಕುರಿತಾದ ನಂಬಿಕೆಗಳು ಯಾವ ರೀತಿಯಲ್ಲೂ ಬದಲಾಗಿಲ್ಲ. ಹಬ್ಬದ ಸಮೂಹ ಆಚರಣೆಗಳಿಗೂ ಕುಂದು ಬಂದಿಲ್ಲ. ಆಧುನಿಕತೆಯ ಪ್ರವೇಶ ಮಾತ್ರ ಇಂಚಿಂಚೇ ಆಗುತ್ತಿದೆ. ಇದು ಅನಿವಾರ್ಯವೂ ಹೌದು. ಈ ಬದಲಾವಣೆಗಳ ವೈರುದ್ಯವನ್ನು ಅರಿಯಲು ಹೊಸ ಅಧ್ಯಯನವನ್ನೇ ಕೈಗೊಳ್ಳ ಬೇಕಾಗಬಹುದು.

ಪ್ರಾಧ್ಯಾಪಕ ಹಿ.ಚಿ. ಬೋರಲಿಂಗಯ್ಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ



# ಉಜ್ಜನಿ ಚೌಡಮ್ಮ

# ಉಜ್ಜನಿ ಚೌಡಮ್ಮ

**ಊರ ಪರಿಚಯ**

ಉಜ್ಜನಿ, ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಹುಲಿಯೂರುದುರ್ಗ ಹೋಬಳಿಗೆ ಸೇರಿದ ಒಂದು ಊರು. ಹುಲಿಯೂರುದುರ್ಗದಿಂದ ಆಗ್ನೆಯ ದಿಕ್ಕಿಗೆ ನಾಲ್ಕು ಮೈಲಿಗಳ ದೂರದಲ್ಲಿರುವ ಇದು ತುಮಕೂರು, ಬೆಂಗಳೂರು, ಮಂಡ್ಯ ಜಿಲ್ಲೆಗಳ ಗಡಿಯಲ್ಲಿರುವ ಊರು. ಈ ಮೂರೂ ಜಿಲ್ಲೆಗಳ ಸಂಪರ್ಕವನ್ನು ಒಳಗೊಂಡ ಉಜ್ಜನಿ ಮೂರೂ ಪ್ರದೇಶಗಳ ಸಂಸ್ಕೃತಿ ಸಂಪ್ರದಾಯಗಳನ್ನು ಪ್ರತಿಬಿಂಬಿಸುವ ಒಂದು ಪ್ರಮುಖ ಸ್ಥಳ. ಸುತ್ತಮುತ್ತಲಿರುವ ಸುಮಾರು ಹತ್ತು ಹದಿನೈದು ಹಳ್ಳಿಗಳಿಗೆಲ್ಲಾ ಇದೇ ಮುಖ್ಯ ಊರು.

ಹತ್ತು ವರ್ಷಗಳ ಹಿಂದೆ ನಾನು ಬಾಲಕನಾಗಿದ್ದಾಗ ನೋಡುತ್ತಿದ್ದಂತೆ ಉಜ್ಜನಿಗೆ ಯಾವ ಹೆಚ್ಚಿನ ನಾಗರಿಕತೆಯ ಸೋಂಕೂ ಇರಲಿಲ್ಲ.* ಅದು ಒಂದು ಸಂಪ್ರದಾಯಸ್ತ ಸಾಮಾನ್ಯ ಊರಾಗಿತ್ತು. ಆದರೆ ಈಗ ಕ್ರಮೇಣವಾಗಿ ನಾಗರೀಕ ಸಂಪರ್ಕ ಹೆಚ್ಚಾಗುತ್ತಲಿದೆ. ನಾಲ್ಕು ಬಸ್ಸುಗಳೂ ಬಂದು ಹೋಗುತ್ತವೆ. ಆಸ್ಪತ್ರೆಯಿದೆ, ಮಾಧ್ಯಮಿಕ ಶಾಲೆಯಿದೆ, ವಿದ್ಯುತ್‌ದೀಪಗಳು ಬಂದು ಹತ್ತು ವರ್ಷಗಳ ಮೇಲೇ ಆಯಿತು. ನಾಲ್ಕು ರಾಗಿ ಬೀಸುವ ಯಂತ್ರಗಳೂ ಕಾಲೂರಿವೆ. ಇದರಿಂದಾಗಿ ಕಲ್ಲಿನಿಂದ ಬೀಸುವ, ವನಕೆಯಿಂದ ಕುಟ್ಟುವ ಅಭ್ಯಾಸ ಸಂಪೂರ್ಣವಾಗಿ ನಿಂತುಹೋಗಿದೆ. ಜೊತೆಯಲ್ಲೇ ಬೀಸುವ ಪದಗಳೂ ಮರೆತು ಹೋಗುತ್ತಿವೆ. ಈಚೆಗಂತೂ ನಮ್ಮಲ್ಲಿ ಬೆಂಗಳೂರು, ಮೈಸೂರು, ತುಮಕೂರುಗಳಂತಹ ಪಟ್ಟಣಗಳನ್ನು ನೋಡದವರೇ ಇಲ್ಲ. ಎಷ್ಟೋ ಮನೆಗಳಲ್ಲಿ ರೇಡಿಯೋ ಇಟ್ಟುಕೊಂಡಿದ್ದಾರೆ. ಜೊತೆಗೆ ಹುಲಿಯೂರು ದುರ್ಗದಲ್ಲಿ ಸಿನಿಮಾಟೆಂಟ್ ಒಂದು ಖಾಯಂ ಆಗಿ ನಿಂತಿದೆ. ಹೀಗಾಗಿ ಈಗೀಗ ಸಿನಿಮಾ ಹಾಡುಗಳ ಪ್ರಭಾವವೂ ಈ ಊರಿನ ಜನಗಳ ಮೇಲೆ ಸಾಕಷ್ಟಾಗಿದೆ.

ದಿನೇದಿನೇ ನಾಗರಿಕ ಸಂಪರ್ಕ ಹೆಚ್ಚು ಹೆಚ್ಚು ಆಗುತ್ತಿದ್ದರೂ ಬಹು ಹಿಂದಿನಿಂದ ನಡೆದುಬಂದ ಸಾಂಪ್ರದಾಯಿಕ ಆಚರಣೆಗಳು ಮಾತ್ರ ಯಾವ ಅಡೆತಡೆಯೂ ಇಲ್ಲದೆ ಇಂದಿಗೂ ಆಚರಣೆಯಲ್ಲಿ ಉಳಿದಿವೆ. ದೇವರು, ಹಬ್ಬ, ಮದುವೆ, ಶಾಸ್ತ್ರ ಇತ್ಯಾದಿ ಆಚರಣೆಗಳಲ್ಲಿ

---

* ಈ ಪುಸ್ತಕ ಪ್ರಥಮವಾಗಿ ಪ್ರಕಟವಾದದ್ದು ೧೯೭೯ರಲ್ಲಿ. ಅಂದರೆ ೨೨ ವರ್ಷಗಳಾದವು. ಅದಕ್ಕಿಂತ ೧೦ ವರ್ಷಗಳ ಆಚೆ ಅಂದರೆ ಇಲ್ಲಿಗೆ ಮೂವತ್ತೆರಡು ವರ್ಷಗಳ ಹಿಂದೆ ಎಂದು ಭಾವಿಸಬೇಕು.

ಜನರ ಎಂದಿನ ನಂಬಿಕೆ ಹಾಗೂ ಭಾವನೆಗಳು ಹಾಗೆಯೇ ಇವೆ. ಇಂತಹ ಆಚರಣೆಗಳಲ್ಲಿ ಚೌಡಮ್ಮ ಮತ್ತು ಚೌಡಮ್ಮನ ಹಬ್ಬ ಬಹಳ ಮುಖ್ಯವಾದುದಾಗಿದೆ.

ಪ್ರಸಿದ್ಧ ದೇವತೆಯಾದ ಚೌಡಮ್ಮನಿಂದ ಹೆಸರಾಗಿರುವ ಉಜ್ಜನಿ ಐತಿಹಾಸಿಕ ಸ್ಥಳವೂ ಆಗಿದೆ. ಕ್ರಿ.ಶ. ೧೪೨೯ರಷ್ಟು ಹಿಂದಿನದಾದ ಶಾಸನವೊಂದು ಉಜ್ಜನಿಯ ಊರ ಮಧ್ಯಭಾಗದಲ್ಲಿ ನೆಟ್ಟಿದೆ. ಅದರಲ್ಲಿ ಉಜ್ಜನಿ ವಿಜಯನಗರದ ಅರಸ ವೀರಪ್ರತಾಪಮಹಾರಾಯ (ವಿಜಯ ಬುಕ್ಕರಾಯ ಒಡೆಯರ ಕುಮಾರರ ಆಳ್ವಿಕೆಗೆ ಒಳಪಟ್ಟಿತ್ತೆಂದು ಉಲ್ಲೇಖವಿದೆ. ಅಲ್ಲದೆ ಕೆಲವು ಪ್ರಮುಖ ಗೌಡರ ಹೆಸರುಗಳೂ, ಜೊತೆಗೆ ಉಜ್ಜನಿಯ ಕೆರೆ ಕಟ್ಟಿಸಿದ ಸಂಗತಿಯೂ ಇಲ್ಲಿದೆ. ಊರ ಹಿಂಭಾಗದಲ್ಲಿರುವ ಕೋಟೆಬಾಗಿಲು, ಊರಮಧ್ಯೆ ಇರುವ ಎತ್ತರವಾದ ದೀಪಸ್ತಂಬವೂ ಉಜ್ಜನಿಯಲ್ಲಿ ಇವೆ. ಈ ಶಾಸನದಲ್ಲಿ ಊರಗೌಡರು "ಶ್ರೀ ಚಉಡೇಶ್ವರಿ ದೇವಿ' ಎಂದು ಸಹಿ ಮಾಡಿರುವುದರಿಂದ ೧೪೨೯ರಷ್ಟಕ್ಕಿಂತಲೂ ಹಿಂದಿನಿಂದ ಚೌಡಮ್ಮನ ಆರಾಧನೆ ಉಜ್ಜನಿಯಲ್ಲಿ ನಡೆಯುತ್ತಾ ಬಂದಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದ್ದರಿಂದ ಚೌಡಮ್ಮನನ್ನು ಪುರಾತನ ದೇವತೆಯಂದೇ ಕರೆಯಬಹುದು.

ಉಜ್ಜನಿ ಸುತ್ತಲೂ ಗುಡ್ಡಗಳಿಂದ ಆವೃತವಾಗಿದ್ದು ಒಂದು ಸುಂದರ ಊರಾಗಿದೆ. ಸುತ್ತಮುತ್ತ ಹಲವಾರು ಗುಡ್ಡಗಳಿದ್ದರೂ ನಡುವಿನ ಬಯಲು ವಿಸ್ತಾರವಾಗಿದ್ದು ಫಲವತ್ತಾದ ಭೂಮಿಯಿಂದ ಕೂಡಿದೆ. ಕಾಡು ಗುಡ್ಡಗಳ ನಡುವೆ ಊರು ಇದ್ದರೂ ಊರೊಳಕ್ಕೆ ಪ್ರವೇಶಿಸಿದಾಗ ಆಗುವ ಅನುಭವವೇ ಬೇರೆ. ಊರ ಹೆಬ್ಬಾಗಿಲಿನಿಂದ ಚೌಡಮ್ಮನ ಗುಡಿಯವರೆಗೆ ನೀಳವಾದ ದೊಡ್ಡ ಬೀದಿಯಿದೆ. ಈ ಬೀದಿಯ ಬಲ ಅಂಚಿನಲ್ಲಿ ಉದ್ದಕ್ಕೂ ಇರುವ 'ಚಿಕ್ಕೆರೆ' ತುಂಬ ರಮಣೀಯವಾಗಿದೆ.

ಊರ ಮುಂದಲ ಕೆರೆ ನೀರೆಲ್ಲ ತಾವರೆ

ನೋಡ ಚೌಡಮ್ಮ ನಿನ್ನ ಕೆರೆ | ಚಿಕ್ಕೆರೆಯ

ಜೂಜಾಡಿ ಕೋಡಿ ಅರಿದಾವು

ಐದು ವರ್ಷಗಳ ಹಿಂದೆ ದೊಡ್ಡ ಬೀದಿಯ ಇಕ್ಕೆಲದಲ್ಲಿಯೂ ಹುಣಿಸೇಮರ ಮತ್ತು ಅರಳೀಮರಗಳು ಬೃಹದಾಕಾರವಾಗಿ ಬೆಳೆದು ನಿಂತಿದ್ದವು. ಆಗ ಆ ಬೀದಿ ನೋಡಲು ತುಂಬ ಸೊಗಸಾಗಿತ್ತು. ಆದರೆ ಅವು ತುಂಬ ಹಳೆಯವಾಗಿದ್ದುದರಿಂದ ಅವನ್ನು ಕಡಿದು ಹೊಸಮರ ಗಳನ್ನು ನೆಡುವ ಪ್ರಯತ್ನ ನಡೆಯುತ್ತಿದೆ. ಆದರೆ ಅವು ಹಿಂದೆ ಇದ್ದ ಚಂದವನ್ನು ನಮ್ಮ ಜನಗಳ ಹಾಡಿನಿಂದಲೇ ಕೇಳಿದರೆ ಸೊಗಸು.

---

* E.C. XII Kunigal 18.

ಉಜ್ಜನಿ ಚಂದ ಉಣಸೆ ತೋಪು ಚಂದ

ಉಜ್ಜನಿ ಅಮ್ಮನ ಗುಡಿಚಂದ | ಮ್ಯಾಲಿರುವ

ನೌಲಿಂಡ ಯಾರ ಬರದೋರು

ಚಿಕ್ಕೆರೆಯ ಮತ್ತು ದೊಡ್ಡ ಬೀದಿಯ ಉತ್ತರ ದಡದಲ್ಲಿ ಚೌಡಮ್ಮನ ದೇವಸ್ಥಾನವಿದೆ. ಈ ದೇವಸ್ಥಾನ ದೊಡ್ಡ ದೊಡ್ಡ ಕಲ್ಲು ದಿಂಡುಗಳಿಂದ ಕಟ್ಟಿದ ಸುಂದರ ಕಟ್ಟಡ. ಹಿಂಭಾಗದಲ್ಲಿ ಶಿಖರವಿದ್ದು ಮುಂದಕ್ಕೆ ಚೌಕಾಕಾರದಲ್ಲಿ ಗುಡಿ ಚಾಚಿಕೊಂಡಿದೆ. ಶಿಖರದಲ್ಲಿ ವಿಧವಿಧವಾದ ಚಿತ್ರಣವಿದೆ. ನವಿಲಿನ ಚಿತ್ರಗಳೂ ಇವೆ. ಗುಡಿಯ ಸುತ್ತಲೂ ನಾನಾ ತರವಾದ ಹೂವಿನ ಗಿಡಗಳು ಹಬ್ಬಿವೆ.

ಉದ್ದಾನಿ ಮಲ್ಲೀಗೆ ರುದ್ರಾಕ್ಷಿ ಸಂಪಿಗೆ

ಇಬ್ಬನೀಲಿ ಬೆಳೆಯೋ ಮರುಗs | ಮಲ್ಲಿಗೆ ವೂವು

ಇದ್ದಾವು ಚೌಡಮ್ಮ ಗುಡಿಯಿಂದ

ಉಜ್ಜನಿ ಊರು ಚಿಕ್ಕದಾದರೂ ಮನೆಗಳು, ಜನಗಳು ಕಡಿಮೆಯೇನಿಲ್ಲ. ಚೌಡಮ್ಮನ ಗುಡಿ ಚಿಕ್ಕದಾದರೂ ಗುಡಿಯೊಳಗಿರುವ ವಿಗ್ರಹಕ್ಕೇನೂ ಕುಂದಿಲ್ಲ. ಚೌಡಮ್ಮ ಗುಡಿ ತುಂಬವೂ 'ವಡೆದು ಮೂಡವಳ' ಎಂದು ನಮ್ಮವರು ವರ್ಣಿಸಿದ್ದಾರೆ :

ಕಡಜಾದ ಗೂಡಿನಂಗೆ ಕಿರಿದು ಡಾಣೆ ಉಜ್ಜನಿ

ಕಡೆದು ನಿಲುಸಾರೆ ಕಲುಕಂಬ | ಚೌಡಮ್ಮ

ವಡೆದು ಮೂಡಾಳ ಗುಡಿತುಂಬ

ಇಲ್ಲಿ ಊರನ್ನು 'ಕಡಜದ ಗೂಡು' ಎಂದೂ ಚೌಡಮ್ಮನನ್ನು 'ವಡೆದು ಮೂಡವಳ್' ಎಂದೂ ವರ್ಣಿಸಿರುವುದು ನಮ್ಮ ಜನಪದ ಕವಿಗಳ ಪ್ರತಿಭೆಗೆ ಸಾಕ್ಷಿಯಾಗಿದೆ.

ಗರ್ಭಗುಡಿಯಲ್ಲಿರುವ ಚೌಡಮ್ಮ ಕಾಳಿಯ ರೂಪದಲ್ಲಿದ್ದು ಎಂಟು ಕೈಗಳನ್ನೊಳ ಗೊಂಡಿದ್ದಾಳೆ. ಎರಡು ಕೈಗಳಲ್ಲಿ ಶಂಖಜಾಗಟೆಗಳೂ, ಎರಡು ಕೈಗಳಲ್ಲಿ ತ್ರಿಶೂಲ ಡಮರುಗಗಳೂ, ಇನ್ನೆರಡು ಕೈಗಳಲ್ಲಿ ಕತ್ತಿಗುರಾಣಿಗಳೂ, ಮತ್ತೆರಡು ಕೈಗಳಲ್ಲಿ ಎರಡು ರಾಕ್ಷಸರ ರುಂಡಗಳೂ ಇವೆ. ಅಲ್ಲದೆ ಕಾಲಡಿಯಲ್ಲಿ ಮೆಟ್ಟಿರುವ ಒಬ್ಬ ರಾಕ್ಷಸ, ಅಕ್ಕಪಕ್ಕದಲ್ಲಿ ಸೇವಕಿಯರ ಮತ್ತು ದ್ವಾರಪಾಲಕರ ವಿಗ್ರಹಗಳಿವೆ.

ಹೊರಗಿರುವ ಚೌಕಾಕಾರದ ಪೌಳಿಯಲ್ಲಿ ರಾಜ ವಿಕ್ರಮ ಎಂದು ಹೇಳಲಾಗುವ ಪ್ರತಿಮೆ, ಬಿಳಿಯ ಕುದುರೆ, ಮಂತ್ರಿಭಟ್ಟಿಯದೆಂದು ಹೇಳುವ ಪ್ರತಿಮೆ ಹಾಗೂ ಗೌಡ ಶಾನುಭೋಗರ ಪ್ರತಿಮೆಗಳೂ ಇವೆ. ಇಷ್ಟಲ್ಲದೆ ಒಳಗೆ ಕಾಲಿಡುತ್ತಿದ್ದಂತೆಯೇ ಮೈಜುಮ್ಮೆನಿಸುವಂತಹ ಎರಡು ಬೃಹದ್ ರಾಕ್ಷಸರ ಪ್ರತಿಮೆಗಳೂ ಇವೆ. ಶಿಖರದ ಮೇಲ್ಭಾಗದಲ್ಲಿ ಚೌಕಾಕಾರದ ನಾಲ್ಕು ಮೂಲೆಗಳಲ್ಲೂ ಸಿಂಹಗಳ ಪ್ರತಿಮೆಗಳಿವೆ. ಹೀಗೆ ಗುಡಿ ಚಿಕ್ಕದಾದರೂ ನಾನಾರೀತಿಯ



ಕಲೆಯನ್ನೊಳಗೊಂಡಿವೆ. ಆದರೆ ಅತ್ಯುತ್ತಮ ಕಲೆಯೇನಲ್ಲವೆಂದೇ ಹೇಳಬಹುದು. ದೇವಸ್ಥಾನದ ಸುತ್ತ ಕಲ್ಲಿನ ಪಾಳು ಮಂಟಪಗಳಿವೆ. ದೇವಸ್ಥಾನದ ಪ್ರವೇಶದ್ವಾರ ಪೂರ್ವದಿಕ್ಕಿಗೆ ಇದೆ. 'ಹುಟ್ಟುವ ಸೂರ್ಯನಿಗೆ ಎದುರಾಗಿ' ಇರುವ ಬಾಗಿಲ ನೇರಕ್ಕೆ ಸರಿಯಾಗಿ ಕೊಂಡದ ಬಾಗಿಲೂ ಇದೆ. ದೇವಸ್ಥಾನದ ಈಶಾನ್ಯ ಮೂಲೆಗೆ ಎತ್ತರದ ಉಯ್ಯಾಲೆ ಕಂಬವಿದೆ. ದೇವಸ್ಥಾನದಿಂದ ಸ್ವಲ್ಪ ದೂರದಲ್ಲಿ ಈಶಾನ್ಯಕ್ಕೆ 'ಹೊನ್ನರುಳೀಮರ'ವಿದೆ. ಗುಡಿಯ 'ಮಕನೇರ'ಕ್ಕೆ ಸರಿಯಾಗಿ ಸ್ವಲ್ಪದೂರದಲ್ಲಿ 'ಮಜ್ಜನ ಬಾವಿ' ಇದೆ.

ಉಜ್ಜನಿಯಲ್ಲಿ ಇನ್ನೂ ಕೆಲವು ದೇವಸ್ಥಾನಗಳಿವೆ. ಅವುಗಳೆಂದರೆ, ಹೆಬ್ಬಾರಮ್ಮನ ದೇವಸ್ಥಾನ, ಬಸವಣ್ಣನ ದೇವಸ್ಥಾನ, ಮಾರಮ್ಮನ ದೇವಸ್ಥಾನ, ವರದರಾಜಸ್ವಾಮಿಯ (ಕೃಷ್ಣ) ದೇವಸ್ಥಾನ ಮತ್ತು ಮನೆ ದೇವರು ಗುಡಿಗಳು ಊರ ಒಳಭಾಗದಲ್ಲಿ ಅಲ್ಲಲ್ಲಿ ಇವೆ. ಊರಿನ ಈಶಾನ್ಯ ಮೂಲೆಗೆ ಇನ್ನೊಂದು ಕೆರೆ ಇದೆ. ಅದನ್ನು ದೊಡ್ಡ ಕೆರೆ ಎಂದು ಕರೆಯುತ್ತಾರೆ. ಹಿಂದೆ ಇದು ಬಹಳ ದೊಡ್ಡ ಕೆರೆಯಾಗಿತ್ತಂತೆ. ಈಗ ಮುಚ್ಚಿಹೋಗುತ್ತಿದೆ.

**ಚೌಡಮ್ಮನ ಪ್ರತಿಷ್ಠಾಪನೆ :**

ಮಾನವ ಅನಾದಿಕಾಲದಿಂದಲೂ ದೈವಾರಾಧನೆಯನ್ನು ಮಾಡುತ್ತಾ ಬಂದಿದ್ದಾನೆ. ಬಹುಹಿಂದೆ ಅವನು ತನಗೆ ಗೋಚರವಾಗುವ, ಸತ್ಯ ಎಂದು ತೋರುವ ಪ್ರಕೃತಿಗಳಾದ ಸೂರ್ಯ, ಚಂದ್ರ, ಭೂಮಿ, ಆಕಾಶಗಳನ್ನು ಮಾತ್ರ ಪೂಜಿಸುತ್ತಿದ್ದವನು, ಈ ಎಲ್ಲ ಶಕ್ತಿಗಳನ್ನೂ





ನಿಯಂತ್ರಿಸುವ ಬೇರೊಂದು ಶಕ್ತಿಯಿದೆ ಎಂದು ಊಹಿಸಿಕೊಂಡ. ತನ್ನ ಭಾವನೆ ಆಲೋಚನೆಗಳಿಗೆ ಅನುಗುಣವಾಗಿ ಆ ಶಕ್ತಿಗೆ ಹಲವಾರು ರೂಪಗಳನ್ನು ಕಲ್ಪಿಸಿಕೊಂಡ. ತನ್ನದೇ ಆದ ರೂಪವನ್ನೂ ಕೊಟ್ಟುಕೊಂಡ. ಭಯಭಕ್ತಿಯಿಂದ ಪೂಜಿಸತೊಡಗಿದ. ಬದುಕಿನ ಪ್ರಾರಂಭದ ದಿನಗಳು ಸಂಪೂರ್ಣವಾಗಿ ಆಸ್ಥಿರತೆಯಿಂದ ಕೂಡಿದ್ದು, ಒಂದು ರೀತಿಯಲ್ಲಿ ವಿಧಿಯ ಕೈಗೊಂಬೆಯಾಗಿತ್ತು. ಅದರಿಂದ ಪಾರಾಗಿ ಬದುಕಲಿಚ್ಛಿಸಿದಾಗ ಅನಿವಾರ್ಯವಾಗಿ ಅವನು ಹಲವು ಶಕ್ತಿಗಳ ಮೊರೆಹೋಗಬೇಕಾಯಿತು. ಇದರಿಂದಾಗಿ ಅವನಿಗೆ ಮಾನಸಿಕ ತೃಪ್ತಿಯೂ ಸಿಗುತ್ತಿತ್ತು. ಅಲ್ಲದೆ ದೇವರುದಿಂಡರ ಭಯದಿಂದ ನೇರವಾದ ಹಾದಿಯಲ್ಲಿ ನಡೆಯಲೂ ಸಹಾಯಕವಾಯಿತು.

ವಿಶ್ವದ ಅನೇಕ ಪ್ರದೇಶಗಳಲ್ಲಿ ದೇವತೆಗಳ ಆರಾಧನೆ ಇದೆ. ಈ ದೇವತೆಗಳಲ್ಲಿ 'ದೇವಗಣ' ಮತ್ತು 'ರಾಕ್ಷಸಗಣ'* ಎಂದು ಎರಡು ವಿಧಗಳುಂಟು, ಈ ವಿಂಗಡಣೆಯನ್ನು ಆಯಾ ದೇವತೆಗಳ ಹುಟ್ಟು, ಆಕಾರ, ಮಹಿಮೆ ಮಾಡಿಸಿಕೊಳ್ಳತಕ್ಕ ಆಚರಣೆಗಳಿಂದ ಮಾಡಬಹುದಾಗಿದೆ. ದೇವರ ಪೂರ್ವಚರಿತ್ರೆ ದೇವಲೋಕದ ದೇವತೆಗಳಿಗೆ ಸಂಬಂಧಪಟ್ಟಿದ್ದು, ಪ್ರಾಣಿಬಲಿ ಇಂತಹವುಗಳಿಂದ ದೂರವಿರುವ ಶಿಷ್ಟದೇವರನ್ನು ದೇವಗಣದ ದೇವರು ಎಂದೂ; ಪ್ರಾಣಿಬಲಿಯನ್ನು ಹೆಚ್ಚಾಗಿ ಅಪೇಕ್ಷಿಸುವ, ಕಾಯಿಲೆ ಕಸಾಲುಗಳನ್ನು ತಂದುಹಾಕುವ, ಉಗ್ರರೂಪವನ್ನು ತಾಳುವ ದೇವರನ್ನು ರಾಕ್ಷಸಗಣದ ದೇವರೆಂದೂ ಕರೆಯುತ್ತಾರೆ.

ಚೌಡಮ್ಮ ಈ ಎರಡೂ ಗಣಕ್ಕೂ ಸೇರಿದಂತೆ ತೋರುತ್ತದೆ. ಏಕೆಂದರೆ ಚೌಡಮ್ಮನ ಹುಟ್ಟುನೆಲೆಗಳಿಂದ ಆಕೆ ದೇವಗಣಕ್ಕೆ ಸೇರಿದಂತೆ ತೋರಿದರೆ ಆಕೆಯ ಮಹಿಮ ಉಗ್ರರೂಪಗಳಿಂದ ರಾಕ್ಷಸಗಣಕ್ಕೆ ಸೇರಿದಂತೆ ತೋರುತ್ತದೆ.

ಚೌಡಮ್ಮನ ಹಬ್ಬದಲ್ಲಿ ಮಾಡುವ ಆಚಾರ ಮಡಿ ಇಂತಹವುಗಳನ್ನು ನೋಡಿದರೆ 'ಚೌಡಮ್ಮ ದೇವಗಣದ' ದೇವತೆ ಎಂದೇ ತೋರುತ್ತದೆ.

ಚೌಡಮ್ಮನ ಪ್ರತಿಷ್ಠಾಪನೆಯ ಬಗೆಗೆ ಉಜ್ಜನಿ ಸುತ್ತಿನಲ್ಲಿ ಹಲವಾರು ಕತೆಗಳಿವೆ. ಚೌಡಮ್ಮ ಯಾರು? ಅವಳು ಉಜ್ಜನಿಗೆ ಹೇಗೆ ಬಂದಳು? ಇಲ್ಲಿ ಹೇಗೆ ಪ್ರತಿಷ್ಠಾಪನೆಯಾದಳು? ಹೇಗೆ ಪ್ರಸಿದ್ಧಿಗೆ ಬಂದಳು? ಈ ಎಲ್ಲ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಗಬೇಕಾದರೆ ಉಜ್ಜನಿ ಕ್ಷೇತ್ರದಲ್ಲಿ ಪ್ರಚಲಿತವಾಗಿರುವ ಕತೆಗಳನ್ನು ತಿಳಿದುಕೊಳ್ಳಲೇಬೇಕು. ಈ ಕೆಳಗಿನ ಕತೆಗಳಿಂದ 'ಚೌಡಮ್ಮನ ಪ್ರತಿಷ್ಠಾಪನೆ' ಮತ್ತು 'ಉಜ್ಜನಿಯ ನಿರ್ಮಾಣ' ಎರಡನ್ನೂ ನಮ್ಮ ಜನಪದರು ' ತಿಳಿಸುತ್ತಾರೆ.

**ಚೌಡಮ್ಮ ಭೂಮಿಗೆ ಬಂದು ನೆಲೆಸಿದ ಕಥೆ**

ತ್ರಿಪುರಾಪುರಿ ಎಂಬುದೊಂದು ಪಟ್ಟಣ. ಅದು ಭೂಮಿಯಲ್ಲೂ ಇಲ್ಲ, ಆಕಾಶದಲ್ಲಿಯೂ ಇಲ್ಲ. ಮಧ್ಯೆ ಅಂತರಿಕ್ಷದಲ್ಲಿ ತೂಗಾಡುವ ಪಟ್ಟಣ. ತ್ರಿಪುರನೆಂಬುವವನು ಅಲ್ಲಿಗೆ ರಾಜ.

---

* ಈ ವಿಂಗಡಣೆಯನ್ನು ಸೂಚಿಸಿದವರು ನನ್ನ ತಂದೆ ಶ್ರೀ ಚಿಕ್ಕೇಗೌಡರು



ಅವನಿಗೆ ಏಳು ಜನ ಹೆಣ್ಣು ಮಕ್ಕಳು. ಅವರು ತುಂಬು ಯುವತಿಯರು ಮತ್ತು ಸುಂದರಿಯರು. ಆದರೆ ಹುಟ್ಟಿದಂದಿನಿಂದ ಎಂದೂ ಗಂಡಸರ ದರ್ಶನವನ್ನೇ ಮಾಡದ ತರುಣಿಯರು. ಇವರಿಗೆ ಹೇಗಾದರೂ ಮಾಡಿ ಪುರುಷರ ದರ್ಶನ ಮಾಡಿಸಬೇಕೆಂದು ಶ್ರೀಕೃಷ್ಣ ಒಮ್ಮೆ ಸಂಕಲ್ಪಿಸಿದ. ಹೇಗೆ ಮಾಡುವುದು? ಅದಕ್ಕೆ ಒಂದು ಉಪಾಯ ಮಾಡಿದ. ಒಬ್ಬ ಬುಡುಬುಡುಕೆ ಮಂತ್ರಗಾರನ ವೇಷವನ್ನು ಹಾಕಿಕೊಂಡು ತ್ರಿಪುರಾಪುರಿ ಪಟ್ಟಣವನ್ನು ನಡುರಾತ್ರಿಯಲ್ಲಿ ಪ್ರವೇಶಿಸಿದ. ಬುಡಬುಡುಕೆಯನ್ನು ಬಾರಿಸುತ್ತಾ ತ್ರಿಪುರಾಪುರಿ ಪಟ್ಟಣಕ್ಕೆ ವಿಪತ್ತು ಬಂದಿದೆ, ಆ ವಿಪತ್ತಿನಿಂದ ಪಾರಾಗಲು ತ್ರಿಪುರನ ಏಳುಜನ ಹೆಣ್ಣು ಮಕ್ಕಳೂ ನಡುರಾತ್ರಿಯಲ್ಲಿ ಹುಟ್ಟಿದ ನಿರ್ವಾಣ ಹೋಗಿ ಮೂಡಲಲ್ಲಿರುವ ಕೆರೆಯಲ್ಲಿ ಸ್ನಾನ ಮಾಡಬೇಕು. ಅಷ್ಟರಲ್ಲಿ ಅಲ್ಲಿ ಒಂದು ಅರಳಿ ಸಸಿಯು ಹುಟ್ಟಿರುತ್ತದೆ. ಅದಕ್ಕೆ ಗಂಧಾಕ್ಷತೆಗಳಿಂದ ಪೂಜೆ ಮಾಡಿ ಬೆತ್ತಲೆಯಾಗಿಯೇ ಅರಳಿ ಸಸಿಯನ್ನು ಸುತ್ತಿ ತಬ್ಬಬೇಕು. ಹೀಗೆ ಮಾಡಿದರೆ ವಿಪತ್ತಿನಿಂದ ಪಾರಾಗಬಹುದು. ಇಲ್ಲದಿದ್ದರೆ ಪಟ್ಟಣ ಹಾಳಾಗುವುದು ಖಚಿತ" ಎಂದು ಸಾರಿ ಮಾಯವಾಗುತ್ತಾನೆ. ಇದನ್ನು ಕೇಳಿಸಿಕೊಂಡು ಪುರದ ಜನರೆಲ್ಲ ಗಾಬರಿಯಾದರು. ಪಟ್ಟಣ ಹಾಳಾದರೆ ತಂದೆಗೆ ಕೇಡು ಎಂದು ಯೋಚಿಸಿದ ಏಳು ಜನರೂ ಮಾರನೆಯ ದಿನ

ನಡುರಾತ್ರಿಗೆ ಮೂಡಲ ಕೆರೆಗೆ ಹೋದರು. ಬುಡುಬುಡುಕೆಯವನು ಸಾರಿದ್ದಂತೆ ಅಲ್ಲಿ ಒಂದು ಅರಳಿ ಸಸಿ ಹುಟ್ಟಿತ್ತು. ಏಳು ಜನರೂ ತಮ್ಮ ತಮ್ಮ ವಸ್ತ್ರಾಭರಣಗಳನ್ನು ತೆಗೆದಿಟ್ಟು ಕೆರೆಯಲ್ಲಿ ಸ್ನಾನ ಮಾಡಿದರು. ಅನಂತರ ಬೆತ್ತಲೆಯಾಗಿಯೇ ಅರಳಿ ಸಸಿಗೆ ಪೂಜೆ ಮಾಡಲು ಆರಂಭಿಸಿದರು. ಅವರು ಪೂಜೆ ಮಾಡುತ್ತಿದ್ದಂತೆಯೇ ಅರಳಿ ಸಸಿ ದೊಡ್ಡದಾಗುತ್ತಾ ಬಂತು. ಏಳು ಜನರೂ ಕೈಕಟ್ಟೆ ಕಟ್ಟಿ ತಬ್ಬಲು ಮುಂದಾದರು. ಅದು ತಬ್ಬಲಾಗದಷ್ಟು ದೊಡ್ಡದಾಗಿ ಬೆಳೆದು ಅರಳಿ ಮರವಾಯಿತು. ಅವರು ಕಷ್ಟಪಟ್ಟು ತಬ್ಬುತ್ತಿದ್ದಂತೆ ಅರಳಿ ಮರವೇ ಶ್ರೀಕೃಷ್ಣನಾಗಿ ರೂಪತಾಳಿದನು. ಶ್ರೀಕೃಷ್ಣ ಪ್ರತ್ಯಕ್ಷನಾಗಿ ನಕ್ಕ. ಏಳು ಜನ ತರುಣಿಯರಿಗೂ ಒಮ್ಮೆಲೇ ನಾಚಿಕೆ ಭಯ ಮಾನಭಂಗ ಎಲ್ಲವೂ ಆಯಿತು. ಮಾನಭಂಗವಾದಮೇಲೆ ಇನ್ನು ತ್ರಿಪುರಾಪುರಿ ಪಟ್ಟಣಕ್ಕೆ ಹಿಂದಿರುಗುವುದು ಸರಿಯಲ್ಲ ಎಂದು ಭಾವಿಸಿದ ಆ ಏಳು ಜನರೂ ಭೂಲೋಕಕ್ಕೆ ಬಂದು ನೆಲೆಸಿದರು. ಅವರಲ್ಲಿ ಹಿರಿಯಳಾದ ಚೌಡಮ್ಮ ಉಜ್ಜನಿಗೆ ಬಂದು ನೆಲೆಸಿದಳು. ಆಗ ಈಗಿನ ಉಜ್ಜನಿ ಸ್ಥಳ ಬರೀ ಕಾಡಾಗಿತ್ತು. ಆ ಕಾಡಿನ ಒಂದು ಮೂಲೆಯಲ್ಲಿ ಈ ಚೌಡಮ್ಮ ಯಾರಿಗೂ ಗೋಚರಳಾಗದಂತೆ ನೆಲಸಿದಳು. ಉಳಿದ ಆರು ಜನ ಚೌಡಮ್ಮಗಳು ಕ್ರಮವಾಗಿ ನಿಡಸಾಲೆ, ಯಮ್ಮನಹಳ್ಳಿ, ಕಸ್ಸುಗೆರೆ, ಬೇಗೂರು, ಕೊಳ್ಳೆಗಾಲ ಮತ್ತು ಹೊನ್ನಗಾನಹಳ್ಳಿಯಲ್ಲಿ ನೆಲಸಿದರು ಎಂದು ಹೇಳುತ್ತಾರೆ.

ಈ ಕತೆ ನಿಜವೆಂದೇ ಆ ಕ್ಷೇತ್ರದ ಜನರಲ್ಲಿರುವ ನಂಬಿಕೆಯಾಗಿದೆ. ಶ್ರೀಕೃಷ್ಣನೇ ಚೌಡಮ್ಮನ ಗಂಡ ಎಂದು ನಮ್ಮ ಜನರು ಹಾಡು ಕಟ್ಟಿದ್ದಾರೆ.

ಮಗನೆಸರು ಮಲ್ಲೀಗೆ ತಾಯಿ ಚೌಡಮ್ಮ

ಸತಿ ಪುರುಸರೆಸರು ಕ್ರಿಷ್ಣಾರು.

ಅಲ್ಲದೆ, ಚೌಡಮ್ಮ ತ್ರಿಪುರಾಪುರಿಯವಳು ಎಂದು ಹೇಳುವುದನ್ನು ಈ ಕೆಳಗಿನ ಹಾಡಿನಲ್ಲಿ ಗಮನಿಸಬಹುದು.

ಅಪರಂಜಪರಂಜಿ ತ್ರಿಪುರದ ಸುಣ್ಣ ಕಾಯಿ

ಮಕರಂಬೆ ಕುದುರೆ ಬಲಗೈಲಿ | ಯಿಡಕೊಂಡು

ತ್ರಿಪುರಾಕೆ ದಂಡ ತಿರುಗಾಳ

ಚೌಡಮ್ಮ ಕುದುರೆ ಏರಿ ದಂಡಿನ ಸಮೇತ ತನ್ನ ತಂದೆಯ ಪಟ್ಟಣಕ್ಕೆ ಹೋಗಿ ಬರುತ್ತಾಳಂತೆ!

ಇಲ್ಲಿ ಬರುವ ಅರಳಿಸಸಿ ಲೈಂಗಿಕ ಸಂಕೇತ. ಇದು ಚೌಡಮ್ಮನಿಗೂ ಶ್ರೀಕೃಷ್ಣನಿಗೂ ಇರುವ ಲೈಂಗಿಕ ಸಂಬಂಧವನ್ನು ಸೂಚಿಸಬಹುದೇ?

**ಚೌಡಮ್ಮನ ಪ್ರತಿಷ್ಠಾಪನೆ ಮತ್ತು ಉಜ್ಜನಿಯ ನಿರ್ಮಾಣದ ಕತೆ :**

ಉಜ್ಜೈನಿಯ ರಾಜನಾದ ಭಟ್ಟಿ ವಿಕ್ರಮಾದಿತ್ಯನು ತನ್ನ ಆಪ್ತಮಂತ್ರಿ ಭಟ್ಟಿಯ ಜೊತೆಯಲ್ಲಿ ಬೇಟೆಗಾಗಿ ಮತ್ತು ತನ್ನ ಪ್ರಜೆಗಳ ಕ್ಷೇಮವಿಚಾರಕ್ಕಾಗಿ ದಕ್ಷಿಣಾಭಿಮುಖನಾಗಿ ಬರುತ್ತಿದ್ದ, ಒಂದು ದಟ್ಟವಾದ ಕಾಡಿನಲ್ಲಿ ಬೇಟೆ ಮಾಡುತ್ತಾ ಬರುತ್ತಿರುವಾಗ ಒಂದು ಆಶ್ಚರ್ಯಕರವಾದ ಘಟನೆ ನಡೆಯಿತು. 'ಒಂದು ಸ್ಥಳದಲ್ಲಿ ರಾಜನ ಬೇಟೆನಾಯಿಗಳು ಮೊಲವನ್ನು ಕಂಡು ಮುನ್ನುಗ್ಗಿದವು. ಆದರೆ ತಕ್ಷಣವೇ ಗಾಬರಿಗೊಂಡ ನಾಯಿಗಳು ಹಿಮ್ಮುಖವಾಗಿ ಓಡತೊಡಗಿದವು. ಆಶ್ಚರ್ಯಗೊಂಡ ರಾಜಪರಿವಾರದವರು ಓಡಿಹೋಗಿ ನೋಡುವಲ್ಲಿ ಮೊಲಗಳೇ ನಾಯಿಯನ್ನು ಬೆನ್ನಟ್ಟಿ ಹೋಗುತ್ತಿರುವುದು ಕಾಣಿಸಿತು! ಸೇವಕರು ಭಯಾಶ್ಚರ್ಯ ಗಳಿಂದ ರಾಜನಲ್ಲಿ ಈ ವಿಚಾರವನ್ನು ಭಿನ್ನವಿಸಿದರು. ಆಗ ರಾಜನೂ ಮಂತ್ರಿಯೂ ಅವುಗಳನ್ನು ಹಿಂಬಾಲಿಸಿದರು. ಒಂದು ಸ್ಥಳದಲ್ಲಿ ಮೊಲಗಳು ನಾಯಿಯನ್ನು ಸಿಗಿದು ತೊಡೆಯಮೇಲೆ ಇಟ್ಟುಕೊಂಡು ಕುಳಿತಿದ್ದವು. ರಾಜನಿಗೆ ಆಶ್ಚರ್ಯವಾಯಿತು. ಆ ಭೂಮಿಯನ್ನು 'ಗಂಡುಭೂಮಿ' ಎಂದು ಕರೆದ. ರಾಜನಿಗೆ ಆ ಸ್ಥಳದ ಮಹಿಮೆ ಏನಿರಬಹುದೆಂದು ತಿಳಿಯುವ ಕುತೂಹಲ ಮೂಡಿತು. ಸುತ್ತಮುತ್ತಲ ಸ್ಥಳವನ್ನೆಲ್ಲಾ ಸುತ್ತಾಡಿ ನೋಡಿದ, ಏನೂ ತಿಳಿಯಲಿಲ್ಲ. ಕೊನೆಗೆ ತನ್ನ ವಶವಾಗಿದ್ದ ಬೇತಾಳವನ್ನು ಕೇಳಿದ. ಆಗ ಬೇತಾಳ ಹೇಳುತ್ತದೆ : ತ್ರಿಪುರಾಪುರಿ ಪಟ್ಟಣದ ರಾಜನ ಮಗಳೂ ಶ್ರೀಕೃಷ್ಣನ ಮಡದಿಯೂ ಮಹಿಷಾಸುರನನ್ನು ಮರ್ಧಿಸಿದ ಚಾಮುಂಡಿಯೂ ಆದ ಚೌಡಮ್ಮ ಇಲ್ಲಿ ನೆಲೆಗೊಂಡಿದ್ದಾಳೆ. ಅವಳ ಪ್ರಭಾವದಿಂದ ಈ ರೀತಿ ಆಗುತ್ತಿದೆ' ಎಂದು ಚೌಡಮ್ಮನ ಕತೆಯಲ್ಲವನ್ನೂ ವಿವರಿಸುತ್ತದೆ. 'ಚಾಮುಂಡಿಯೇ ಚೌಡಮ್ಮ, ಈಗ ಕಾಳಿಯ ರೂಪ ಧರಿಸಿ ಇಲ್ಲಿ ನೆಲೆಗೊಂಡಿದ್ದಾಳೆ" ಎಂದು ಕೇಳಿದ ನಂತರ ರಾಜನಿಗೆ ಚೌಡಮ್ಮನಲ್ಲಿ ಭಯಭಕ್ತಿ ಹುಟ್ಟುತ್ತದೆ. ಮಂತ್ರಿ ಭಟ್ಟಿಯ ಆದೇಶದಂತೆ ಒಂದು ಮಂಟಪವನ್ನು ಕಟ್ಟಿಸಿ ಅಲ್ಲಿ ಕಾಳಿಯ ರೂಪದ ಚೌಡಮ್ಮನ ಒಂದು ಪ್ರತಿಮೆಯನ್ನು ನಿರ್ಮಿಸುತ್ತಾನೆ. ಕೆಲವು ದಿನ ಚೌಡಮ್ಮನನ್ನು ಪೂಜಿಸುತ್ತಾ ಇದ್ದು, ಅಲ್ಲಿ ಇದ್ದ ಜನರನ್ನೆಲ್ಲ ಒಟ್ಟುಗೂಡಿಸಿ ಒಂದು

ಪಟ್ಟಣವನ್ನು ಕಟ್ಟುತ್ತಾನೆ. ಆ ಪಟ್ಟಣಕ್ಕೆ ಸುತ್ತಲೂ ಕೋಟೆಯನ್ನು ಕಟ್ಟಿಸಿ ತನ್ನ ರಾಜಧಾನಿ ಉಜ್ಜೈನಿಯ ಹೆಸರನ್ನೇ ಆ ಹೊಸಪಟ್ಟಣಕ್ಕೆ ಇಡುತ್ತಾನೆ. ನಂತರ ಒಂದು ಶಾಸನವನ್ನು ಬರೆಸಿ ಒಬ್ಬ ಸಾಮಂತನನ್ನು ನೇಮಿಸಿ ತನ್ನ ರಾಜಧಾನಿಗೆ ಹಿಂದಿರುಗುತ್ತಾನೆ. ಅಲ್ಲಿಯೂ ಚೌಡಮ್ಮನ ರೂಪದ ಕಾಳಿಕಾ ದೇವಸ್ತಾನ ಕಟ್ಟಿಸುತ್ತಾನೆ. ತಾನು ಸಾಯುವವರೆಗೆ ಚೌಡಮ್ಮನನ್ನು ಧ್ಯಾನಿಸುತ್ತಾನೆ. ಇದರಿಂದ ಅವನಿಗೆ ಒಳ್ಳೆಯ ಸಂತಾನ, ಶ್ರೇಯಸ್ಸು ದೊರೆಯುತ್ತದೆ.

ಉಜ್ಜನಿಯನ್ನು ಆಳಿದವನು ಯಾರು? ಎಂದು ನಮ್ಮ ಊರಿನಲ್ಲಿ ಯಾರನ್ನು ಕೇಳಿದರೂ ಅವರು ಮರುಕ್ಷಣದಲ್ಲಿಯೇ 'ಇಕ್ರಮರಾಜ' ಎಂದು ಹೇಳಿಬಿಡುತ್ತಾರೆ. ಏಕೆಂದರೆ ಈ ನಂಬಿಕೆ ನಮ್ಮ ಜನರಲ್ಲಿ ಅಷ್ಟು ಗಾಢವಾಗಿದೆ. ತಮ್ಮ ಹಾಡಿನ ಮೂಲಕವೂ ಉಜ್ಜನಿ ವಿಕ್ರಮನ ಪಟ್ಟಣ ಎಂದು ಹೇಳುತ್ತಾರೆ.

ಏರೀಯ ಕೆಳಗೆ ಯಾಲಕ್ಕಿ ತೂರೋಳೆ

ಅರಳಾಕಿದೋಲೆ ಕಿವಿಯೋಲೆ | ಚೌಡಮ್ಮ

ಇಸ್ತ್ರೆ ನಿನ್ನೂರ ಯೆಸರೇಳೆ.

ನನ್ನೂರ ಯೆಸರ ನಾನೇನ ಯೇಳಾನೆ

ಇಕ್ರಮರಾಜ ಆಳ್ವ | ಪಟ್ಟಣ

ಅಸ್ಸುಲ್ಲಾಸವೇನೆ ನನ್ನೂರು

ವಿಕ್ರಮರಾಜ ಆಳುವ ಪಟ್ಟಣ ಎಂದರೆ ಅಷ್ಟು ಸುಲಭವೇ ಎಂದು ಚೌಡಮ್ಮನ ಬಾಯಿಂದಲೇ ನಮ್ಮ ಜನರು ಹಾಡಿಸಿದ್ದಾರೆ!

ಚಾಮುಂಡಿಯೇ ಚೌಡಮ್ಮ ಎಂದೂ ಇಲ್ಲಿನ ಹಲವರ ನಂಬಿಕೆ. ಕಾರಣ ಕೇಳಿದರೆ ಗರ್ಭಗುಡಿಯಲ್ಲಿರುವ ಚೌಡಮ್ಮನ ಕೈಯಲ್ಲಿ ಮತ್ತು ಕಾಲಡಿಯಲ್ಲಿರುವ ರಾಕ್ಷಸರ ರುಂಡಗಳ ಉದಾಹರಣೆಯನ್ನು ಹೇಳುತ್ತಾರೆ. ರಾಕ್ಷಸನನ್ನು ಕೊಂದವಳು ಇವಳೇ ಎಂದು ವಾದಿಸುತ್ತಾರೆ. ಈ ಹಿನ್ನೆಲೆಯಲ್ಲಿ ಚೌಡಿ ಎನ್ನುವ ಪದವೇ ಚಾಮುಂಡಿಯಾಗಿದೆ ಎಂದೂ ಹೇಳಬಹುದು. ಪದಪ್ರಯೋಗದಲ್ಲಿ ಚೌಡಿ-ಚಾಮುಂಡಿಯರಿಗೆ ತುಂಬ ಸಾಮ್ಯವಿರುವುದು ಕಾಣುತ್ತದೆ.

**ಚೌಡಿ-ಚವುಡಿ-ಚಾವುಡಿ-ಚಾವುಂಡಿ-ಚಾಮುಂಡಿ**

ವಿಕ್ರಮನ ಜೊತೆಯಲ್ಲಿದ್ದ ಬೇತಾಳವು ನೇತುಹಾಕಿಕೊಳ್ಳುತ್ತಿದ್ದ ಮರ ಎಂದು ಒಂದು ಮರವನ್ನು ಹೆಸರಿಸುತ್ತಾರೆ. ಈ ಮರ ಚೌಡಮ್ಮನ ಗುಡಿಯ ಹಿಂಭಾಗದಲ್ಲಿದೆ. ಈ ಮರ ಒಂದೊಂದು ಕಡೆ ಬಳ್ಳಿಯಂತೆ ಹಬ್ಬಿದೆ. ಮತ್ತೊಂದೊಂದು ಕಡೆ ನೇರವಾದ ದಪ್ಪನಾದ ರೆಂಬೆಗಳನ್ನೂ ಹೊಂದಿದೆ. ಸಾಕಷ್ಟು ಎತ್ತರವಾಗಿಯೂ ಇದೆ. ಹೀಗಿರಲು ಕಾರಣ ಮರದ ಜೊತೆಯಲ್ಲಿಯೇ ಯಾವುದೋ ವಿಧವಾದ ಒಂದು ದಪ್ಪಬಳ್ಳಿ ಹೆಣೆದುಕೊಂಡು ಹುಟ್ಟಿದೆ. ಈ ಎರಡು ಜಾತಿಯ ಸಸ್ಯಗಳೂ ಆ ಸುತ್ತಮುತ್ತಲ ಪ್ರದೇಶದಲ್ಲಿ ಈಗ ಇಲ್ಲ. ಈ ಮರ



ಸ್ವಲ್ಪ ವಿಚಿತ್ರರೀತಿಯಲ್ಲೂ ಹೆಸರು ಗೊತ್ತಿಲ್ಲದೆಯೂ ಇರುವುದರಿಂದ 'ಹೆಸರಿಲ್ಲದ ಮರ' ಎಂದೇ ನಾಮಕರಣ ಮಾಡಿದ್ದಾರೆ! ಈ ಮರ "ನಾವು ಕಂಡಾಗಿಂದೂ ಇಂಗೇ ಅದೆ ಕಣ್ ಮಗಾ" ಅಂತ ನಮ್ಮ ತಾತಂದಿರೂ ಹೇಳುತ್ತಾರೆ.

ಉತ್ತರ ಪ್ರದೇಶಕ್ಕೆ ಸಂಬಂಧಪಟ್ಟ ಒಂದು ಜಾನಪದ ಗ್ರಂಥದಲ್ಲಿ ಒಂದು ಅಂಶ ಕಂಡು ಬರುತ್ತದೆ. ಅದೆಂದರೆ, "ಉತ್ತರ ಭಾರತದ ಜನರ ನಂಬಿಕೆಯ ಪ್ರಕಾರ, ಕಾಳಿಯ ವರದಿಂದ ವಿಕ್ರಮಾದಿತ್ಯನ ಅಧಿಕಾರವಧಿ ಇಮ್ಮಡಿಯಾಯಿತಂತೆ. ಇದು ಅಲ್ಲಿನ ಜನರ ಗಾಢವಾದ ನಂಬಿಕೆಯಾಗಿದೆ. ಈ ಬಗ್ಗೆ ಹಲವಾರು ಕತೆಗಳೂ ಇವೆ." ನಮ್ಮ ಕ್ಷೇತ್ರದ ಜನರು, ವಿಕ್ರಮನು ಚೌಡಮ್ಮನನ್ನು ಕಾಳಿಯ ರೂಪದಿಂದ ಆರಾಧಿಸಿದ ಎಂದು ಹೇಳುವುದಕ್ಕೂ, ಅಲ್ಲಿಯವರು ಮೇಲಿನಂತೆ ನಂಬಿಕೆ ಇಟ್ಟುಕೊಂಡಿರುವುದಕ್ಕೂ ಸಾಮ್ಯವಿದೆ. ಆದರೆ ಕೇವಲ ಇಂತಹ ಕಟ್ಟುಕತೆಗಳಿಂದ ನಾವು ನಿರ್ದಿಷ್ಟವಾಗಿ ಯಾವ ತೀರ್ಮಾನಕ್ಕೂ ಬರಲಾಗುವುದಿಲ್ಲ. ಆದ್ದರಿಂದ ಉಜ್ಜನಿಯನ್ನು ಯಾರು ಕಟ್ಟಿದರು, ಚೌಡಮ್ಮನನ್ನು ಯಾರು ಪ್ರತಿಷ್ಠಾಪಿಸಿದರು ಎಂಬ ವಿಷಯ ನಿಗೂಢವಾದುದಾಗಿದೆ.

ಇನ್ನು ವಿಕ್ರಮರಾಜ ನೆಡಿಸಿದ ಎನ್ನುವ ಶಾಸನದ ಬಗ್ಗೆ ವಿಚಾರಮಾಡಿದರೆ, ಈ ಕಲ್ಪನೆಯ ಕತಗಳ ರೂಪ ಮತ್ತಷ್ಟು ಗೊತ್ತಾಗುತ್ತದೆ. ಉಜ್ಜನಿಯ ಊರಮಧ್ಯೆ ಇರುವ ಕಲ್ಲು, ಇದನ್ನು ಒಂದು ಕಲ್ಲು ಕಟ್ಟೆ ಮಾಡಿ ಅದರ ಮೇಲೆ ನೆಟ್ಟಿದ್ದಾರೆ. ಇದೇ ವಿಕ್ರಮರಾಜ ಬರೆಸಿದ ಶಾಸನ ಎಂದೂ ಅದರಲ್ಲಿ ಹೆಸರಿಲ್ಲದ ಮರದ' ನಿಜವಾದ ಹೆಸರು ಇದೆಯೆಂದೂ, ಈ ಶಾಸನವನ್ನು ಓದಿದವರಿಗೆ ತಲೆ ಸಿಡಿದು ಹನ್ನೆರಡು ಹೋಳಾಗುತ್ತದೆ ಎಂದೂ ಹಲವಾರು ಕತೆಗಳನ್ನು ಹೇಳುತ್ತಾರೆ. ವಾಸ್ತವವಾಗಿ ಈ ಶಾಸನ ಊರಿನ ಕೆರೆಯನ್ನು ಕಟ್ಟಿಸಿದ ವಿಚಾರದ್ದು. ಇದು ಸುಮಾರು

ಆರುನೂರು ವರ್ಷಗಳ ಹಿಂದಿನ ಶಾಸನವಾದ್ದರಿಂದ ಇತ್ತೀಚಿನ ಜನಗಳಿಗೆ ಅದು ಗೊತ್ತಿಲ್ಲದೆ, ತಮ್ಮ ಕಲ್ಪನೆಗೆ ಬಂದ ಕತೆಗಳನ್ನು ಅದರ ಮೇಲೆ ಕಟ್ಟಿದರು ಅಷ್ಟೆ.

**ಚೌಡಮ್ಮನ ಹಬ್ಬವನ್ನು ಪ್ರಾರಂಭಮಾಡಿದ ಮತ್ತು ಉಜ್ಜನಿಯ ಕೆರೆಗಳನ್ನು ಕಟ್ಟಿಸಿದ ಕತೆ**

ಚಿಕ್ಕನಾರಸೀಗೌಡ ದೊಡ್ಡನಾರಸೀಗೌಡ ಎನ್ನುವ ಇಬ್ಬರು ಅಣ್ಣತಮ್ಮಂದಿರು ವಿಜಯನಗರದ ರೈತರು.** ಅಲ್ಲಿ ಮಳೆಬೆಳೆ ಸರಿಯಾಗಿ ಆಗದೆ ಅವರು ಅಮೃತೂರು** ಬಯಲಿಗೆ ವಲಸೆ ಬರುತ್ತಾರೆ. ಅಮೃತೂರಿನಲ್ಲಿ ನೆಲೆಗೊಂಡು ನಿಂತಮೇಲೆ ದೊಡ್ಡದೊಂದು ಕೆರೆಯನ್ನು ಕಟ್ಟಿಸಲು ಪ್ರಾರಂಭಿಸುತ್ತಾರೆ. ಆದರೆ ಎಷ್ಟು ಭದ್ರವಾಗಿ ಕಟ್ಟಿಸಿದರೂ ಅದು ನಿಲ್ಲದೆ ಮಧ್ಯದಲ್ಲಿಯೇ ಒಡೆದುಹೋಗುತ್ತದೆ. ಅವರು ಕುಣಿಗಲ್‌ಗೆ ಹೋಗಿ ಶಾಸ್ತ್ರ ಕೇಳುತ್ತಾರೆ. ದೊಡ್ಡನಾರಸೀಗೌಡನ ಹಿರಿಯಸೊಸೆಯನ್ನು ಕೆರೆಗೆ ಆಹುತಿ ಕೊಟ್ಟರೆ ಕೆರೆ ನಿಲ್ಲುತ್ತದೆಂದೂ

---

* A sociological study of folklore, page 38-39 Dr. s.p. Arya.

** ಇದು ಯಾವ ವಿಜಯನಗರವಿರಬಹುದು?

*** ಕುಣಿಗಲ್ ತಾಲ್ಲೂಕಿನಲ್ಲಿರುವ ಒಂದು ದೊಡ್ಡ ಊರು



ಇಲ್ಲದಿದ್ದರೆ ಅದು ನಿಲ್ಲುವುದಿಲ್ಲವೆಂದೂ ಶಾಸ್ತ್ರದಲ್ಲಿ ಹುಟ್ಟುತ್ತದೆ. ಇದರಿಂದ ದುಃಖಗೊಂಡು ಗೌಡ ಒಪ್ಪದಿದ್ದರೂ ಪತಿವ್ರತೆಯಾದ ಗೌಡನ ಸೊಸೆ ಹೊನ್ನಮ್ಮ ಕೆರೆಗೆ ಬಲಿಯಾಗಲು ಒಪ್ಪಿಕೊಳ್ಳುತ್ತಾಳೆ. ನಾಲ್ಕು ಜನರ ಹಿತಕ್ಕಾಗಿ ತಾನು ಸತ್ತರೇನು? ಎಂದು ಮಾವನನ್ನು ಸಮಾಧಾನಗೊಳಿಸಿ, ರಾತ್ರಿಯಲ್ಲಿ ಕೆರೆಗೆ ಹೋಗಿ ಆಹುತಿಯಾಗುತ್ತಾಳೆ. ಕೆರೆ ಚೆನ್ನಾಗಿ ಕಟ್ಟುತ್ತದೆ. ಆದರೆ ಅವಳು ಆಹುತಿಯಾದ ಮೇಲೂ ತೂಬಿನ ಕಲ್ಲಿನ ಮೇಲೆ ನಿಂತು 'ವದುವಿನ ವನ್ನಾ' ಎಂದು ಕೂಗಿದರೆ 'ಓ' ಎಂದು ಮಾತನಾಡುತ್ತಿದ್ದಳು. ದೊಡ್ಡನಾರಸೀಗೌಡ ಚಿಕ್ಕನಾರಸೀಗೌಡರೂ ಮಾತನಾಡಿಸಿ ಸಂತೋಷಪಡುತ್ತಿದ್ದರು. ಹೀಗೆಯೇ ಊರಜನರೆಲ್ಲ, ದಾರಿಯಲ್ಲಿ ಹೋಗಿ ಬರುವವರೆಲ್ಲ ಕೂಗಿದರೂ 'ಓ' ಎಂದು ಮಾತನಾಡುತ್ತಿದ್ದಳು. ಸ್ವಲ್ಪಕಾಲ ಹೀಗೇ ಕಳೆಯಿತು. ಯಾರೋ ಒಬ್ಬಳು ತಡೆಯಲಾರದವಳು “ಮೊನ್ನವ್ವಾ ಇನ್ನೂ ನಿನ್ ಸೊಲ್ ಬೆಲ್ಬಾಗ್ಲಿಲ್ವೇ' ಎಂದು ಹಿಯ್ಯಾಳಿಸುತ್ತಾಳೆ. ಅಲ್ಲಿಂದೀಚೆಗೆ ಹೊನ್ನವ್ವ 'ಓ' ಎನ್ನಲಿಲ್ಲ. ಹೊನ್ನವ್ವ ಮಾತನಾಡದಿದ್ದ ಮೇಲೆ ನಾವು ಇನ್ನು ಈ ಊರಿನಲ್ಲಿರುವುದೇ ಸರಿಯಲ್ಲ ಎಂದುಕೊಂಡ ಗೌಡರು ಅಮೃತೂರು ಬಿಟ್ಟು ಪೂರ್ವಾಭಿಮುಖವಾಗಿ ಹೊರಟರು. ಹೀಗೇ ಬರುತ್ತಿರಲು ಸಂಜೆಯಾಯಿತು, ಒಂದು ಕಡೆ ಗಾಡಿಬಿಟ್ಟು ಅಡುಗೆ

ಮಾಡಲು ಪ್ರಾರಂಭಿಸಿದರು. ಅವರು ಉಜ್ಜನಿಯ ಸಮೀಪಕ್ಕೆ ಬಂದಿದ್ದರು. ಆದರೆ ಮುಂದೆ ಉಜ್ಜನಿ ಇದೆ ಎಂದು ಅವರಿಗೆ ಗೊತ್ತಿರಲಿಲ್ಲ. ಅವರು ಗಾಡಿ ಬಿಟ್ಟ ಸ್ಥಳದಲ್ಲಿ ಮಣ್ಣು ಮುಟ್ಟಿದರೂ ಹೊನ್ನಾಗುತ್ತಿತ್ತು. ಇದರ ಮಹಿಮೆಯೇನೆಂದು ಗೌಡರು ಆಶ್ಚರ್ಯದಿಂದ ಯೋಚಿಸುತ್ತಿದ್ದರು. ತ್ರಿಪುರಾಪುರಿ ರಾಜನ ಮಗಳಾದ 'ದೇವಗನ್ನೆ ಚೌಡಮ್ಮ' ವಿಕ್ರಮರಾಜನಿಂದ ಪ್ರತಿಷ್ಠಾಪನೆಯಾಗಿ ಆ ಸ್ಥಳದಲ್ಲಿ ನೆಲೆಯೂರಿರುವುದು ಅವರಿಗೆ ಅಂದುರಾತ್ರಿ ಕನಸಿನ ಮೂಲಕ ಗೋಚರವಾಯಿತು.



ಚೌಡಮ್ಮನೂ ಅವರ ಕನಸಿನಲ್ಲಿ ಕಾಣಿಸಿಕೊಂಡಳು. ಆಗ ಈ ಭಕ್ತರು ಚೌಡಮ್ಮನ ಮರಹೋದರು. ಉಜ್ಜನಿಯೇ ತಾವು ನೆಲೆಸಲು ತಕ್ಕಸ್ಥಳವೆಂದು ಭಾವಿಸಿ ಅಲ್ಲಿಯೇ ನೆಲೆನಿಂತರು. 'ವರ್ಷಕ್ಕೆ ಒಂದು ಸಲ ನಿನ್ನ ಹಬ್ಬವನ್ನು ನಡೆಸುತ್ತೇವೆ' ಎಂದು ಚೌಡಮ್ಮನಿಗೆ ಮಾತು ಕೊಟ್ಟರು. ಚೌಡಮ್ಮನ ಒಕ್ಕಲು ಮಕ್ಕಳಾಗಿ ಬದುಕಿದರು. ಬೇಕಾದಷ್ಟು ಶ್ರೀಮಂತರಾದರು. ನಂತರ ಊರಿನ ಹಿತಕ್ಕಾಗಿ ದೊಡ್ಡನಾರಸೀಗೌಡ ದೊಡ್ಡಕೆರೆಯನ್ನೂ, ಚಿಕ್ಕನಾರಸೀಗೌಡ ಚಿಕ್ಕ ಕರೆಯನ್ನೂ ಕಟ್ಟಿಸಿದರು.

ಉಜ್ಜನಿಯಲ್ಲಿ ಎರಡು ಕೆರೆಗಳೇನೋ ಇವೆ. ಆದರೆ ಶಾಸನದ ಪ್ರಕಾರ ಒಂದು ಕೆರೆ 'ರಾಮಗ ಉಡನ ಮಗ ಬಯಿಚರಸ, ಇವನ ಮಗ ಚೇಮರಸ' ನಿಂದ ಕಟ್ಟಲ್ಪಡುತ್ತದೆ. ಈ ಕೆರೆಗೆ ಭೂಮಿಯನ್ನು ವಿಜಯನಗರದ ಅರಸರು ಬಿಟ್ಟು ಕೊಡುತ್ತಾರೆ. ಈ ಕೆರೆಯ ರಕ್ಷಣೆಗೆ ಬದ್ಧರಾಗಿ ರಾಮಗ ಉಡ, ಮುತ್ತುಗ ಉಡ, ಮಸಣಗ ಉಡ ಮುಂತಾದವರು ಸಹಿ ಮಾಡುತ್ತಾರೆ. ಆದರೆ ಚಿಕ್ಕನಾರಸಿಗೌಡನ ವಿಷಯವಾಗಲೀ, ದೊಡ್ಡನಾರಸೀಗೌಡನ ವಿಷಯವಾಗಲೀ ಸ್ವಲ್ಪವೂ ಇದರಲ್ಲಿ ಬರುವುದಿಲ್ಲ.

ನಿಜವಿಚಾರ ಇಲ್ಲಿನ ಜನರಿಗೆ ಗೊತ್ತಿಲ್ಲದ ಕಾರಣ ನಾರಸೀಗೌಡರುಗಳನ್ನು ಸ್ವತಹ ಸೃಷ್ಟಿಸಿಕೊಂಡು, ತಮ್ಮ ಕಲ್ಪನೆಯ ಎಳೆಯಲ್ಲಿ ಕತೆಯನ್ನು ಹೊಸೆದಿದ್ದಾರೆ. ಇದೆಲ್ಲ ಲಹರಿಯಾಗಿ ಉದ್ದೇಶಪೂರ್ವಕವಾಗಿ ಸಿದ್ಧವಾದದ್ದಲ್ಲ. ಅನೈಚ್ಛಿಕವಾಗಿ, ಲಹರಿ ಹೊರಹೊಮ್ಮಿದ್ದು. ನಡೆಯಿತೆಂದು ಹೇಳಲಾದ ಘಟನೆಗಳ ಸುತ್ತ ಹುಟ್ಟಿಕೊಳ್ಳುವ ಕಟ್ಟುಕತೆಗಳೇ ಐತಿಹ್ಯಗಳಾಗುತ್ತವೆ."

**ಚೌಡಮ್ಮನ ಹಬ್ಬ**

ಹಬ್ಬ ಎಂದರೆ ಎಷ್ಟು ಸಂತೋಷ ಹಳ್ಳಿಯವರಿಗೆ? ಅದನ್ನು ಅನುಭವಿಸಬೇಕಾದರೆ ಅವರ ಜೊತೆ ಬೆರೆತು ಹಾಡಿ ಕುಣಿದು ಉಂಡು ಸಂತೋಷಪಡಬೇಕು. ಆಗ ಹಬ್ಬವೆಂದರೆ ಎಷ್ಟು ಮಹತ್ವದ್ದು, ರಸಭರಿತವಾದದ್ದು ಸಂತಸದಿಂದ ಕೂಡಿದ್ದು ಎಂಬುದು ತಿಳಿಯುತ್ತದೆ.

'ಕಾಯಕವೇ ಕೈಲಾಸ' ಎಂಬ ಮಂತ್ರವನ್ನು ಪಟ್ಟಾಗಿ ಹಿಡಿದು ಹಗಲುರಾತ್ರಿ ದುಡಿದು, ದುಡಿಮೆಯಲ್ಲೇ ಸತ್ಯವನ್ನು ಕಾಣುವ, ಎಷ್ಟು ದುಡಿದರೂ ಬಡತನದಲ್ಲೇ ನೀಸುವ ನಮ್ಮ ಜನರಿಗೆ ಬಿಡುವೇ ಸಿಗುವುದಿಲ್ಲ. ಅವರಿಗೆ ಬಿಡುವು ಸಿಗಬೇಕಾದರೆ ಕಣಗಲಸ ಮುಗಿಯಬೇಕು. ಮುಂಗಾರು ಮಳೆ ಇನ್ನೂ ಪ್ರಾರಂಭವಾಗಿರಬಾರದು. ಆಗಲೇ ಅವರಿಗೆ ಒಂದಿಷ್ಟು ಬಿಡುವು. ಆ ಸಮಯದಲ್ಲಿಯೇ ಅವರು ಹೆಚ್ಚಾಗಿ ಹಬ್ಬಗಳನ್ನು ಮಾಡುವುದು.

ಬಿಡುವಿನ ಜೊತೆಗೆ, ಆ ಕಾಲ ಸುಗ್ಗಿಯಿಂದಲೂ ಕೂಡಿರುತ್ತದೆ. ಮಳೆ ಚೆನ್ನಾಗಿ ಆಗಿದ್ದ

---

* ದೇ. ಜವರೇಗೌಡ - ಜನಪದ ಅಧ್ಯಯನ; ಪುಟ. ೧೫೯

ಪಕ್ಷದಲ್ಲಿ ಕಣಜದ ತುಂಬಾ ರಾಗಿ, ಬತ್ತ ತುಂಬಿರುತ್ತವೆ. ವಾಡೆತುಂಬಾ ಧಾನ್ಯಗಳು ತುಂಬಿರುತ್ತವೆ. ಯಾವ ಯೋಚನೆಯೂ ಇರುವುದಿಲ್ಲ. ಆದರೆ ಕೆಲವು ವರ್ಷ ಮಳೆ ಆಗದಿರುವುದೂ ಉಂಟು. ಆಗ ಅವರಿಗೆ ಸುಗ್ಗಿಯೂ ಒಂದೇ, ಇನ್ನೊಂದು ಕಾಲವೂ ಒಂದೆ. ಆದರೂ ತಾವು ನಡೆಸುವ ಸಂಪ್ರದಾಯದ ಹಬ್ಬಗಳನ್ನು ಮಾತ್ರ ಮಾಡದೆ ಇರುವುದಿಲ್ಲ. ಸಾಲವಾಗಲೀ ಸೋಲವಾಗಲೀ ಏನೇ ಕಷ್ಟವಾಗಲೀ ಮಾಡುತ್ತಾರೆ. ಹೊಟ್ಟೆ ತುಂಬಾ .ಉಣ್ಣದಿದ್ದರೂ ಹಬ್ಬದ ಮನರಂಜನೀಯ ಕಾರ್ಯಗಳಲ್ಲಿ ಭಾಗವಹಿಸಿ ಕುಣಿದು ಹಾಡಿ ತಮ್ಮ ಕಷ್ಟವನ್ನು ಮರೆಯಲು ಪ್ರಯತ್ನಿಸುತ್ತಾರೆ. ಇದು ಹೇಗೇ ಇರಲಿ, ಸುಗ್ಗಿಯ ಕಾಲ ಹಬ್ಬಕ್ಕೆ ಪ್ರಶಸ್ತವಾದ ಕಾಲ ಎಂದು ಮಾತ್ರ ಹೇಳಬಹುದು. ಇಂತಹ ಸುಗ್ಗಿಯ ಸಮಯವನ್ನೇ ನಮ್ಮ ಉಜ್ಜನೀ ಸುತ್ತಿನ ಜನರೂ ಉಪಯೋಗಿಸಿಕೊಂಡಿದ್ದಾರೆ.

ಸಾಮಾನ್ಯವಾಗಿ ಏಪ್ರಿಲ್ ತಿಂಗಳಿನಲ್ಲಿ ಯುಗಾದಿ ಕಳೆದ ನಂತರ ಚೌಡಮ್ಮನ ಹಬ್ಬ ನಡೆಯುತ್ತದೆ. ಯುಗಾದಿ ಕಳೆದ ಮರುದಿನವೇ ಊರ ಪಂಚಾಯಿತಿ ಕಟ್ಟೆಯಲ್ಲಿ ಏಳೂರ ಮುಖ್ಯಸ್ಥರು ಸಭೆ ಸೇರುತ್ತಾರೆ. ಹಬ್ಬ ಹೇಗೆ ನಡೆಯಬೇಕು, ಎಲ್ಲ ಊರಿನವರೂ ಪ್ರತಿಕೆಲಸದಲ್ಲಿ ಹೇಗೆ ಭಾಗವಹಿಸಬೇಕು, ಯಾವ ಸಹಕಾರತತ್ವವಿರಬೇಕು, ಯಾವ ಮನರಂಜನಾಕಾರ್ಯಗಳನ್ನು ನಡೆಸಬೇಕು, ಎಷ್ಟು ಕಡೆಯಿಂದ ಬೇರೆ ಪೂಜಾರಿಗಳನ್ನು ಕರೆಸಬೇಕು ಮತ್ತು ಯಾವ ಪಟ್ಟಣದಿಂದ ಪಲ್ಲಕ್ಕಿ ತಿದ್ದುವ ಕುಶಲಗಾರರನ್ನು ಕರೆಸಬೇಕು ಇತ್ಯಾದಿಯಾಗಿ ಮಾತುಕತೆಗಳು ನಡೆಯುತ್ತವೆ. ಈ ಮಾತುಕತೆಯಾದ ನಂತರ ಎಲ್ಲ ಹಳ್ಳಿಯವರೂ ವೀಳ್ಯವನ್ನು ತೆಗೆದುಕೊಂಡು ತಮ್ಮ ತಮ್ಮ ಹಳ್ಳಿಗಳಿಗೆ ಹಿಂದಿರುಗುತ್ತಾರೆ. ಎಲ್ಲರಿಗಿಂತ ಹೆಚ್ಚಿನ ಜವಾಬ್ದಾರಿಯೆಂದರೆ “ಉಜ್ಜನಿ'ಯವರದೇ. ತಕ್ಕಮಟ್ಟಿನ ಜವಾಬ್ದಾರಿಯೆಂದರೆ ಹಿತ್ತಲಪುರ ಮತ್ತು ಬೋರೇಗೌಡನ ಕೊಪ್ಪಲು ಗ್ರಾಮದವರದು. ಸಾಮಾನ್ಯ ಜವಾಬ್ದಾರಿಯೆಂದರೆ ನಿಡಸಾಲೆ, ದೇವಸಂದ್ರ, ಎಲೆಕಡಕಲು, ಕಾಚಳ್ಳಿ ಮತ್ತು ಕಾಡುಬೋರನ ಹಳ್ಳಿಯ ಜನಗಳದು. ಇಷ್ಟು ಹಳ್ಳಿಗಳಲ್ಲದೆ ಬೇಡರಹಳ್ಳಿ, ವಡ್ಡರಹಾಳು, ಹೊನ್ನಮಾಚನಹಳ್ಳಿ, ಬೆಣಚಕಲ್ಲು ಈ ಊರಿನವರು ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಆದರೆ ಸಂತೋಷದಲ್ಲಿ ಆಟ ಕೂಟಗಳಲ್ಲಿ ಎಲ್ಲರಿಗೂ ಸಮಪಾಲು. ಅವರು ಯಾವ ಊರಿನವರಾಗಿರಲಿ, ಯಾವ ಜಾತಿಯವರಾಗಿರಲಿ ಯಾವ ಬೇಧ ಭಾವವೂ ಇರುವುದಿಲ್ಲ. ಇದು ಇಲ್ಲಿನ ವೈಶಿಷ್ಟ್ಯ.

ಯುಗಾದಿ ಕಳೆದನಂತರ ಅಂದರೆ ಯುಗಾದಿ ಮಂಗಳವಾರದಿಂದ ಗುರುವಾರದೊಳಗೆ ಬಂದರೆ ಶುಕ್ರವಾರದ ದಿನ 'ಕಂಬ ಇಕ್ಕುತ್ತಾರೆ. ಶುಕ್ರವಾರದಿಂದ ಸೋಮವಾರದೊಳಗೆ ಯುಗಾದಿ ಬಂದರೆ ಮಂಗಳವಾರದ ದಿನ ಕಂಬ ಇಕ್ಕುತ್ತಾರೆ. ಶುಕ್ರವಾರ ಕಂಬವಿಕ್ಕಿದರೆ ಅದರ ಹನ್ನೆರಡನೇ ದಿನಕ್ಕೆ ಸರಿಯಾಗಿ ಮಂಗಳವಾರ ಕೊಂಡ ನಡೆಯುತ್ತದೆ. ಮಂಗಳವಾರದ ದಿನ ಕಂಬವಿಕ್ಕಿದರೆ ಅದರ ಹದಿನೈದು ದಿನಕ್ಕೆ ಸರಿಯಾಗಿ ಮಂಗಳವಾರವೇ ಕೊಂಡ ನಡೆಯುತ್ತದೆ. ಕೊಂಡ ಮಾತ್ರ ಮಂಗಳವಾರವೇ ನಡೆಯಬೇಕು.

ಕಂಬ ಇಕ್ಕುವುದಕ್ಕೆ ಮೊದಲೇ ಮೂರು ದಿನಗಳ ಮುನ್ನ ತೋಟಿ ಉಜ್ಜನಿಯಲ್ಲಿ ಸಾರುತ್ತಾನೆ. 'ಇನ್ ಮೂರ್‌ದಿನುಕ್ ಕಂಬ ಆಕ್ತದೆ, ಆಮ್ಯಾಲೆ ಉರಿವಂಗಿಲ್ಲ, ಸುಡುವಂಗಿಲ್ಲ, ಬಾಡ್ ಮಾಡಂಗಿಲ್ಲ. ಎಲ್ಲಾರೂ ನೆಮ್ನಲ್ ಇಳ್ಕೊಳ್ಳಿ, ತಪ್ಪುದ ದಂಡ ಕೊಡ್‌ಬೇಕಾಯ್ತುದೇ ಎಂದು.

ಕಂಬವಿಕ್ಕಿದ ಮೇಲೆ ಯಾವುದೇ ಘಾಟಿನ ಪದಾರ್ಥಗಳನ್ನು ಉರಿಯಬಾರದು, ರೊಟ್ಟಿಯನ್ನು ಸುಡಬಾರದು, ಮಾಂಸವನ್ನು ಮಾಡಬಾರದು. ಸೂತಕವೂ ಆಗುವ ಹಾಗಿಲ್ಲ. ಯಾರಾದರೂ ಸಾಯುವ ಸ್ಥಿತಿಯಲ್ಲಿದ್ದರೆ ಊರಾಚೆಗೆ ಸಾಗಿಸಿಬಿಡಬೇಕು. ಯಾರಿಗಾದರೂ ಹೆರಿಗೆ ಆಗುವ ಸಂದರ್ಭವಿದ್ದರೆ ಬೇರೆ ಊರಿಗೆ ಕಳುಹಿಸಿಕೊಡಬೇಕು. ಆಕಸ್ಮಿಕವಾಗಿಯಾದರೂ ಸತ್ತದ್ದು ಅಥವಾ ಹುಟ್ಟಿದ್ದು ಸಂಭವಿಸಿದರೆ ಅಂತಹವರು ಅವರ ಖರ್ಚಿನಲ್ಲಿ ಉಜ್ಜನಿಯಲ್ಲಿರುವ ಎಲ್ಲ ಗುಡಿಗಳ ಮುಂದೆಯೂ 'ಹೋಮ' ಮಾಡಿಸಿ ಪವಿತ್ರಗೊಳಿಸಬೇಕಾಗುತ್ತದೆ. ಈ ನಿಯಮಗಳನ್ನು ಕಂಬ ಹಾಕಿದಂದಿನಿಂದ ಹಿಡಿದು ಕೊಂಡ ಮುಗಿಯುವವರೆಗೆ ಪಾಲಿಸಬೇಕು.

'ಕಂಬ ಇಕ್ಕಿದ' ದಿನದಿಂದ ಹೆಬ್ಬಾರೆ ಕಣ್ಣು ಬಿಚ್ಚುವ' ದಿನದವರೆಗೆ ಸುಮಾರು ೧೯ ದಿನಗಳು ನಡೆಯುವ ಚೌಡಮ್ಮನ ಹಬ್ಬವನ್ನು ಈ ಕೆಳಕಂಡಂತೆ ವಿಂಗಡಿಸಬಹುದು :

೧) ಕಂಬ ಹಾಕುವುದು (ಇಕ್ಕುವುದು) ೨) ಕಂಬ ಇಕ್ಕಿದ ದಿನದಿಂದ ಆರತಿ ದಿನದವರೆಗೆ ಸುಮಾರು ಹನ್ನೊಂದು ಅಥವಾ ಹದಿಮೂರು ದಿನಗಳು ೩) ಆರತಿ ೪) ಅಗ್ನಿಕೊಂಡ ೫) ತೇರು ೬) ಉತ್ಸವ ೭) ಹೆಬ್ಬಾರೆ ಕಣ್ಣು ಬಿಚ್ಚುವುದು.

ಈ ಕಾರ್ಯಕ್ರಮಗಳು ನಡೆಯುವ ಸುಮಾರು ೧೭ ಅಥವಾ ೧೯ ದಿನಗಳಲ್ಲಿ ನಡೆಯುವ ಹಬ್ಬದಲ್ಲಿ ಆಚರಿಸುವ ನಿಯಮಗಳು, ನಂಬಿಕೆಗಳು, ಸಂಪ್ರದಾಯಗಳು ಮತ್ತು ಕಲೆಗಳು ಬಹಳ ವಿಶಿಷ್ಟವಾದವುಗಳಾಗಿವೆ. ಇವುಗಳನ್ನು ಈಗ ಒಂದೊಂದಾಗಿ ತಿಳಿಯೋಣ.

**ಕಂಬ ಇಕ್ಕುವುದು***

ಕಂಬ ಇಕ್ಕುವುದೆಂದರೆ ಹಬ್ಬ ಪ್ರಾರಂಭವಾಗುವ ಸಂಕೇತ. ಹಬ್ಬದಲ್ಲಿ ಏನೇನು ಕಾರ್ಯಕ್ರಮಗಳು ನಡೆಯಬೇಕೋ ಅವೆಲ್ಲವೂ ಅಂದು ಸಾಂಕೇತಿಕವಾಗಿ ನಡೆಯುತ್ತವೆ. ಆದ್ದರಿಂದ ಚೌಡಮ್ಮನ ಹಬ್ಬದಲ್ಲಿ ಈ ಕಂಬ ಇಕ್ಕುವ ದಿನವನ್ನೂ ಮುಖ್ಯವಾಗಿ ಪರಿಗಣಿಸಬೇಕಾಗಿದೆ. ಅಂದು ಪ್ರಾರಂಭವಾಗಿ ಕೊಂಡ ಮುಗಿಯುವವರೆಗೆ ಉಳಿಯುವ ಅನೇಕ ಸಂಪ್ರದಾಯಗಳು ಅಷ್ಟೇ ವಿಶಿಷ್ಟವಾದವುಗಳು. ಆ ಸಂಪ್ರದಾಯಗಳು ಹೀಗಿವೆ :

**ಹೊಲೆಯರಿಗೆ ಜನಿವಾರ (ಹೆಬ್ಬಾರೆ ಗುಡ್ಡರು)**

ಇದು ದೇಶದಲ್ಲೇ ವಿಶಿಷ್ಟವಾದ ಸಂಪ್ರದಾಯ, ಹೊಲೆಯರು ಜನಿವಾರ ಧರಿಸಿ ಬ್ರಾಹ್ಮಣರಾಗುವ ಅಪೂರ್ವ ಸನ್ನಿವೇಶ ಈ ಹಬ್ಬದಲ್ಲಿ ಬರುತ್ತದೆ. ನಿರ್ದಿಷ್ಟವಾಗಿ ನಿಯಮಿಸಿದ

---

* ಇದನ್ನು ಕಂಬ ಹಾಕುವುದು ಎಂದೂ ಹೇಳುತ್ತಾರೆ.



ಆರುಜನ ಹೊಲೆಯರು ಈ ಬದಲಾವಣೆಗೆ ಒಳಗಾಗುತ್ತಾರೆ. ಈ ಸಂಪ್ರದಾಯ ಜಾತೀಯತೆಗೆ ಒಂದು ಸವಾಲು ಎನ್ನಬಹುದು.

ಕಂಬ ಇಕ್ಕುವ ದಿನ ಬೆಳಗ್ಗೆ ಈ ಆರುಜನ ಹೊಲೆಯರೂ 'ಚವುರ' ಮಾಡಿಸಿಕೊಂಡು ಉಡುದಾರವನ್ನು ಕಿತ್ತುಹಾಕಿ ಸ್ನಾನ ಮಾಡುತ್ತಾರೆ. ನಂತರ ಅರಿಸಿನ ಸೀಗೇಕಾಯನ್ನು ಬಾಯಲ್ಲಿಟ್ಟು ನುಂಗುತ್ತಾರೆ. ಅರಿಸಿನ ಸೀಗೇಕಾಯನ್ನು ನುಂಗಿದರೆ ಇದುವರೆಗೆ ಇದ್ದ ಹೊಲಸಲ್ಲ ಕಳೆದು ಶುಚಿಯಾಗುತ್ತಾರೆ ಎಂಬ ನಂಬಿಕೆ ನಮ್ಮ ಜನರಲ್ಲಿದೆ. ಆಮೇಲೆ ಚೆನ್ನಾಗಿ ಸ್ನಾನಮಾಡಿ ಹೊಸ ಉಡುಪುಗಳನ್ನು ಧರಿಸಿ, ಬಾಯಿಗೆ ಬಟ್ಟೆ ಕಟ್ಟಿಕೊಳ್ಳುತ್ತಾರೆ. ಬಾಯಿಗೆ ಬಟ್ಟೆ ಕಟ್ಟಿಕೊಳ್ಳುವ ಕಾರಣವೆಂದರೆ ಹೆಚ್ಚು ಮಾತನಾಡದೆ ಮೌನವಾಗಿರಬೇಕೆಂಬ ನಿಯಮದ ಪಾಲನೆ ಮಾಡುವುದಕ್ಕಾಗಿ, ನಂತರ ತಲೆಗೆ ಪೇಟವನ್ನು ಕಟ್ಟಿಕೊಳ್ಳುತ್ತಾರೆ. ಹೀಗೆ ಇವರು ಶುಚಿರ್ಭೂತರಾಗುವುದು ಊರ ಒಳಗೆ ಇರುವ ಹೆಬ್ಬಾರಮ್ಮನ ಗುಡಿಯಲ್ಲಿ. ಇಷ್ಟಾದ ಮೇಲೆ ಅವರು ಯಾವ ಕಾರಣಕ್ಕೂ ಮನೆಗೆ ಹೋಗಬಾರದು. ಅವರ ಜಾತಿಯವರನ್ನು ಮುಟ್ಟಿಸಿಕೊಳ್ಳಬಾರದು. ಸಂಪೂರ್ಣವಾಗಿ ಹಬ್ಬ ಮುಗಿದ ಮೇಲೆ ಮಾತ್ರ ಅವರು ತಮ್ಮ ಮನೆಗಳಿಗೆ ಹಿಂದಿರುಗಬೇಕು.

ಹೀಗೆ ಮಡಿಯಾದ ಆರು ಜನರೂ ತಮಟೆ ವಾದ್ಯಗಳ ಸಮೇತರಾಗಿ ಊರಮಧ್ಯೆ ದೊಡ್ಡಬೀದಿಯ ಪಕ್ಕದಲ್ಲಿರುವ ಹಳೇಕಲ್ಲು ಬಾವಿಯ ದಡಕ್ಕೆ ಬಂದು ಕುಳಿತುಕೊಳ್ಳುತ್ತಾರೆ. ಬ್ರಾಹ್ಮಣ ಜಾತಿಯ ಜೋಯಿಸರು ಅಲ್ಲಿಗೆ ಬಂದು ಹೋಮನೇಮಗಳನ್ನು ಮಾಡಿ ಬಹಳಷ್ಟು ಕಾಲ ಶ್ಲೋಕಗಳನ್ನು ಹೇಳುತ್ತಾರೆ. ನಂತರ ನಗಾರಿ, ತಮಟೆ ವಾದ್ಯಗಳ ಸದ್ದಿನಲ್ಲಿ ನೆರೆದ ನೂರಾರು ಜನರ ಕೈಚಪ್ಪಾಳೆಯ ನಡುವೆ, ಬಹಿರಂಗವಾಗಿ ಆರು ಜನರಿಗೂ ಜನಿವಾರ ಧಾರಣೆ ಮಾಡುತ್ತಾರೆ. ಅಲ್ಲಿಗೆ ಈ ಆರು ಜನ ಹೊಲೆಯರ ಶೂದ್ರತ್ವ ಕಳೆದು ಪವಿತ್ರತೆ ಬಂತು ಎಂಬ ನಂಬಿಕೆ. ಒಟ್ಟಿನಲ್ಲಿ ಅವರು ಬ್ರಾಹ್ಮಣರಾಗುತ್ತಾರೆ. ಜನಿವಾರ ಧಾರಣೆಯ ನಂತರ ವಾದ್ಯ ಸಮೇತವಾಗಿ ಹೆಬ್ಬಾರಮ್ಮನ ಗುಡಿಗೆ ಹೋಗುತ್ತಾರೆ. ಹೆಬ್ಬಾರಮ್ಮನವರನ್ನು ಶೃಂಗರಿಸಲು ಪ್ರಾರಂಭಿಸುತ್ತಾರೆ.

"ಹೊಲೆಯರು ಜನಿವಾರ ಧರಿಸುವುದಾರೊ ಏಕೆ? ಹೆಬ್ಬಾರಮ್ಮ ಯಾರು? ಚೌಡಮ್ಮನ ಹಬ್ಬದಲ್ಲಿ ಹೆಬ್ಬಾರಮ್ಮನಿಗೆ ಪ್ರಾಶಸ್ತ್ಯ ಏಕೆ?" ಈ ಪ್ರಶ್ನೆಗಳಿಗೆ ಉತ್ತರಿಸಲು ನಮ್ಮ ಉಜ್ಜನಿ ಕ್ಷೇತ್ರದಲ್ಲಿ ಹೆಚ್ಚಾಗಿ ಪ್ರಚಾರದಲ್ಲಿರುವ ಹೆಬ್ಬಾರಮ್ಮನ ಕತೆಯನ್ನು ಹೇಳಲೇಬೇಕು. ಆಗ ಹೆಬ್ಬಾರಮ್ಮನ ಪರಿಚಯವಾಗುತ್ತದೆ.

**ಹೆಬ್ಬಾರಮ್ಮನ ಕಥೆ**

ಹೆಬ್ಬಾರಮ್ಮ ಒಬ್ಬ ಬ್ರಾಹ್ಮಣ ಕನ್ಯೆ. ಯುವತಿ, ಸುಂದರಿ. ಜೊತೆಗೆ ಹಾಸ್ಯಪಟು. ಉಜ್ಜನಿಯ ಬ್ರಾಹ್ಮಣ ಮನೆತನಗಳಿಗೆಲ್ಲಾ ಬುದ್ಧಿಶಾಲಿಯಾಗಿದ್ದವಳು. ಪ್ರತಿನಿತ್ಯವೂ ಹಾಸ್ಯಮಾಡಿ ಜನರನ್ನು ನಗಿಸುತ್ತಿದ್ದುದೇ ಅವಳ ಕೆಲಸವಾಗಿತ್ತು.



ಒಂದು ದಿನ ಒಂದು ವಸ್ತುವನ್ನು ಬಟ್ಟೆಯ ಗಂಟಿನಲ್ಲಿ ಬಚ್ಚಿಟ್ಟು ಯಾವ ಬ್ರಾಹ್ಮಣ ಯುವಕ ತಾನು ಬಚ್ಚಿಟ್ಟಿರುವ ರಹಸ್ಯವನ್ನು ಗುರುತಿಸಿ ಹೇಳುವನೋ ಅವನನ್ನು ತಾನು ಮದುವೆಯಾಗುತ್ತೇನೆ. ಇಲ್ಲದಿದ್ದರೆ ಮದುವೆಯನ್ನೇ ಆಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿದಳು. ಉಜ್ಜನಿಯ ಯಾವ ಬ್ರಾಹ್ಮಣ ಯುವಕನೂ ಅದನ್ನು ಗುರುತಿಸಲಿಲ್ಲ. ಊರಮುಂದಿನ ಬಾವಿಯ ದಡದಲ್ಲಿ ನೀರು ಸೇದುವ ಹೆಂಗಸರು ಈ ವಿಚಾರವನ್ನು ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದಾಗ, ಪರ ಊರಿನ ಒಬ್ಬ ಹೊಲೆಯ ಕುಲದ ಯುವಕ ಹುಣಿಸೇ ಮರದಡಿ ಮಲಗಿರುತ್ತಾನೆ. ಈ ಹೆಂಗಸರ ಮಾತುಗಳನ್ನು ಕೇಳಿಸಿಕೊಳ್ಳುತ್ತಾನೆ. ಆ ಯುವಕ ನೋಡಲು ಬ್ರಾಹ್ಮಣನಂತೆಯೇ ಕಾಣುತ್ತಿರುತ್ತಾನೆ. ಸುಂದರನಾಗಿಯೂ ಇರುತ್ತಾನೆ. ಸರಿ, ಆ ರಹಸ್ಯ ವಸ್ತುವನ್ನು ತಾನೇ ಗುರುತಿಸಿ ಹೇಳಿ ಆ ಯುವತಿಯನ್ನು ಏಕೆ ಮದುವೆಯಾಗಬಾರದು ಎಂದು ತನ್ನಲ್ಲಿಯೇ ಯೋಚಿಸುತ್ತಾನೆ. ಅಂತೆಯೇ ತಾನು ದೂರದ ಊರಿನಿಂದ ಬಂದಿರುವ ಬ್ರಾಹ್ಮಣ ಎಂದು ಎಲ್ಲರಿಗೂ ಹೇಳಿಕೊಳ್ಳುತ್ತಾ ಹೆಬ್ಬಾರಮ್ಮನ ಮನೆಯನ್ನು ಪ್ರವೇಶಿಸುತ್ತಾನೆ. ಆಕಸ್ಮಿಕವಾಗಿ ಆ ರಹಸ್ಯ ವಸ್ತುವನ್ನು ಬಯಲು ಮಾಡುತ್ತಾನೆ. ತನ್ನ ಚಮತ್ಕಾರದಿಂದ ಬ್ರಾಹ್ಮಣನಂತೆಯೇ ವರ್ತಿಸುತ್ತಾನೆ. ಎಲ್ಲರೂ ಒಪ್ಪಿಕೊಳ್ಳುತ್ತಾರೆ. ತನ್ನ ಪ್ರತಿಜ್ಞೆಗೆ ಅನುಗುಣವಾಗಿ ಹೆಬ್ಬಾರಮ್ಮ ಆ ಯುವಕನನ್ನು ಮದುವೆಯಾಗುತ್ತಾಳೆ. ಯುವಕ ಅವರ ಮನೆಯಲ್ಲಿಯೇ ಸೇರಿಕೊಳ್ಳುತ್ತಾನೆ. ಆದರೆ ಅವನಿಗೆ ಒಬ್ಬಳು ತಾಯಿ ಇರುತ್ತಾಳೆ. ಅವಳು ಇಷ್ಟು ದಿನವಾದರೂ ಮಗ ಹಿಂದಕ್ಕೆ ಬರಲಿಲ್ಲ ಎಂದು ಚಿಂತೆ ಮಾಡುತ್ತಾಳೆ. ಅವನು ಬರುವುದೇ ಇಲ್ಲ. ಆಗ ಊರೂರು ತಿರುಗುತ್ತಾ ತನ್ನ ಮಗನನ್ನು ಹುಡುಕುತ್ತಾ ಉಜ್ಜನಿಯ ದಾರಿಯಲ್ಲಿ ಬರುತ್ತಿರುತ್ತಾಳೆ. ಉಜ್ಜನಿಯಿಂದ ಎಲ್ಲಿಗೋ ಹೋಗುತ್ತಿದ್ದ ಯುವಕ ದಾರಿಯಲ್ಲೇ ತನ್ನ ತಾಯಿಗೆ ಸಿಕ್ಕಿ ಬೀಳುತ್ತಾನೆ. ಆ ಮುದುಕಿ ಗೋಳಾಡುತ್ತಾಳೆ. ಅವನು

ಯೋಚಿಸುತ್ತಾನೆ. ತನ್ನ ತಾಯಿಯನ್ನು ಹೀಗೇ ಕರೆದುಕೊಂಡು ಹೋದರೆ ಬ್ರಾಹ್ಮಣತಿ ಎಂದು ಯಾರೂ ನಂಬುವುದಿಲ್ಲ ಎಂದುಕೊಂಡು, ಅವಳಿಗೆ ತಲೆಬೋಳಿಸಿ ಒಂದು ಕೆಂಪು ಸೀರೆಯನ್ನು ಉಡಿಸಿ ಮನೆಗೆ ಕರೆದು ತರುತ್ತಾನೆ. ಆಗ ಎಲ್ಲರಿಗೂ ಸಂತೋಷವಾಗುತ್ತದೆ. ಆದರೆ ಕೀಳು ಕುಲದವಳಾದ ಆ ಮುದುಕಿಗೆ ಬ್ರಾಹ್ಮಣರಂತೆ ನಯವಾಗಿ ಮಾತನಾಡಲು ಬರುವುದಿಲ್ಲ. ಆದ್ದರಿಂದ ತನ್ನ ತಾಯಿ ಮೂಗಿ, ಮಾತೇ ಬರುವುದಿಲ್ಲ ಎಂದು ಹೇಳಿ, ಮೂಗಿಯಂತೆ ನಟಿಸಬೇಕೆಂದು ತನ್ನ ತಾಯಿಗೆ ಸೂಚಿಸುತ್ತಾನೆ. ಕೆಲವಾರು ದಿನ ಸುಖವಾಗಿರುತ್ತಾರೆ. ಆ ಮುದುಕಿ ಮೂಗಿಯಾಗಿಯೇ ಇರುತ್ತಾಳೆ. ಇಷ್ಟರಲ್ಲಿ ಹೆಬ್ಬಾರಮ್ಮನಿಗೆ ಐದು ಜನ ಗಂಡು ಮಕ್ಕಳೂ ಆಗಿರುತ್ತಾರೆ.

ಒಂದು ದಿನ ಹೆಬ್ಬಾರಮ್ಮ ಎಲ್ಲಿಯೋ ಹೋಗಿರುವಾಗ ಮನೆಯ ಬಾಗಿಲು ಭದ್ರಪಡಿಸಿ ತಾಯಿ ಮಗ ಮಾತಿಗೆ ಪ್ರಾರಂಭಿಸುತ್ತಾರೆ. ಮಗ ತಾಯಿಯನ್ನು ಕೇಳುತ್ತಾನೆ : "ಎಂಗಿದ್ದ ತಾ ಬ್ರಾಮು ಮನೆ ಸಂಸಾರ" ಎಂದು. ಮಗನ ಮಾತಿಗೆ ಉತ್ತರ ಕೊಡುತ್ತಾ ತಾಯಿ





ಹೇಳುತ್ತಾಳೆ : "ಏ ಎಂಗಿದ್ರೇನ್ ಬುಡ್ ಮಗಾ, ನಮ್ಮೆಮ್ಮೆ ಕರಿನ್‌ಕಾಲ್ ತಿಂದಂಗಾದತಾ, ಎಷ್ಟೋ ದಿನಾ ಆಯ್ತು ಕರೀನ್‌ಾಲ್ ತಿಂದು ಏನ್ ಕತೇ...." ಎನ್ನುತ್ತಾಳೆ. ಅಷ್ಟರಲ್ಲಿ ಮನೆಯ ಬಾಗಿಲಿಗೆ ಬಂದಿದ್ದ ಹೆಬ್ಬಾರಮ್ಮ ಆಕಸ್ಮಿಕವಾಗಿ ತಾಯಿ ಮಗನ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಾಳೆ. ಇವರಿಬ್ಬರೂ ಶೂದ್ರರು ಎಂಬುದು ಅವಳಿಗೆ ಗೊತ್ತಾಗುತ್ತದೆ. ಅತಿಯಾದ ದುಃಖವಾಗುತ್ತದೆ. ಹೊಲೆಯನನ್ನು ಮದುವೆಯಾದುದಲ್ಲದೆ ಅವನಿಗೆ ಐದು ಜನ ಮಕ್ಕಳನ್ನೂ ಹಡೆದೆನಲ್ಲಾ ಎಂಬ ಕೊರಗು ಮನಸ್ಸಿಗೆ ಅಂಟುತ್ತದೆ. ಇನ್ನು ಈ ಭೂಮಿಯಲ್ಲಿ ಜೀವಿಸಿಕೊಂಡು ಇರಲೇಬಾರದು ಎಂಬ ಹಟ ಮನದಲ್ಲಿ ಬಲಿಯುತ್ತದೆ. ಚೌಡಮ್ಮನ ಕೊಂಡದ ದಿನ ಉರಿಯುತ್ತಿರುವ ಅಗ್ನಿಯಲ್ಲಿ ಬಿದ್ದು

ಅದಕ್ಕೆ ಆಹುತಿಯಾಗಿ ತನ್ನ ಪಾಪವನ್ನು ಕಳೆದುಕೊಳ್ಳಬೇಕೆಂದು ನಿಶ್ಚಯಿಸುತ್ತಾಳೆ. ಅಂತೆಯೇ ಹಬ್ಬ ಹತ್ತಿರ ಹತ್ತಿರ ಬಂದಾಗ ತನ್ನ ದೇಹತ್ಯಾಗಕ್ಕೆ ನೇಮ ನಿಯಮಗಳಿಂದ ಸಿದ್ಧವಾಗುತ್ತಿರುತ್ತಾಳೆ. ಕನಸು ಮನಸಿನಲ್ಲಿಯೂ ಚೌಡಮ್ಮನನ್ನು ಧ್ಯಾನಿಸುತ್ತಿರುತ್ತಾಳೆ. ಇನ್ನು ಇವಳು ಬದುಕುವುದಿಲ್ಲ ಎಂದು ಶೂದ್ರ ಗಂಡನಿಗೆ ಖಚಿತವಾದಾಗ ಆಕೆಯಲ್ಲಿ ತನ್ನ ತಪ್ಪಿಗೆ ಕ್ಷಮೆ ಯಾಚಿಸುತ್ತಾನೆ. ಹೆಬ್ಬಾರಮ್ಮ ತಾನು ಬದುಕುವುದು ಸಾಧ್ಯವೇ ಇಲ್ಲ ಎಂದು ಹೇಳುತ್ತಾಳೆ. ತನ್ನ ತಪ್ಪಿಗೆ ಪ್ರಾಯಶ್ಚಿತ್ತವೇನು ಎಂದು ಪತಿ, ಸತಿಯನ್ನು ಬೇಡಿದಾಗ ಹೆಬ್ಬಾರಮ್ಮ ಪ್ರಾಯಶ್ಚಿತ್ತದ ಹಾದಿಯನ್ನು ತೋರಿಸುತ್ತಾಳೆ. ಅದೇಂದರೆ "ಪ್ರತಿ ವರ್ಷ ನಡೆಯುವ ಚೌಡಮ್ಮನ ಹಬ್ಬದಲ್ಲಿ ತನ್ನ ಐದುಜನ ಮಕ್ಕಳಿಗೂ ಹಬ್ಬಕ್ಕೆ ಹದಿನೈದು ದಿನ ಮುಂದೆಯೇ ಜನಿವಾರ ಧಾರಣೆ ಮಾಡಬೇಕು. ಮಕ್ಕಳ ಜೊತೆಯಲ್ಲಿ ತಂದೆಯೂ ಜನಿವಾರ ಧಾರಣೆ ಮಾಡಬೇಕು. ಹಬ್ಬ ಮುಗಿಯುವವರೆಗೆ ಇಪ್ಪತ್ತೊಂದು ದಿನ ಬ್ರಾಹ್ಮಣರಂತೆ ನೇಮ ನಿಯಮದಿಂದ ಇರಬೇಕು. ಕೊಂಡದ ದಿನ ತನ್ನನ್ನು ಪ್ರತಿನಿಧಿಸುವ ಪ್ರತೀಕವೊಂದನ್ನು ಹೊತ್ತು ಅಗ್ನಿಯಲ್ಲಿ ಓಡಬೇಕು' ಎಂದು ಹೇಳಿ ಉರಿಯುತ್ತಿದ್ದ



ಕೊಂಡದಲ್ಲಿ ಬಿದ್ದು ಸಾಯುತ್ತಾಳೆ. ಚೌಡಮ್ಮನ ಸಾನಿಧ್ಯವನ್ನು ಸೇರುತ್ತಾಳೆ. ಅಂದಿನಿಂದ ಆಕೆಯ ಗಂಡ ಮತ್ತು ಮಕ್ಕಳು ಇಪ್ಪತ್ತೊಂದು ದಿನ ಬ್ರಾಹ್ಮಣರಾಗಿ ನಿಯಮವನ್ನು ಪಾಲಿಸುತ್ತಾರೆ. ಉಜ್ಜನಿಯ ಜನ ಹೆಬ್ಬಾರಮ್ಮನ ಗುಣವನ್ನು ಮೆಚ್ಚಿ ಊರ ದೇವತೆಯ ಸ್ಥಾನವನ್ನು ಅವಳಿಗೂ ಕೊಡುತ್ತಾರೆ.

ಹೀಗೆ ಚೌಡಮ್ಮನ ಭಕ್ತಿಯಾದ ಹೆಬ್ಬಾರಮ್ಮ ಚೌಡಮ್ಮನ ಸ್ಥಾನಕ್ಕೆ ಏರಿ ತಾನೂ ಊರ ದೇವತೆಯಾದಳು ಎಂದು ನಮ್ಮ ಜನರ ನಂಬಿಕೆ. ಆ ನಂಬಿಕೆಗೆ ಆಧಾರವಾಗಿ ಇಂದೂ ಹೊಲೆಯರು ಬ್ರಾಹ್ಮಣರಾಗುತ್ತಾರೆ. ಆದ್ದರಿಂದಲೇ ಇದೊಂದು ವಿಶಿಷ್ಟ ಸಂಪ್ರದಾಯವಾಗಿದೆ.

**ಹೆಬ್ಬಾರ ಎಂದರೇನು?**

ಸಾಮಾನ್ಯವಾಗಿ ಅನೇಕ ಕಡೆ ದೇವರ ಉತ್ಸವ ಹಾಗೂ ಧಾರ್ಮಿಕ ಆಚರಣೆಗಳಲ್ಲಿ ತಮಟೆವಾದ್ಯದ ಜೊತೆಗೆ 'ಅರೆ' ಬಡಿಯುತ್ತಾರೆ. ಅರೆ ಎಂದರೆ ಡೋಲಿನ ಆಕಾರದಲ್ಲಿರುತ್ತದೆ. ಎರಡೂ ಕಡೆಯೂ ಚರ್ಮದ ಹೊದಿಕೆ ಇರುತ್ತದೆ. ಒಂದು ಕಡೆ ಕಡ್ಡಿಯಿಂದ ಉಜ್ಜುವುದು, ಇನ್ನೊಂದು ಕಡೆ ಬಡಿಯುವುದು. ಇದನ್ನು ಉಜ್ಜನಿಯಲ್ಲೂ ತಮಟೆ ನಗಾರಿಗಳ ಜೊತೆ 'ಶೃತಿ' ವಾದ್ಯದಂತೆ ಬಳಸುತ್ತಾರೆ. ಇದು 'ಅರೆ'. 'ಹೆಬ್ಬಾರೆ' ಎಂದರೆ ದೊಡ್ಡದಾದ ಅರೆ. ಡೊಳ್ಳು ಕುಣಿತದಲ್ಲಿ

ಕುರುಬರು ಉಪಯೋಗಿಸುವ ಅರೆಗಿಂತಲೂ ದೊಡ್ಡದಾದ, ಬಡಿದರೆ, ಚರ್ಮದ ಕಂಪನದಿಂದ ಬಾರಿ ಶಬ್ದ ಬರುವ ಬೃಹದಾಕಾರದ ಚರ್ಮದ ವಾದ್ಯ. ಇದನ್ನು ಒಬ್ಬರೇ ಹೊರುವುದಕ್ಕೂ ಕಷ್ಟವೇ. ಇದು ಹೆಬ್ಬಾರೆ.

ಈ ಹೆಬ್ಬಾರೆಗೆ ಚರ್ಮದ ಬಡಿಯುವ ಭಾಗಗಳನ್ನು ಬಿಟ್ಟು ಉಳಿದೆಡೆ ಬಟ್ಟೆ ಹೊದಿಸುತ್ತಾರೆ. ಮತ್ತೊಂದು ಮಂದವಾದ ರಟ್ಟಿನಂತಹ ಬಿಳಿಯ ಬಟ್ಟೆಯನ್ನು ಕೆಳಕ್ಕೆ ಇಳಿ ಬೀಳುವ ಹಾಗೆ ಹೊದಿಸಿ ಕಟ್ಟುತ್ತಾರೆ. ಒಡವೆ ಮತ್ತು ಹೂವಿನ ಹಾರಗಳಿಂದ ಶೃಂಗರಿಸುತ್ತಾರೆ. ತಳದಲ್ಲಿ ಹೊತ್ತುಕೊಳ್ಳುವುದಕ್ಕೆ ಸಿಂಬಿ ಮಾಡಿರುತ್ತಾರೆ. ಹೀಗೆ ಶೃಂಗಾರ ಮಾಡಿದ ಹೆಬ್ಬಾರೆಗಳು ಬರಿಯ ಹೆಬ್ಬಾರೆಯಲ್ಲ, 'ಹೆಬ್ಬಾರಮ್ಮ'.

**ದೇವರ ಗುಡ್ಡರು**

ಕಂಬ ಇಕ್ಕುವ ದಿನ ಬೆಳಿಗ್ಗೆ ಒಕ್ಕಲಿಗ ಜಾತಿಯವರಾದ ಒಬ್ಬ ದೇವರ ಗುಡ್ಡ, ಒಬ್ಬ ಕರಗದ ಗುಡ್ಡ, ಇನ್ನೊಬ್ಬ ಧೂಪುಂಡಿಗೆ ಗುಡ್ಡ ಈ ಮೂವರೂ ಚವುರ ಮಾಡಿಸಿಕೊಂಡು ಅರಸಿನ ಸೀಗೇಕಾಯಿ ನುಂಗಿ ಹೊಸ ಮುಡಿಯುಟ್ಟು ಶುಚಿಯಾಗುತ್ತಾರೆ. ನಂತರ ಊರ ಒಳಗೆ ಇರುವ ಚೌಡಮ್ಮನ ಕಿರುಗುಡಿಯಾದ ಮನೆದೇವರು ಗುಡಿಯನ್ನು ಸೇರುತ್ತಾರೆ. ಮನೆದೇವರು ಗುಡಿಯಲ್ಲಿ ಒಂದು ಗದ್ದಿಗೆಯ ಮೇಲೆ ಸಣ್ಣ ವಿಗ್ರಹ ಇರುತ್ತದೆ. ಇದೂ ಚೌಡಮ್ಮನೇ 'ಪೂಜೆ' ಮತ್ತು ಕರಗದ ಗಿಂಡಿಗಳನ್ನು ಇಲ್ಲಿ ಯಾವಾಗಲೂ ಇಟ್ಟಿರುತ್ತಾರೆ. ಮನೆದೇವರು ಗುಡಿ ಸೇರಿದ ಗುಡ್ಡರು ಪೂಜೆಯನ್ನು ಅಲಂಕರಿಸಲು ಪ್ರಾರಂಭಿಸುತ್ತಾರೆ.



**ಪೂಜೆ-ಕರಗ**

ಇಲ್ಲಿ 'ಪೂಜೆ' ಮತ್ತು 'ಕರಗ' ಈ ಪದಗಳ ಅರ್ಥವನ್ನು ತಿಳಿದುಕೊಳ್ಳಬೇಕು. ಪೂಜೆ ಎಂದರೆ ಚೌಡಮ್ಮನ ಒಂದು ಪ್ರತೀಕ. ಬಿದುರು ಕಡ್ಡಿಗಳಿಂದ ಕಲಾತ್ಮಕವಾಗಿ ಮಾಡಿದ ನಾಲ್ಕು ಅಡಿ ಉದ್ದ ಮೂರು ಅಡಿ ಅಗಲದ ಆಯಾಕಾರದ ಒಂದು ಸೃಷ್ಟಿ, ಇದನ್ನು ಚೌಡಮ್ಮನ ಒಂದು ಸಣ್ಣ ವಿಗ್ರಹ, ಬಟ್ಟೆಗಳು, ಹೂವಿನ ಹಾರಗಳಿಂದ ಶೃಂಗರಿಸುತ್ತಾರೆ. ಗುಡಿಯಲ್ಲಿರುವ ಚೌಡಮ್ಮ ಈ ಪೂಜೆಯಲ್ಲಿಯೂ ಇರುತ್ತಾಳೆ ಎಂದು ನಮ್ಮವರ ನಂಬಿಕೆ. ಇದು ತಲೆಯಮೇಲೆ ಹೊತ್ತುಕೊಂಡು ಕುಣಿಯಲು ಸುಲಭವಾಗಿಯೂ ನೋಡಲು ಚೆನ್ನಾಗಿಯೂ ಇರುತ್ತದೆ. ಮೇಲೆ ಹಿತ್ತಾಳೆ ಅಥವಾ ಬೆಳ್ಳಿಯ ಐದು ಕಳಸಗಳಿರುತ್ತವೆ. ಇವು ಕುಣಿಯುವಾಗ ಮಿಂಚುತ್ತಿರುತ್ತವೆ. ಅಲ್ಲಲ್ಲಿ ಕಟ್ಟಿರುವ ಗೆಜ್ಜೆಗಳು ಝುಣ ಝುಣ ಶಬ್ದ ಮಾಡುತ್ತಿರುತ್ತವೆ. ಇದನ್ನು ಹೊರುವವನೇ ದೇವರ ಗುಡ್ಡ.

ಕರಗ ಎಂದರೆ ಒಂದು ಹಿತ್ತಾಳೆ ಗಿಂಡಿ, ಹೂಜಿಯ ಆಕಾರದಲ್ಲಿರುತ್ತದೆ. ಇದರೊಳಕ್ಕೆ ನೀರುತುಂಬಿ, ಹೊಂಬಾಳೆ, ಬೇವಿನಸೊಪ್ಪು ಮತ್ತು ಗಂಧದಕಡ್ಡಿಗಳನ್ನು ಕಟ್ಟಿ ಅಲಂಕರಿಸುತ್ತಾರೆ. ಇದನ್ನು ಹೊರುವವನೇ ಕರಗದ ಗುಡ್ಡ, ಕರಗ ಚೌಡಮ್ಮನ ಗಂಡನಾದ ಶ್ರೀಕೃಷ್ಣನನ್ನು ಪ್ರತಿನಿಧಿಸುತ್ತದೆ. ಪೂಜೆ ಚೌಡಮ್ಮನ ಪ್ರತೀಕವಾದರೆ, ಕರಗ ಶ್ರೀಕೃಷ್ಣನ ಪ್ರತೀಕ. ಆದರೆ ಕಂಬ ಇಕ್ಕುವ ದಿನ ಪೂಜೆಯನ್ನು ಮಾತ್ರ ಅಲಂಕರಿಸುತ್ತಾರೆ, ಕರಗವನ್ನು ಅಲಂಕರಿಸುವುದಿಲ್ಲ. ಅದನ್ನು ಕೊಂಡದ ದಿನ ಅಲಂಕರಿಸಿ ಮೇಲಕ್ಕೆ ಎತ್ತಬೇಕು.

ಧೂಪುಂಡಿಗೆ ಎಂದರೆ ಮಣ್ಣಿನಿಂದ ಮಾಡಿದ ಧೂಪ ಹಾಕುವ ಒಂದು ಬಟ್ಟಲು. ಈ ಬಟ್ಟಲಿಗೆ ಸಾಂಬ್ರಾಣಿ, ಗಂಧದಚೆಕ್ಕೆ, ಹಾಲ್‌ಮಡ್ಡಿ ಮತ್ತು ವಾದಕ್ಕಿಗಳನ್ನು ಹಾಕಿ ಮೇಲೆ ಕೆಂಡವನ್ನು ಹಾಕುತ್ತಾರೆ. ಆಗ ಹೊಗೆಯ ಸಹಿತವಾಗಿ ಸುವಾಸನೆ ಬರುತ್ತದೆ. ಇದನ್ನು ಹಿಡಿದುಕೊಳ್ಳುವವನೇ ಧೂಪುಂಡಿಗೆ ಗುಡ್ಡ, ಈ ಧೂಪುಂಡಿಗೆ ಚೌಡಮ್ಮನ ಅಣ್ಣನಾದ ಬೋರೇದೇವರನ್ನು ಪ್ರತಿನಿಧಿಸುತ್ತದೆ. ಆದ್ದರಿಂದ “ಗುಡಿಯಲ್ಲಿ ಪ್ರತಿಷ್ಠಾಪನೆಗೊಂಡಿರುವುದು ಸ್ಥಾವರ ದೇವರು. ಗುಡ್ಡ ಅದರ ಜಂಗಮ ದೇವರು'* ಎಂದು ಹೇಳಬಹುದು.

**ಕರಗದಪಾಲು ಕರಡಿಪಾಲು**

ದೇವರಗುಡ್ಡ, ಕರಗದಗುಡ್ಡ ಮತ್ತು ಧೂಪುಂಡಿಗೆಗುಡ್ಡ ಇವರುಗಳು ನಿರ್ದಿಷ್ಟ ಪೈಕಿಗೆ ಸೇರಿದವರೇ ಆಗಬೇಕು. ಬೇರೆ ಯಾರೂ ದೇವರು ಮತ್ತು ಕರಗಗಳನ್ನು ಹೊರುವ ಹಾಗಿಲ್ಲ, ಮುಟ್ಟುವ ಹಾಗೂ ಇಲ್ಲ. ದೇವರು ಹೊರುವ ಪೈಕಿಯವರು ಕರಗವನ್ನಾಗಲೀ, ಕರಗ ಹೊರುವ ಪೈಕಿಯವರು ದೇವರನ್ನಾಗಲೀ ಮುಟ್ಟುವ ಹಾಗಿಲ್ಲ. ಏಕೆಂದರೆ ಮೊದಲಿನಿಂದಲೂ ಬಂದ

---

* ಡಿ. ಲಿಂಗಯ್ಯ : ಬೋರೇದೇವರು; ಪುಟ. ೯

ಸಂಪ್ರದಾಯ. ಈ ಪೈಕಿಗಳನ್ನು ಕರಗದಪಾಲು ಅಂದರೆ ಕರಗ ಹೊರುವವರು, ಕರಡಿಪಾಲು ಅಂದರೆ ದೇವರು ಹೊರುವವರು ಎಂದು ವಿಂಗಡಿಸಿದ್ದಾರೆ. ಏಕೆ ಹೀಗೆ ಈ ನಿರ್ದಿಷ್ಟವಾದವರೇ ಹೊರಬೇಕು? ಬೇರೆಯವರಿಗೆ ಏಕೆ ಅಧಿಕಾರವಿಲ್ಲ? ಈ ಪ್ರಶ್ನೆಗಳಿಗೆ ಉತ್ತರ ಸಿಗಬೇಕಾದರೂ ನಾವು ನಮ್ಮ ಉಜ್ಜನಿ ಸುತ್ತಿನಲ್ಲಿ ಪ್ರಚಲಿತವಾಗಿರುವ ಮತ್ತೊಂದು ಕತೆಯನ್ನು ಅವಶ್ಯವಾಗಿ ತಿಳಿಯಬೇಕು. ಆ ಕತೆ ಹೀಗಿದೆ,

ದೊಡ್ಡನಾರಸೀಗೌಡ ಚಿಕ್ಕನಾರಸೀಗೌಡ ಚೌಡಮ್ಮನ ಒಕ್ಕಲಾಗಿ ಹಬ್ಬ ಮಾಡಲು ಪ್ರಾರಂಭಿಸಿದರು ಎಂದು ಈಗಾಗಲೇ ಒಂದು ಕತೆಯಲ್ಲಿ ಹೇಳಿಯಾಯಿತು. ಈ ಗೌಡರುಗಳು ತಮ್ಮ ಮಕ್ಕಳಲ್ಲಿ ಒಬ್ಬನನ್ನು ಆರಿಸಿ 'ಗುಡ್ಡ' ಎಂದು ಹೆಸರಿಟ್ಟು ಹಬ್ಬದ ಕೊಂಡದಲ್ಲಿ ಅವನು ಓಡುವಂತೆ ನಿಯಮಿಸುತ್ತಾರೆ. ಆ ಗುಡ್ಡ ಒಬ್ಬನೇ ಆಗಿದ್ದುದರಿಂದ ಚೌಡಮ್ಮನ ಪ್ರತಿಮೆಯನ್ನು ತಲೆಯಮೇಲೆ ಹೊತ್ತು ಶ್ರೀಕೃಷ್ಣನ ಪ್ರತೀಕ ಕರಗವನ್ನು ಹೆಗಲಿಗೆ ಕಟ್ಟಿಕೊಂಡು ಅಗ್ನಿ ಕೊಂಡದಲ್ಲಿ ಓಡುತ್ತಿದ್ದ. ಅವನಿಗೆ ಬಹಳ ಕಾಲ ಮಕ್ಕಳಾಗಲಿಲ್ಲ. ಆದ್ದರಿಂದ ಇನ್ನೊಬ್ಬ ಹೆಂಡತಿಯನ್ನು ತರುತ್ತಾನೆ. ಕಿರಿಯ ಹೆಂಡತಿಗೆ ಒಬ್ಬ ಮಗ ಹುಟ್ಟುತ್ತಾನೆ. ಆಗ ಅವನ ಪ್ರೀತಿಯೆಲ್ಲ ಕಿರಿಯವಳ ಕಡೆಗಾಗಿ ಹಿರಿಯವಳ ಬಗ್ಗೆ ಅವನಿಗೆ ಬೇಸರ ಮೂಡುತ್ತದೆ.

ಹೀಗೇ ಇರಲು ಒಂದುದಿನ ಕಿರಿಯಳು ಹಿರಿಯಳಾದ ತನ್ನ ಸವತಿಯನ್ನು 'ಬಂಜೆ' ಎಂದು ಅಪಹಾಸ್ಯಮಾಡಿ ನಗುತ್ತಾಳೆ. ಗಂಡನ ಪ್ರೀತಿಯಿಂದ ದೂರವಾಗಿ ಸವತಿಯ ಚುಚ್ಚುನುಡಿಗೆ ಗುರಿಯಾದ ಅವಳಿಗೆ ದಾರಿ ಕಾಣದಂತಾಗುತ್ತದೆ. ಬಹುವಾಗಿ ಬೇಸರಗೊಂಡ ಅವಳು ಒಂದು ದಿನ ತನ್ನ ತೌರುಮನೆಗೆ ಹೊರಡುತ್ತಾಳೆ. ಆಕೆ ತನ್ನ ತೌರುಮನೆಯನ್ನು ತಲುಪುವ ವೇಳೆಗೆ ಸರಿಯಾಗಿ ಅವರ ಅಣ್ಣ ಮೇಲುಕೋಟೆಯ ಚೆಲುವರಾಯ ಸ್ವಾಮಿಗೆ ಯಾತ್ರೆ ಹೊರಟಿರುತ್ತಾನೆ. ಅಣ್ಣನೊಂದಿಗೆ ತಾನೂ ಹೊರಡುತ್ತಾಳೆ. ಚೆಲುವರಾಯನ ದರ್ಶನ ಮಾಡಿದ ಮೇಲೆ ಒಂದು ಹರಕೆ ಕಟ್ಟುತ್ತಾಳೆ. ಅದೇನೆಂದರೆ ತಾನು ಮುಂದಿನ ವರ್ಷ ಚೆಲುವರಾಯನ ದರ್ಶನಕ್ಕೆ ಬರುವ ವೇಳೆಗೆ ತನಗೆ ಮಕ್ಕಳಾಗಬೇಕು, ಹೆಣ್ಣು ಮಗುವಾದರೆ ಅದನ್ನು ಚೆಲುವರಾಯನ ಕೊಣಕ್ಕೆ ಎಸೆಯುತ್ತೇನೆ. ಗಂಡಾದರೆ ಚೆಲುವರಾಯನ ಹರಿಯುವ ತೇರಿನ ಗಾಲಿಯ ಮುಂದೆ ಇಡುತ್ತೇನೆ. ಹೀಗೆ ಹರಕೆ ಕಟ್ಟಿ ಅಣ್ಣನೊಂದಿಗೆ ಊರಿಗೆ ಹಿಂದಿರುಗುತ್ತಾಳೆ. ಅವಳ ಹರಕೆಯಂತೆ, ಚಲವರಾಯನ ಕೃಪಾಕಟಾಕ್ಷ ಅವಳ ಮೇಲೆ ಬಿದ್ದಂತೆ ಅವಳಿಗೆ ಒಂದು ಗಂಡು ಮಗುವಾಗುತ್ತದೆ. ಆಗ ತನ್ನ ಹರಕೆಯನ್ನು ಈಡೇರಿಸುವ ಸಲುವಾಗಿ, ತನ್ನ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ತನ್ನ ಮಗುವನ್ನು ಮೇಲುಕೋಟೆಯ ಹಬ್ಬದ ಹರಿಯುವ ತೇರಿನ ಮುಂದೆ ಇಡುತ್ತಾಳೆ. ಆದರೆ ತೇರಿನ ಗಾಲಿ ಪುಟ ನೆಗೆದು ಮಗುವಿನ ಪ್ರಾಣವನ್ನು ಉಳಿಸುತ್ತದೆ. ಬಹು ಸಂತೋಷಗೊಂಡ ಆಕೆ ತನ್ನ ಮಗುವಿಗೆ 'ಚೆಲುವ' ಎಂದು ಹೆಸರಿಡುತ್ತಾಳೆ. ಕಳೆದುಕೊಂಡಿದ್ದ ತನ್ನ ಗಂಡನ ಪ್ರೀತಿಯನ್ನು ಪುನಃ ಪಡೆಯುತ್ತಾಳೆ. ಬಂಜೆ ಎಂಬ ಸೊಲ್ಲನ್ನು ಇಂಗಿಸಿಕೊಳ್ಳುತ್ತಾಳೆ. ತನ್ನ

ಮಗುವನ್ನು ಸುಖದಿಂದ ಸಾಕಿ ದೊಡ್ಡದನ್ನಾಗಿ ಮಾಡುತ್ತಾಳೆ, ಮಗುವಿನ ತಂದೆ ಮೇಲುಕೋಟೆಯಿಂದ ಶಿಲ್ಪಿಯನ್ನು ಕರೆತಂದು ಚೌಡಮ್ಮನ ಶಿಖರವನ್ನು ಗೇಯಿಸುತ್ತಾನೆ.

ಗುಡ್ಡನಿಗೆ ವಯಸ್ಸಾಗುತ್ತದೆ. ಅಗ್ನಿಕೊಂಡದಲ್ಲಿ ಓಡುವುದು ಅವನಿಗೆ ಅಸಾಧ್ಯವಾಗುತ್ತದೆ. ಊರವರೆಲ್ಲ ಸೇರಿ ಗುಡ್ಡನ ಮಕ್ಕಳಿಬ್ಬರನ್ನೂ ಗುಡ್ಡರನ್ನಾಗಿ ನೇಮಿಸುತ್ತಾರೆ. ಅವರಲ್ಲಿ ಕಿರಿಯ ಹೆಂಡತಿ ಮಗ ನಾರಸೀಗೌಡ ಕರಡಿ (ಚೌಡಮ್ಮನ ಪೂಜೆ)ಯನ್ನೂ ಹಿರಿಯ ಹೆಂಡತಿ ಮಗ ಚೆಲುವೇಗೌಡ ಕರಗವನ್ನೂ ಹೊತ್ತು ಕೊಂಡದಲ್ಲಿ ಓಡುತ್ತಾರೆ.

ನಮ್ಮ ಜನರ ನಂಬಿಕೆಯ ಪ್ರಕಾರ ಕರಡಿ ಹೊರುತ್ತಿದ್ದ ನಾರಸೀಗೌಡನ ಸಂತತಿ ಈಗಿನ ಕರಡಿಪಾಲಿನ ಪೈಕಿಯೆಂದೂ ಕರಗವನ್ನು ಹೊರುತ್ತಿದ್ದ ಚೆಲುವೇಗೌಡನ ಸಂತತಿ ಇಂದಿನ ಕರಗದ ಪಾಲಿನ ಪೈಕಿಯೆಂದೂ ತಿಳಿಯುತ್ತದೆ. ಆಮೇಲೆ ಕ್ರಮೇಣವಾಗಿ ಧೂಪುಂಡಿಗೆ ಗುಡ್ಡನನ್ನು ಬೋರೇದೇವರು ಚೌಡಮ್ಮನಿಗೆ ಹೇಳಿ ನೇಮಿಸಿದ ಎಂದು ಹೇಳುತ್ತಾರೆ. ಇದು ನಿಜವಿರಲಿ, ಸುಳ್ಳಿರಲಿ ಉಜ್ಜನೀ ಸುತ್ತಿನ ಜನರಲ್ಲಿ ಈ ಕತೆ ತುಂಬ ಜನಪ್ರಿಯವಾಗಿದೆ.

**ಚೌಡಮ್ಮನ ಪೂಜಾರಿಗೆ ಕಂಕಣ**

ಕಂಬ ಹಾಕುವ ದಿನ ಬೆಳಿಗ್ಗೆ ಪೂಜಾರಿ ದೇವಸ್ಥಾನದ ಬಳಿಗೆ ಬಂದು ದೇವಸ್ಥಾನದ ಮುಂಭಾಗದಲ್ಲಿರವ ಬಾವಿಯಲ್ಲಿ ತಾನೇ ನೀರುಸೇದಿ ಸ್ನಾನ ಮಾಡುತ್ತಾನೆ. ಚೌಡಮ್ಮನ ಅರ್ಚಕರು ಬ್ರಾಹ್ಮಣರೇ ಆಗಿರಬೇಕು. ಪೂಜಾರಿ ಬಿಟ್ಟು ಇನ್ನಾರೂ ವಿಗ್ರಹ ಇರುವ ಚೌಡಮ್ಮನ ಗರ್ಭಗುಡಿಗೆ ಹೋಗವ ಹಾಗಿಲ್ಲ. ಹಬ್ಬದ ಸಮಯದಲ್ಲಿ ನಿರ್ಧಿಷ್ಟ ಪೂಜಾರಿಯನ್ನು ಬಿಟ್ಟು ಬೇರೆಯ ಬ್ರಾಹ್ಮಣರು ಅಲ್ಲಿಗೆ ಹೋಗಬಹುದು.

ಪೂಜಾರಿ ಅಂದು ಹೊಸಬಟ್ಟೆ ತೊಟ್ಟು ತಾನೂ ಅರಿಸಿನ ಸೀಗೇಕಾಯಿ ನುಂಗಿ ಶುದ್ಧ ಮನಸ್ಕನಾಗುತ್ತಾನೆ. ಶಾಸ್ತ್ರವಾದ ಮಂತ್ರ ಸಮೇತವಾಗಿ ಜೋಯಿಸರಿಂದ ಕಂಕಣವನ್ನು ಕಟ್ಟಿಸಿಕೊಳ್ಳುತ್ತಾನೆ. ಹೀಗೆ ಕಂಕಣವನ್ನು ಕಟ್ಟಿಸಿಕೊಂಡ ನಂತರ ಪೂಜಾರಯ್ಯ ದೇವಸ್ಥಾನ ಬಿಟ್ಟು ಇನ್ನೆಲ್ಲಿಯೂ ಹೋಗುವ ಹಾಗಿಲ್ಲ. ಮನೆಗೂ ಹೋಗಕೂಡದು. ಅಡುಗೆಯನ್ನು ಸ್ವತಹ ತಾನೇ ದೇವಸ್ಥಾನದ ಪಕ್ಕದಲ್ಲಿರುವ ಮಂಟಪದಲ್ಲಿ ಮಾಡಿಕೊಳ್ಳಬೇಕು. ದಿನಕ್ಕೆ ಒಂದು ಬಾರಿ ಮಾತ್ರ ಊಟ ಮಾಡಬೇಕು. ಕೊಂಡ ಮುಗಿಯುವವರೆಗೆ ಈ ಕಟ್ಟುನಿಟ್ಟನ್ನು ಬಹಳ ಶುದ್ಧ ಮನಸ್ಸಿನಿಂದ ಪಾಲಿಸಬೇಕು. ಈ ಸಮಯದಲ್ಲಿ ಪೂಜಾರಯ್ಯನ ಮನೆಯವರು ಅಥವಾ ವಂಶಸ್ಥರು ಯಾರಾದರೂ ದೇವಸ್ಥಾನದಲ್ಲಿದ್ದುಕೊಂಡು ಪೂಜೆ ಮಾಡಬಹುದು. ಪೂಜಾರಯ್ಯನಿಗೆ ಬೇಕಾದ ಸಹಾಯ ಮಾಡಬಹುದು.

**ಕಂಬ ಪ್ರತಿಷ್ಠಾಪನೆ**

ಕಂಬ ಇಕ್ಕುವ ದಿನ ಮಧ್ಯಾಹ್ನ ಊರಿನ ಎಲ್ಲಾ ಬಾವಿಗಳಲ್ಲೂ ಮತ್ತು ಕೆರೆಗಳಲ್ಲೂ ಹೋಮ ಸುಡುತ್ತಾರೆ. ಇದರಿಂದ ನೀರೆಲ್ಲ ಪವಿತ್ರವಾಯಿತು ಎಂಬ ನಂಬಿಕೆ.



ಅಂದು ಸಂಜೆ ಮಾರಮ್ಮನ ದೇವಸ್ಥಾನದ ಪೂಜಾರಿ ಊರ ಹೊರಗಿನ ಯಾವುದಾದರೊಂದು ಅತ್ತಿಮರಕ್ಕೆ ಹೋಗಿ ಮೂರು ಕವಲುಗಳಿರುವ ಒಂದು ಅತ್ತಿ ಕೊನೆಯನ್ನು ಕಡಿಯುತ್ತಾನೆ. ಅದಕ್ಕೆ ಅರಿಸಿನ ಕುಂಕುಮವಿಕ್ಕಿ ಹೂಕಟ್ಟಿ ಪೂಜೆ ಮಾಡುತ್ತಾನೆ. ನಂತರ ವಾದ್ಯ ಸಮೇತವಾಗಿ ಅದನ್ನು ತಂದು ದೊಡ್ಡ ಗುಡಿಯಲ್ಲಿ ಇಡುತ್ತಾನೆ. ಅಲ್ಲಿ ಅದಕ್ಕೆ ಮಹಾಪೂಜೆ ಮಾಡುತ್ತಾರೆ.

ಅಂದು ರಾತ್ರಿ ಸುಮಾರು ಹತ್ತು ಗಂಟೆಯ ನಂತರ ಸುತ್ತಮುತ್ತಣ ಸುಮಾರು ಹನ್ನೆರಡು ಹಳ್ಳಿಗಳ ಜನರು ಊರ ಮಧ್ಯದ ಹಳೇ ಕಲ್ಲು ಬಾವಿಯ ಸುತ್ತ ಸೇರುತ್ತಾರೆ. ಕೆಲವು ಹೆಂಗಸರು 'ಸೋ' ಪದಗಳನ್ನೂ ಕೆಲವರು ಚೌಡಮ್ಮನ ಪದಗಳನ್ನು ಸೊಗಸಾಗಿ ಹತ್ತಾರು ಕಂಠಗಳಲ್ಲಿ ಒಟ್ಟಿಗೆ ಹಾಡುತ್ತಾರೆ. ತಮಟೆ ನಾಗರಿಗಳು ಭೋರ್ಗರೆಯುತ್ತಿರುತ್ತವೆ. ಆಗ ಜೋಯಿಸರು ಮತ್ತೊಮ್ಮೆ ಆ ಬಾವಿಯ ಮೆಟ್ಟಿಲುಗಳ ಮೇಲೆ ಕುಳಿತು ಮಂತ್ರ ಹೇಳುತ್ತಾ 'ಹೋಮ' ಮಾಡುತ್ತಾರೆ.

ಇಷ್ಟರಲ್ಲಿ ಹೆಬ್ಬಾರಮ್ಮನ ಗುಡಿಯಲ್ಲಿ ಎರಡು ಹೆಬ್ಬಾರೆಗಳನ್ನು ಶೃಂಗರಿಸಿ ಇಬ್ಬರು ಹೊತ್ತುಕೊಳ್ಳುತ್ತಾರೆ. ಉಳಿದ ನಾಲ್ಕುಜನ ಗುಡ್ಡರು ಅವರ ಸಹಾಯಕ್ಕಿರುತ್ತಾರೆ. ಮನೆ ದೇವರು ಗುಡಿಯಲ್ಲಿ ಚೌಡಮ್ಮನ ಗುಡ್ಡ ಚೌಡಮ್ಮನ ಪೂಜೆಯನ್ನು ಅಲಂಕರಿಸಿ ಹೊತ್ತುಕೊಳ್ಳುತ್ತಾನೆ. ಕರಗದಗುಡ್ಡ ಬರಿಕೈಯಲ್ಲಿ ಹೊರಡುತ್ತಾನೆ. ದೇವರಗುಡ್ಡನಿಗೆ ಅವನ ಪೈಕಿಯ ಕೆಲವರು ಸಹಾಯಕ್ಕೆ ಇರುತ್ತಾರೆ. ಧೂಪುಂಡಿಗೆ ಗುಡ್ಡನೂ ಇವರ ಜೊತೆ ಹೊರಡುತ್ತಾನೆ.

ಈ ಗುಡ್ಡರೆಲ್ಲರೂ ವಾದ್ಯಸಮೇತ ಹೆಬ್ಬಾಗಿಲಿನಿಂದ ದೊಡ್ಡಬೀದಿಯ ಮಾರ್ಗವಾಗಿ ಬರುತ್ತಾರೆ. ದೇವರುಗುಡ್ಡ ಮತ್ತು ಕರಗದ ಗುಡ್ಡರು 'ನಡಮುಡಿ'ಯ ಮೇಲೆ ಬರುತ್ತಾರೆ. ನಡಮುಡಿ ಎಂದರೆ ಗುಡ್ಡರು ಬರುವ ದಾರಿಗೆ ಅಗಸರವನು ಮಡಿಬಟ್ಟೆಯನ್ನು ಹಾಕುತ್ತಾ ಹೋಗುತ್ತಾನೆ. ಗುಡ್ಡರು ನೆಲದ ಮೇಲೆ ಕಾಲಿಡದೆ ಆ ಬಟ್ಟೆಯ ಮೇಲೇ ಕಾಲಿಟ್ಟು ಬರುತ್ತಾರೆ. ಇದಕ್ಕೆ ನಡೆಮುಡಿ ಎಂದು ಹೆಸರು. ಆಗ ಹಳೇಕಲ್ಲು ಬಾವಿಯ ಹತ್ತಿರ ನೆರೆದಿದ್ದ ನೂರಾರು ಜನರು ಗುಡ್ಡರ ಜೊತೆಗೆ ಸೇರಿಕೊಳ್ಳುತ್ತಾರೆ. ಎಲ್ಲರೂ ವಾದ್ಯ, ತಮಟೆ, ನಗಾರಿ, ಕೂಗು, ಕಿರಿಚಾಟ, ಕೈಚಪ್ಪಾಳೆಗಳ ನಡುವೆ ತೇಲುತ್ತಾ ತಮ್ಮನ್ನು ತಾವೇ ಮರೆಯುತ್ತಾ, ಊರಿನ ಉತ್ತರ ದಿಕ್ಕಿಗೆ ದೊಡ್ಡ ಗುಡಿಯಿಂದ ಸ್ವಲ್ಪ ದೂರದಲ್ಲಿರುವ ಹೊನ್ನರುಳೀ ಮರದ ಬಳಿ ಬಂದು ಸೇರುತ್ತಾರೆ. ಬಂದ ಬಿರುಸಿನಲ್ಲಿಯೇ ಎಲ್ಲ ಗುಡ್ಡರೂ ಹೊನ್ನರುಳೀ ಮರವನ್ನು ಏಳುಸುತ್ತು ಸುತ್ತುತ್ತಾರೆ. ನಂತರ ದೇವರು ಹೆಬ್ಬಾರೆಗಳನ್ನು ಅರಳೀಮರದ ಕಲ್ಲು ಕಟ್ಟೆಯ ಮೇಲೆ ಇಳುಕಿ

ಪೂಜೆ ಮಾಡುತ್ತಾರೆ. ನಂತರ ಎಲ್ಲರೂ ದೊಡ್ಡಗುಡಿಯ ಮುಂದಕ್ಕೆ ಬರುತ್ತಾರೆ. ಅಲ್ಲಿ ಸಂಜೆ ಅತ್ತಿಮರವನ್ನು ತಂದಿದ್ದ ಮಾರಿ ಪೂಜಾರಿ ಇವರ ಜೊತೆ ಅದನ್ನು ಹೊತ್ತುಕೊಂಡು ಸೇರುತ್ತಾನೆ. ನಂತರ ಎಲ್ಲರೂ ಊರ ಮಧ್ಯೆ ಹೆಬ್ಬಾಗಿಲ ಬಳಿ ಇರುವ ಮಾರೀಗುಡಿಯ ಮುಂದೆ ಸೇರುತ್ತಾರೆ. ಮಾರಿಗುಡಿಯ ಎದುರಿಗೇ ಇರುವ ನಾಲ್ಕು ಕಲ್ಲು ಕಂಬಗಳ ನಡುವೆ ಆ ಅತ್ತಿಮರದ ಕೊನೆಯನ್ನು




ನಿಲ್ಲಿಸಿ ಪೂಜೆ ಮಾಡುತ್ತಾರೆ. ಇದೇ ಕಂಬ ಹಾಕುವುದು ಅಥವಾ ಕಂಬ ಪ್ರತಿಷ್ಠಾಪನೆ. ಇದು ಮುಗಿದ ನಂತರ ಎಲ್ಲ ಗುಡ್ಡರುಗಳೂ ಅವರವರ ಗುಡಿಗಳಿಗೆ ಹೋಗಿ ಸೇರಿಕೊಳ್ಳುತ್ತಾರೆ.

**ಕಂಬ ಇಕ್ಕಿದಂದಿನಿಂದ ಆರತಿ ದಿನದವರೆಗೆ ೧೧ ಅಥವಾ ೧೪ ದಿನಗಳ ಕಾರ್ಯಕ್ರಮಗಳು ಗುಡ್ಡರ ನಿಷ್ಠೆ**

ಈ ದಿನಗಳಲ್ಲಿ ಗುಡ್ಡರು ಬಹುವಿಧವಾದ ಕಟ್ಟುನಿಟ್ಟುಗಳನ್ನು ಪಾಲಿಸಬೇಕು. ದಿನಕ್ಕೆ ಒಂದು ಬಾರಿ ಮಾತ್ರ ಊಟ ಮಾಡಬೇಕು. ಅದೂ ಹೇಗೆಂದರೆ, ರಾತ್ರಿ ಸದ್ದಡಗಿದ ಮೇಲೆ ಯಾವ ಶಬ್ದವೂ ಇಲ್ಲದಾಗ ಒಂದೇ ತಮಟೆಯ ಸದ್ದಿನಲ್ಲಿ ಅವರವರ ಗುಡಿಗಳಲ್ಲಿ ಆಯಾ ಗುಡ್ಡರು ಊಟಮಾಡಬೇಕು. ಈ ಸಮಯದಲ್ಲಿ ಒಂದು ತಮಟೆ ಬಡಿಯುತ್ತಿರುತ್ತಾರೆ. ತಮಟೆಯ ಸದ್ದು ಬಿಟ್ಟು ಬೇರೆ ಯಾವ ಸದ್ದು ಕೇಳಿಸಿದರೂ ತಕ್ಷಣವೇ ಊಟಮಾಡುವುದನ್ನು ಬಿಟ್ಟುಬಿಡಬೇಕು. ಊಟ ಮಾಡುವಾಗ ಅನ್ನದಲ್ಲಿ ಕಲ್ಲಾಗಲೀ ಕೂದಲ ಎಳೆಯಾಗಲೀ ಇನ್ನೇನಾದರಾಗಲೀ ಸಿಕ್ಕಿದರೆ ಮುಂದಕ್ಕೆ ಊಟ ಮಾಡದೆ ಏಳಬೇಕು. ಮುಂದಿನ ಊಟ ಮಾರನೆರಾತ್ರಿ ಸದ್ದಡಗಿದಮೇಲೆ ಮಾತ್ರ. ಗುಡ್ಡರು ಮಿತವಚನದವರಾಗಿರಬೇಕು. ಶುದ್ಧ ಮನಸ್ಸಿನಿಂದ ಇರಬೇಕು. ತಮ್ಮ ಮನೆಗಳ ಕಡೆಗೆ ಗಮನಹರಿಸಬಾರದು. ಕೊಂಡ ಮುಗಿದ ಮೇಲೆ ಈ ಯಾವ ನಿಯಮಗಳೂ ಇವರಿಗೆ ಇರುವುದಿಲ್ಲ.

**ರಂಗ ಕುಣಿಯುವುದು**




ಪ್ರತಿದಿನ ರಾತ್ರಿ ಊಟವಾದ ಬಳಿಕ ಊರ ಯುವಕರೆಲ್ಲ ಕಂಬ ಪ್ರತಿಷ್ಠಾಪಿಸಿರುವ ಮಾರೀಗುಡಿಯ ಬಯಲಿನಲ್ಲಿ ಸೇರುತ್ತಾರೆ. ಉತ್ಸಾಹ ಉಲ್ಲಾಸಗಳಿಂದ ಅನೇಕ ಹಾಸ್ಯಗಳನ್ನು ಮಾಡುತ್ತಾ ಕುಣಿಯುವ 'ಜವಳೆ'ಗಳನ್ನು ಸುತ್ತುತ್ತಾರೆ. 'ಜವಳ' ಎಂದರೆ ಸುಮಾರು ೧೬ ಅಥವಾ ೧೮ ಅಡಿ ಉದ್ದದ ಬಿದಿರು ಗಳುವಿಗೆ ಬಣ್ಣ ಬಣ್ಣದ ಬಟ್ಟೆಗಳನ್ನು ಸುತ್ತಿ ತುದಿಯಲ್ಲಿ ಕುಚ್ಚು ಕಟ್ಟಿ ಅಲಂಕರಿಸಿದ ಬಿದಿರು ಜವಳೆ. ಈ ಜವಳೆಯನ್ನು ತಿರುವಿದರೆ ಬಳ್ಳಿಯಂತೆ ಒಯ್ಯಾರದಿಂದ ಕಂಪಿಸುತ್ತದೆ. ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನಡುವಿಗೆ ಬಟ್ಟೆ ಬಿಗಿದು, ಹೆಗಲ ಮೇಲಿನಿಂದ 'ಜನಿವಾರ'ದಂತೆ ಇಳಿಬಿಟ್ಟ ದಪ್ಪ

ಬಟ್ಟೆಯ ಚೀಲ "ನಗಾವರ'ಕ್ಕೆ ಜವಳೆಯನ್ನು ಸಿಕ್ಕಿಸಿಕೊಂಡು, ತಮಟೆ ನಗಾರಿಯ ತಾಳಕ್ಕೆ ತಕ್ಕಂತೆ ಕುಣಿಯುವಾಗ ನೋಡಬೇಕು. ಎಂತಹ ಮೋಹಕ ಕುಣಿತವದು! ನೋಡಿದಷ್ಟೂ ಕೈಲಾಗದವನನ್ನೂ ತಾನೂ ನೋಡಬೇಕೆನ್ನುವ,



ಕಣಿಯಬೇಕೆನ್ನುವಂತೆ ಉತ್ಸಾಹ ಮೂಡಿಸುವ ಅತ್ಯುತ್ತಮ ಜನಪದ ಕಲೆ ಈ ಜವಳೆಯ ಕುಣಿತ.* ತಮಟೆ ನಗಾರಿಯವರು ತುಂಬ ಹುಮ್ಮಸ್ಸಿನಿಂದ ಬಡಿಯುತ್ತಾ ಹಬ್ಬದಲ್ಲಿ ತಮ್ಮ ವಾದ್ಯಗಳನ್ನು ಹೇಗೆ ದುಂದುಭಿಸಬೇಕು ಎಂಬುದಕ್ಕೆ ಈ ದಿನಗಳಲ್ಲಿ ತರಬೇತಿ ಪಡೆಯುತ್ತಾರೆ.

ಹಿಂದೆ ಮರಗಾಲು ಕಟ್ಟಿಕೊಂಡು, ಎರಡು ಜವಳೆಗಳನ್ನು ಎರಡು ಕೈಲೂ ಹಿಡಿದು, ಹೆಗಲಮೇಲೆ ಇಬ್ಬರನ್ನು ಕೂರಿಸಿಕೊಂಡು ತಾಳಕ್ಕೆ ತಕ್ಕಹಾಗೆ ಕುಣಿದು ಜನರನ್ನು ರಂಜಿಸುತ್ತಿದ್ದರಂತೆ! ಆದರೆ ಆ ತಾಕತ್ತು ಉಜ್ಜನಿ ಸುತ್ತಿನ ಯಾವನಿಗೂ ಈಗ ಇಲ್ಲವಾಗಿದೆ. ಇದಲ್ಲದೆ ಕೋಲಾಟದವರು ವಿವಿಧ ಹಾಡುಗಳನ್ನು ಹಾಡುತ್ತಾ ಕೋಲು ಉಯ್ಯುತ್ತಿದ್ದರು. ಆದರೆ ಇತ್ತೀಚೆಗೆ ಈ ಕೋಲಾಟ ಉಜ್ಜನಿ ಸುತ್ತಿನಲ್ಲಿ ಮರೆತಂತೆ ಕಾಣಿಸುತ್ತಿರುವುದು ಬಹು ವಿಷಾದನೀಯ ಸಂಗತಿಯಾಗಿದೆ. ಈ ಕಾರ್ಯಕ್ರಮ ಆರತಿಯವರೆಗೆ ದಿನವೂ ರಾತ್ರಿಯಲ್ಲಿ ನಡೆಯುತ್ತದೆ.


ಸುತ್ತಿನ ಹಳ್ಳಿಗಳಿಗೆ ಹೆಬ್ಬಾರೆ ಭೇಟಿ

ಈ ದಿನಗಳಲ್ಲಿ ಹೆಬ್ಬಾರೆಗಳನ್ನು ದಿನಬಿಟ್ಟು ದಿನ ಚೌಡಮ್ಮನ ದೊಡ್ಡಗುಡಿಗೆ ವಾದ್ಯ ಸಹಿತ ಹೊತ್ತುಕೊಂಡು ಹೋಗುತ್ತಾರೆ. ಅಲ್ಲಿ ನಾಲ್ಕಾರು ಸಲ 'ಡವ್ ಡವ್' ಎಂದು ಬಾರಿಸುತ್ತಾರೆ. ಪೂಜೆ ಮಾಡಿದ ನಂತರ ತಮ್ಮ ಗುಡಿಗೆ ಹಿಂದಿರುಗುತ್ತಾರೆ.

ಕೊಂಡ ಮಂಗಳವಾರ ಎನ್ನುವಾಗ ಅದರ ಹಿಂದಿನ ಶುಕ್ರವಾರದಿಂದ ಈ ಹೆಬ್ಬಾರೆಗಳು

---

* ಕೆಲವು ಕಡೆ ಇದೇ ಕುಣಿತವನ್ನು 'ಪಟದ ಕುಣಿತ' ಎಂದು ಕರೆಯುತ್ತಾರೆ



ಮತ್ತು ಹೆಬ್ಬಾರೆ ಗುಡ್ಡರು ಉಜ್ಜನಿಯ ಸುತ್ತಮುತ್ತಲ ಊರುಗಳಿಗೆ ಹೋಗುತ್ತಾರೆ. ಹೀಗೆ ಆ ಹೋಗುವುದು ಏಕೆಂದರೆ ಹಬ್ಬದ ಸಂದೇಶವನ್ನು ಸುತ್ತಲ ಹಳ್ಳಿಗಳಿಗೆ ತಿಳಿಸುವುದಕ್ಕಾಗಿ, ಹೆಬ್ಬಾರೆಗಳು ಹೋಗಿ ಬಂದ ದಿನದಿಂದ ಚೌಡಮ್ಮನ ಕೊಂಡ ಮುಗಿಯುವವರೆಗೆ ಆಯಾ ಹಳ್ಳಿಗಳವರೂ ಉಜ್ಜನಿಯವರಂತೆಯೇ ನಿಯಮಗಳನ್ನು ಪಾಲಿಸಬೇಕು. ಮಾಂಸ, ಮಡ್ಡಿ, ಸೂತಕ, ಉರಿಯುವುದು, ಸುಡುವುದು ಇವುಗಳಿಂದ ದೂರವಿರಬೇಕು.

ಶುಕ್ರವಾರ ಹೆಬ್ಬಾರಗಳು ನಿಡಸಾಲೆಗೆ ಹೋಗುತ್ತವೆ. ನಿಡಸಾಲೆಯಲ್ಲಿ ಇರುವ ಚೌಡಮ್ಮನ ಗುಡಿಯ ಮುಂದೆ ಹೆಬ್ಬಾರೆಗಳನ್ನು ಮೊಳಗಿಸುತ್ತಾರೆ. ಪೂಜೆ ಆದ ನಂತರ ಊರಿನ ಕೆಲವು ಭಾಗಗಳಲ್ಲಿ ಹೆಬ್ಬಾರೆಗಳು ಆವೇಶ ಉತ್ಸಾಹಗಳಿಂದ ಕುಣಿಯುತ್ತವೆ. ಆಮೇಲೆ ಊರ ಎಲ್ಲರೂ ಬಂದು ಪೂಜೆ ಮಾಡುತ್ತಾರೆ. ನಿಡಸಾಲೆಯೂ ಉಜ್ಜನಿಯಷ್ಟೇ ದೊಡ್ಡ ಊರು. ಅಂದು ಅಲ್ಲಿ ಹಬ್ಬವೇ ಆದ ಹಾಗೆ ಹಾಗುತ್ತದೆ. ಶನಿವಾರದ ದಿನ ದೇವಸಂದ್ರ, ಎಲೆಕಡಕಲುಗಳಿಗೆ ಹೆಬ್ಬಾರೆಗಳು ಹೋಗುತ್ತವೆ. ಆ ಊರುಗಳ ಮಾರಿಗುಡಿಯ ಮುಂದೆ ಹೆಬ್ಬಾರೆಗಳನ್ನು ಮೊಳಗಿಸಿ ಉಜ್ಜನಿಗೆ ಹಿಂದಿರುಗುತ್ತಾರೆ. ಭಾನುವಾರದ ದಿನ ಹೆಬ್ಬಾರೆಗಳು ಉಜ್ಜನಿಗೆ ತೀರ ಸಮೀಪದಲ್ಲಿರುವ ಹಿತ್ತಲಪುರ ಮತ್ತು ಬೋರೇಗೌಡನ ಕೊಪ್ಪಲುಗಳಿಗೆ ಹೋಗುತ್ತವೆ. ಅಲ್ಲಿನ ಮಾರೀಗುಡಿಯ ಮುಂದೆ ತಾರಿಸಿ ರಂಗವಲ್ಲಿ ಬಿಟ್ಟು ಆ ಜಾಗದಲ್ಲಿ ಎರಡು ಬಸರೀ ಮರದ ಕವಡುಗಳನ್ನು ನೆಟ್ಟಿರುತ್ತಾರೆ. ಹೆಬ್ಬಾರೆಗಳನ್ನು ಆ ಕವಡುಗಳಿಗೆ ನೇತುಹಾಕುತ್ತಾರೆ, ಬಾರಿಸುತ್ತಾರೆ. ನಂತರ ಕೆಲವರು ಹರಕೆ ಒಪ್ಪಿಸುತ್ತಾರೆ. ಕೆಲವರು 'ಈಡುಗಾಯಿ' * ಹೊಡೆಯುತ್ತಾರೆ. ಆಮೇಲೆ ಹೆಬ್ಬಾರೆಗಳು ಉಜ್ಜನಿಗೆ ಹಿಂದಿರುಗುತ್ತವೆ.

ಹೆಬ್ಬಾರೆ ಗುಡ್ಡರುಗಳ ಜೊತೆಯಲ್ಲಿ ಹೊಲೆಯರ ಹೆಂಗಸರು ಮಕ್ಕಳು ಹೆಡಿಗೆ ಪುಟ್ಟಿಗಳನ್ನು ಹೊತ್ತುಕೊಂಡು ಆಯಾ ಹಳ್ಳಿಗಳಿಗೆ ಹೋಗುತ್ತಾರೆ. ಆದರೆ ಅವರು ಹೆಬ್ಬಾರೆ ಗುಡ್ಡರುಗಳನ್ನು ಮುಟ್ಟಿಸಿಕೊಳ್ಳುವುದಿಲ್ಲ. ದೂರದಲ್ಲಿ ಕುಳಿತುಕೊಳ್ಳುತ್ತಾರೆ. ಅವರು ಹೊತ್ತು ತರುವ ಹೆಡಿಗೆಗಳಿಗೆ ಪ್ರತಿಹಳ್ಳಿಯವರೂ ಅಕ್ಕಿ, ಅಸಿಟ್ಟು, ಕಾಳು, ಮೆಣಸಿನಕಾಯಿ, ಹುಣಿಸೇಹಣ್ಣು • ಇತ್ಯಾದಿಗಳನ್ನು ತುಂಬುತ್ತಾರೆ. ಹೆಬ್ಬಾರೆಗಳ ಪೂಜೆಯ ನಂತರ ಹೆಬ್ಬಾರೆ ಗುಡ್ಡರು ಹೋಗುವ ಹಳ್ಳಿಗಳಿಗೆ ಈ ಹೆಂಗಸರೂ ಹಿಂಬಾಲಿಸಿ ಹೋಗುತ್ತಾರೆ.

**ಹಬ್ಬದ ಸಿದ್ಧತೆ**

ಈ ಮಧ್ಯೆ ಹಬ್ಬಕ್ಕೆ ಸಿದ್ಧತೆ ಬಹು ಸಡಗರದಿಂದ ನಡೆಯುತ್ತದೆ. ಉಜ್ಜನಿ ಮತ್ತು ಸುತ್ತಮುತ್ತಲ ಹಳ್ಳಿಗಳವರು ತಮ್ಮ ಮನೆಗಳಿಗೆ ಸುಣ್ಣ ಬಳಿಯುತ್ತಾರೆ. ಊರ ಒಟ್ಟಿನಿಂದ ಚೌಡಮ್ಮನ ದೇವಸ್ಥಾನಕ್ಕೂ ಸುಣ್ಣವನ್ನು ಬಳಿಯುತ್ತಾರೆ. ಎಲ್ಲ ನೆಂಟರುಗಳಿಗೂ ಹೇಳುತ್ತಾರೆ.

---

* ಚೆನ್ನಾಗಿ ನಾರು ತೆಗೆದ ತೆಂಗಿನ ಕಾಯಿಯನ್ನು ಕೈಯಲ್ಲಿ ಹಿಡಿದು ದೇವರ ಮುಂದೆ ಮೂರು ಸಲ 'ಸಣ್ಣು' ಮಾಡಿ ನಂತರ ಚೂರು ಚೂರಾಗುವಂತೆ ನೆಲದಮೇಲೆ ಹೊಡೆಯುತ್ತಾರೆ. ಸುತ್ತ ನಿಂತಿದ್ದವರು ಆ ಕಾಯಿ ಚೂರುಗಳನ್ನು ಗೋರಿ ತಿನ್ನುತ್ತಾರೆ.



ಯಾವ ನೆಂಟರನ್ನು ನೋಡಬೇಕಾದರೂ ಎಷ್ಟೋ ದಿನದಿಂದ ನೋಡದೆ ಇದ್ದರೂ ಈ ಹಬ್ಬದಲ್ಲಿ ನೋಡಬಹುದು. ವೈರ, ದ್ವೇಷ, ಹಗೆ, ಹಟ ಎಲ್ಲವೂ ಈ ಹಬ್ಬದಲ್ಲಿ ಮಾಯವಾಗುತ್ತವೆ.

ತೌರಿಗೆ ಹೆಣ್ಣು ಮಕ್ಕಳು ತಮ್ಮ ಪುಟ್ಟ ಪುಟ್ಟ ಮಕ್ಕಳೊಡನೆ ಬರುತ್ತಿರುತ್ತಾರೆ. ಹೊಸ ಹೊಸ ನೆಂಟರ ಆಗಮನವಾಗುತ್ತಿರುತ್ತದೆ. ಊರಿನಲ್ಲೆಲ್ಲ ಏನೋ ಒಂದು ತರದ ಸಡಗರ ಸಂತೋಷ ತೇಲುತ್ತಿರುತ್ತದೆ. ಅದರಲ್ಲಿಯೂ ಮಕ್ಕಳಿಗಂತೂ ಹಬ್ಬ ಎಂದು ಬಂದೀತೋ ಯಾವಾಗ ಬಂದೀತೋ ಎಂಬ ಆತುರ; ನಿಮಿಷಗಳು ದಿನವಾಗುತ್ತಿರುತ್ತವೆ. ಎಲ್ಲರಿಗೂ ಮನದಲ್ಲೆಲ್ಲ ಏನೋ ಒಂದು ತರದ ನಲಿವು.

ಆರತಿ ಇನ್ನೂ ಎರಡು ಮೂರು ದಿನವಿದೆ ಎನ್ನುವಷ್ಟರಲ್ಲಿ ಸುತ್ತಮುತ್ತಣ ಊರುಗಳ ಯಾವ ಅಡಿಕೆ ತೋಟದಲ್ಲೂ ಹೊಂಬಾಳೆ ಇರುವುದಿಲ್ಲ. ದೂರದ ನೆಂಟರ ಮರಗಳಲ್ಲಿ ಇದ್ದರೂ ಅವು ಚೌಡಮ್ಮನ ಆರತಿಗೆ ಹಾಜರ್. ಇಷ್ಟು ಹೊಂಬಾಳೆಗಳು ಸಾಲದ ಮೈಲಿಗಟ್ಟಲೆ ಹುಡುಕುತ್ತಾ ಹೋಗುತ್ತಾರೆ ನಮ್ಮೂರ ಜನ! ಈ ಸಮಯದಲ್ಲಿ ಹೊಂಬಾಳೆಗೆ ಎಷ್ಟು ತಾಪತ್ರಯವಾಗುತ್ತದೆ ಎಂಬುದನ್ನು ನಮ್ಮ ಜನರಿಂದಲೇ ತಿಳಿಯೋಣ :

ವಂಬಾಳಗೋಗಿ ವಂಬತ್ತೆ ದಿನವಾದೋ

ರಂಬೆ ನಿನ್ನ ಮಗ ಬರಲಿಲ್ಲ | ಚೌಡಮ್ಮ

ಆರತಿಗೊಂಬಾಳೆ ತರಲಿಲ್ಲ.

ಇಷ್ಟು ಕಷ್ಟಪಟ್ಟು ತರುವ ಹೊಂಬಾಳೆಗಳ ಪ್ರದರ್ಶನವನ್ನು ಸೋಮವಾರ ಆರತಿ ಸಮಯದಲ್ಲಿ ನೋಡಿ ಆನಂದಿಸಬೇಕು.

ಈ ದಿನಗಳಲ್ಲಿ ಮನೆಗೆ ಹಳೇ ಮಡಿಕೆಗಳ ಬದಲು ಹೊಸ ಮಡಿಕೆಗಳು ಬರುತ್ತವೆ. ಅವುಗಳನ್ನು ಸೋಮವಾರ ಬದಲಾಯಿಸುತ್ತಾರೆ. ಇದರಿಂದ ಕುಂಬಾರರಿಗೆ ವರ್ಷದ ವ್ಯಾಪಾರವೆಲ್ಲ ಒಂದೇ ವಾರದಲ್ಲಿ ಆಗುತ್ತದೆ.

**ಆರತಿ**

ಸೋಮವಾರ ಆರತಿ, ವೈಭವದ, ರಂಗುರಂಗಿನ ಜೊತೆಗೇ ಅನೇಕ ಸಂಪ್ರದಾಯಗಳನ್ನುಳ್ಳ ಹಬ್ಬವೆಂದರೆ ಸೋಮವಾರದಿಂದ ಪ್ರಾರಂಭ. ಹನ್ನೆರಡು ಹಳ್ಳಿಗಳ ಜನರೂ ಸೂರ್ಯ ಹುಟ್ಟುವ ಮೊದಲೇ ಎದ್ದು ಸ್ನಾನ ಮಾಡಿ ಮಡಿ ಬಟ್ಟೆಗಳನ್ನು ತೊಟ್ಟುಕೊಳ್ಳುತ್ತಾರೆ. ಅಂದು ಅವರು ಮಾಡಬೇಕಾದ ಕೆಲಸಗಳನ್ನು ಈ ಕೆಳಗಿನ ಹಾಡಿನಿಂದಲೇ ತಿಳಿಯಬಹುದು :

ಕೆಂಬುತ್ತಿ ಬತ್ತ ತಂಬಿಟ್ಟಿಗದವಾದೋ

ಕುಂಬಾರ ಮನೆಯ ವೊಸ ಮಡಿಕೆ | ವೊಳೆಯಾ ನೀರು

ಆರುವರ ಚೌಡಮ್ಮನಿಗೆ ಆದವಾದೋ

ಕುಂಬಾರ ಮನೆಯಿಂದ ತಂದ ಹೊಸ ಮಡಿಕೆಗಳನ್ನು ಮನೆಯ ಒಳಗೆ ತೆಗೆದುಕೊಂಡು ಹಿಂದೆ ಇದ್ದ ಹಳೆಯ ಮಡಿಕೆಗಳನ್ನು ಹೊರಹಾಕುತ್ತಾರೆ. ಲೋಹದ ಪಾತ್ರೆಗಳಾದರೆ ಗೋವಿನ



ಗಂಜಲದಿಂದ ತೊಳೆದು ನಂತರ ಹೊಸ ನೀರಿನಲ್ಲಿ ಅದ್ದಿ ಒಳಗೆ ತೆಗೆದುಕೊಳ್ಳುತ್ತಾರೆ. ಹೊಸ ಗಡಿಗೆಯನ್ನು ಬಾವಿಗೆ ತೆಗೆದುಕೊಂಡು ಹೋಗಿ ಒಮ್ಮೆ ಸ್ವಲ್ಪ ನೀರು ಸೇದಿ ತೊಳೆದು ಮತ್ತೊಮ್ಮೆ ತುಂಬ ನೀರನ್ನು ಸೇದುತ್ತಾರೆ. ಅದಕ್ಕೆ ವಿಭೂತಿ ಪಟ್ಟೆಯಿಟ್ಟು ಪೂಜೆ ಮಾಡಿ ನೀರನ್ನು - ಹೊತ್ತು ತರುತ್ತಾರೆ. ಇದಕ್ಕೆ “ಮೀಸಲು ನೀರು ತರುವುದು' ಎನ್ನುತ್ತಾರೆ. ಹೀಗೆ ತಂದ ತುಂಬಿದ ಗಡಿಗೆ ನೀರನ್ನು ಮನೆಗೆ ಒಂದುಸಲ ಚುಮುಕಿಸುತ್ತಾರೆ. ಇದರಿಂದ ಮನೆಯಲ್ಲ ಪವಿತ್ರವಾಗುತ್ತದೆ ಎಂಬ ನಂಬಿಕೆ.

ಅಂದು ಮಧ್ಯಾಹ್ನ ನಮ್ಮ ಹಳ್ಳಿಗಳಿಗೆ ನೀವು ಹೊಸದಾಗಿ ಏನಾದರೂ ಬಂದರೆ ಎಲ್ಲಾ ಮನೆಗಳಲ್ಲೂ 'ಧಿಮ್..... ಧಿಮ್..... ಧಿಮ್' ಎಂಬ ಶಬ್ದ ಕೇಳಿ ನಿಮಗೆ ಆಶ್ಚರ್ಯ ವಾಗಬಹುದು. ಒಳಗೆ ಹೋಗಿ ನೋಡಿದರೆ ಗಟ್ಟಿಮುಟ್ಟಾದ ಹೆಂಗಸರು ಗಂಡುಗಚ್ಚೆ ಹಾಕಿ 'ಒನಕೆ'ಯಿಂದ ಚೌಡಮ್ಮನ ತಂಬಿಟ್ಟಿನ ಅಕ್ಕಿಯನ್ನು ತಳಿಸುತ್ತಿರುತ್ತಾರೆ. ಅಂದಿನ ವಿಶೇಷವಾದ ಅಡುಗೆಯೆಂದರೆ ಹಿಟ್ಟು, ಅನ್ನ, ಪಾಯಸ, ತಂಬಿಟ್ಟನ್ನು* ಚೌಡಮ್ಮನ ಆರತಿ ಆಗುವವರೆಗೆ ತಿನ್ನುವ ಹಾಗಿಲ್ಲ. ಅಡುಗೆ ಆದ ಮೇಲೆ ಸಂಜೆಗೆ ದಾಸಯ್ಯನೋ ಜೋಗಪ್ಪನೋ ಬಂದು ಪ್ರತಿ ಮನೆಯಲ್ಲೂ ದೇವರು ಪೂಜಿಸುತ್ತಾರೆ. ತಿರುಪತಿ ವೆಂಕಟರಮಣನ ಒಕ್ಕಲವರೋ ಇಲ್ಲ ಮೇಲುಗೋಟೆ ಚಲುವರಾಯನ ಒಕ್ಕಲೋ, ಆದರೆ ದಾಸಯ್ಯ ಬಂದು ದೇವರನ್ನು ಮಡಿಬಟ್ಟೆಯ ಮೇಲಿಟ್ಟು, ಅನ್ನ ಮುದ್ದೆ 'ಎಡೆ' ಇಟ್ಟಮೇಲೆ ಪೂಜೆ ಮಾಡಿ 'ಬಾಂಕಿ** ಊದುತ್ತಾನೆ. ನಂಜಪ್ಪನ ಒಕ್ಕಲೋ ಅಥವಾ ಬೋರೇದೇವರ ಒಕ್ಕಲೋ ಆದರೆ ಜೋಗಪ್ಪ ಬಂದು ಮಡಿ ಬಟ್ಟೆಯ ಮೇಲೆ ಬೈರುವನ ತ್ರಿಶೂಲ ಇಟ್ಟು ಎಡೆಯನ್ನು ಪೂಜೆ ಮಾಡಿ 'ಸಿಂಗನಾಥ'*** ಊದುತ್ತಾನೆ. ಹೀಗೆ 'ದೇವರು ಪೂಜಿಸಿ' ಆದ ಮೇಲೆ ಎಲ್ಲರೂ ಊಟ

---

* ನೀರಿನಲ್ಲಿ ನೆನೆಸಿದ ಅಕ್ಕಿಯನ್ನು ಒಳಕಲ್ಲಿನಲ್ಲಿ ಚೆನ್ನಾಗಿ ಥಳಿಸಿ ಹುಡಿಮಾಡಿ ನಂತರ ಬೆಲ್ಲದ ಪಾಕಕ್ಕೆ ಹಾಕಿ, ಎಳ್ಳು ಕಡಲೆ ಸೇರಿಸಿ ಉಂಡೆ ಮಾಡುವುದು.

* ಇದು ದಾಸಯ್ಯನ ವಾದ್ಯ. ಹಿತ್ತಾಳೆಯಿಂದ ಮಾಡಿದ್ದು. ಒಂದು ಕಡೆ ಸಣ್ಣ ತೂತು, ಮತ್ತೊಂದು ಕಡೆ ಅಗಲವಾದ ಬಾಯಿ ಇರುತ್ತದೆ. ಇದು ಒಂದು ರೀತಿಯ ಲೋಹದ ಕಹಳೆ ಎನ್ನಬಹುದು, ಊದಿದರೆ ಜೋರಾದ ಶಬ್ದ ಬರುತ್ತದೆ

* ಇದು ಜೋಗಪ್ಪನ ವಾದ್ಯ. ಇದನ್ನು ಜಿಂಕೆಯ ಕೊಂಬಿನಿಂದ ಮಾಡಿರುತ್ತಾರೆ. ಸುರುಳಿ ಸುರುಳಿಯಾಗಿರುವ ಎರಡು ಕಡೆಯೂ ತೂತು ಇರುವ ಜಿಂಕೆಯ ಕೊಂಬನ್ನು ಊದಿದರೆ 'ಪೀsss' ಎಂದು ಸಣ್ಣ ಶಬ್ದ ಬರುತ್ತದೆ.



ಮಾಡಬಹುದು. ಆರತಿ ಹೊರುವವರೂ ಊಟ ಮಾಡಬಹುದು. ಕೆಲವರು ಹರಕೆ - ಮಾಡಿಕೊಂಡಿದ್ದರೆ ಮಾತ್ರ ಊಟ ಮಾಡದೆ ಆರತಿ ಆದ ನಂತರ ಊಟ ಮಾಡುತ್ತಾರೆ.

ರಾತ್ರಿ ಹತ್ತು ಗಂಟೆಯ ಸಮಯಕ್ಕೆ ಆರತಿ ಹೊತ್ತುಕೊಂಡು ಹೋಗುವ ಕಾರ್ಯ ಆರತಿಯೆಂದರೆ - “ತಂಬಿಟ್ಟಿನ ದಪ್ಪದಾದ ಒಂದು ಉಂಡೆಯನ್ನು ಹೆಡಿಗೆಗೆ ಇಟ್ಟು ಅದರ ಮೇಲ್ಭಾಗದಲ್ಲಿ ಗುಳಿಮಾಡಿ ಎಣ್ಣೆ ಬಿಟ್ಟು ಅರಳೆ ಬತ್ತಿಯಿಂದ ದೀಪ ಹೊತ್ತಿಸುತ್ತಾರೆ. ಸುತ್ತಲೂ ಹೊಂಬಾಳೆ, ಕಣಿಗಲೆ ಹೂ ಮತ್ತು ಬೇವಿನಸೊಪ್ಪುಗಳನ್ನು ಸಿಕ್ಕಿಸಿ ಅಲಂಕರಿಸಿರುತ್ತಾರೆ. ಮೊದಲೇ ಸ್ವಲ್ಪ ಹಳದೀ ಬಣ್ಣದಲ್ಲಿರುವ ಹೊಂಬಾಳೆ ಹೆಡಿಗೆಯಲ್ಲಿರುವ ದೀಪದಿಂದ ಹೊಳೆದು ಚಿನ್ನದ ಗರಿಯಂತೆ ಕಾಣಿಸುತ್ತದೆ.”

ಆರತಿ ಹೊರಡುವುದು ರಾತ್ರಿ ಹತ್ತು ಗಂಟೆಯಾದರೂ ಆರತಿ ಹೊರುವ ಹೆಣ್ಣು ಮಕ್ಕಳ ಸಿದ್ಧತೆ ಸಡಗರದಿಂದ ಎಂಟು ಗಂಟೆಗೇ ಪ್ರಾರಂಭವಾಗುತ್ತದೆ. ಆರತಿಯನ್ನು ಸಿದ್ಧಗೊಳಿಸಿ ನಡುಮನೆಯಲ್ಲಿ ಪೂಜಿಸಿ ಇಡುತ್ತಾರೆ. ಹೀಗೆ ಇಟ್ಟ ಆರತಿ ಹೇಗೆ ಕಾಣಿಸುತ್ತದೆ :

ಮಾತೆ ವೊಂಬಾಳೆ ಮಾಲಾವ ನಮ್ಮಲ್ಲಿ

ರಾಣೀ ಚೌಡಮ್ಮ ಆರತಿಯ / ವೊಂಬಾಳೆ

ಮಾಲಾವ ನಮ್ಮ ನಡುಮಲ್ಲಿ.

ನಗಾರಿ ತಮಟೆಯ ಸದ್ದು ಯಾವಾಗ ಕೇಳುತ್ತೋ ಯಾವಾಗ ನಾವು ಈ ಚಂದುಳ್ಳಿ ಆರತಿಯನ್ನು ಹೊತ್ತೇವೋ ಎನ್ನುವ ಕಾತುರದಿಂದ ಹೆಣ್ಣು ಮಕ್ಕಳು ಕಾಯುತ್ತಿರುತ್ತಾರೆ.

ಎಲ್ಲ ಹಳ್ಳಿಗಳಿಗೂ ಉಜ್ಜನಿಯಿಂದಲೇ ತಮಟೆ, ನಗಾರಿಯ ಹೊಲೆಯರು ಬರಬೇಕು. ಉಜ್ಜನಿಯಲ್ಲಿ ಸುಮಾರು ನೂರಕ್ಕೂ ಹೆಚ್ಚು ಇವರ ಮನೆಗಳಿರುವುದರಿಂದ ಹನ್ನೆರಡು ಊರುಗಳಿಗೂ ತಮಟೆ ನಗಾರಿಗೆ ಕೊರತೆ ಇಲ್ಲ. ಇವರು ಬಂದು ಮೊದಲು ಒಂದು ತಮಟೆಯನ್ನು ಕುಟ್ಟಿ ಶಬ್ದ ಮಾಡುತ್ತಿದ್ದಂತೆಯೇ, ಯುವಕರು, ಹುಡುಗರು

ಮೊದಲು ಊರ ಮುಂದೆ ಸೇರುತ್ತಾರೆ. ಜವಳಿಗಳನ್ನು ಸುತ್ತುತ್ತಾರೆ. ಉತ್ಸಾಹದಿಂದ ಕುಣಿಯುತ್ತಾರೆ. ಒಬ್ಬ ತೋಟಿಯು ತಮಟೆ ಬಡಿದುಕೊಂಡು “ಆರ್ತಿ ಹೊತ್ಕಂಡ್ ಊರ್‌ಮುಂದುಕ್ ಬನವೋ”  ಎಂದು ಸಾರುತ್ತಾನೆ. ಆಗ ಊರ ಯುವತಿಯರು ಆರತಿ ಹೊತ್ತುಕೊಂಡು ಬಂದು ಊರ ಮುಂದೆ ಸೇರುತ್ತಾರೆ. ವಯಸ್ಸಾದವರು ಆರತಿ ಹೊರುವುದಿಲ್ಲ. ಏಕೆಂದರೆ ನೂಕು ನುಗ್ಗಲು, ಕೆಲವೊಮ್ಮೆ ಓಡುವುದು ಇವರಿಗೆ ಸಾಧ್ಯವಾಗುವುದಿಲ್ಲ. ಎಲ್ಲರ ತಲೆಯ ಮೇಲೂ ಒಂದೊಂದು ಬಿದಿರು ಹೆಡಿಗೆಯ ತಂಬಿಟ್ಟಿನ ಮಿಂಚುವ ಆರತಿ, ನೂರಾರು ಹೆಂಗಸರು ರಂಗು ರಂಗಿನ ಸೀರೆಯುಟ್ಟು, ಮಿಂಚುವ ಆರತಿಯನ್ನು ತಲೆಯಮೇಲೆ ಹೊತ್ತು ಸಡಗರದಿಂದ ಮಾತನಾಡುತ್ತ ಊರಮುಂದೆ ಸೇರುತ್ತಿದ್ದಂತೆಯೇ ವಯಸ್ಸಾದ ಹೆಂಗಸರು ಚೌಡಮ್ಮನ ಪದಗಳನ್ನು ಹಾಡಲು



ಪ್ರಾರಂಭಿಸುತ್ತಾರೆ. ಇವರು ಹಾಡುವುದನ್ನು ನೋಡಿದ ಯುವತಿಯರು ತಾವೇನು ಕಡಿಮೆ ಎಂಬಂತೆ ಎತ್ತರದ ಧ್ವನಿಯಲ್ಲಿ ಬೆಡಗಿನಿಂದ ಹಾಡುತ್ತಾರೆ. ಇದೇ ಒಂದು ಸ್ಪರ್ಧೆಯಾಗುತ್ತದೆ. ಕೇಳಲು ಮೋಹಕ ನೋಡಲು ಆಕರ್ಷಕ. ಇದೂ ಸಾಲದೆಂಬಂತೆ ಇವರೆಲ್ಲರನ್ನು ಹಂಗಿಸುವ ದಾಟಿಯಲ್ಲಿ ಊರ ಮುತ್ತೈದೆಯರು, ಚೌಡಮ್ಮನ ಪಲ್ಲವಿಗಳನ್ನು ನಡು ನಡುವೆ ಸೇರಿಸಿ ಹಾಡಿದಾಗ ಯಾವ ಸಂಗೀತ ಗೋಷ್ಠಿಯೂ ಅವರ ಮುಂದೆ ನಾಚಬೇಕು! ಒಂದು ಕಡೆ ಜವಳ ಕುಣಿತ ಮತ್ತೊಂದು ಕಡೆ ಹಾಡಿನ ಸ್ಪರ್ಧೆ. ಇವರೆಲ್ಲರಿಗೆ ಪ್ರೋತ್ಸಾಹಕೊಡುವ ರೀತಿಯಲ್ಲಿ ಆಗಾಗ ಊರ ಹುಡುಗರ ಕೈಚಪ್ಪಾಳೆ, ಕೇಕೆ.

ಎಲ್ಲರೂ ಉಜ್ಜನಿಗೆ ಹೊರಡುತ್ತಾರೆ. ಮುಂದೆ ವಾದ್ಯ ತಮಟೆ ನಗಾರಿಯವರು, ಅವರ ಹಿಂದೆ ಜವಳ ಕುಣಿತದವರು, ಅವರ ಹಿಂದೆ ಆರತಿ ಹೊತ್ತ ಹೆಂಗಸರು, ಇವರೆಲ್ಲರ ಹಿಂದೆ ಸಿಳ್ಳು ಹಾಕುತ್ತಾ ನಡೆಯುವ ಹುಡುಗರು. ಈ ಗುಂಪಿನ ನಡುನಡುವೆ ಅಲ್ಲಲ್ಲಿ 'ಪತ್ತು' *ಗಳನ್ನು ಹಿಡಿದು ಓಡಾಡುವ ಅಗಸರು. (ಈಗ ಪತ್ತುಗಳ ಜೊತೆಗೆ ಗ್ಯಾಸ್ ಲೈಟ್‌ಗಳೂ ಸೇರಿವೆ). ಹೀಗೆ ಈ ಮೆರವಣಿಗೆ ದಾರಿಯುದ್ದಕ್ಕೂ ಹೋಗುತ್ತಿರುವಾಗ ದೂರದ ಒಂದು ಬೋರೆಯಲ್ಲಿ ನಿಂತು ನೋಡಿ ಆನಂದಿಸಬೇಕು. ಸಾವಿರಾರು ಮಿಂಚು ಹುಳುಗಳು ಮಿಂಚುತ್ತಾ ತೆವಳುತ್ತಿರುವಂತೆ, ಅಥವಾ ಹೊಸ ನಕ್ಷತ್ರಗಳ ಗುಂಪೊಂದು ಭೂಮಿಗೆ ಇಳಿದು ನಡೆಯುವಂತೆಯೋ ಕಾಣುತ್ತವೆ. ಇಂತಹ ಒಂದು ದೃಶ್ಯವನ್ನು ನಮ್ಮ ಜನಪದ ಕವಿಗಳು ವರ್ಣಿಸಿರುವ ರೀತಿ ನೋಡಿ :

ಸೊಸೆಯರಾರುತೀ ಎಸಲು ಚಿಕ್ಕದಂದು

ಮುಂದೆ ಬರುವಾಗ ಯೆಣ್ಣು ಮಕ್ಕು | ಆರುತಿ

ಮುಂಗಾರು ಮಿಂಚಿನಂಗೆ ಪೊಳೆದಾವ

ದಾರಿಯುದ್ದಕ್ಕೂ ಮಧ್ಯೆ ಮಧ್ಯೆ ನಿಂತು ಹಾಡು ಹಾಡಿ ಜವಳ ಕುಣಿದು ಉಜ್ಜನಿ ಸೇರಬೇಕಾದರೆ ಸುಮಾರು ಅರ್ಧರಾತ್ರಿಯಾಗುತ್ತದೆ. ಹೀಗೆ ಎಲ್ಲ ಊರುಗಳ ಆರತಿಯೂ ಬಂದು ಉಜ್ಜನಿಯ ದೊಡ್ಡಬೀದಿಯಲ್ಲಿ ಮೆರೆಯುತ್ತವೆ. ಯಾವ ಊರಿನವರು ಮುಂದೆ ಬಂದರೂ ಉಜ್ಜನಿಯ ದೊಡ್ಡ ಬೀದಿಯಲ್ಲಿಯೇ ನಿಲ್ಲಬೇಕು. ಮೊದಲಿಗೆ ಚೌಡಮ್ಮನ ಗುಡಿಯ ಪ್ರವೇಶದ ಹಕ್ಕು ನಿಡಸಾಲೆ ಆರತಿಗಳಿಗೆ, ನಿಡಸಾಲೆ ಆರತಿ ಆದ ನಂತರ ಹಿತ್ತಲಪುರ, ಬೋರೇಗೌಡನ ಕೊಪ್ಪಲು, ದೇವಸಂದ್ರ, ಎಲೆಕಡಕಲು, ಉಜ್ಜನಿ ಹೀಗೆ ಎಲ್ಲ ಊರ ಆರತಿಯೂ ಒಬ್ಬರ ಹಿಂದೆ ಒಬ್ಬರು ಹೋಗಬೇಕು. ಆರತಿ ಹೊತ್ತು ಒಳಗೆ ಹೋದ ಹೆಂಗಸರ ಆರತಿಯನ್ನು ಅಮ್ಮನ

---

* ಇದನ್ನು ಪಂಜು ಎಂದೂ ಕರೆಯುತ್ತಾರೆ. ನಾಲ್ಕು ಅಡಿ ಉದ್ದದ ಬಿದಿರು ಕಡ್ಡಿಗೆ ಮಂದವಾದ ಬಟ್ಟೆಯನ್ನು ಸುತ್ತಿ ಮೇಲೆ ಕೆಮ್ಮಣ್ಣಿನಿಂದ ಲೇಪಿಸಿರುತ್ತಾರೆ. ಇದಕ್ಕೆ ಎಣ್ಣೆಯನ್ನು ಹಾಕುತ್ತಾ ಉರಿಸುವರು.

ಮುಂದೆ ಇಟ್ಟು ಪೂಜಾರಯ್ಯ ತೀರ್ಥ ಹಾಕುತ್ತಾನೆ. ದೇವಸ್ತಾನದ ಒಳಗಡೆ ನೂರೊಂದು ? ಎಣ್ಣೆದೀಪಗಳು ಉರಿಯುತ್ತಿರುತ್ತವೆ. ಚೌಡಮ್ಮನನ್ನು ವಡವವಸ್ತ್ರಗಳಿಂದ ಹಾಗೂ ಹೂಗಳಿಂದ ಅಲಂಕರಿಸಿರುತ್ತಾರೆ.* ದೇವಸ್ಥಾನದ ಬಾಗಿಲಿನಲ್ಲಿ ನಿಂತ ಎಲ್ಲ ಊರ ಹಿರಿಯರು ಗಲಾಟೆಯನ್ನು ಶಮನ ಮಾಡುತ್ತಾ ಒಳನುಗ್ಗುವ ಜನಗಳನ್ನು ತಡೆಯುತ್ತಾ, ಸ್ವಲ್ಪ ಜನಗಳನ್ನು ಒಳಗೆ ಬಿಟ್ಟು ಅವರು ಹೊರಬಂದ ನಂತರ ಇತರರನ್ನು ಬಿಡುತ್ತಾರೆ. ಹೀಗೆ ಎಲ್ಲ ಊರ ಆರತಿಗಳೂ ದೇವಸ್ಥಾನಕ್ಕೆ ಹೋಗಿ ಅಮ್ಮನನ್ನು ದರ್ಶಿಸಿ ಬಂದಮೇಲೆ ಒಂದು ಕಡೆ ಸೇರುತ್ತವೆ. ದೇವಸ್ತಾನದ ಸುತ್ತ ಇರುವ ವಿಸ್ತಾರವಾದ ಬಯಲಿನಲ್ಲಿ ಸ್ಪರ್ಧೆಯಿಂದ ಪದಗಳನ್ನು ಹಾಡುತ್ತಿರುತ್ತಾರೆ. ಸ್ಪರ್ಧೆಯಿಂದ ಜವಳ ಕುಣಿಯುತ್ತಿರುತ್ತಾರೆ.

**ದೇವರು ಎತ್ತುವುದು**

ಸುಮಾರು ರಾತ್ರಿ ಮೂರು ಗಂಟೆಗೆ ಮನೆ ದೇವರು ಗುಡಿಯಿಂದ ದೇವರ ಪೂಜೆಯನ್ನು ಹೊತ್ತು ದೇವರಗುಡ್ಡ, ಬರೀ ಕೈಯಲ್ಲಿ ಕರಗದ ಗುಡ್ಡ ಧೂಪುಂಡಿಗೆ ಗುಡ್ಡ ಮತ್ತು ಹೆಬ್ಬಾರಮ್ಮನ ಗುಡಿಯಿಂದ ಹೆಬ್ಬಾರೆಗಳನ್ನು ಹೊತ್ತು ಹೆಬ್ಬಾರ ಗುಡ್ಡರು ಮೆರೆಯುತ್ತಾ ದೊಡ್ಡ ಬೀದಿಗೆ ಬಂದಾಗ ಆರತಿ ಹೊತ್ತು ಬಂದಿದ್ದ ಎಲ್ಲ ಊರಿನವರೂ ಅವರ ಜೊತೆ ಸೇರಿಕೊಳ್ಳುತ್ತಾರೆ. ಎಲ್ಲಿ ನೋಡಿದರೂ ಜನರೇ. ಈ ಭವ್ಯ ಮೆರವಣಿಗೆ ಹೊನ್ನರುಳೀ ಮರವನ್ನು ತಲುಪಿ ನಿಲ್ಲುತ್ತದೆ. ದೇವರಗುಡ್ಡ, ಕರಗ, ಧೂಪುಂಡಿಗೆ, ಹೆಬ್ಬಾರ ಗುಡ್ಡರು ಹೊನ್ನರುಳೀ ಮರವನ್ನು ಐದು ಸುತ್ತು ಸುತ್ತಿ, ದೇವರು ಹೆಬ್ಬಾರೆಗಳನ್ನು ಮರದ ತಳದಲ್ಲಿ ಇಳುಕಿ ಪೂಜೆ ಮಾಡಿ ದೊಡ್ಡ ಗುಡಿಯ ಕಡೆಗೆ ಬರುತ್ತಾರೆ. ದೊಡ್ಡಗುಡಿಯನ್ನು ದರ್ಶಿಸಿ ಅನಂತರ ತಮ್ಮ ತಮ್ಮ ಗುಡಿಗಳಿಗೆ ಹಿಂದಿರುಗುತ್ತಾರೆ. ಇಷ್ಟರಲ್ಲಿ ಬೆಳಗಿನ ಬೆಗೆಂಪು ಮೂಡುತ್ತಿರುತ್ತದೆ. ಹೆಂಗಸರು ಮಕ್ಕಳು ಮುದಕರು ತಮ್ಮ ತಮ್ಮ ಊರುಗಳಿಗೆ ಹಿಂದಿರುಗುತ್ತಾರೆ. ಯುವಕರು ಗುದ್ದಲಿ, ಆರೆ, ಆಯುಧಗಳಿಂದ ಹಿಂದಿನ ವರ್ಷ ಮುಚ್ಚಿದ್ದ ಕೊಂಡವನ್ನು ತೆಗೆಯಲು ಪ್ರಾರಂಭಿಸುತ್ತಾರೆ. ಮೊದಲು ಹಿರಿಯರು ಪೂಜೆ ಮಾಡುತ್ತಾರೆ. ಪೂಜಾರಯ್ಯ ತೀರ್ಥ ಹಾಕುತ್ತಾನೆ. ಆ ಮೇಲೆ ಕೊಂಡ ತೆಗೆಯುವುದು. ದೊಡ್ಡ ಕೊಂಡವಾದ್ದರಿಂದ ಹತ್ತಾರು ಜನರು ಬಹಳಕಾಲ ತೆಗೆಯಬೇಕಾಗುತ್ತದೆ.

ಕೊಂಡದ ಆಳ ಸುಮಾರು ಒಬ್ಬ ಮನುಷ್ಯನ ಎದೆ ಎತ್ತರಕ್ಕೆ ಇರುತ್ತದೆ. ಅಗಲ ಏಳು ಅಡಿಗಳಷ್ಟಿರುತ್ತದೆ. ಉದ್ದ ಸುಮಾರು ಅರವತ್ತು ಅಡಿಗಳು. ಇಷ್ಟು ದೊಡ್ಡ ಕೊಂಡವನ್ನು ಬಗೆದು ತೆಗೆದ ಯುವಕರು ದೇವಸ್ಥಾನದ ಬಲ ಅಂಚಿನಲ್ಲೇ ಇರುವ ಚಿಕ್ಕೆರೆಯಲ್ಲಿ ಮಿಂದು ತಮ್ಮ ತಮ್ಮ ಊರುಗಳಿಗೆ ಹೋಗುತ್ತಾರೆ. ಇಲ್ಲಿಗೆ ಆರತಿಯ ದಿನದ ವಿಶೇಷ ಕಾರ್ಯ ಮುಗಿಯುತ್ತದೆ.

---

* ಈಗ ಹೆಚ್ಚಿನ ಅಲಂಕಾರವನ್ನು ವಿದ್ಯುತ್ ದೀಪಗಳಿಂದ ಮಾಡಿರುತ್ತಾರೆ.

**ಅಗ್ನಿಕೊಂಡ**

ಮಂಗಳವಾರ ಕೊಂಡ. ಅಂದು ವಿಶೇಷ ದಿನ. ಬಹು ಸಂಪ್ರದಾಯದ ಹಲವಾರು ರೂಢಿ ನಂಬಿಕೆಗಳನ್ನೊಳಗೊಂಡ ದಿನ. ಜೊತೆಗೆ ವಿಜೃಂಭಣೆಯ ದಿನ. ಕೊಂಡದ ದಿನ ನಡೆಯುವ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ವಿಂಗಡಿಸಬಹುದು. ಅ) ಕೊಂಡೇ ಸೌದೆ, ಆ) ಮಡ ಉಯ್ಯುವುದು, ಇ) ಬಾಯಿಬೀಗ - ಕೊಂಡಕ್ಕೆ ಬೆಂಕಿ, ಈ) ಹೆಬ್ಬಾರ ಗಡಿಗೆ ತರುವುದು ಕೊಂಡಕ್ಕೆ ತೀರ್ಥ, ಉ) ಕೊಂಡ ಹಾಯುವುದು, ಊ) ದೇವರು ಮರೆಸುವುದು.

**ಕೊಂಡೇಸೌದ**

ಸುಮಾರು ಎಂಟು ಹತ್ತು ದಿನಗಳ ಹಿಂದೆಯೇ ಕೊಂಡಕ್ಕೆಂದು ಸೌದೆಗಳನ್ನು ಕಡಿದುಕೊಂಡು ಬಂದು, ಮನೆಗಳ ಹತ್ತಿರ ಹೊಲಗಳ ಹತ್ತಿರ ಒಣಗಲು ಹಾಕಿರುತ್ತಾರೆ. ದುಂಡಾದ ನೇರವಾದ ಚಂದವಾದ ಒಳ್ಳೆ ಜಾತಿ ಮರಗಳು ಎಲ್ಲೆಲ್ಲಿವೆ ಎಂದು ಅಣ್ಣ ತಮ್ಮಂದೀರು ಹೋಗಿ ಕಡಿದುಕೊಂಡು ಬರುತ್ತಾರೆ.*

ಅಣ್ಣ ತಮ್ಮದೀರು ವೊನ್ನೆಬೆಟ್ಟಕೆ ವೋಗಿ

ಚನ್ನಂಗಿ ಮರವ ಬೆವರಡ್ಡಿ | ಕಡದಾರೆಲ್ಲೆ

ಕನ್ನೆ ಚೌಡಮ್ಮ ಕದಲೀಗೆ

ಮಂಗಳವಾರದಂದು ಹೊತ್ತು ಮೂಡುವುದಕ್ಕೆ ಮೊದಲೆ ಮನೆಯಲ್ಲಿರುವ ಎತ್ತು ಹಸು ಹೋರಿಗಳನ್ನು ಕೆರೆಯಬಳಿ ಅಟ್ಟಿಕೊಂಡು ಹೋಗಿ ಮೈತೊಳೆದು ಸ್ವಚ್ಛಮಾಡುತ್ತಾರೆ. ರಂಗುರಂಗಿನ ಗುನ್ನಂಪಟ್ಟೆ ಕಾಗದಗಳು, ನೀಲಿ, ಗಚ್ಚಿ ಮುಂತಾದ ಬಣ್ಣಗಳಿಂದ ಅವುಗಳ ಕೊಂಬನ್ನು ಅಲಂಕರಿಸುತ್ತಾರೆ. ಕೊಂಬಿಗೆ ಕಳಸ, ಕೊರಳಿಗೆ ಕರಿಹುರಿ ಹೂವಿನ ಮಾಲೆ ಹಸರು ಮಣಿ ಇತ್ಯಾದಿಯಾಗಿ ಹಾಕಿ ಅಲಂಕರಿಸುತ್ತಾರೆ. ದೊಡ್ಡ ಆಯಕಟ್ಟಿನ ಹೋರಿಗಳಾದರೆ ಮೈತುಂಬ ಸಿಲ್ಕಿನ ಗೌಸನ್ನು ಹೊದಿಸಿ ಅಲಂಕರಿಸುತ್ತಾರೆ. ಕೊಂಡದ ಮರಗಳನ್ನು ಜೋಡಿಸಿ ಕತ್ತಾಳೆನಾರಿನಿಂದ ಬಿಗಿದು ಕಟ್ಟುತ್ತಾರೆ. ಸುಮಾರು ಐದರಿಂದ ಹದಿಮೂರು ಮರಗಳವರೆಗೂ ಕಟ್ಟುತ್ತಾರೆ. ಹಿಂದಿನರಾತ್ರಿ ಆರತಿಗೆ ಉಪಯೋಗಿಸಿದ್ದ ಹೊಂಬಾಳೆಗಳನ್ನು ಅಂದು ಸೌದಗಳಿಗೆ ಕಟ್ಟಿ ಅಲಂಕರಿಸುತ್ತಾರೆ. ಕೊಂಡೇಸೌದ ತುದಿಗೆ ಗಂಧದ ಕಡ್ಡಿಗಳ ಕಟ್ಟನ್ನು ಸಿಕ್ಕಿಸುತ್ತಾರೆ. ಇಷ್ಟೆಲ್ಲ ಅಲಂಕರಿಸಿದ ನಂತರ ಕೊರಳಿಗೆ ನೊಗ ಹೂಡಿ ಕೊಂಡದ ಸೌದೆಗಳನ್ನು ನೊಗಕ್ಕೆ ಬಿಗಿದು ಕಟ್ಟುತ್ತಾರೆ. ತೋಟಿ ಸಾರಿದ ನಂತರ ಹೇರುಗಳನ್ನು ಹೊಡೆದುಕೊಂಡು ಬಸವಣ್ಣನ

---

ಕಗ್ಗಲಿ, ದಿಂಡುಗ, ಚನ್ನಂಗಿ, ಹೆದ್ದರಣಿ, ತೇಗ, ಹೊನ್ನೆ, ಶ್ರೀಗಂಧ ಇಂತಹ ಅನೇಕ ಬೆಲೆ ಬಾಳುವ ಮರಗಳನ್ನು ಹಿಂದೆ ಮುಂದೆ ಯೋಚಿಸದ ಕಡಿದು ತರುತ್ತಿದ್ದರು. ಈಗ ಇಂತಹ ಮರಗಳೇ ಸಿಗುತ್ತಿಲ್ಲ .

ಗುಡಿಯ ಮುಂದಕ್ಕೆ ಬಂದು ಸೇರುತ್ತಾರೆ. ಇಷ್ಟು ಅಲಂಕಾರ ಮಾಡಿದ ಎತ್ತಿನ ಜೋಡಿಯನ್ನು ನೋಡಬೇಕು.

ಕೊಂಡಸೌದೆ ಬರುವಾಗ ತುಂಡನ್ನ ಚಂದನೋಡಿ

ಕೊಂಬೀಗ ಕಳಸ ಕೊರಳೀಗ | ಹೂವಿನ ಮಾಲೆ

ಬಂದವಲ್ಲೆ ಚೌಡಮ್ಮ ಬಲದಲ್ಲಿ

ಬಸವಣ್ಣನ ಗುಡಿಯಮುಂದೆ ಸೇರಿದ ಎಲ್ಲ ಹೇರುಗಳೂ ಚೌಡಮ್ಮನ ಗುಡಿಯ ಬಯಲನ್ನು ಎಷ್ಟು ಹೊತ್ತಿಗೆ ಸೇರೇವು ಎಂದು ಕಾತರಿಸುತ್ತಿರುತ್ತವೆ. ಊರ ಹಿರಿಯರು ಬಂದು ಒಟ್ಟಾಗಿ ಎಲ್ಲರೂ ಒಂದಾಣಿಕೆಯಿಂದ ಹೇಗೆ ಹೋಗಬೇಕು ಎಂಬುದನ್ನು ಬುದ್ಧಿಯ ಮಾತಿನಲ್ಲಿ ಹೇಳುತ್ತಾರೆ. ಬಸವಣ್ಣನ ಪೂಜಾರಿ ಎಲ್ಲ ಹೇರುಗಳಿಗೂ ತೀರ್ಥ ಹಾಕುತ್ತಾ.. .. ನಂತರ ಒಂದು ಹೇರಿನ ಮುಂದೆ ಒಂದರಂತೆ ನಿಧಾನವಾಗಿ ನಿಯಮಿಸಲ್ಪಟ್ಟ ದಾರಿಯಲ್ಲಿ ಹೊರುತ್ತಾರೆ. ದಾರಿಯ ಎಡಬಲಗಳಲ್ಲಿ ಹೆಂಗಸರು ಮಕ್ಕಳು ನಿಂತು ನೋಡುತ್ತಿರುತ್ತಾರೆ. ಗಂಡಸರು ನಡುವಿಗೆ ಆ ಸುತ್ತಿ, ಪಂಚೆಯನ್ನು ಎತ್ತಿಕಟ್ಟಿ, ಹಣೆಗೆ ಕುಂಕುಮವನ್ನು ಬಳಿದುಕೊಂಡು, ಕೈಯಲ್ಲಿ ಬಾರುಗೋಲು ಹಿಡಿದು, ಎಲ್ಲ ಹೆಂಗಸರೂ ತನ್ನನ್ನೇ ನೋಡುತ್ತಿರುವರು ಎಂಬ ಹೆಮ್ಮೆಯಿಂದ ಹಾಗೂ ಭ್ರಮೆಯಿಂದ ಕೋಲು ತಿರುವುತ್ತಾ ಹೇಹೇ ಎನ್ನುತ್ತಾ ಮುಂಬರಿಯುದ ತಾರೆ.

ಆರತಿ ಹೆಂಗಸರ ಸಡಗರದ ಹಬ್ಬವಾದರೆ ಕೊಂಡೇ ಸೌದೆ ಗಂಡಸರ ಉತ್ಸಾಹದ ಹಬ್ಬ. ಮುಂದೆ ತಮಟೆ ವಾದ್ಯದವರು, ಹಿಂದೆ ಕೊಂಡೇಸೌದೆಗಳು ಅವರ ಹಿಂದೆ ಊರ ಹಿರಿಯರು. ಮೊದಲು ಹಿತ್ತಲಪುರದ ಕೊಂಡ ಸೌದೆಗಳು ಸುಮಾರು ಹತ್ತು ಗಂಟೆಗೆ ದೇವಸ್ಥಾನವನ್ನು ತಲುಪುತ್ತವೆ. ನಂತರ ಬೋರೇಗೌಡನ ಕೊಪ್ಪಲು, ಕಾಡಬೋರನಹಳ್ಳಿ, ಬೆಣಚಕಲ್ಲು, ವಡ್ಡರಹಾಳು, ದೇವಸಂದ್ರ, ಎಲೆಕಡಕಲು, ಕಾಚಹಳ್ಳಿ ಮತ್ತು ಉಜ್ಜನಿಯ ಹೇರುಗಳು ಬರುತ್ತವೆ.

ಈ ಹೇರುಗಳು ಚೌಡಮ್ಮನ ಗುಡಿಯನ್ನು ಮೂರುಬಾರಿ ಸುತ್ತಿ ನಂತರ ಕೊಂಡದ ಸುತ್ತಮುತ್ತ ಹಾಗೂ ಗುಡಿಯ ಬಯಲಿನಲ್ಲಿ ಸೌದೆಗಳನ್ನು ಬಿಟ್ಟು ಎತ್ತು ಹಸುಗಳಿಗೆ ಗುಡಿಯಲ್ಲಿ ತೀರ್ಥ ಹಾಕಿಸಿಕೊಂಡು ತಮ್ಮ ತಮ್ಮ ಮನೆಗಳನ್ನು ಸೇರುತ್ತಾರೆ.

ಉಜ್ಜನಿಯ ಕೊಂಡದಸೌದೆಗಳು ನೋಡಲು ಬಲು ಸೊಗಸು. ದೊಡ್ಡಬೀದಿಯ ಗರುಡಗಂಭದ ಅರಳೀಮರದ ಚೌಕದಿಂದ ಶಾಸನಕಲ್ಲಿನ ಚೌಕದವರೆಗೆ ನಿಂತ ನೂರಾರು ಹೇರುಗಳ ಗುಂಪು ಮಹಾಭಾರತದ ಸೈನ್ಯದಂತೆ ಕಾಣುತ್ತಿರುತ್ತದೆ. ಎಳ್ಳಷ್ಟು ಎಡೆಯಿಲ್ಲದೆ ಒಂದರಬುಡಕ್ಕೆ ಒಂದು ಕಿಕ್ಕಿರಿದು ನಿಂತ ಹೇರುಗಳು ಎಲ್ಲರನ್ನೂ ಮೀರಿಸಿ ತಾನು ಮುಂದ ಹೋಗಬೇಕು, ನಾನು ಮುಂದೆ ಹೋಗಬೇಕೆಂಬ ತವಕದಿಂದ ನಿಂತಿರುತ್ತವೆ. ಇದನ್ನು ನೋಡಲು

ಸುತ್ತಮುತ್ತಲ ಊರುಗಳಿಂದ ಜನರು ಬಂದು ಬೀದಿಯ ಎರಡಂಚಿನಲ್ಲೂ ನಿಂತಿರುತ್ತಾರೆ. ಹೆಬ್ಬಾಗಿಲಿನಿಂದ ದೊಡ್ಡ ಗುಡಿಯ ಬಯಲಿನವರೆಗೆ ಎತ್ತರ ಎತ್ತರದ ಸ್ಥಳಗಳಲ್ಲಿ ತಮ್ಮ ತಮ್ಮ ಸುರಕ್ಷತೆಯನ್ನು ಕಾಪಾಡಿಕೊಂಡು ತವಕದಿಂದ ನೋಡುತ್ತಾ ನಿಂತ ಜನಗಳ ಗುಂಪು ಕೊಂಡೇಸೌದೆಯ ಗುಂಪಿಗಿಂತಲೂ ಹೆಚ್ಚಾಗಿರುತ್ತದೆ. ಬಸವಣ್ಣನ ಪೂಜಾರಿ ತೀರ್ಥಹಾಕಿ ಮುಗಿಯುತ್ತಿದ್ದಂತೆಯೇ ತಮ್ಮನ್ನು ತಾವೇ ಮರೆತು ಹೇರುಗಳನ್ನು ಓಡಿಸಲು ಪ್ರಾರಂಭಿಸುತ್ತಾರೆ. ಈ ಉತ್ಸಾಹದಲ್ಲಿ ಕೆಲವು ವೇಳೆ ಇಕ್ಕಟ್ಟಿಗೆ ಸಿಕ್ಕಿ ಸತ್ತವರೂ ಉಂಟು.* ಹೀಗೆ ನಾಗಾಲೋಟದಿಂದ ಓಡಿದ ನೂರಾರು ಕೊಂಡೇಸೌದೆಗಳಿಂದ ಎದ್ದ ದೂಳು ಉಜ್ಜನಿಯನ್ನು ಪೂರ್ಣವಾಗಿ ಮುಸುಕುತ್ತದೆ. ಇದುವರೆಗೆ ಸೇರಿದ್ದ ಎಲ್ಲ ಊರುಗಳ ಸೌದೆಯ ಎರಡರಷ್ಟು ಉಜ್ಜನಿಯ ಸೌದೆಗಳೇ ಆಗುತ್ತವೆ. ಹಬ್ಬ ನೋಡಲು ಬಂದ ಪ್ರೇಕ್ಷಕರು, ಹರಕೆ ಹೊತ್ತವರು, ಊರ ಯುವಕರು ಇವರೆಲ್ಲರ ಸಹಾಯದಿಂದ ಸುತ್ತಮುತ್ತಲ ಬಯಲಿನಲ್ಲಿ ಬಿಟ್ಟ ಸೌದೆ ಹೊರೆಗಳನ್ನು ಕ್ರಮವಾಗಿ ಜೋಡಿಸುತ್ತಾರೆ. ಗುಡಿಯ ಮುಂದೆ ಪೇರಿಸಿದ ಸೌದೆಗಳ ರಾಶಿ ಗುಡಿಯ ಎತ್ತರಕ್ಕೇ ತಲೆ ಎತ್ತಿ ನಿಂತುಕೊಳ್ಳುವುದನ್ನು ನೋಡಿದರೆ ಎಲ್ಲರೂ ಆಶ್ಚರ್ಯ ಪಡಬೇಕು. ಇಷ್ಟು ಸೌದೆಗಳ ಕೊಂಡದ ಬೆಂಕಿ ರಾಶಿಯಲ್ಲಿ ಆ ಗುಡ್ಡರು ಹೇಗೆ ಓಡುತ್ತಾರೆ ಎಂಬ ಸಂಶಯವೂ ಮನದಲ್ಲಿ ಹುಟ್ಟುವುದು ಸಹಜ.

**ಮಡೆ ಉಯ್ಯುವುದು**

ಇದು ಒಂದು ವಿಶಿಷ್ಟ ಸಂಪ್ರದಾಯ, ಮಡೆ ಅಂದರೇನು? ಮಡೆ ಅಂದರೆ ಅರಿಸಿನ ಬಣ್ಣದ ಅನ್ನ. ಆದರೆ ಬರೀ ಅರಿಸಿನ ಹಾಕಿ ಮಾಡಿದ್ದಲ್ಲ. ಜೀರಿಗೆ, ಮೆಂತ್ಯ, ಒಣ ಮೆಣಸಿನಕಾಯಿ, ಬೆಳ್ಳುಳ್ಳಿ, ಮೆಣಸು ಮತ್ತು ಅರಿಸಿನ ಇವೆಲ್ಲವನ್ನೂ ಒಳಕಲ್ಲಿನಲ್ಲಿ ಹಾಕಿ ಚೆನ್ನಾಗಿ ಆಡಿಸುತ್ತಾರೆ. ಇದನ್ನು ಒಂದುಪಾತ್ರೆಯಲ್ಲಿ ಇಟ್ಟುಕೊಂಡಿದ್ದು, ಅನ್ನ ಮುಕ್ಕಾಲು ಬೆಂದಾಗ ಹಾಕಿ ತಿರುಗಿಸುತ್ತಾರೆ. ಅದು ಚೆನ್ನಾಗಿ ಕುದಿಯುತ್ತಿದ್ದಾಗ ಉಪ್ಪು ಸೇರಿಸುತ್ತಾರೆ. ಅನ್ನ ಬೇಯುತ್ತಿದ್ದಂತೆ ಘಮಘಮ ವಾಸನೆ ಬರುತ್ತದೆ. ಇದು ಸಾಂಬಾರ ಪದಾರ್ಥಗಳೊಡಗೂಡಿದ ಒಂದು ರೀತಿಯ ಫಲಾವ್ ಎನ್ನಬಹುದು. ಚೌಡಮ್ಮನ ಹಬ್ಬದಲ್ಲಿ ಇದೇ ಒಂದು ವಿಶೇಷ ಊಟ. ಈ ಅನ್ನದ ಜೊತೆಗೆ ತೆಂಗಿನಕಾಯಿಯ ಚಟ್ನಿ, ತುಪ್ಪ ಅಥವಾ ಮೊಸರು ಸೇರಿಸಿ ಊಟ ಮಾಡಿದರೆ ಪಾವು ಅಕ್ಕಿ ಅನ್ನ ಉಣ್ಣುವವನು ಸೇರು ಅಕ್ಕಿ ಅನ್ನ ಜಡಿಯುತ್ತಾನೆ. ನೀವೂ ಬಂದು ಉಂಡು ನೋಡಬೇಕು ಆ ಅನ್ನದ ಸವಿಯನ್ನು!

'ಮಡೆ ಉಯ್ಯುವುದು' ಎಂದರೆ ಮಡೆ ಮಾಡುವುದು ಎಂದು ಅರ್ಥ. ಬೇರೇ ದೇವರುಗಳಿಗೆ ಮಾಡುವ ಮಡೆಗೂ ಚೌಡಮ್ಮನ ಮಡೆಗೂ ಸ್ವಲ್ಪ ವ್ಯತ್ಯಾಸವಿದೆ. ತಮ್ಮ ತಮ್ಮ

---

* ಇತ್ತೀಚೆಗೆ ಪೋಲೀಸ್‌ದಳ ಸ್ವಲ್ಪ ಹತೋಟಿಯಲ್ಲಿಡಲು ಪ್ರಯತ್ನಿಸುತ್ತದೆ.

ಮನೆಗಳಲ್ಲಿ ಮಡೆ ಮಾಡಿಕೊಂಡು ಅದನ್ನು ದೇವರಗುಡಿಗೆ ಹೊತ್ತುಕೊಂಡು ಹೋಗುವ ಅಥವಾ ಮನೆಯಲ್ಲೇ ಅರ್ಪಿಸುವ ಸಂಪ್ರದಾಯ ಹಲವಾರು ಕಡೆ ಇದೆ. ಆದರೆ ಚೌಡಮ್ಮನ ಮಡೆಯನ್ನು, ಮೂರು ಊರುಗಳಾದ ಉಜ್ಜನಿ, ಹಿತ್ತಲಪುರ, ಬೋರೇಗೌಡನ ಕೊಪ್ಪಲುಗಳವರು ದೇವಸ್ತಾನದ ಸುತ್ತಮುತ್ತಲ ಬಯಲಿನಲ್ಲಿಯೇ ಮಾಡುತ್ತಾರೆ.

ಒಂದು ವಾರದ ಮೊದಲೇ ಬೆಣತಿಬತ್ತವನ್ನು ಕುಟ್ಟಿ ಮತ್ತಾವ ಕಾರ್ಯಕ್ಕೂ ಉಪಯೋಗಿಸದೆ 'ಮುಡುಪಾಗಿ' ಹೊಸಮಡಿಕೆಯಲ್ಲಿ ಇಟ್ಟಿರುತ್ತಾರೆ. ಇದಕ್ಕೆ 'ಮೀಸಲು ಅಕ್ಕಿ' ಇಡುವುದು ಎನ್ನುತ್ತಾರೆ. ಈ ಅಕ್ಕಿಯನ್ನು ಎಷ್ಟು ಬೇಕಾದರೂ ಹಾಕುವ ಹಾಗಿಲ್ಲ. ಅದರಲ್ಲೂ ನಿರ್ದಿಷ್ಟ ಪ್ರಮಾಣ ಇರಬೇಕು. ಒಂದೊಂದು ಕುಳದವರು ವರ್ಷಕ್ಕೆ ಇಷ್ಟು ಎಂದು ಅಳತೆ ಮಾಡಿಕೊಂಡಿರುತ್ತಾರೆ. ಅಷ್ಟಕ್ಕಿಂತ ಕಡಿಮೆ ಹಾಕುವ ಹಾಗಿಲ್ಲ. ಉದಾಹರಣೆಗೆ ಐವು ಸೇರು ಹಾಕುತ್ತಿದ್ದವರು ಆರು ಸೇರು ಹಾಕಬಹುದು. ಆದರೆ ಮುಂದಿನ ವರ್ಷ ಆರುಸೇರಿಗಿಂತ ಕಡಿಮೆ ಮಾಡುವಹಾಗಿಲ್ಲ. ಅಕ್ಕಿಯ ಪ್ರಮಾಣ ಹೆಚ್ಚಾಗುತ್ತ ಹೋಗಬಹುದೇ ಹೊರತು ಕಡಿಮೆ ಆಗುವಹಾಗಿಲ್ಲ. ಅಕ್ಕಿ ಹಾಕುವ ಪ್ರಮಾಣ ಸುಮಾರು ಐದು ಸೇರಿನಿಂದ ಐವತ್ತು ಸೇರು ಅಥವಾ ಪಡಿ*ಗಳವರೆಗೆ ಅವರವರ ಕುಟುಂಬಗಳ ಗಾತ್ರವನ್ನು ಅವಲಂಬಿಸಿರುತ್ತದೆ.

ಕೊಂಡದ ಸೌದೆ ಗಲಾಟೆ ಮುಗಿದನಂತರ ಮೇಲೆ ಹೇಳಿದ ಮೂರು ಊರುಗಳ ಹೆಂಗಸರು ಮೀಸಲು ಅಕ್ಕಿಗಳನ್ನು ಹೊಸನೀರಿನಲ್ಲಿ ತೊಳೆದು ಹೊಸ ಕಳಸಿಕೆಗಳಲ್ಲಿ ಇಕಿಕೊಂಡು, ಹೊಸ ತಿರುಗಿಸುವ ಕೋಲು ಮತ್ತು ಆಡಿಸಿದ ಕಾರದ ಸಾಮಾನುಗಳ ಜೊತೆಗೆ ಸೌದೆಯನ್ನು ಹೊತ್ತುಕೊಂಡು ದೇವಸ್ಥಾನದ ಬಯಲಿಗೆ ಬರುತ್ತಾರೆ. ಅಲ್ಲಿ ವರ್ಷ ವರ್ಷವೂ ತಮಗೆ ನಿಗಧಿಯಾದ ಸ್ಥಳಗಳಲ್ಲಿ ಒಲೆ ತೆಗೆದು, ಒಲೆಗೆ ನೀರು ಚುಮುಕಿಸಿ, ಪೂಜೆ ಮಾಡಿ ಚೌಡಮ್ಮನನ್ನು ಮನದಲ್ಲಿ ನೆನೆದು, ಹೊಸ ಕಳಸಿಕೆಗಳಿಗೆ ವಿಭೂತಿ ಇಟ್ಟು ಒಲೆ ಹೂಡುತ್ತಾರೆ. ಅನ್ನ ಬೇಯುತ್ತಿದ್ದಂತೆಯೇ ಚೌಡಮ್ಮನ ಗುಡಿಗೆ ಹೋಗಿ ಪೂಜೆ ಮಾಡಿಸಿ ತೀರ್ಥವನ್ನು ತಂದು ಅನ್ನಕ್ಕೆ ಬಿಡುತ್ತಾರೆ. ಆ ಸಮಯದಲ್ಲಿ ಮಡೆ ಮಾಡುವ ಬಯಲಿಗೆ ಹೋದರೆ ಮೂರೂರ ಅಡುಗೆಯ ಒಲೆಗಳಿಂದ ಮೇಲೇಳುವ ಹೊಗೆಯನ್ನು ಕುಡಿದು ಉಸಿರು ಕಟ್ಟುತ್ತದೆ. ಕಣ್ಣಲ್ಲಿ ನೀರು ತುಂಬುತ್ತದೆ. ಆದರೆ ಮೂಗಿಗೆ ಮಾತ್ರ ಸುವಾಸನೆಯ ಮಡೆ ಅನ್ನದ ಕಂಪು ಬಿದ್ದು ಬಾಯಲ್ಲಿ ನೀರು ತರಿಸುತ್ತದೆ. ಅನ್ನ ಸಿದ್ಧವಾದ ಮೇಲೆ ಗಂಡಸರು ಬಂದು ಕಳಸಿಕೆಗಳನ್ನು 'ಅಡ್ಡೆ'ಯಲ್ಲಿ ಹೊತ್ತುಕೊಂಡು ಹೋಗುತ್ತಾರೆ. ಉಜ್ಜನಿಯ ಹರಿಜನರಿಗೆ ಗುಡಿಯ ಇನ್ನೊಂದು ಪಕ್ಕದಲ್ಲಿ ಪ್ರತ್ಯೇಕವಾದ ಸ್ಥಳವನ್ನು ನಿಗದಿ ಮಾಡಿದ್ದಾರೆ.

---

* ಹಿಂದೆ ಸೇರುಗಳ ಬದಲಾಗಿ 'ಪಡಿ'ಯನ್ನು ಅಳತೆಗಾಗಿ ಉಪಯೋಗಿಸುತ್ತಿದ್ದರು. ಇದು ಸೇರಿಗಿಂತ ಸ್ವಲ್ಪ ಅಗಲವಾಗಿದ್ದು ಉದ್ದ ಕಡಿಮೆ ಇರುತ್ತಿತ್ತು. ಆದರೆ ಈಗ ಸೇರುಗಳೂ ಮರತು 'ಕೇಜಿ' ಬಂದಿದೆ.

ಇನ್ನು ಈ ಮೂರು ಊರು ಬಿಟ್ಟು ಬೇರೆ ಊರಿನವರು ಮಡಿ ಮಾಡುವುದು ಹೇಗೆಂದರೆ, ತಮ್ಮ ತಮ್ಮ ಮನೆಗಳಲ್ಲಿ ಮೇಲಿನ ಎಲ್ಲ ನಿಯಮಗಳನ್ನೂ ಅನುಸರಿಸಿ ಮಾಡುತ್ತಾರೆ. ದೇವಸ್ಥಾನಕ್ಕೆ ಬಂದು ಪೂಜೆ ಮಾಡಿಸಿ ತೀರ್ಥವನ್ನು ತೆಗೆದುಕೊಂಡು ಹೋಗಿ ಮನೆಯಲ್ಲಿ ಮಾಡಿದ ಅನ್ನಕ್ಕೆ ಸೇರಿಸುತ್ತಾರೆ. ಉಜ್ಜನಿಯ ಸುತ್ತಮುತ್ತ ಸುಮಾರು ಐವತ್ತು ಮೈಲಿಗಳ ಪರಿಸರದಲ್ಲಿ ಚೌಡಮ್ಮನ ಒಕ್ಕಲಿಗೆ ಸೇರಿದವರು ತಮ್ಮ ತಮ್ಮ ಮನೆಗಳಲ್ಲಿ ಚೌಡಮ್ಮನಿಗೆ ಮಡೆ ಮಾಡಿ ಅರ್ಪಿಸುತ್ತಾರೆ.

ಮಡ ಅನ್ನವನ್ನು ಅಂದು ರಾತ್ರಿ ಉಣ್ಣುವ ಹಾಗಿಲ್ಲ. ಬುಧುವಾರ ಬೆಳಿಗ್ಗೆ ಉಣ್ಣಬಹುದು. ಉಜ್ಜನಿಯವರಲ್ಲದವರು ಹಾಗೂ ಚೌಡಮ್ಮನ ಒಕ್ಕಲಲ್ಲದವರು ಮಾತ್ರ ಅಂದು ರಾತ್ರಿಯೇ ಉಣ್ಣಬಹುದು.

**ಬಾಯಿಬೀಗ - ಕೊಂಡಕ್ಕೆ ಬೆಂಕಿ**

ಜೀವನದಲ್ಲಿ ವಿಧವಿಧವಾದ ಕಷ್ಟಗಳು ಬರುತ್ತವೆ. ಆಗ ಮಾನವ ಅವುಗಳನ್ನು ಪರಿಹರಿಸುವಂತೆ ದೇವರ ಮೊರೆ ಹೋಗುತ್ತಾನೆ. ಮಕ್ಕಳಾಗದೆ ಬಂಜೆತನವನ್ನು ಹೊತ್ತು, ಹತ್ತು ಹಲವು ಜನಗಳ ಚುಚ್ಚು ನುಡಿಗೆ ತುತ್ತಾದ ಹೆಣ್ಣಿನ ಕಷ್ಟವನ್ನಂತೂ ಹೇಳತೀರದು. ಜಗತ್ತಿನ ಎಲ್ಲ ದೇವರಿಗೂ ಅಡ್ಡ ಬಿದ್ದೇನು, ದೂಪ ಇಕ್ಕಿಸೇನು ನನಗೊಂದು ಕೂಸು ಕೊಟ್ಟರೆ ಸಾಕು ಎಂದು ಹಾತೊರೆಯುತ್ತಿರುತ್ತದೆ ಆ ಕರುಳು. ಒಂದೇ ಸಮನೆ ಕಾಯಿಲೆಗಳು ಬಂದಾಗ ಮನೆಯಲ್ಲಿ ಕಷ್ಟವಾದಾಗ ಯಾವುದೋ ಭೂತದ ಕಾಟ ಎಂದು ಭಾವಿಸುವ ಆ ಮುಗ್ಧ ಜನ ಹೆದರುತ್ತಾರೆ. ಇತ್ತೀಚೆಗೆ ವರದಕ್ಷಿಣೆಯ ರಾಕ್ಷಸಾವಳಿಯಿಂದ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಲಾಗದ ಜನರೂ ಚೌಡಮ್ಮನಲ್ಲಿ ಹರಕೆ ಹೊತ್ತುಕೊಳ್ಳುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅಂತೂ ಮಾನಸಿಕ ಭಾವನೆಯಿಂದಲೋ ಆಕಸ್ಮಿಕವಾಗಿಯೋ ದೇವರ ವರಪ್ರಸಾದ ದಿಂದಲೋ ತಮ್ಮ ತಮ್ಮ ಕಷ್ಟಗಳು ಪಾರಾದಾಗ ಅತಿಯಾದ ಭಕ್ತಿಯಿಂದ ಚೌಡಮ್ಮನ ಹಬ್ಬದಲ್ಲಿ ಪಾಲ್ಗೊಳ್ಳಲು ಬರುತ್ತಾರೆ.

ಕೆಲವರಿಗೆ ಭಾವಾವೇಶದಿಂದ, ಮಾನಸಿಕ ಒತ್ತಡದಿಂದ ಉಪವಾಸದ ಫಲವಾಗಿ ಜ್ಞಾನ ತಪ್ಪುವುದುಂಟು. ಆಗ, ತಾನೇ ದೇವರೆಂದು ಹೇಳುತ್ತಾ ಪ್ರಜ್ಞೆಯಿಲ್ಲದೆ ವಿಚಿತ್ರ ರೀತಿಯಲ್ಲಿ ವರ್ತಿಸುವುದುಂಟು. ಆಗ ಜನರು ಚೌಡಮ್ಮ ಮೈಮೇಲೆ ಬಂದಳು ಎನ್ನುತ್ತಾರೆ.

"ನಿನ್ನ ಹಬ್ಬದಲ್ಲಿ ಬಾಯಿಬೀಗ ಚುಚ್ಚಿಸಿಕೊಳ್ಳುತ್ತೇನೆ' ಎಂದು ಹರಕೆ ಹೊತ್ತ ಅನೇಕ ಜನ ಸ್ತ್ರೀ ಪುರುಷರು ಮಂಗಳವಾರದ ದಿನ ಯಾವ ಆಹಾರವನ್ನೂ ತೆಗೆದುಕೊಳ್ಳದೆ ಇರುತ್ತಾರೆ. ಸಂಜೆ ಸುಮಾರು ಐದು ಗಂಟೆಗೆ ಬಾಯಿಬೀಗದ ಮೆರವಣಿಗೆಗೆ ಸಿದ್ಧವಾಗುತ್ತಾರೆ.

ಬಾಯಿಬೀಗ ಎಂದರೇನು? ಬಾಯಿಗೆ ಮಾತನಾಡದಂತೆ ಬೀಗ ಹಾಕುವುದು! ಸುಮಾರು

ಐದು ಅಂಗುಲ ಉದ್ದ ಎರಡೂವರೆ ಅಂಗುಲ ಅಗಲ ಇರುವ ಬೆಳ್ಳಿಯ ಅಥವಾ ತಾಮ್ರದ ಚೂಪಾದ ಆಯಾಕಾರದ ಕಡ್ಡಿ. ಇದನ್ನು ಕಟ್ಟಬಾಯಿಯ ಪಕ್ಕದಲ್ಲಿ ಮೃದುವಾಗಿರುವ ಕಡೆ ನೋಡಿ ಎರಡೂ ಕೆನ್ನೆಗಳನ್ನು ಸೇರಿಸಿ ಚುಚ್ಚುತ್ತಾರೆ. ಬಾಯಿಗೆ ಬೀಗಮುದ್ರೆ ಮಾಡುತ್ತಾರೆ. ಇದೇ ಬಾಯಿ ಬೀಗ, ಈ ಬಾಯಿ ಬೀಗಗಳನ್ನು ಅಕ್ಕಸಾಲಿಗರು ಮಾಡಿ ಮಾರುತ್ತಾರೆ.

ಅಂದು ಸಂಜೆ ಇನ್ನೂ ಮೂರಾಳುದ್ದಿ ಹೊತ್ತು* ಇರುವಾಗಲೇ ಹರಕೆ ಹೊತ್ತ ಎಲ್ಲರೂ ಉಜ್ಜನಿಯ ಮನೆ ದೇವರು ಗುಡಿಯ ಮುಂದೆ ಸೇರುತ್ತಾರೆ. ಮುಕ್ಕಾಲು ಭಾಗ ಹೆಂಗಸರಾದರ ಕಾಲು ಭಾಗ ಗಂಡಸರು, ಮನೆ ದೇವರು ಗುಡಿಯಲ್ಲಿ ಅವರಿಗೆ ಬಾಯಿಬೀಗ ಚುಚ್ಚುತ್ತಾರೆ. ಎಲ್ಲರಿಗೂ ಚುಚ್ಚಿ ಆದನಂತರ ಬಾಯಿಬೀಗದವರ ಜೊತೆ ಎಲ್ಲ ಗುಡ್ಡರೂ ಹೊರಡುತ್ತಾರೆ. ಆದರೆ ಈಗ ದೇವರನ್ನಾಗಲೀ ಹೆಬ್ಬಾರೆಗಳನ್ನಾಗಲೀ ಹೊತ್ತು ಬರುವುದಿಲ್ಲ. ಬರೀ ಕೈಯಲ್ಲಿ ಬರುತ್ತಾರೆ. ತಮಟೆ ನಗಾರಿ ವಾದ್ಯಗಳ ಸದ್ದು, ಎಲ್ಲರ ಬಾಯಿಗೂ ಬೀಗ, ಈ ಮೌನ ಮೆರವಣಿಗೆ ದೊಡ್ಡಗುಡಿಯ ಮುಖವಾಗಿ ಹೊರಡುತ್ತದೆ. ಬಾಯಿಬೀಗ ಚುಚ್ಚಿಸಿಕೊಂಡವರ ಜೊತೆಗೆ ಒಬ್ಬೊಬ್ಬರ ಸಹಾಯಕರಿರುತ್ತಾರೆ. ಏಕೆಂದರೆ ಎಷ್ಟೋವೇಳೆ ಬಾಯಿಬೀಗ ಚುಚ್ಚಿಸಿಕೊಂಡವರಿಗೆ ಪ್ರಜ್ಞೆ ತಪ್ಪುವುದರಿಂದ, ಎಲ್ಲರ ಕೈಯಲ್ಲೂ ಗಂಧದಕಡ್ಡಿಯ ಕಂತೆಗಳು ಉರಿಯುತ್ತಿರುತ್ತವೆ. ಅವರ ಈ ಗಂಭೀರ ನಡೆಯನ್ನು ನೋಡಲು ಚೆನ್ನಾಗಿರುತ್ತದೆ. ಗಂಡಸರು ಹೆಂಗಸರು ಎಂಬ ಭಾವನೆ ಸ್ವಲ್ಪವೂ ಇರುವುದಿಲ್ಲ. ಎಲ್ಲರ ಮನದಲ್ಲೂ ಭಕ್ತಿ ತುಂಬಿ ತುಳುಕುತ್ತಿರುತ್ತದೆ. ನಿಜವಾದ ಮುಗ್ಧಭಕ್ತಿಯನ್ನು ಪೂರ್ಣವಾಗಿ ಮನಗಾಣಬೇಕಾದರೆ ಈ ಮೆರವಣಿಗೆಯನ್ನು ನೋಡಬೇಕು. ಇವರನ್ನು ನೋಡಲು ಸುತ್ತಮುತ್ತ ಊರುಗಳವರು ಯಾತ್ರಿಕರು ದೊಡ್ಡಬೀದಿಯ ಇಕ್ಕೆಲಗಳಲ್ಲಿ ನೆರೆದಿರುತ್ತಾರೆ. ಈ ಬೃಹತ್ ಸಮೂಹ ನಿಧಾನವಾಗಿ ಮುಂಬರಿಯುತ್ತಾ ಕೊಂಡದ ಸುತ್ತ ಬಂದು ಸೇರುತ್ತದೆ.

ಇಲ್ಲಿ ಇನ್ನೊಂದು ತಮಾಷೆಯ ನೋಟವೆಂದರೆ ಕೊಂಡದ ಸುತ್ತ ನೆರೆದ ಈ ಸಮೂಹದ ಸುತ್ತಲೂ ಕುರಿಗಳನ್ನು ಓಡಿಸುವುದು! ಕುರಿಗಳಿಗೆ ಏನಾದರೂ ಕಾಯಿಲೆ ಆದಾಗ ಅದನ್ನು ಪರಿಹರಿಸುವಂತೆ ಚೌಡಮ್ಮನಲ್ಲಿ ಹರಕೆ ಮಾಡಿಕೊಳ್ಳುತ್ತಾರೆ. ಅಂತಹವರು ಇಂದು ದೇವಸ್ಥಾನದ ಬಯಲಿಗೆ ಕುರಿಗಳನ್ನು ಹೊಡೆದುಕೊಂಡು ಬಂದು, ಬಾಯಿಬೀಗದ ಮೆರವಣಿಗೆಯವರು ಬರುವುದನ್ನು ಇದಿರು ನೋಡುತ್ತಿರುತ್ತಾರೆ. ಎಲ್ಲರ ಕುರಿಗಳನ್ನು ಒಟ್ಟುಗೂಡಿಸಿ ಕೊಂಡದ ಸುತ್ತ ನಿಂತಿರುವ ಜನರ ಸುತ್ತ ಸುತ್ತಿಸುತ್ತಾರೆ. ಸಾವಿರಾರು ಕುರಿಗಳು ಸುತ್ತುವಾಗ ಅವುಗಳ ಅರಚಾಟ, ಕಿರಿಚಾಟದ ಜೊತೆಗೆ ಓಡಿಸುವವರ ಸಿಳ್ಳೆ, ಚಪ್ಪಾಳೆ, ಕರೆ ತುಂಬ ವಿನೋದ

---

* ಹಳ್ಳಿಗಳಲ್ಲಿ ಸೂರ್ಯ ಯಾವ ಸಮಯಕ್ಕೆ ಬಂದಿದ್ದಾನೆ, ಆಕಾಶದ ಯಾವ ನೇರಕ್ಕೆ ಬಂದಿದ್ದಾನೆ ಎಂಬುದನ್ನು ಹೇಳುವಾಗ, ಒಂದಾಳುದ್ದಿ, ಎರಡಾಳುದ್ದಿ, ಮೂರಾಳುದ್ದಿ, ನಾಲ್ಕಾಳುದ್ದಿ ಹೀಗೆ ಹೇಳುತ್ತಾರೆ.

ವಾಗಿರುತ್ತದೆ. ಹತ್ತಾರು ಸುತ್ತು ಸುತ್ತಿದ ನಂತರ ಆಚೆಗೆ ಹೊಡೆದುಕೊಂಡು ಹೋಗುತ್ತಾರೆ. ಆನಂತರ ಊರಲ್ಲರ ಕುರಿಗಳನ್ನು ತಮ್ಮ ತಮ್ಮವಾಗಿ ವಿಂಗಡಿಸಿಕೊಳ್ಳಬೇಕಾದರೆ ಅವರಿಗೆ ಸಾಕೋ ಸಾಕಾಗುತ್ತದೆ.

ದೇವರಗುಡ್ಡ, ಕರಗದಗುಡ್ಡ, ಧೂಪುಂಡಿಗೆ ಮತ್ತು ಹೆಬ್ಬಾರಗುಡ್ಡರುಗಳು ಕೊಂಡದ ಬಾಗಿಲಿನಲ್ಲಿ ಬಂದು ನಿಲ್ಲುತ್ತಾರೆ. ಅಗಸರವನು ಮುಂದೆ ಪತ್ತು ಹಿಡಿದಿರುತ್ತಾನೆ. ಹಜಾಮರವನು ವಾಲಗ ಊದುತ್ತಿರುತ್ತಾನೆ. ಹೊಲೆಯರು ತಮಟೆ ನಗಾರಿ ವಾದ್ಯಗಳನ್ನು ಮೊಳಗಿಸುತ್ತಿರುತ್ತಾರೆ. ಬಿಳಿಯ ಛತ್ರಿಯ ಹಿಂದೆ ಪೂಜಾರಯ್ಯನ ಜೊತೆ ಈ ಗುಡ್ಡರೂ ಸೇರಿ ಕೊಂಡದ ಸೌದೆಗಳನ್ನು ಮೂರು ಸುತ್ತು ಸುತ್ತುತ್ತಾರೆ. ನಾಲ್ಕು ಮೂಲೆಗಳಲ್ಲಿಯೂ ನಮಸ್ಕರಿಸುತ್ತಾರೆ. ಕೊಂಡದ ಬಲಪಕ್ಕದ ಮಧ್ಯ ಭಾಗದಲ್ಲಿ ನಿಂತು ಎಲ್ಲರೂ ಪೂಜೆ ಮಾಡುತ್ತಾರೆ. ಪೂಜಾರಯ್ಯ ತೀರ್ಥ ಹಾಕುತ್ತಾನೆ. ಗುಡ್ಡರು ಒಂದೇ ಒಂದು ಕರ್ಪೂರದ ಬಿಲ್ಲೆಯನ್ನು ಹೊತ್ತಿಸಿ ಸೌದೆಯ ರಾಶಿಗೆ ಇಡುತ್ತಾರೆ. ಕೇವಲ ಒಂದು ಕರ್ಪೂರದ ಉರಿಯಿಂದ ಆ ಮಹಾಸೌದೆಗಳ ರಾಶಿ ಹೊತ್ತಿ ಉರಿಯುವುದನ್ನು ಅಲ್ಲೇ ನಿಂತುನೋಡಿದರೆ ನಮಗೆ ನಿಜಕ್ಕೂ ಪ್ರಕೃತಿಯ ಬಗೆಗೆ ಆಶ್ಚರ್ಯ ಮೂಡುತ್ತದೆ. ಬೆಂಕಿ ಹಚ್ಚುತ್ತಿದ್ದಂತೆಯೇ ಹರ್ಷೋದ್ಗಾರದಿಂದ ನೆರೆದಿದ್ದ ಸಮೂಹವೆಲ್ಲ ಕೈಚಪ್ಪಾಳೆತಟ್ಟಿ ಒಕ್ಕೊರಲಿನಿಂದ ಕೂಗುತ್ತದೆ. ಬಾಯಿಬೀಗದವರ ಕೈಲಿದ್ದ ಗಂಧದ ಕಡ್ಡಿಗಳನ್ನು ಎಲ್ಲರೂ ಎಸೆಯುತ್ತಾರೆ. ಶುಭಕೋರುತ್ತಾರೆ. ಈ ಸಮಯದಲ್ಲಿ ನಗಾರಿ ತಮಟೆಗಳು ಮೊಳಗುತ್ತಿರುತ್ತವೆ.

ಕೈಯಲ್ಲಿ 'ಹುಲ್ಲುಗುರು' ಮೈಯಲ್ಲಿ ಗಂಧೆಗಳು ಇತ್ಯಾದಿ ಆದವರು 'ಕೊಂಡಕ್ಕೆ ಹರಳು ಹಾಕುತ್ತೇವೆ, ಪರಿಹರಿಸು' ಎಂದು ಹರಕೆ ಹೊತ್ತಿರುತ್ತಾರೆ. ಅಂತಹವರು ಇಂದು ಹಿಡಿಹಿಡಿ ಹರಳುಗಳನ್ನು ಸೌದೆಗಳ ಮೇಲಕ್ಕೆ ಎಸೆಯುತ್ತಾರೆ. ಇದಕ್ಕೆ 'ಹಳ್ಳು ಹಾಕುವುದು' ಎನ್ನುತ್ತಾರೆ. ಇಷ್ಟರಲ್ಲಿ ಪಡುವಣದಲ್ಲಿ ಸೂರ್ಯ ಮುಳುಗಿರುತ್ತಾನೆ. ಇಷ್ಟೆಲ್ಲ ಮುಗಿದ ಮೇಲೆ ಬಾಯಿಬೀಗದವರು ಗುಡಿಯೊಳಕ್ಕೆ ಹೋಗುತ್ತಾರೆ. ಅಲ್ಲಿ ಎಲ್ಲರ ಬಾಯಿಯ ಬೀಗಗಳನ್ನೂ ಕಳೆಯುತ್ತಾರೆ. ಚುಚ್ಚಿದ ಭಾಗಕ್ಕೆ ಅರಿಶಿನ ಕುಂಕುಮವನ್ನು ಸವರುತ್ತಾರೆ. ಪೂಜಾರಯ್ಯ ತೀರ್ಥ ಹಾಕುತ್ತಾನೆ. ಆಮೇಲೆ ಅವರು ಹೊರಗೆ ಬರುತ್ತಾರೆ. ಇಲ್ಲಿಗೆ ಬಾಯಿಬೀಗ ಮುಗಿಯುತ್ತದೆ.

**ಹೆಬ್ಬಾರೆ ಗಡಿಗೆ ತರುವುದು - ಕೊಂಡಕ್ಕೆ ತೀರ್ಥಹಾಕುವುದು**

ಸಂಜೆ ಏಳುಗಂಟೆಗೆ ಹೆಬ್ಬಾರೆಗುಡ್ಡರು ಗಡಿಗೆತರುವ ಶಾಸ್ತ್ರ. ಇಬ್ಬರು ಹೆಬ್ಬಾರೆಗುಡ್ಡರು ಹೆಬ್ಬಾರೆಗಳನ್ನು ಹೊತ್ತುಕೊಳ್ಳುತ್ತಾರೆ. ಇಬ್ಬರು ಹೊಸಗಡಿಗೆಗಳನ್ನು ಹಿಡಿದುಕೊಳ್ಳುತ್ತಾರೆ. ಮತ್ತಿಬ್ಬರು ಅವರಿಗೆ ಸಹಾಯಕರಾಗಿರುತ್ತಾರೆ. ದಾಸಯ್ಯನೂ ಇವರ ಜೊತೆಯಲ್ಲಿ ಹೊರಡುತ್ತಾನೆ. ವಾದ್ಯ ತಮಟೆಗಳ ಜೊತೆ ನೂರಾರು ಜನ ಇವರನ್ನು ಹಿಂಬಾಲಿಸುತ್ತಾರೆ. ಇವರೆಲ್ಲ ಚೌಡಮ್ಮನ ಗುಡಿಯ 'ಮಕನೇರಕ್ಕೆ' ಇರುವ ಮಜ್ಜನಬಾವಿಗೆ ಬರುತ್ತಾರೆ.

ಮಜ್ಜನಬಾವಿ ತೀರ ಕಿರುದಾದ ಆಳವಾದ ಬಾವಿ, ವೃತ್ತಾಕಾರದಲ್ಲಿರುವ ಚಕ್ರಬಾವಿ. ನೆಲದಸಮಕ್ಕೆ ಕಲ್ಲು ಚಪ್ಪಡಿಗಳನ್ನು ಹಾಸಿದ್ದಾರೆ. ಇದರಲ್ಲಿ ದಿನವೂ ಚೌಡಮ್ಮ ಸ್ನಾನ ಮಾಡುತ್ತಾಳೆಂದೂ ಚೌಡಮ್ಮನ ಗುಡಿಯಿಂದ ಈ ಬಾವಿಗೆ ಭೂಮಿಯ ಒಳಗೇ ಸುರಂಗಮಾರ್ಗ ಇದೆಯೆಂದೂ ನಮ್ಮಜನ ನಂಬಿದ್ದಾರೆ. ಈ ಬಾವಿಯನ್ನು ಸ್ನಾನಕ್ಕಾಗಿ ಚೌಡಮ್ಮನೇ ಕಟ್ಟಿಸಿದಳಂತೆ!

ವಡ್ಡಾನ ಕರಸಾಳೆ ವಳಮಾತ ಯೇಳವಳೆ

ಗುದ್ದು ಮಂಕರಿಯ ತರಸವಳೆ | ಚೌಡಮ್ಮ

ಮಜ್ಜನಬಾವಿಯ ಕಟ್ಟಸವಳೆ

ಈ ಮಜ್ಜನಬಾವಿಯ ಹತ್ತಿರಕ್ಕೆ ಬಂದು ಅದರ ಸುತ್ತಲೂ ಜನ ಸೇರುತ್ತಾರೆ. ನೆಲವನ್ನು ಸ್ವಚ್ಛಮಾಡಿ, ನೀರು ಚುಮುಕಿಸಿ ಮಡಿಬಟ್ಟೆ ಹಾಸಿ ಅದರ ಮೇಲೆ ಹೆಬ್ಬಾರೆಗಳನ್ನು ಇಡುತ್ತಾರೆ. ಹೊಸ ಗಡಿಗೆಗಳಿಂದ ನೀರು ಸೇದಿ ತೊಳೆದು ಇನ್ನೊಂದು ಸಲ ತುಂಬ ಸೇದುತ್ತಾರೆ. ತುಂಬಿದ ಗಡಿಗೆಗಳಿಗೆ ವಿಭೂತಿ ಇಟ್ಟು ಹೊಂಬಾಳೆಯಿಂದ ಅಲಂಕರಿಸಿ ಹೂವಿನ ಮಾಲೆಯನ್ನು ಗಡಿಗೆಯ ಕೊರಳಿಗೆ ಕಟ್ಟುತ್ತಾರೆ, ಅನಂತರ ಪೂಜಿಸುತ್ತಾರೆ. ದಾಸ್ಯ ತೂssssತ್ತೂತ್ತೂತ್ತೂsss ಎಂದು ಬಾಕಿ ಊದುತ್ತಾನೆ. ಸೇರಿದ ಜನರೆಲ್ಲ ಕೈ ಚಪ್ಪಾಳೆತಟ್ಟಿ ಕಿರುಚುತ್ತಾರೆ. ಆಗ ಹೆಬ್ಬಾರೆಗುಡ್ಡರಿಗೆ ಎಲ್ಲಿಲ್ಲದ ಆವೇಶ ಬರುತ್ತದೆ. ಮೈಮೇಲೆ ಹೆಬ್ಬಾರಮ್ಮ ಬರುತ್ತಾಳೆ. ಅನೇಕರು ಸುತ್ತುಗಟ್ಟಿ ಏನೇನೋ ಕೇಳುತ್ತಾ ಹರಕೆ ಕಟ್ಟಿಕೊಳ್ಳುತ್ತಾರೆ. ಇಷ್ಟೆಲ್ಲ ಆದಮೇಲೆ ಹೆಬ್ಬಾರೆ ಗುಡ್ಡರು ಹೆಬ್ಬಾರೆಗಳನ್ನೂ ಗಡಿಗೆಗಳನ್ನೂ ಹೊತ್ತುಕೊಂಡು ಏಳುಬೀಳುವ ಭಯವಿಲ್ಲದೆ, ಮುಂದೆ ಇರುವ ಕಲ್ಲು ಕೂಳೆಗಳನ್ನೂ ಲೆಕ್ಕಿಸದೆ ಸಿಕ್ಕಾಪಟ್ಟೆ ಓಡುತ್ತಾರೆ. ಇವರ ಜೊತೆ ನೋಡಲು ಬಂದಿದ್ದ ಜನರೂ ಓಡುತ್ತಾರೆ. ಹೀಗೆ ನೆಗೆದು ಜಿಗಿದು ರೌದ್ರಾವತಾರದಿಂದ ಒಂದೇ ಸಮನೆ ಓಡಿ ದೊಡ್ಡ ಗುಡಿಯ ಬಾಗಿಲಿಗೆ ಬರುತ್ತಾರೆ. ಕೊಂಡದ ಬಾಗಿಲಿಗೆ ಬಂದ ಅವರನ್ನು ಹತ್ತಾರು ಜನರು ಹಿಡಿದು ಅವೇಶ ಕುಗ್ಗುವವರೆಗೆ ನಿಲ್ಲಿಸುತ್ತಾರೆ. ಹೀಗೆ ಹತ್ತಾರು ಜನರು ಭದ್ರವಾಗಿ ಸುತ್ತುಗಟ್ಟಿ ಹಿಡಿದರೂ ಮುಂದೆನುಗ್ಗಿ ದೇವಸ್ಥಾನ ಪ್ರವೇಶಿಸಲು ಹಾತೊರೆಯುತ್ತಾರೆ. ಆದರೆ ಸುತ್ತುಗಟ್ಟಿದ ಜನ ಅವರನ್ನು ಬಿಡುವುದಿಲ್ಲ.* ಇವರು ಶಾಂತವಾದಮೇಲೆ ದೊಡ್ಡ ಗುಡಿಯ ಪೂಜಾರಯ್ಯ ಬಂದು ಇವರಿಗೆ ತೀರ್ಥ ಹಾಕುತ್ತಾನೆ. ಆಮೇಲೆ ಗಡಿಗೆಯಲ್ಲಿ ತಂದಿದ್ದ

---

* ಹೆಬ್ಬಾರೆ ಗುಡ್ಡರಿಗೆ ಶಾಸ್ರ್ರೋಕ್ತವಾಗಿ ಜನಿವಾರಹಾಕಿ ಬ್ರಾಹ್ಮಣರನ್ನಾಗಿ ಮಾಡಿದರೂ ಅವರು

* ಚೌಡಮ್ಮನ ಗುಡಿಗೆ ಪ್ರವೇಶಿಸಲು ಬಿಡುವುದೇ ಇಲ್ಲ. ಏಕೆ ಎಂದು ಕೇಳಿದರೆ 'ಹೊಲೇ ಹೊಲೇರೇ ತಾನೇ' ಅಂದು ಬಿಡುತ್ತಾರೆ. ಕೊಂಡದಲ್ಲಿ ಓಡುವುದಕ್ಕೆ ಅವಕಾಶವಿದೆ, ಹೆಬ್ಬಾರೆಗಳನ್ನು ಹೊತ್ತು


ಎಲ್ಲರ ಜೊತೆಯಲ್ಲಿ ಕುಣಿಯುವುದಕ್ಕೆ ಅವಕಾಶವಿದೆ. ಆದರೆ ದೇವಸ್ತಾನದೊಳಕ್ಕೆ ಪ್ರವೇಶಿಸಲು ಮಾತ್ರ ಅವಕಾಶ ಕೊಡದಿರುವ ಬಗ್ಗೆ ನಾವು ತೀವ್ರವಾಗಿ ಯೋಚಿಸಬೇಕಾಗಿದೆ



ತುಂಬಿದಗಡಿಗೆಯ ನೀರನ್ನು ಹೆಬ್ಬಾರೆಗುಡ್ಡರು ಕೊಂಡಕ್ಕೆ ಚುಮುಕಿಸುತ್ತಾರೆ. ಜನರೆಲ್ಲ ಚಪ್ಪಾಳೆ ತಟ್ಟುತ್ತಾರೆ. ಹೆಬ್ಬಾರೆ ಗುಡ್ಡರು ತಮ್ಮ ಗುಡಿಗೆ ಹಿಂದಿರುಗಿ ಹೋಗುತ್ತಾರೆ. ಇವರು ತೀರ್ಥಹಾಕಿದ ಮೇಲೆಯೇ ಕೊಂಡ ಚೆನ್ನಾಗಿ ಹತ್ತಿಕೊಂಡು ಉರಿಯುತ್ತದೆ ಎಂದು ಹೇಳುತ್ತಾರೆ.

**ಕೊಂಡ ಬೇಯಿಸುವುದು**

ರಾತ್ರಿ ಸುಮಾರು ಹತ್ತು ಹನ್ನೊಂದು ಗಂಟೆಗೆ ಕೊಂಡದ ಕೆಂಗುರಿ ಏಳೂರಿಗೂ ಕಾಣುತ್ತದೆ. ಉರಿಯಿಂದ ಎದ್ದ ಬೆಂಕಿಯ ಕಿಡಿಗಳು ಸುತ್ತಮುತ್ತಲ ಹಳ್ಳಿಗಳಿಗೆಲ್ಲ ಗೋಚರಿಸುತ್ತವೆ. ಸೌದಗಳ ಚಟಪಟ ಶಬ್ದ ಊರಜನರೆಲ್ಲರ ಕಿವಿಗಳಿಗೆ ಬೀಳುತ್ತಿರುತ್ತದೆ. ಗಂಧದ ಸೌದೆಗಳ ಕಂಪು ತಂಪುಗಾಳಿಯೊಡಗೂಡಿ ಸುತ್ತಮುತ್ತಲ ಪ್ರದೇಶವನ್ನೆಲ್ಲಾ ಆವರಿಸುತ್ತದೆ. ದೂರದಿಂದ ನೋಡಿದರೆ ಸಾಕ್ಷಾತ್ ಅಗ್ನಿದೇವನೇ ಇಂದು ಉಜ್ಜನಿಗೆ ಅತಿಥಿಯಾಗಿ ಇಳಿದು ಬಂದು ತನ್ನ ಜ್ವಾಲಾನಾಲಿಗೆಗಳನ್ನು ಚಾಚುತ್ತಿರುವನೋ ಎಂಬ ಭಾವನೆ ಮೂಡಿ ಬರುತ್ತದೆ. ಈ ದೃಶ್ಯವನ್ನು



ನೋಡಬೇಕಾದರೆ ದೂರದಿಂದಲೇ ನೋಡಬೇಕು. ಹತ್ತಿರದಲ್ಲಿ ತುಂಬಾ ಹಬೆ ಕಾವು ನಮ್ಮನ್ನು ದೂರ ಸರಿಸುತ್ತದೆ. ಈ ಸಮಯದಲ್ಲಿ ಸೌದೆಗಳು ಬೆಂಕಿಯ ರಸವನ್ನೇ ಮುಕ್ಕಳಿಸಿ ಉಗಿಯುತ್ತವೆ.

ಅಸಿಯಾ ಕಗ್ಗಲಿಸೌದ ರಸಬುಟ್ಟಿ ಬೇಯುವಾಗ

ನಿನ್ನ ಸುಮಕ್ಕು ಕೊಂಡಾಕೆ ಬರುವಾಗ | ಚೌಡಮ್ಮ

ರಸವಾ ಮುಕ್ಕಳಿಸಿ ಉಗುದಾಳೆ

ನಾನಾ ವಿಧವಾದ ಕಾಡುಸೌದೆಗಳು ಬೆರೆತು ಬೇಯುವಾಗ ಅವುಗಳ ರಸ ಹೊರಬರುತ್ತಿರುತ್ತದೆ. ಉರಿಯುವ ರಭಸಗಳಿಗೆ ಗಳಿಗೆಗೂ ಜಾಸ್ತಿಯಾಗುತ್ತಿರುತ್ತದೆ. ಕೊಂಡ



ರೌದ್ರಾಕಾರವನ್ನು ತಾಳುತ್ತದೆ. ಉರಿದು ಉರಿದು ಕೆಂಡಗಳಾಗುತ್ತವೆ. ಇದೊಂದು ಮನಸ್ಸಿನಿಂದ ಅಳಿಸಲಾಗದ ಮರೆಯಲಾಗದ ಭವ್ಯ ದೃಶ್ಯ, ಭಯಾನಕ ಗಂಭೀರ ಆದರೂ ಸುಂದರ ದೃಶ್ಯ.

ಹತ್ತಾರು ಜನರು ಮೈತುಂಬ ಬೆವರು ಸುರಿಸುತ್ತಾ ಬಹಳ ಪ್ರಾಯಾಸದಿಂದ ಕೈಯಲ್ಲಿ ಮರದ ಹಿಡಿ ಇರುವ ಕಬ್ಬಿಣದ ಸಲಾಕಿಗಳನ್ನು ಹಿಡಿದು ಕೊಂಡವನ್ನು ಸಮ ಮಾಡುತ್ತಿರುತ್ತಾರೆ. ಕೆಲವರು ಹರಕೆ ಹೊತ್ತು ಊಟ ಮಾಡದೆ ಕೊಂಡ ಬೇಯಿಸಲು ಬರುತ್ತಾರೆ. ಉರಿದ ದಪ್ಪದಪ್ಪ ಕೆಂಡಗಳನ್ನು ಬಡಿದು ಬಡಿದು ಸಣ್ಣದನ್ನಾಗಿ ಮಾಡುತ್ತಾರೆ. ಹಸಿರು ಸೊಪ್ಪಿನಿಂದ ಬೀಸುತ್ತಾರೆ. ಚೌಡಮ್ಮನ ಕೊಂಡದಲ್ಲಿ ಒಂದೇ ಒಂದು ಸೌದೆಯನ್ನೂ ಬೇಯಲಿಲ್ಲ ಎಂದು ಎತ್ತಿ ಹೊರಗೆ ಹಾಕುವ ಹಾಗಿಲ್ಲ. ಚೆನ್ನಾಗಿ ಬೆಂದಮೇಲೆ ಕೆಂಡಗಳನ್ನು ಬಡಿದು ಧ್ವಂಸ ಮಾಡುತ್ತಾರೆ. ಕೆಂಡಗಳು ಪುಸಿಯಾಗಿದ್ದರೆ ಗುಡ್ಡರು ಕೊಂಡದಲ್ಲಿ ಓಡುವಾಗ ಅವರ ಕಾಲುಗಳು ಕೆಂಡದೊಳಕ್ಕೆ ಇಳಿಯುತ್ತವೆ. ಕೆಲವು ಸಲ ಗುಡ್ಡರಿಗೆ ಮಂಡಿಯ ತನಕವೂ ಕೆಂಡದೊಳಕ್ಕೆ ಕಾಲು ಇಳಿದುದ್ದುಂಟು. ಆದ್ದರಿಂದ ಬಡಿದು ಧ್ವಂಸಮಾಡುತ್ತಾರೆ. ಹೇಗೇ ಧ್ವಂಸ ಮಾಡಿದರೂ ಗುಡ್ಡರ ಕೆಳಗಿನ ಪಾದಗಳು ಕೊಂಡದೊಳಕ್ಕೆ ಹೋಗುವುದು ಮಾತ್ರ ಖಚಿತ. ಏಕೆಂದರೆ ನಾಲ್ಕು ಅಡಿಗಳ ಆಳದ ಕೊಂಡದಲ್ಲಿ ಕಾಲಿಳಿಯುವುದು ಸಹಜ.

**ನಿಡಸಾಲೆ ಚೌಡಮ್ಮ ಉಜ್ಜನಿಗೆ ಬರುವುದು**

ರಾತ್ರಿ ಸುಮಾರು ಹನ್ನೆರಡು ಗಂಟೆಯ ಸಮಯಕ್ಕೆ ಉಜ್ಜನಿಯ ಯಾವುದಾದರೂ ಮಾಳಿಗೆ ಮನೆಯ ಮೇಲೆ ನಿಂತು ನಿಡಸಾಲೆ ಕಡೆ ನೋಡಿದರೆ, ಉಜ್ಜನಿ ನಿಡಸಾಲೆ ಮಧ್ಯದ 'ಕೆಬ್ಬಳ್ಳಿ ಕಳ್ಳಿಹೊಬ್ಬೆ' ಬಾರೆಯಲ್ಲಿ ನಾಲ್ಕಾರು ಪತ್ತುಗಳನ್ನು ಬೀಸುತ್ತಾ, ನೂರಾರು ಜನರು ಕೇಕೆಹಾಕುತ್ತಾ ನಗಾರಿಯ ಶಬ್ದದ ಜೊತೆ ಒಂದು ಗುಂಪು ಬರುವುದು

ಕಾಣಿಸುತ್ತದೆ. ಆ ಗುಂಪು ಉಜ್ಜನಿಗೆ ಹತ್ತಿರ ಹತ್ತಿರವಾಗುತ್ತಿದ್ದಂತೆ ಕೇಕೆಯ ನಗಾರಿಯ ಶಬ್ದ ಹೆಚ್ಚು ಹೆಚ್ಚು ಕೇಳಿಸುತ್ತದೆ. ಆಗ ಆ ಶಬ್ದ ಕೇಳಿದವರೆಲ್ಲ ತಿಳಿದುಕೊಳ್ಳುತ್ತಾರೆ, ನಿಡಸಾಲೆ ಚೌಡಮ್ಮ ಉಜ್ಜನಿಗೆ ಬರುತ್ತಿದ್ದಾಳೆ ಎಂದು.

ನಿಡಸಾಲೆ ಚೌಡಮ್ಮ, ಉಜ್ಜನಿ ಚೌಡಮ್ಮನ ತಂಗಿ ಎಂದು ನಮ್ಮ ಹಳ್ಳಿಗಳು ಕತೆ ಹೇಳುತ್ತಾರೆ. ನಿಡಸಾಲೆ ಚೌಡಮ್ಮ ಕೊಂಡದ ದಿನ ಉಜ್ಜನಿಗೆ ಏಕೆ ಬರುತ್ತಾಳೆ? ಎಂದು ಕೇಳಿದರೆ ಅದಕ್ಕೂ ಒಂದು ಕತೆ ಹೇಳುತ್ತಾರೆ. ಕತೆ ಹೀಗಿದೆ.

ತ್ರಿಪುರಾಪುರಿ ಪಟ್ಟಣದಿಂದ ಭೂಮಿಗೆ ಬಂದು ನೆಲಸಿದ ಏಳುಜನರಲ್ಲಿ ನಿಡಸಾಲೆ ಚೌಡಮ್ಮನೂ ಒಬ್ಬಳು. ಉಜ್ಜನಿ ಚೌಡಮ್ಮನಿಗೆ ಸ್ವಲ್ಪಹತ್ತಿರದಲ್ಲಿ ಇರುವವಳೆಂದರೆ ನಿಡಸಾಲೆ ಚೌಡಮ್ಮನೇ. ಉಳಿದವರು ದೂರ ದೂರದಲ್ಲಿ ನೆಲಸಿದರು. ಒಬ್ಬಳೇ ಇದ್ದು ಇದ್ದು ಬೇಸರವಾದ ಉಜ್ಜನಿ ಚೌಡಮ್ಮ ಒಂದು ಸಲ ನಿಡಸಾಲೆಗೆ ಹೋಗಿ ತನ್ನೂರಾದ ಉಜ್ಜನಿಗೆ



ಆಗಾಗ ಬಂದುಹೋಗು ಎಂದು ತಂಗಿಯನ್ನು ಕೇಳಿಕೊಂಡಳು. ಅದಕ್ಕೆ ನಿಡಸಾಲೆ ಚೌಡಮ್ಮ "ನಿನಗಾದರೆ ಅದ್ದೂರಿಯ ಹಬ್ಬ ನಡೆಯುತ್ತದೆ. ಪಟ್ಟಣದ ಜನರಿಂದ ಪೂಜೆ ಮಾಡಿಸಿಕೊಳ್ಳುತ್ತಿದ್ದೀಯ ನನಗೇನು ಬಂತು?" ಎಂದು ಹೇಳಿದಳು. ಆಗ ಉಜ್ಜನಿ ಚೌಡಮ್ಮ "ನೀನು ಉಜ್ಜನಿಗೆ ಬರುವುದಾದರೆ ನನ್ನ ಹಬ್ಬದಲ್ಲಿ 'ಮುನ್ನಾರತಿ' ಮುಂಗೋಡ ನಿನಗೆ ಬಿಟ್ಟುಕೊಡುತ್ತೇನೆ" ಎಂದು ಹೇಳಿದಳು. ತಂಗಿಯನ್ನು ಸಮಾಧಾನ ಮಾಡಿ ಕರೆತಂದಳು. ಆಮೇಲೆ ನಿಡಸಾಲೆ ಚೌಡಮ್ಮ ವರ್ಷಕ್ಕೊಂದುಸಲ ಉಜ್ಜನಿಗೆ ಬರಲು ಪ್ರಾರಂಭಿಸುತ್ತಾಳೆ. ಈ ಕತೆಗೆ ಅನುಗುಣವಾಗಿ ಸೋಮವಾರದ ಮೊದಲ ಆರತಿ, ನಿಡಸಾಲೆಯವರಿಂದಲೇ ಆಗಬೇಕು. ಮಂಗಳವಾರ ಮೊದಲು ಕೊಂಡಕ್ಕೆ ಇಳಿಯುವ ದೇವರು ನಿಡಸಾಲೆ ಚೌಡಮ್ಮನೇ

ಉಜ್ಜನಿಯಲ್ಲಿ ಕಂಬಹಾಕಿದ ದಿನದಿಂದ ನಿಡಸಾಲೆ ಚೌಡಮ್ಮನ ಗುಡಿಯಲ್ಲಿ ಆ ಗುಡ್ಡ, ಉಜ್ಜನಿ ಗುಡ್ಡರು ಅನುಸರಿಸುವ ಎಲ್ಲ ನಿಯಮಗಳನ್ನು ಅನುಸರಿಸಿ ಶಾಸೂಕ್ತವಾಗಿ ಗುಡಿಯಲ್ಲಿಯೇ ತಂಗುತ್ತಾನೆ. ಈ ದಿನ ಅವನು ಹೊಸವಸ್ತ್ರ ಧರಿಸಿ ತಲೆಗೆ ದಪ್ಪಪೇಟ ಸುತ್ತಿ, ನಡುವಿಗೆ ಕೆಂಪುವಸ್ತ್ರಕಟ್ಟಿ ಯುದ್ಧಕ್ಕೆ ಹೊರಟ ಮಹಾವೀರನಂತೆ ತಲೆಯಮೇಲೆ ಚೌಡಮ್ಮನನ್ನು * ಹೊತ್ತು ಗಂಭೀರವಾಗಿ ಉಜ್ಜನಿಯ ಹೆಬ್ಬಾಗಿಲ ಬಳಿಗೆ ಬಂದು ನಿಂತಾಗ ಉಜ್ಜನಿಯ ಅನೇಕರು ವಾದ್ಯ ಸಮೇತ ಹೋಗಿ 'ನಡಮುಡಿಯ' ಮೇಲೆ ಕರೆದುತರುತ್ತಾರೆ. ಆ ಗುಡ್ಡ ಮತ್ತು ಪರಿವಾರದವರು ಮನೆದೇವರ ಗುಡಿಗೆ ಬರುತ್ತಾರೆ. ಗುಡ್ಡ ಅಲ್ಲಿ ವಿಶ್ರಮಿಸುತ್ತಾನೆ.

**ಕೊಂಡ ಹಾಯುವುದು**

ರಾತ್ರಿ ಸುಮಾರು ಎರಡುಗಂಟೆಗೆ 'ದೇವರು ಎತ್ತುತ್ತಾರೆ'. ದೇವರುಗುಡ್ಡರು ನಿಡಸಾಲೆ ಚೌಡಮ್ಮ ಉಜ್ಜನಿಚೌಡಮ್ಮನ ಪೂಜೆಗಳನ್ನೂ, ಕರಗದ ಗುಡ್ಡ ಕರಗವನ್ನೂ ಹೊತ್ತುಕೊಳ್ಳುತ್ತಾರೆ. ಧೂಪುಂಡಿಗೆಯವನು ಧೂಪುಂಡಿಗೆ ಹಿಡಿದುಕೊಳ್ಳುತ್ತಾನೆ. ಇವರೆಲ್ಲ ಮನೆದೇವರ ಗುಡಿಯಿಂದ ಹೊರಡುತ್ತಾರೆ. ಹೆಬ್ಬಾರೆಗುಡ್ಡರಲ್ಲಿ ಇಬ್ಬರು ಹೆಬ್ಬಾರೆಗಳನ್ನು ಹೊತ್ತುಕೊಂಡು ಉಳಿದ ನಾಲ್ಕು ಜನರು ಅವರ ಸಹಾಯಕ್ಕಿದ್ದುಕೊಂಡು ನಗಾರಿ ತಮಟೆ ವಾದ್ಯಗಳ ಸಮೇತ ಊರಮುಂದಿನ ಬಸವಣ್ಣನ ದೇವಸ್ಥಾನದ ಬಯಲಿನಲ್ಲಿ ಸೇರುತ್ತಾರೆ. ಜವಳಿ ಕುಣಿಯುವ ಯುವಕರ ತಂಡ ಇವರನ್ನು ಸೇರಿಕೊಳ್ಳುತ್ತದೆ. ಏಳು ಊರಿನ ಭಾಗಗಳ ತಮಟೆಯವರೂ ವಾದ್ಯದವರೂ ಈಗ ಒಂದೇಕಡೆ ಸೇರುತ್ತಾರೆ. ಉತ್ಸಾಹದಿಂದ ಇರುವ ಎಲ್ಲ ಶಕ್ತಿಯನ್ನೂ ಉಪಯೋಗಿಸಿ ಅವುಗಳನ್ನು ಬಡಿಯುತ್ತಾರೆ. ಮುಂದೆ ಜವಳಿಯವರು

---

* "  ನಿಡಸಾಲೆ ಚೌಡಮ್ಮನ ಪೂಜೆ'



ಅವರ ಹಿಂದೆ ಗುಡ್ಡರು ತಾಳಕ್ಕೆ ತಕ್ಕಂತೆ ಗಂಭೀರತೆಯಿಂದ ಕುಣಿಯುತ್ತಾ ಮುಂದೆ ಮುಂದೆ ಸಾಗುತ್ತಾರೆ. ನಿಧಾನ ನಿಧಾನವಾಗಿ ಉಜ್ಜನಿಯ ದೊಡ್ಡ ಬೀದಿಯಲ್ಲಿ ಮುಂಬರಿಯುತ್ತಾ ಹೊನ್ನರುಳೀಮರವನ್ನು ತಲುಪುತ್ತಾರೆ.

ಈಗ ಈ ಗುಡ್ಡರ ಜೊತೆಗೆ ಜನಗಳೂ ಕಡಿಮೆ. ಕಾರಣ ಎಲ್ಲರೂ ಕೊಂಡ ನೋಡುವ ಆಸೆಯಿಂದ ತಮ್ಮ ತಮ್ಮ ಉತ್ತಮ ಸ್ಥಳಗಳನ್ನು ಕಾಯ್ದುಕೊಂಡು, ಕೊಂಡದ ಸುತ್ತ ಹಬೆಯಲ್ಲಿ ಬೆವರು ಸುರಿಸುತ್ತಾ ಗುಡ್ಡರು ಬರುವ ಹಾದಿಯನ್ನೇ ನೋಡುತ್ತಾ ನಿಂತುಕೊಳ್ಳುತ್ತಾರೆ. ನೂಕುನುಗ್ಗಲು, ಸಾವಿರಾರು ಜನರಿಗೆ ಕಾತುರ; ಈ ಬೃಹತ್ ಕೆಂಡದ ರಾಶಿಯ ಕೊಂಡದಲ್ಲಿ ಹೇಗೆ ಓಡುತ್ತಾರೋ ನೋಡಬೇಕು ಎಂದು. ಏಳೂರುಗಳ ಯಜಮಾನರೂ ಕೊಂಡದಸುತ್ತ ಸೇರಿ ಜನರನ್ನು ಸಮಾಧಾನಪಡಿಸುತ್ತಿರುತ್ತಾರೆ. ಹತ್ತಾರು ಜನ ಪೋಲೀಸರೂ ತಮ್ಮ ದೊಣ್ಣೆಲಾಟಿಗಳಿಗೆ ಕೆಲಸ ಕೊಡುತ್ತಾರೆ.

ಇತ್ತ ಗುಡ್ಡರು ಹೊನ್ನರುಳೀಮರವನ್ನು ಮೂರು ಸುತ್ತು ಸುತ್ತಿ ಮರದ ಬುಡದಲ್ಲಿ ದೇವರು ಕರಗ ಹೆಬ್ಬಾರೆಗಳನ್ನು ಇಳುಕಿ ಪೂಜೆಮಾಡಿ, ಕೊಂಡಸಿದ್ದವಾಯಿತೇ ಎಂದು ಕಾಯುತ್ತಿರುತ್ತಾರೆ. ಕೊಂಡ ಸಿದ್ಧವಾದಾಗ ನೋಡಬೇಕು.

ಮಂಗಳಾರದ ದಿನ ತಿಂಗಳುದ್ದಿ ಪೊತ್ತಿನಲ್ಲಿ

ಕೆಂಡ ಸುರುದಾವ ಮುಗಿಲುದ್ದ | ಚೌಡಮ್ಮ

ಕೊಂಡಾವ ಆಯೋರ ದುಡದಿಂದ

ಕೊಂಡದ ಸಿದ್ಧತೆಯಲ್ಲ ಮುಗಿದಿದೆ ಇನ್ನು ಬರಬಹುದು ಎಂದು ದೊಡ್ಡಗುಡಿಯಿಂದ ಸಂದೇಶ ಬಂದನಂತರ ಗುಡ್ಡರು ಹೊರಡುತ್ತಾರೆ. ನಡ ಮುಡಿಯ ಮೇಲೆ ನಡೆದು ಬರುತ್ತಾರೆ. ಈ ಸಮಯದಲ್ಲಿ ಗುಡ್ಡರ ಮನದಲ್ಲಿ ಏನಾಗುತ್ತಿರುತ್ತದೆ? ಅವರ ಭಯವೇನು? ಭಕ್ತಿಯೇನು? ಎಂದು ತಿಳಿದುಕೊಳ್ಳುವುದು ಅವಶ್ಯಕ. ಗುಡ್ಡರ ಅನುಭವವನ್ನೇ ಇಲ್ಲಿ ಹೇಳುವುದಾದರೆ, ಪೂಜೆಗಳನ್ನೂ ಹೆಬ್ಬಾರೆಗಳನ್ನೂ ಹೊತ್ತುಕೊಂಡಾಗ ಅವರಿಗೆ ನಾಲ್ಕು ಕೊಳಗ ರಾಗಿ ಹೊತ್ತುಕೊಂಡಂತೆ ಅನುಭವವಾಗುತ್ತದಂತೆ. ತಾವು ಕೊಂಡ ಹಾಯಬೇಕೆನ್ನುವುದಾಗಲೀ, ಮನಸ್ಸಿನಲ್ಲಿ ಬೆಂಕಿಯ ಚಿತ್ರವಾಗಲೀ, ಜನರ ನಡುವೆ ತಾವು ಇದ್ದೇವೆ ಎನ್ನುವ ಭಾವನೆಯಾಗಲೀ ಇರುವುದಿಲ್ಲವಂತೆ." ಹೊನ್ನರುಳೀ ಮರದಿಂದ ಕೊಂಡಕ್ಕೆ ಬರುವಾಗ ದಾರಿಯಲ್ಲಿ ಕೊಡಿಗೆ ಹೊಲ ಸಿಗುತ್ತದೆ. ಆ ಕೊಡಿಗೆ ಹೊಲಕ್ಕೆ ಬಂದಾಗ ಪೂಜೆಯ ಭಾರ ಒಂದು ಪಲ್ಲ ರಾಗಿಯಷ್ಟಾಗುತ್ತದಂತೆ. ಅಲ್ಲಿ ಪೂಜೆಯನ್ನು ಇಳಿಸಿ ಹೆಗಲ ಮೇಲೆ ಇಟ್ಟುಕೊಳ್ಳುತ್ತಾರೆ. ಹೀಗೆ ಹೆಗಲ ಮೇಲೆ ಇರಿಸಿಕೊಳ್ಳುವ ಕಾರಣ ಬಹಳ ಹೊತ್ತಿನಿಂದ ತಲೆಯ ಮೇಲೆ ಹೊತ್ತಿದ್ದು ಸ್ವಲ್ಪಕಾಲ ತಲೆಗೆ ವಿಶ್ರಾಂತಿ ಕೊಡಬೇಕೆಂದು ಇರಬಹುದು. ಆದರೆ ಇದಕ್ಕೆ ಬೇರೆ ಕಾರಣವನ್ನೂ



ಹೇಳುತ್ತಾರೆ. 'ಹಿಂದ' ಅಲ್ಲಿ ಸೀಗೇಮಳೆ ಇತ್ತಂತೆ. ಅದು ತಡೆದುಕೊಳ್ಳುತ್ತದೆ ಎಂಬ ಕಾರಣದಿಂದ ಹೆಗಲಮೇಲೆ ಇರಿಸಿಕೊಳ್ಳುತ್ತಿದ್ದರಂತೆ. ಈಗಲೂ ಅದನ್ನೇ ಅನುಸರಿಸಿ ಹೆಗಲ ಮೇಲೆ ಇಟ್ಟುಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಆದರೆ ಈಗ ಸೀಗಮಳೆ ಇಲ್ಲ. ಬರುವ ದಾರಿ ಬಯಲಾಗಿದೆ. ಕೊಂಡದ ಬಾಗಿಲಿಗೆ ಹತ್ತಿರ ಹತ್ತಿರ ಬರುತ್ತಿದ್ದಂತೆ ಪೂಜೆ ಹಬ್ಬಾರೆಗಳು ಹೂವಿನ ಬುಟ್ಟಿಯಷ್ಟು ಹಗುರವಾಗುತ್ತವಂತೆ, ಕೊಂಡದ ಬಾಗಿಲಿಗೆ ಬಂದು ನಿಂತಾಗ ಅವರ ಕಣ್ಣಿಗೆ ಕೊಂಡದೊಳಗಿನ ಕೆಂಡಗಳು ಹರಳುಕಾಯಿಯಂತೆ ಕಾಣುತ್ತವಂತೆ. ಆದರೆ ಆ ಸಮಯದಲ್ಲಿ ಅವರು ಮುಖನೇರದಲ್ಲಿ ಎದುರಿಗೆ ಕಾಣುವ ಚೌಡಮ್ಮನ ವಿಗ್ರಹದ ಮುಖದಲ್ಲಿಯೇ ಕಣ್ಣಿಟ್ಟಿರುತ್ತಾರೆ. ಈ ಸಮಯದಲ್ಲಿ ಕೊಂಡ ಮತ್ತು ಕೆಂಡ ಏನಾಗುತ್ತದೆ ಅಂದರೆ

ಕೊಂಡ ಕೊಣವಾದೋ ಕೆಂಡ ತಾವರೆಯಾದೋ

ಕೊಂಡಾಕೆ ಬಂದ ಸೌದೆ ವನವಾದೋ | ಚೌಡಮ್ಮ

ಅಸುಮಗನ ನೀನು ಕರೆಯವ್ವ

ಮುಗ್ಧ ಭಕ್ತಿಯ ದೃಢಮನಸ್ಸಿನ ಕಣ್ಣಿಗೆ ಕೊಂಡ ಹೀಗೆ ಕಾಣುತ್ತದಂತೆ!

ಕೊಂಡದ ಬಾಗಿಲಿಗೆ ಗುಡ್ಡರು ಬಂದಾಗ ಜನರೆಲ್ಲ ಕಾತುರಗೊಂಡು ಯಾವ ಜಾಗವು ಇವರಿಗೆ ಸಾಲದೆಂಬಂತೆ ದೇವಸ್ಥಾನದ ಶಿಖರವನ್ನೂ ಬಿಡದಂತೆ ಹತ್ತಿ ಕುಳಿತುಕೊಳ್ಳುತ್ತಾರೆ. ಕೊಂಡದ ಬಾಗಿಲಲ್ಲಿ ನಿಗದಿಯಾದವನೊಬ್ಬ ಹರಿತವಾದ ಮಚ್ಚಿನಿಂದ ಒಂದೇ ಏಟಿಗೆ ಕುರಿಯೊಂದರ ಕತ್ತನ್ನು ಕತ್ತರಿಸುತ್ತಾನೆ. ಇಡೀ ಹಬ್ಬಕ್ಕೆ ಇದೊಂದೇ ಬಲಿ, ಈ ಬಲಿ, ಕೊಂಡದಲ್ಲಿ ಓಡುವವರಿಗೆ ಯಾವ ಅಪಾಯವೂ ಆಗದಿರಲಿ ಎಂದು. ಈಗ ಅಕ್ಕಪಕ್ಕದಲ್ಲಿ ಹೊಲೆಯರು ನಿಂತು ವಾದ್ಯ ಊದುತ್ತಿರುತ್ತಾರೆ. ಆದರೆ ಪೂಜೆಗಳ ಪಕ್ಕದಲ್ಲಿ, ಕೊಂಡದ ದಡದಲ್ಲಿ ನಿಂತು ಹಜಾಮರವನು ವಾದ್ಯ ಊದುತ್ತಿರುತ್ತಾನೆ. ಆಗಸರವನು ಪತ್ತುಹಿಡಿದು ದಿಣ್ಣೆಯ ಮೇಲೆ ಓಡುತ್ತಾನೆ. ಧೂಪುಂಡಿಗೆ ಗುಡ್ಡನೂ ದಿಣ್ಣೆಯ ಮೇಲೆ ಓಡುತ್ತಾನೆ. ಗುಡಿಯೊಳಗಿಂದ ಪೂಜಾರಯ್ಯ ಬಂದು ತೀರ್ಥಹಾಕಿದ ತಕ್ಷಣ ಗುಡ್ಡರು ಕೊಂಡಕ್ಕೆ ಇಳಿಯುತ್ತಾರೆ. ಮೊದಲು ನಿಡಸಾಲೆ ದೇವರ ಗುಡ್ಡ ಕೊಂಡಕ್ಕೆ ಕಾಲಿಕ್ಕಿ ಓಡುತ್ತಾನೆ. ನೆರೆದ ಜನಸ್ತೋಮವೆಲ್ಲ ಒಕ್ಕೊರಲಿನಿಂದ ಕೂಗುತ್ತಾ ಚಪ್ಪಾಳೆ ಹೊಡೆಯುತ್ತಾರೆ. ನಂತರ ಉಜ್ಜನಿಯ ಚೌಡಮ್ಮನ ಕರಗ, ಅನಂತರ ಉಜ್ಜನಿ ಪೂಜೆಹೊತ್ತ ಗುಡ್ಡ, ಆಮೇಲೆ ಹೆಬ್ಬಾರೆಗಳನ್ನು ಹೊತ್ತ ಇಬ್ಬರು ಗುಡ್ಡರು, ಕೊನೆಯಲ್ಲಿ ಬರಿಕೈಲಿ ಓಡುವ ನಾಲ್ಕು ಜನ ಹೆಬ್ಬಾರೆ ಗುಡ್ಡರು. ಹೀಗೆ ಕ್ರಮವಾಗಿ ಕೊಂಡಕ್ಕೆ ಇಳಿದು ಓಡುತ್ತಾರೆ. ಕೊಂಡದ ಮತ್ತೊಂದು ತುದಿಗೆ ಹಾಯ್ದು ಬರುತ್ತಿದ್ದಂತೆಯೇ ದೇವರು ಕರಗಗಳನ್ನು ಆಯಾಪೈಕಿಗೆ ಸೇರಿದವರು ಹೊಯ್ದು ಹೊತ್ತುಕೊಳ್ಳುತ್ತಾರೆ. ಗುಡ್ಡರು ಓಡಿ ದೇವಸ್ಥಾನ ಸೇರುತ್ತಾರೆ. ಹೆಬ್ಬಾರೆ ಗುಡ್ಡರು ಆವೇಶದಿಂದ ಒಳನುಗ್ಗಲು ಹೋಗುವಾಗ ಹತ್ತಾರುಜನ ಅವರನ್ನು ಹಿಡಿದು ಅವರ ಆವೇಶವನ್ನು

ಕುಗ್ಗಿಸುತ್ತಾರೆ. ಈ ಎಲ್ಲ ಗುಡ್ಡರಿಗೂ ಪೂಜಾರಯ್ಯ ತೀರ್ಥಹಾಕುತ್ತಾನೆ. ಎಲ್ಲ ಗುಡ್ಡರೂ ಶಾಂತರಾದ ಮೇಲೆ ಹಾಕುವ ವಿಶ್ರಮಿಸಿಕೊಳ್ಳಲು ಹೋಗುತ್ತಾರೆ. ಇಲ್ಲಿಗೆ ಕೊಂಡ ಮುಗಿಯುತ್ತದೆ.

**ದೇವರು ಮರಿಸುವುದು**

ಕೊಂಡ ಆಗುತ್ತಿದ್ದಂತೆಯೇ ಕರಗದ ಪೈಕಿಯವರು ಕರಗವನ್ನೂ ಕರಡಿ ಪೈಕಿಯವರು ದೇವರನ್ನೂ ಹೊತ್ತು ನಿಡಸಾಲೆ ದೇವರೊಡಗೂಡಿ ಜವಳಿಗಳಿಂದ ಸುತ್ತುವರಿದು ಕುಣಿಯಲು ಪ್ರಾರಂಭ ಮಾಡುತ್ತಾರೆ. ತಮಟೆಯ ಗಾರಿಗಳ ಗಸ್ತು ಸದ್ದು, ಕಾಲೆಜ್ಜೆಗಳ ಝುಣಝುಣ ಶಬ್ದ ದಿಗಂತವನ್ನು ಮುಟ್ಟುತ್ತದೆ.

ಈಗ ಮೆರಿಯುವುದು ಒಂದು ಪೂಜೆಯಲ್ಲ, ಎರಡು ಪೂಜೆಗಳು. ಅಲ್ಲದ ಸಹಕುಣಿತದ ಕರಗ, ಜೋಡಿ ಹೆಬ್ಬಾರ ಜೊತೆಗೆ ಹತ್ತಾರು ಬಣ್ಣ ಬಣ್ಣದ ಜವಳಿಗಳು, ಇಷ್ಟು ವಿಧವಾದ ಕಲೆಗಳನ್ನೂ ಪ್ರದರ್ಶಿಸುತ್ತಾ ಜನರನ್ನು ರಂಜಿಸಿದಾಗ ಯಾವನಿಗೂ ಆಗುವ ಅನುಭವವೆಂದರೆ



ಒಂದುಪೂಜೆ ಮೆರೆದಾರೆ ಚಂದಕಾಣೆ ಉಜ್ಜಿನಿ

ಬಂಡೀನೊವೆರಡು ವೊಸಪೂಜೆ | ಮೆರೆದಾರ

ಚಂದಕಾಣೆ ಉಜ್ಜಿಣಮ್ಮ ರಾಜಬೀದಿ

ಉಜ್ಜನಿಯ ರಾಜಬೀದಿಯ ಚಂದವನ್ನು ಈಗ ನೋಡಬೇಕು. ಗಸ್ತುಗಳ ಗಗನ ಮುಟ್ಟುವ

ಶಬ್ದ, ಕಿರುಗೆಜ್ಜೆಗಳ ಇಂಪಾದ ನಾದ. ನೋಡಲು ರಂಗುರಂಗು ಬಣ್ಣ ಬಣ್ಣ ಇತ್ಯಾದಿ! ನಿಜವಾಗಿಯೂ ನಮ್ಮೂರ ಹಬ್ಬವನ್ನು ನೋಡಿ ಆನಂದಿಸಬೇಕು!

ಆಯಾ ಪೈಕಿಗಳವರು ಒಬ್ಬರು ಕುಣಿದು ಸುಸ್ತಾಗುತ್ತಲೇ ಮತ್ತೊಬ್ಬರು, ಆನಂತರ ಇನ್ನೊಬ್ಬರು ತಮ ತಮಗೆ ಬರುವ ವೈವಿಧ್ಯಮಯ ಕುಣಿತಗಳಿಂದ ನೆರೆದ ಜನಸ್ತೋಮವನ್ನು ರಂಜಿಸುತ್ತಾರೆ. ಜವಳಿ ಕುಣಿಯುವ ಯುವಕರ ತಂಡವಂತೂ ಅತಿ ಆಕರ್ಷಕ, ನಗಾವಾರದ ತೂತುಗಳಿಗೆ ಜವಳಿಯ ತಾಳನ್ನು ಸೇರಿಸಿ ಅದನ್ನು ಒಂದು ಕೈಯಲ್ಲಿ ಹಿಡಿದು, ಮತ್ತೊಂದು ಕೈಯಲ್ಲಿ ಚೌಕದ ಬಟ್ಟೆಯನ್ನು ಮಡಚಿ ಹಿಡಿದು ಮೇಲಕ್ಕೂ ಕೆಳಕ್ಕೂ ಆಡಿಸುತ್ತಾ ಕ್ಷಣಕ್ಷಣಕ್ಕೂ `ಹೂಹುಯ್' 'ಸಯ್ಯೋಸಮ್' ಎಂದು ಕೇಕೆಹಾಕುತ್ತಾ ಕುಣಿಯುವ ಆ ಏಳೂರ ಯುವಕರ ತಂಡವನ್ನು ನೋಡಲು ಅತಿ ಆಕರ್ಷಕವಾಗಿರುತ್ತದೆ.

ಅದಿನೇಳು ಜವಳಿ ದುಂಬೆದ್ದಿ ಮೆರಿವಾಗ

ದುಂಬುದೂಳಲ್ಲಿ ಮರುದಾವು | ಚೌಡಮ್ಮ

ದುಂಬು ಕವುದಾವು ಕಳಸಾಕೆ

ವರ್ಷಕ್ಕೊಮ್ಮೆ ನಡೆಯುವ ಈ ಸುಂದರ ಕುಣಿತವನ್ನು ನೋಡಲು ಎಲ್ಲಿಲ್ಲದ ಜನ ಬರುತ್ತಾರೆ, ನೋಡುತ್ತಾರೆ. ಸಂತೋಷದಿಂದ 'ಅಮ್ಮನೇಧನ್ಯಳು' ಎಂದು ಹಾಡಿ ಹೊಗಳಿ ಹೋಗುತ್ತಾರೆ.

ಈ ಕುಣಿತದ ಮೆರವಣಿಗೆ ದೇವಸ್ಥಾನದ ಬದಿಯಲ್ಲಿರುವ ತೊಳಚಿ ತೋಪಿನಲ್ಲಿ ಪ್ರಾರಂಭವಾಗಿ ಶಾಸನದ ಕಲ್ಲು ಮೈದಾನದವರೆವಿಗೆ ತಲುಪುವ ವೇಳೆಗೆ ಬುಧವಾರ ಬೆಳಗಿನ ಸುಮಾರು ಹತ್ತು ಗಂಟೆಯಾಗಿರುತ್ತದೆ. ಅಲ್ಲಿಗೆ ಕುಣಿತ ನಿಂತು ಇನ್ನೊಂದು ಶಾಸ್ತ್ರೀಯವಾದ, ಅತಿಮುಖ್ಯವಾದ ಸಂಪ್ರದಾಯವೆನಿಸಿದ 'ದೇವರು ತಬ್ಬಾಟ' ಪ್ರಾರಂಭವಾಗುತ್ತದೆ.

**ದೇವರುಗಳ ತಬ್ಬಾಟ**

ಬುಧವಾರ ಬೆಳಗಿನ ಹತ್ತುಗಂಟೆಗೆ ತಬ್ಬಾಟದ ಶಾಸ್ತ್ರ, ಕೊಂಡ ಆದ ಮೇಲೆ ದೇವರು ಮೆರಿಯುವುದನ್ನು ನೋಡಿ ಕೆಲವರು ತಮ್ಮ ತಮ್ಮ ಮನೆಗಳಿಗೆ ಹೋಗುತ್ತಾರೆ. ತಂಗಳು ಮಡೆ ಊಟ ಉಂಡು ಮತ್ತೆ ಬಂದು ಉಜ್ಜನಿಯ ದೊಡ್ಡ ಬೀದಿಯಲ್ಲಿ ಸೇರುತ್ತಾರೆ. ಕೆಲವರು ಕೊಂಡ ನೋಡಲು ಬಂದವರು ದೇವರು ತಬ್ಬಾಡುವುದನ್ನೂ ನೋಡಿಕೊಂಡು ಮನೆಗೆ ಹೋಗುತ್ತಾರೆ.

ದೇವರು ತಬ್ಬಾಟ ಒಂದು ವಿಶಿಷ್ಟ ಸಂಪ್ರದಾಯ. ನಿಡಸಾಲೆ ಚೌಡಮ್ಮ ತನ್ನೂರಿಗೆ ಹೊರಟುನಿಂತಾಗ ಎಲ್ಲಿಲ್ಲದ ದುಃಖ ಆ ಅಕ್ಕತಂಗಿಯರಲ್ಲಿ ಉದ್ಭವಿಸುತ್ತದೆ. ವರ್ಷಕ್ಕೊಮ್ಮೆ ಬರುವ ತನ್ನ ತಂಗಿ ಒಂದೇ ರಾತ್ರಿ ತನ್ನ ಜೊತೆಯಲ್ಲಿದ್ದು ಈಗ ಹೊರಟುಹೋಗುತ್ತಾಳಲ್ಲಾ



ಎನ್ನುವ ದುಃಖ ಉಜ್ಜನಿ ಚೌಡಮ್ಮನದಾದರೆ, ಇಷ್ಟು ವೈಭವವಾಗಿರುವ ತನ್ನ ಅಕ್ಕನನ್ನು ಮತ್ತೊಂದು ವರ್ಷದವರೆಗೆ ನೋಡುವ ಹಾಗಿಲ್ಲವಲ್ಲಾ ಎನ್ನುವ ದುಗುಡ ನಿಡಸಾಲೆ ಚೌಡಮ್ಮನದು. ಕರಗ ಹೆಬ್ಬಾರೆಗಳಿಗೂ ದುಃಖ ಸಂಕಟ.

ಕುಣಿಯುವ ಜಾಡಿನಲ್ಲೇ ನೃತ್ಯರೂಪಕವಾಗಿ, ಭಾವನೆಯಿಂದ ಅಭಿನಯದಿಂದ ಜನರಿಗೆ ಈ ಸನ್ನಿವೇಶಗಳು ಅರ್ಥವಾಗುವಂತೆ ಕೆಲವು ಅದ್ದು ಬಸ್ತು'ಗಳಿಗನುಸಾರವಾಗಿ ಈ ತಬ್ಬಾಟ ನಡೆಯುತ್ತದೆ.

ಕೊಂಡಹಾಯ್ದನಂತರ ಇದುವರೆಗೆ ಸುಧಾರಿಸಿಕೊಂಡ ಗುಡ್ಡರು ಈಗ ಮತ್ತೆ ಬಂದು ದೇವರು, ಕರಗ, ಹೆಬ್ಬಾರೆಗಳನ್ನು ಹೊತ್ತುಕೊಳ್ಳುತ್ತಾರೆ. ಶಾಸನದ ಕಲ್ಲಿನ ಚೌಕದಿಂದ ಅಷ್ಟು ದೂರ ಹೋದ ನಿಡಸಾಲೆ ಚೌಡಮ್ಮ ಮತ್ತೆ ಹಿಂದಿರುಗಿ ನೋಡುತ್ತಾಳೆ. ನೋಡುತ್ತಾ ನೋಡುತ್ತಾ ಹಿಂದಕ್ಕೆ ಓಡಿಬರುತ್ತಾಳೆ. ಅವಳು ಹೋಗುವುದನ್ನು ದುಃಖದಿಂದ ನೋಡುತ್ತಾ ನಿಂತಿದ್ದ ಉಜ್ಜನಿ ಚೌಡಮ್ಮ ತಂಗಿ ಹಿಂದಕ್ಕೆ ಬರುವುದನ್ನು ಕಂಡು ಓಡಿಹೋಗಿ ತಬ್ಬಿಕೊಳ್ಳುತ್ತಾಳೆ. ಆಗ ಹೆಬ್ಬಾರೆ ಕರಗವೂ ಓಡಿಬಂದು ಅವರಿಬ್ಬರನ್ನು ಸುತ್ತುವರಿಯುತ್ತಾರೆ. ಅಂದರೆ ಇಲ್ಲಿ ಆ ಗುಡ್ಡ ಈ ಗುಡ್ಡ ಕುಣಿಯುತ್ತಾ ಕುಣಿಯುತ್ತಾ ಬಂದು ಆ ಪೂಜೆ ಈ ಪೂಜೆಗಳನ್ನು ಸ್ಪರ್ಶಿಸುತ್ತಾರೆ. ಆಗ ಕರಗ ಹೆಬ್ಬಾರೆಗಳು ಈ ಎರಡು ಪೂಜೆಗಳನ್ನೂ ಸ್ಪರ್ಶಿಸುತ್ತವೆ.

ಸ್ವಲ್ಪ ಹೊತ್ತು ಸ್ತಬ್ಧವಾಗಿ ಹಾಗೇ ನಿಂತ ಅವರುಗಳು ಮತ್ತೆ ಸಮಾಧಾನ ತಂದುಕೊಂಡು ಅಷ್ಟು ದೂರ ಜೊತೆಯಲ್ಲಿ ಹೋಗಿ ನಿಲ್ಲುತ್ತಾರೆ. ನಿಡಸಾಲೆ ಚೌಡಮ್ಮ ಈಗ ಇನ್ನಷ್ಟು ದೂರ ಒಬ್ಬಳೇ ಹೋಗಿ ಅಕ್ಕನನ್ನು ಅಗಲಲಾರದೆ ಮತ್ತೆ ಹಿಂದಕ್ಕೆ ಓಡಿಬಂದು ತಬ್ಬಿ ಕೊಳ್ಳುತ್ತಾಳೆ.

ಹೀಗೆಯೇ ಶಾಸನದ ಕಲ್ಲಿನ ಚೌಕದಿಂದ ಗರಡುಗಂಭದ ಅರಳೀಮರದ ಚೌಕದವರೆಗೆ ಈ ತಬ್ಬಾಟ ನಡೆಯುತ್ತದೆ. ನೆರೆದ ಸಹಸ್ರಾರು ಜನ ಇದನ್ನು ನೋಡಿ ಆನಂದಪಡುತ್ತಾ ಕೊನೆಗೆ ನಿಡಸಾಲೆ ಚೌಡಮ್ಮ ತನ್ನ ಅಕ್ಕ ಉಜ್ಜನಿ ಚೌಡಮ್ಮನನ್ನು ಬಿಟ್ಟು ಅಷ್ಟುದೂರ ಹೋಗಿ, ಹಿಂದಕ್ಕೆ ಹಿಂದಿರುಗಿ ನೋಡುತ್ತಾ ಉಜ್ಜನಿಗೆ ಬೆನ್ನು ಮಾಡಿ ಹೊರಟು ಹೋಗುತ್ತಾಳೆ. ಇದನ್ನು ನೋಡಿ ತವರು ಮನೆಗೆ ಹಬ್ಬಕ್ಕೆ ಬಂದಿದ್ದ ಹೆಣ್ಣುಮಕ್ಕಳು ಇನ್ನೆರಡು ದಿನಗಳಲ್ಲಿ

ತಾವೂ ಗಂಡನ ಮನೆಗೆ ಹೀಗೇ ಹೋಗಬೇಕಾಗಿರುವುದನ್ನು ನೆನೆದು ಹಾಡು ಹಾಡುತ್ತ ದುಃಖಿಸುತ್ತಾರೆ. ಇಷ್ಟೊತ್ತಿಗೆ ಸುಮಾರು ಮಧ್ಯಾಹ್ನ ಹನ್ನೆರಡು ಗಂಟೆಯಾಗಿರುತ್ತದೆ.

ನಂತರ ದೇವರು, ಕರಗ, ಹೆಬ್ಬಾರೆಗಳನ್ನು ಅವರವರ ಗುಡಿಗೆ ತೆಗೆದುಕೊಂಡು ಹೋಗಿ ಇಳಿಸುತ್ತಾರೆ. ಮತ್ತೆ ಮೇಲೆ ಎತ್ತುವುದಿಲ್ಲ.



**ತೇರು**

ಬುಧವಾರ ಸಂಜೆ ಸುಮಾರು ಆರು ಗಂಟೆಗೆ ರಥೋತ್ಸವ, ರಥವನ್ನು 'ತೇರು' ಎಂದು ಕರೆಯುತ್ತಾರೆ. ದೊಡ್ಡ ದೊಡ್ಡ ನಾಲ್ಕು ಮರದ ಗಾಲಿಗಳ ಮೇಲೆ ನಿಂತ ಮರದಿಂದಲೇ ಮಾಡಿದ



ಈ ತೇರು ವಿಧ ವಿಧವಾದ ಕೆತ್ತನೆಯಿಂದ ಕೂಡಿರುತ್ತದೆ. ಬಣ್ಣ ಬಣ್ಣದ ಬಟ್ಟೆಗಳಿಂದ, ಬಾವುಟಗಳಿಂದ ಅಲಂಕರಿಸಿರುತ್ತಾರೆ. ತುದಿಯಲ್ಲಿ ಹಿತ್ತಾಳೆ ಕಳಸವನ್ನು ಹಾಕಿರುತ್ತಾರೆ. ಎರಡು ದೊಡ್ಡ ಹಾಗೂ ಉದ್ದನೆಯ ಬಿದಿರು ಬಂಬುಗಳನ್ನು ತೇರಿಗೆ ಸೇರಿಸಿ ಕಟ್ಟಿರುತ್ತಾರೆ. ತಮಟೆ ವಾದ್ಯಗಳ ಸಮೇತ ಚೌಡಮ್ಮನ ವಾನ್ನೇವು, ದೇವರನ್ನು ತಂದು ತೇರಿನಲ್ಲಿ ಕೂರಿಸುತ್ತಾರೆ. ಆನಂತರ ನೂರಾರು ಜನ ಸೇರಿ ಬಿದಿರು ಬಂಬುಗಳನ್ನು ಹಿಡಿದು ಎಳೆಯುತ್ತಾರೆ. ತೇರು ಜಗ್ಗದೆ ಹಾಗೇ ನಿಂತರೆ 'ಜೈ ಚೌಡೇಶ್ವರಿ' ಎಂದು ಕೂಗುತ್ತಾ ಉತ್ಸಾಹದಿಂದ ಎಳೆದಾಗ 'ಜೀಕಜೀಕ' ಎನ್ನುತ್ತಾ ಓಲಾಡುತ್ತಾ ಗಂಭೀರತೆಯಿಂದ ಮುಂದೆ ಸಾಗುವ ಆ ತೇರನ್ನು ನೋಡಲು ಬಲು ಸೊಗಸಾಗಿರುತ್ತವೆ. ನೂರಾರು ಜನರು ಸಂತೋಷದಿಂದ ಕೂಗುತ್ತಾ, ಕೆಲವರು ಚಿಲ್ಲರೆ ಕಾಸನ್ನೂ, ಕೆಲವರು ಬಾಳೇಹಣ್ಣುಗಳನ್ನೂ ಇನ್ನೂ ಕೆಲವರು

ಗಂಧದ ಕಡ್ಡಿ ಪೊಟ್ಟಣಗಳನ್ನೂ ತೇರಿನ ಮೇಲಕ್ಕೆ ಎಸೆಯುತ್ತಾರೆ. ದೊಡ್ಡ ಗುಡಿಯನ್ನು ಒಂದು ಸುತ್ತು ಸುತ್ತಿದ ತೇರು ಹಿಂದಿರುಗಿ ಬಂದು ಶಾಸನದ ಕಲ್ಲಿನ ಚೌಕದಲ್ಲಿ ಬಸವಣ್ಣನ ಗುಡಿಯ ಮುಂದೆ ನಿಲ್ಲುತ್ತದೆ ವಾನೇವು ದೇವರನ್ನು

---

* 'ವಾನ್ನೇವು' ಎಂದರೆ ಚೌಡಮ್ಮನ ಉತ್ಸವ ಮೂರ್ತಿ. ಇದನ್ನು ನಾಲ್ಕು ಜನ ಹೊತ್ತು ಕೊಳ್ಳುತ್ತಾರೆ. ಮೇಲಕ್ಕೆ ಇದು ತ್ರಿಕೋನಾಕೃತಿಯಲ್ಲಿದ್ದು, ಕೆಳಭಾಗ ಆಯಾಕಾರದಲ್ಲಿರುತ್ತದೆ. ಕೆಳಕ್ಕೆ ಎರಡು ಬಿದಿರು ಬಂಬುಗಳನ್ನು ಬಿಗಿದು ಕಟ್ಟಿರುತ್ತಾರೆ. ಇದನ್ನು ನಾಲ್ಕು ಕಡೆ ನಾಲ್ಕು ಜನ ಹೆಗಲ ಮೇಲೆ ಹೊತ್ತುಕೊಳ್ಳುತ್ತಾರೆ. ಬೇರೆ ಬೇರೆ ಊರುಗಳಿಗೆ ಈ ಉತ್ಸವವನ್ನು ಹೊತ್ತುಕೊಂಡು ಹೋಗುತ್ತಾರೆ.



ಚೌಡಮ್ಮನ ಗುಡಿಗೆ ತೆಗೆದುಕೊಂಡು ಹೋಗಿ ಇಡುತ್ತಾರೆ. ಈ ರಥೋತ್ಸವ ಮುಗಿಸಿ ಎಲ್ಲರೂ ಮನೆಗೆ ತೆರಳಿ ಉಳಿಬಳಿದ ಮಡಅನ್ನವನ್ನೋ, ಮಾಂಸ ಒಂದನ್ನು ಬಿಟ್ಟು ಇನ್ನಾವುದಾದರೂ ವಿಶೇಷವನ್ನೋ ಉಂಡು, ಅರೆನಿದ್ರೆ ಮಾಡಿ ಮತ್ತೆ ಹನ್ನೆರಡು ಗಂಟೆಗೆ ಪಲ್ಲಕ್ಕಿ ನೋಡಲು ಬರುತ್ತಾರೆ.

**ಪಲ್ಲಕ್ಕಿ**

ಇದುವರೆಗೆ ನಡೆದ ಹಬ್ಬ ಸಂಪ್ರದಾಯಬದ್ಧವಾದುದಾದರೆ, ಪಲ್ಲಕ್ಕಿ ಅಥವಾ ಹೂವಿನ ಪಾಲಕಿ ಮನರಂಜನಾ ಪ್ರಧಾನವಾದುದು. ಹಲವು ಮುಖ್ಯ ಹಾಗೂ ವಿಶೇಷ ಆಕರ್ಷಣೆಗಳು ಅಂದು ಹಳ್ಳಿಯ ಮುಗ್ಧ ಜನತೆಯ ಮನವನ್ನು ರಂಜಿಸುತ್ತವೆ.

ಬೆಂಗಳೂರಿನಿಂದಲೋ ಮೈಸೂರಿನಿಂದಲೋ ಬಂದ ಕಲಾಪ್ರವೀಣರು ಬೆಳಗಿನಿಂದ ರಾತ್ರಿಯವರೆಗೂ ನಾನಾವಿಧವಾದ ಹೂಗಳಿಂದ ಚಿತ್ರವಿಚಿತ್ರವಾಗಿ ಪಲ್ಲಕ್ಕಿಯನ್ನು ಸಿದ್ಧಗೊಳಿಸಿ, ಈಗಿನ ಆಧುನಿಕತೆಗೆ ತಕ್ಕಂತೆ ಬಣ್ಣ ಬಣ್ಣದ ಸಣ್ಣಪುಟ್ಟ ದೊಡ್ಡ ವಿದ್ಯುತ್‌ದೀಪಗಳಿಂದ ಅಲಂಕರಿಸುತ್ತಾರೆ. ಇನ್ನೇನು ಪಲ್ಲಕ್ಕಿ ಸಿದ್ಧವಾಯಿತು ಎನ್ನುವಾಗ ಹಲವಾರು 'ಗಡಾಬಾಜು' ಮದ್ದುಗಳನ್ನು ಹಚ್ಚುತ್ತಾರೆ. ಸೂಚನೆ ತಿಳಿದ ಜನರು ಪಲ್ಲಕ್ಕಿ ಹಾಗೂ ಮದ್ದು ನೋಡಲು ಬರುತ್ತಾರೆ.

ಅಂದು ವಿಶೇಷವಾದ ಕರ್ನಾಟಕ ಸಂಗೀತ ವಾದ್ಯವನ್ನು ತರಿಸಿರುತ್ತಾರೆ. ಈ ವಾದ್ಯಗೋಷ್ಠಿಯವರು ಪಾಲಕಿಯ ಮುಂದೆ ನುಡಿಸುತ್ತಿರುತ್ತಾರೆ. ಪಟ್ಟಣದಿಂದ ಬಂದ ಕೀಲು ಕುದುರೆಯವರು ನಾನಾ ವೇಷಗಳಿಂದ ಕುಣಿಯುತ್ತಿರುತ್ತಾರೆ. ವರ್ಷಕ್ಕೊಮ್ಮೆ ಮಾತ್ರ ಕಾಣಬಹುದಾದ ಇಂತಹ ಆಟಗಳನ್ನು ನೋಡಲು ಹಳ್ಳಿಯಜನ ಮನೆಗಳಿಗೆ ಬೀಗಹಾಕಿ ಬರುತ್ತಾರೆ.

ಶಾಸ್ತ್ರೋಕ್ತವಾಗಿ ದೇವರ ವಾನ್ಯೇವನ್ನು ತಂದು ಪಾಲಕಿಯ ಗೂಡಿನಲ್ಲಿ ಇಟ್ಟಮೇಲೆ ಪಾಲಕಿ ಮುಂದುವರಿಯುತ್ತದೆ. ಸಾವಿರಾರು ಜನಗಳು ಪಲ್ಲಕ್ಕಿ ಮತ್ತು ಕೀಲುಕುದುರೆ ನೃತ್ಯ ನೋಡುತ್ತಿದ್ದಂತೆ ಮತ್ತೊಂದು ವಿಶೇಷ ಆಕರ್ಷಣೆಯೆಂದರೆ ದೊಡ್ಡಬೀದಿಯ ಒಂದು ಪಕ್ಕದ ಸಿದ್ಧಗೊಳಿಸಿದ ಮದ್ದಿನ ಮರಗಳನ್ನು ಹಚ್ಚುವುದು. “ಗಡಾಬಾಡಿನ ಸರಗಳು, ಸೂರಾಬಾಣಗಳ ಪಟ್ಟಿ, ಮದ್ದಿನ ಮರಗಳು, ವಿಷ್ಣು ಚಕ್ರಗಳು, ಹೂವಿನ ಕುಡಿಕೆಗಳು, ಮದ್ದಿನ ಚತ್ರಿಗಳು” ಇತ್ಯಾದಿಯಾಗಿ ಹಚ್ಚುತ್ತಾರೆ. ಇವು ನೋಡಲು ವಿಶೇಷ ಆಕರ್ಷಕವಾಗಿ ಇರುತ್ತವೆ. ಆದರೆ ಸಾವಿರಾರು ರೂಪಾಯಿಗಳ ಮದ್ದು ಒಂದೆರಡು ಗಂಟೆಗಳಲ್ಲಿ ಸುಟ್ಟು ಬೂದಿಯಾಗುತ್ತದೆ. ಬೆಳಗಾಗುವ ತನಕ ಪಾಲಕಿ ದೊಡ್ಡ ಬೀದಿಯಲ್ಲಿ ಹರಿದು ನಂತರ ಚೌಡಮ್ಮನ ಗುಡಿಗೆ ಬರುತ್ತದೆ. ಇಲ್ಲಿಗೆ ಪಲ್ಲಕ್ಕಿ ಅಥವಾ ಹೂವಿನ ಪಾಲಕಿ ಮುಗಿಯುತ್ತದೆ.



**ಕಂಬಕೀಳುವುದು - ಉತ್ಸವ**

ಗುರುವಾರ ನಿಗದಿಯಾದ ಕೆಲವು ಭಕ್ತಾದಿಗಳು ಸೇರಿ ಸ್ವಂತ ಖರ್ಚಿನಿಂದ ದೇವರ ಉತ್ಸವವನ್ನು ನಡೆಸುತ್ತಾರೆ.

ಗುರುವಾರ ಸಂಜೆ ಐದು ಗಂಟೆಗೆ ಕಂಬ ಕೀಳುವ ಕಾರ್ಯಕ್ರಮ, ಮಾರಮ್ಮನ ಗುಡಿಯಮುಂದೆ ನೆಟ್ಟಿದ್ದ ಕಂಬವನ್ನು ಅದನ್ನು ತಂದ ಮಾರೀಗುಡಿ ಪೂಜಾರಿಯೇ ಕೀಳಬೇಕು. ಕಂಬ ಕೀಳುವ ಮೊದಲು ಊರಿನ ಹೆಂಗಸರು ತಮ್ಮ ತಮ್ಮ ಮಕ್ಕಳನ್ನು ಎತ್ತಿಕೊಂಡು ಬಂದು, ಮಕ್ಕಳ ತಲೆಯಮೇಲೆ ಬೆಲ್ಲದ ಪಾನಕ ತುಂಬಿದ ಒಂದು ಪುಟ್ಟ ಚೊಂಬನ್ನು ಇಟ್ಟು, ತಮ್ಮ ಮಕ್ಕಳಿಗೆ ಒಳ್ಳೆಯದಾಗಲೆಂದು ಆ ಕಂಬದ ಸುತ್ತ ಸುತ್ತುತ್ತಾರೆ. ಇದಕ್ಕೆ 'ಗಟೆ ಹೊರಿಸುವುದು'* ಎನ್ನುತ್ತಾರೆ. ಗಟೆ ಹೊರಿಸುವುದು ಮುಗಿದ ನಂತರ ವಾದ್ಯಸಮೇತ ಕಂಬಕ್ಕೆ ಪೂಜೆ ಸಲ್ಲಿಸಿ ಕೀಳುತ್ತಾನೆ. ನಂತರ ಹೊತ್ತುಕೊಂಡು ದೊಡ್ಡ ಗುಡಿಯ ಮಾರ್ಗವಾಗಿ ಬಂದು ಮಜ್ಜನ ಬಾವಿಗೆ ಆ ಕಂಬವನ್ನು ಬಿಡುತ್ತಾನೆ.

ರಾತ್ರಿಗೆ 'ವಾನೇವು' ದೇವರನ್ನು ಉತ್ಸವ ಮಾಡುತ್ತಾರೆ. ಆಗಲೇ ಮೂರು ದಿನಗಳಿಂದ ನಿದ್ದೆಗೆಟ್ಟಿದ್ದ ಜನ ಇಂದು ಉತ್ಸವ ನೋಡಲು ಹೆಚ್ಚಾಗಿ ಬರುವುದಿಲ್ಲ. ಶಾಸ್ತ್ರ ಮುಗಿಸಲು ಹೇಗೋ ಹಾಗೆ ಮಾಡಿ ಮುಗಿಸುತ್ತಾರೆ.

**ಹೆಬ್ಬಾರ ಕಣ್ಣ ಬಿಚ್ಚುವುದು**

ಶುಕ್ರವಾರ ಮಧ್ಯಾನ್ಹ ಹೆಬ್ಬಾರೆ ಗುಡ್ಡರೂ ದೇವರು ಮತ್ತು ಕರಗದ ಗುಡ್ಡರೂ ಇನ್ನೂ ಕೆಲವರು ಸೇರಿ ಬಣ್ಣದ ನೀರಿನಲ್ಲಿ 'ಓಕುಳಿ ಆಡುತ್ತಾರೆ. ನಂತರ ಹೆಬ್ಬಾರಮ್ಮನಿಗೆ ಓಕುಳಿ ಉಯ್ದು, ಹೆಬ್ಬಾರೆಗಳನ್ನು ಪೂಜೆಮಾಡಿ ವಾದ್ಯ ತಮಟೆ ಸದ್ದುಗಳ ಸಮೇತ ಹೆಬ್ಬಾರೆಗೆ ತೊಡಿಸಿದ್ದ ಬಟ್ಟೆಗಳನ್ನು ಬಿಚ್ಚುತ್ತಾರೆ. ದೇವರ ಗುಡ್ಡರೂ ಪೂಜೆಗೆ ತೊಡಿಸಿದ್ದ ಬಟ್ಟೆಗಳನ್ನು ಬಿಚ್ಚುತ್ತಾರೆ.

ಹೀಗೆ ಹೆಬ್ಬಾರೆ ಮತ್ತು ದೇವರುಗಳ ಬಟ್ಟೆಯನ್ನು ಬಿಚ್ಚುವುದಕ್ಕೆ 'ಕಣ್ಣ ಬಿಚ್ಚುವುದು' ** ಎನ್ನುತ್ತಾರೆ. ಆ ನಂತರ ಯಾವ ಗುಡ್ಡರುಗಳಿಗೂ ನಿಯಮಗಳಿಲ್ಲ. ಹೆಬ್ಬಾರೆ ಗುಡ್ಡರು ಜನಿವಾರಗಳನ್ನು ತೆಗೆದುಹಾಕುತ್ತಾರೆ. ಮೊದಲಿನಂತೆ ಹೊಲೆಯರೇ ಆಗುತ್ತಾರೆ. ದೇವರ ಗುಡ್ಡರಿಗೂ ಅಂದಿನಿಂದಾಚೆಗೆ ಯಾವ ನಿಯಮಗಳೂ ಇಲ್ಲದೆ ಸಾಮಾನ್ಯರಾಗುತ್ತಾರೆ. ಮಾಂಸ ಇತ್ಯಾದಿಗಳನ್ನು ತಿನ್ನುತ್ತಾರೆ. ಇಲ್ಲಿಗೆ ಹಬ್ಬ ಮುಗಿಯುತ್ತದೆ.

ಇದುವರೆಗೆ ನಡೆದ ಹಬ್ಬದ ಎಲ್ಲ ಧಾರ್ಮಿಕ ಸಂಪ್ರದಾಯಗಳಲ್ಲಿಯೂ ಹರಿಜನರಿಗೆ

---

* ಈ ಸಂಪ್ರದಾಯ ಕೆಲವು ಕಡೆ ಮಾರೀಹಬ್ಬದಲ್ಲಿ ನಡೆಯುತ್ತದೆ.

** ಕಣ್ಣ ಕಳೆಯುವುದು ಎಂದೂ ಹೇಳುತ್ತಾರೆ



ಭಾಗವಹಿಸುವ ಅವಕಾಶವಿತ್ತು. ಆದರೆ ಈ ಹಬ್ಬ ಕಳೆದ ಮರುಕ್ಷಣದಿಂದಲೇ ಅವರು ಹೊರಗಿನವರಾಗಿಯೇ ಉಳಿಯುತ್ತಾರೆ. ಮೇಲ್ವರ್ಗದವರು ಅವರನ್ನು ಮೊದಲಿನಂತೆ ಕೀಳಾಗಿಯೇ ಕಾಣುತ್ತಾರೆ. ತುಚ್ಛವಾಗಿಯೇ ಮಾತನಾಡಿಸುತ್ತಾರೆ. ಇದು ಎಷ್ಟು ವೈಚಿತ್ರ್ಯ !

**ಹಬ್ಬದಲ್ಲಿ ಜಾತ್ರೆ**

ಸೋಮವಾರ ಆರತಿಯಾದರೆ ಅದರ ಹಿಂದಿನ ಒಂದು ದಿನದಿಂದಲೇ ಜಾತ್ರೆ ಸೇರಲು ಪ್ರಾರಂಭವಾಗುತ್ತದೆ. ಆರತಿಯ ದಿನವಾದ ಸೋಮವಾರದಿಂದ ಶುಕ್ರವಾರದವರೆಗೆ ಸುಮಾರು ಐದು ದಿನಗಳು ಜಾತ್ರೆ ರಂಗು ರಂಗಿನಿಂದ ತುಂಬಿರುತ್ತದೆ. ಜಾತ್ರೆ ಹೇಗೆ ಸೇರುತ್ತದೆ, ಹೇಗೆ ಹೊರಡುತ್ತದೆ ಎಂಬುದನ್ನು ಈ ಕೆಳಗಿನ ಪದ ವಿವರಿಸುತ್ತದೆ.

ತಂಬಿವೂನಂಗೆ ತುಂಬತಲ್ಲೆ ನಿನ್ನ ಪರಿಸೆ

ಕಡಲೆಕಾಯ್‌ನಂಗೆ ಕಡಿತಲ್ಲೆ | ನಿನ್ನ ಪರಿಸೆ

ವರುಸಕ್ಕೊಂದು ಸತಿ ತುಂಬೀತು

ಸಿಹಿತಿಂಡಿ ಸಾಮಾನುಗಳು, ಹಣ್ಣುಗಳು, ಕಡಲೆಪುರಿ, ಬಣ್ಣ ಬಣ್ಣದ ಬಳೆಗಳು ಅಲ್ಲದೆ ಇತರ ವಿಧವಾದ ಬಳಕೆಯ ಸಾಮಾನುಗಳು ಈ ಜಾತ್ರೆಯಲ್ಲಿ ಮಾರಾಟವಾಗುತ್ತವೆ. ವ್ಯಾಪಾರದವರು ಬೇರೆ ಕಡೆಗಳಿಂದಲೂ ಬಂದಿರುತ್ತಾರೆ. ಆದರೆ ಹೆಚ್ಚಿನ ಸಂಖ್ಯೆಯವರೆಂದರೆ ಉಜ್ಜನಿಯ ವರ್ತಕರೇ, ಉಜ್ಜನಿಯಲ್ಲಿ ಸುಮಾರು ಇಪ್ಪತ್ತು ವರ್ತಕ ಕುಟುಂಬಗಳಿವೆ. ಹಬ್ಬ ಬಿಟ್ಟು ಇತರೇ ದಿನಗಳಲ್ಲಿ ಚೌಡಮ್ಮ ಪ್ರತಿ ಮಂಗಳವಾರ ಶುಕ್ರವಾರ ಗುಡಿಯಲ್ಲಿ ಪೂಜೆ

ಒಂದು ವಾರದಲ್ಲಿ ಮಂಗಳವಾರ ಮತ್ತು ಶುಕ್ರವಾರ ಚೌಡಮ್ಮನ ಗುಡಿಯ ಬಾಗಿಲು ತೆಗೆಯುತ್ತದೆ. ಬೆಳಗಿನ ಹತ್ತು ಗಂಟೆಯಿಂದ ಸಂಜೆ ಆರುಗಂಟೆಯವರೆಗೆ ಯಾರು ಬೇಕಾದರೂ ದರ್ಶನ ಮಾಡಬಹುದು. ಗುಡಿಯ ಒಳಗಡೆಗೆ ಹರಿಜನರಿಗೆ ಪ್ರವೇಶವಿಲ್ಲ. ಆದರೆ ಹೊರಗಿನ ಪಡಸಾಲೆಯಲ್ಲಿ ವಿಗ್ರಹಕ್ಕೆ ನೇರಕ್ಕೆ ನಿಂತು ಪ್ರಯಾಸದಿಂದ ದರ್ಶನ ಪಡೆಯಬಹುದು. ತೀರ ಒಳಗಿನ ಭಾಗಕ್ಕೆ ಒಕ್ಕಲಿಗರಿಗೂ ಪ್ರವೇಶವಿಲ್ಲ, ಬ್ರಾಹ್ಮಣರಿಗೆ ಮಾತ್ರ ಪ್ರವೇಶ.

ಬೆಳಗಿನ ಒಂಬತ್ತು ಗಂಟೆಗೇ ಪೂಜಾರಯ್ಯ ಬಂದು ದೇವಸ್ಥಾನದ ಪಕ್ಕದಲ್ಲಿರುವ ಬಾವಿಯಿಂದ ನೀರು ಸೇದಿ ಸ್ನಾನ ಮಾಡಿ ಮಡಿಬಟ್ಟೆ ಉಟ್ಟು ಪಕ್ಕದಲ್ಲಿರುವ ಮಂಟಪದಲ್ಲಿ 'ತಳಿಗೆ' ಮಾಡುತ್ತಾನೆ. ನಂತರ ಚೌಡಮ್ಮನ ಮುಖವನ್ನು ಹೊಸ ನೀರಿನಲ್ಲಿ ತೊಳೆದು ಬಟ್ಟೆ ಉಡಿಸಿ ವಡವೆ ತೊಡಿಸಿ ನಾನಾ ವಿಧವಾದ ಹೂಗಳಿಂದ ಅಲಂಕಾರ ಮಾಡುತ್ತಾನೆ. ಸುತ್ತಮುತ್ತ ಹಳ್ಳಿಗಳ ಹತ್ತಾರು ಜನ ಬಂದು ಈ ವಾರಗಳಲ್ಲಿ ಪೂಜೆ ಮಾಡಿಸಿಕೊಂಡು ಹೋಗುತ್ತಾರೆ.

**ಹೂ ಕೇಳುವುದು**

ಏನಾದರೂ ಕಷ್ಟಸ್ಥಿತಿ ಬಂದಾಗ ಮನೆಯಲ್ಲಿ 'ತಡಕಾಟ'ವಾದಾಗ ಅನೇಕರು ಬಂದು

ಚೌಡಮ್ಮನಲ್ಲಿ ಹೂ ಕೇಳುತ್ತಾರೆ. ತಮ್ಮ ಕಷ್ಟವನ್ನು ಬಾಯಿಬಿಟ್ಟು ಹೇಳುತ್ತಾ “ಇಂಗ್ ನೀನು ಮಾಡಬೌದೆ, ನೀನು ನಮ್ಮನ್ ಕಾಯ್‌ಳಿಲ್ವೆ? ನಮ್ಗೆ ವಳ್ಳೇದಾಯ್ತುದೆ ಅನ್ನಂಗಿದ್ರೆ ಬಲ್ಗಡೆ ಹೂವ ಕೊಡು, ಆಗೋಲ್ಲ ಅನ್ನಂಗಿದ್ರೆ ಎಡ್ಗಡೆ ಹೂವ ಕೊಡು' ಎಂದು ಪ್ರಾರ್ಥಿಸುತ್ತಾರೆ. ಗಂಟೆಗಟ್ಟಲೆ ವಿಗ್ರಹವನ್ನೇ ನೆಟ್ಟದೃಷ್ಟಿಯಿಂದ ನೋಡುತ್ತಾ ನಿಂತುಕೊಳ್ಳುತ್ತಾರೆ. ಬಲಗಡೆ ಹೂ ಜಾರಿ ಬಿದ್ದರೆ ಒಳ್ಳೆಯದಾಗುತ್ತದೆಂದೂ ಎಡಗಡೆ ಬಿದ್ದರೆ ಕೆಟ್ಟದ್ದಾಗುತ್ತದೆಂದೂ ಅವರ ನಂಬಿಕೆ. ಹೂ ಬೀಳದೇ ಇದ್ದರೆ ಚೌಡಮ್ಮನಿಗೆ ಏನು ಹೇಳುವುದಕ್ಕೂ ಮನಸ್ಸಿಲ್ಲವೆಂದೂ ತಿಳಿದುಕೊಳ್ಳುತ್ತಾರೆ. ಕೆಲವರು ಮಂಗಳವಾರ ಶುಕ್ರವಾರದ ದಿನಗಳಲ್ಲಿ ಕುಂಕುಮಾರ್ಚನೆ, ಸಕ್ಕರೆ ಸೇವೆ ಮಾಡಿಸಿ ಅಲ್ಲಿ ಬರುವವರಿಗೆ ಸಿಹಿತಿಂಡಿ ಹಂಚುತ್ತಾರೆ.

**ಧನುರ್ಮಾಸದಲ್ಲಿ ತಳಿಗೆ**

ಧನುರ್ಮಾಸ ತಿಂಗಳಿನಲ್ಲಿ ಸುತ್ತಮುತ್ತ ಎಲ್ಲ ಹಳ್ಳಿಗಳವರೂ ಉಜ್ಜನಿಯವರೂ 'ತಳಿಗೆ ಮಾಡಿಸಿ ಪೂಜೆ ಮಾಡಿಸಬೇಕು. ಅವರವರ ಶಕ್ತಾನುಸಾರ ತಳಸಿದ ಅಕ್ಕಿಯ ಜೊತೆಗೆ ಬೆಲ್ಲ, ಬೇಳೆ, ಹಾಲು, ಮೊಸರು, ತುಪ್ಪ ಮುಂತಾಗಿ ತಂದು ಪೂಜಾರಯ್ಯನಿಗೆ ಕೊಡಬೇಕು. ಹೀಗೆ ಕೊಟ್ಟದ್ದನ್ನೆಲ್ಲ ಪೂಜಾರಯ್ಯ ಒಂದು ಕಡೆ ಸೇರಿಸಿ ದೇವಸ್ಥಾನದ ಪಕ್ಕದಲ್ಲಿರುವ ಮಂಟಪದಲ್ಲಿ ಅಡುಗೆ ಮಾಡುತ್ತಾನೆ. ಇದೇ ತಳಿಗೆ ಅನ್ನ, ಅಕ್ಕಿ ಕೊಟ್ಟಿದ್ದವರು ಬಂದು ಪೂಜೆ ಮಾಡಿಸಿದ ನಂತರ ತಳಿಗೆ ಅನ್ನವನ್ನು ಆಯಾ ಮನೆಯವರಿಗೆ ತೀರ್ಥದ ಜೊತೆಯಲ್ಲಿ ಕೊಡುತ್ತಾನೆ. ಈ ತಳಿಗೆಯನ್ನು ನಾಲ್ಕು ಮಂಗಳವಾರಗಳಲ್ಲಿ ಯಾವ ವಾರವಾದರೂ ಮಾಡಿಸಬಹುದು. ಇದಕ್ಕೆ 'ಧನುರ್ಮಾಸ ತಳಿಗೆ' ಎನ್ನುತ್ತಾರೆ.

**ಮರಿ ಹಬ್ಬ****

ಇದು ಒಂದು ಅಪರೂಪದ ಪದ್ಧತಿ, ಚೌಡಮ್ಮನ ಹಬ್ಬ ಕಳೆದ ಒಂದು ತಿಂಗಳಿಗೆ ಸರಿಯಾಗಿ 'ಮರಿಹಬ್ಬ' ಮಾಡುತ್ತಾರೆ. ಮರಿ ಹಬ್ಬವೆಂದರೆ 'ಚಿಕ್ಕಹಬ್ಬ' ಎಂದು ಅರ್ಥ. ಒಂದು ತಿಂಗಳ ಹಿಂದೆ ನಡೆದ ದೊಡ್ಡ ಹಬ್ಬವನ್ನು ನೆನೆಸಿಕೊಳ್ಳಲು ಎಂಬಂತೆ ಈ ಹಬ್ಬ, ಕೊಂಡ ಕಳೆದ ಒಂದು ತಿಂಗಳಿಗೆ ಸರಿಯಾಗಿ ಬರುವ ಮಂಗಳವಾರ ಅಥವಾ ಅದರ ಮುಂದೆ ಬರುವ ಮೂರು ಮಂಗಳವಾರಗಳಲ್ಲಿ ಮಾಡುತ್ತಾರೆ. ಕೆಲವರು ಮೊದಲನೇ ಮಂಗಳವಾರ ಮಾಡಿದರೆ ಕೆಲವರು ನಾಲ್ಕನೇ ಮಂಗಳವಾರ ಮಾಡುತ್ತಾರೆ.

ಅಂದು ಹೊಸ ಅಕ್ಕಿಯನ್ನು ತೊಳಿಸಿ ಹೊಸ ಮಡಿಕೆಯಲ್ಲಿ ಹಾಕಿಕೊಂಡು ಹೋಗಿ ಚೌಡಮ್ಮನ ಗುಡಿಯಲ್ಲಿ ಪೂಜೆ ಮಾಡಿಸಿ ಆ ತೀರ್ಥವನ್ನು ಸೇರಿಸಿ 'ಮಡೆ ಅನ್ನ' ಮಾಡುತ್ತಾರೆ.

---

* ಸೌರಮಾನದ ಒಂಬತ್ತನೆಯ ತಿಂಗಳು, ನವಂಬರ್-ಡಿಸಂಬರ್‌ನಲ್ಲಿ ಬರುತ್ತದೆ.

**	ಮರಿ ಕಡಿಯುವ ಮಾಂಸದ ಹಬ್ಬವೆಂದು ಯಾರೂ ಭಾವಿಸಬಾರದು.



ಈ ಹಬ್ಬದಲ್ಲಿ ಇಷ್ಟೇ ಮಾಡಬೇಕೆಂಬ ನಿಯಮವಿಲ್ಲ. ಕೆಲವರು ಮನೆಯಲ್ಲೂ ಕೆಲವರು ಗುಡಿಯ ಬಯಲಿನಲ್ಲೂ ಮಡೆ ಮಾಡುತ್ತಾರೆ. ಹಬ್ಬದ ದಿನ ಚೌಡಮ್ಮನ 'ವಾನ್ನೇವು ದೇವರನ್ನು ಉಜ್ಜನಿ ಹಿತ್ತಲಪುರ ಬೋರೇಗೌಡನ ಕೊಪ್ಪಲು ಈ ಮೂರು ಗ್ರಾಮಗಳಲ್ಲಿ ಮೆರವಣಿಗೆ ಮಾಡುತ್ತಾರೆ. ಈ ಮೂರು ಊರುಗಳವರೂ ಚೌಡಮ್ಮನ ಊರ ಬಾಗಿಲಿಗೆ ಬಂದಾಗ ಒಂದು ಕುರಿಯನ್ನು ಬಲಿಕೊಟ್ಟು ಸ್ವಾಗತಿಸುತ್ತಾರೆ. ಪ್ರತಿ ಮನೆಯವರೂ ಪೂಜೆ ಮಾಡಿಸುತ್ತಾರೆ. ಇಷ್ಟು ಮರಿ ಹಬ್ಬದ ವಿಶೇಷ.

**ಉತ್ಸವಗಳು**

ಉಜ್ಜನಿಯಿಂದ ಹತ್ತಾರು ಮೈಲಿಗಳವರೆಗೂ ಇರುವ ಚೌಡಮ್ಮನ ಭಕ್ತರು ತಮ್ಮ ತಮ್ಮ ಕಷ್ಟಗಳಿಗನುಸಾರವಾಗಿ ಹಲವಾರು ಹರಕೆಗಳನ್ನು ಮಾಡಿಕೊಳ್ಳುತ್ತಾರೆ. ತಮ್ಮ ಕಷ್ಟ ಪರಿಹಾರವಾದರೆ ಚೌಡಮ್ಮನಿಗೆ 'ಮೂರೂರ ಉತ್ಸವ ಮಾಡಿಸುತ್ತೇನೆ, ಹೊಸ ಸೀರೆ ತಂದುಕೊಡುತ್ತೇನೆ, ವಡವೆ ಮಾಡಿಸುತ್ತೇನೆ ಎಂದು ಹರಕೆ ಕಟ್ಟುತ್ತಾರೆ.

ಹೀಗೆ ಹರಕೆ ಹೊತ್ತ ಜನರು ಮಾಡಿಸುವ ಉತ್ಸವಗಳಿಗೆ ಬಿಡುವೇ ಇಲ್ಲವೆನ್ನಬಹುದು. ವರ್ಷಕ್ಕೆ ಸುಮಾರು ಐವತ್ತು ಅರವತ್ತು ಉತ್ಸವಗಳು ನಡೆಯುತ್ತವೆ. ಉತ್ಸವವೆಂದರೆ ಚೌಡಮ್ಮನ ವಾನೇವು ದೇವರನ್ನು ಉಜ್ಜನಿ ಹಿತ್ತಲಪುರ ಬೋರೇಗೌಡನಕೊಪ್ಪಲುಗಳಲ್ಲಿ ಹೊತ್ತು ಮೆರವಣಿಗೆ ಮಾಡುವುದು. ನಾಲ್ಕು ಜನರು ಹೆಗಲು ಕೊಟ್ಟು ಹೊತ್ತುಕೊಳ್ಳುವ ಈ ವಾನ್ನೇವು ಉತ್ಸವದ ಮೆರವಣಿಗೆ ಚೆನ್ನಾಗಿರುತ್ತದೆ. ಆಯಾ ಊರಿಗೆ ಉತ್ಸವ ಹೋದಾಗ ಅಲ್ಲಿನ ಯುವಕರು ಬಂದು ಹೆಗಲು ಕೊಟ್ಟು ಹೊತ್ತುಕೊಳ್ಳುತ್ತಾರೆ. ಈ ಮೆರವಣಿಗೆ ಸಂಜೆ ಐದು ಆರು ಗಂಟೆಗೆ ಪ್ರಾರಂಭವಾಗಿ ಬೆಳಗಿನ ಮೂರು ನಾಲ್ಕು ಗಂಟೆಗೆ ಮುಗಿಯುತ್ತದೆ. ಮೊದಲು ಉಜ್ಜನಿಯ ಊರಿನಲ್ಲಿ ಪ್ರತಿಯೊಬ್ಬರ ಮನೆಯ ಬಾಗಿಲಿಗೂ ಉತ್ಸವ ಹೋಗುತ್ತದೆ, ಪ್ರತಿಮನೆಯವರೂ 'ಆರತಿ ತಟ್ಟೆ'ಯಲ್ಲಿ ಒಂದಿಷ್ಟು ಅಕ್ಕಿ, ಕರ್ಪೂರ, ಗಂಧದಕಡ್ಡಿ, ಬಾಳೇಹಣ್ಣು, ತೆಂಗಿನಕಾಯಿ ಮತ್ತು ವೀಳ್ಯದೆಲೆಗಳನ್ನು ಇಟ್ಟು ಪೂಜಾರಯ್ಯನಿಗೆ ಕೊಡುತ್ತಾರೆ. ಪೂಜಾರಯ್ಯ ಅಕ್ಕಿಯನ್ನು ತಾನು ತೆಗೆದುಕೊಂಡು ಬಾಳೇಹಣ್ಣು ತೆಂಗಿನಕಾಯನ್ನು ಪೂಜೇ ಮಾಡಿ ಹಿಂದಕ್ಕೆ ಕೊಡುತ್ತಾನೆ. ಹೀಗೆ ಮೂರು ಊರುಗಳ ಮನೆಬಾಗಿಲಿಗೂ ದೇವರು ಹೋಗುತ್ತದೆ. ಹರಿಜನರ ಕೇರಿಗೆ ಈ ಉತ್ಸವ ಹೋಗುವುದಿಲ್ಲ. ಆದರೆ ಪ್ರತಿ ಉತ್ಸವಕ್ಕೂ ಉಜ್ಜನಿಯ ಹೊಲೆಯರೇ ತಮಟೆ ನಗಾರಿ ವಾದ್ಯಗಳನ್ನು ಮಾಡುವರು.

ಮಳೆಗಾಲದಲ್ಲಿ ಈ ಉತ್ಸವಗಳು ಕಡಿಮೆ, ಏಕೆಂದರೆ ಚೌಡಮ್ಮನ ಉತ್ಸವ ಈ ಮೂರು ಊರುಗಳನ್ನೂ ಸುತ್ತಿ ಬರುವಾಗ ಮಳೆಹನಿಗಳು ದೇವರಮೇಲೆ ಬಿದ್ದರೆ ಚೌಡಮ್ಮನಿಗೆ ಭಿನ್ನವಾಗುತ್ತದೆ. ಉತ್ಸವ ಮಳೆಯಿಂದ ನೆನೆದರೆ ಮಾಡಿಸಿದವರು ಸ್ವಂತ ಖರ್ಚಿನಿಂದ ಪುಣ್ಯ, ಹೋಮ ಮಾಡಿಸಬೇಕಾಗುತ್ತದೆ.



**ವರಲಕ್ಷ್ಮಿ ಹಬ್ಬದಲ್ಲಿ**

ಪ್ರತಿವರ್ಷದ ವರಲಕ್ಷ್ಮೀ ಹಬ್ಬದಲ್ಲಿ ಚೌಡಮ್ಮನನ್ನು ಸುಂದರವಾಗಿ ಅಲಂಕರಿಸುತ್ತಾರೆ. ಗುಡಿಮುಂದೆ ಸಣ್ಣ ಚಪ್ಪರ ಹಾಕಿ ಬಾಳೆಕಂಬ ಕಟ್ಟುತ್ತಾರೆ. ಕೆಲವು ಭಕ್ತರು ತಾಳ ಮೇಳ ಸಂಗೀತಗಾರರನ್ನು ಕರೆಸುತ್ತಾರೆ. ಅಂದು ಅಲ್ಲಿ ಸಂಗೀತಗೋಷ್ಠಿ ನಡೆಯುತ್ತದೆ. ನೂರಾರು ಜನ ಗುಡಿಗೆ ಬಂದು ಪೂಜೆ ಮಾಡಿಸುತ್ತಾರೆ. ಚೌಡಮ್ಮನ ಅಲಂಕಾರವನ್ನು ನೋಡಬೇಕಾದರೆ ಈ ಹಬ್ಬದಲ್ಲಿ ಬರಬೇಕು. ಹರಕೆ ಮಾಡಿಕೊಂಡಿದ್ದ ಹತ್ತಾರು ಜನ ಅಂದು ಹೂವಿನ ಹಾರಗಳು ಮತ್ತು ಹೊಸ ಸೀರೆಗಳನ್ನು ಚೌಡಮ್ಮನಿಗೆ ಕೊಡುತ್ತಾರೆ. ಈ ಪದ್ಧತಿ ಇತ್ತೀಚಿನದೆಂದು ತಿಳಿದುಬಂದಿದೆ.

**ವನಭೋಜನ**

ಪ್ರತಿವರ್ಷದ ಮುಂಗಾರಿನ ಪ್ರಾರಂಭದಲ್ಲಿ ವನಭೋಜನ ಮಾಡುತ್ತಾರೆ. ಅಂದರೆ ಚೌಡಮ್ಮನ ಗುಡಿಯ ಸುತ್ತಲೂ ಇರುವ ಮರಗಳ ತೋಪಿನಲ್ಲಿ ಅಡುಗೆ ಮಾಡಿ ಅಲ್ಲಿಯೇ ಉಂಡು, ಸಂತೋಷದಿಂದ ಕಾಲ ಕಳೆದು ಸಂಜೆಗೆ ಮನೆಗೆ ಬರುವುದು. ವನಭೋಜನದಲ್ಲಿ ಮೂರು ಊರುಗಳ ಜನರೂ ಒಟ್ಟಿಗೆ ಸೇರಿ ಒಂದೆಡೆ ಅಡುಗೆ ಮಾಡುತ್ತಾರೆ. ಈ ವನಭೋಜನಕ್ಕೆ ಸುತ್ತ ಮುತ್ತಲ ಊರುಗಳ ನೆಂಟರೂ ಬಂದು ಉಂಡು ಹೋಗುತ್ತಾರೆ. ಇದೂ ಒಂದು ಹಬ್ಬವೇ ಆದಂತಾಗುತ್ತದೆ. ರಾತ್ರಿಗೆ ಚೌಡಮ್ಮನ ಉತ್ಸವ ಇರುತ್ತದೆ.

**ಆಗಾಗ್ಗೆ ಪರ**

ಚೌಡಮ್ಮನ ಗುಡಿಗೆ ಹೊಸದಾಗಿ ಬಣ್ಣ ಹಾಕಿಸಿದರೆ, ಉಜ್ಜನಿ ಮತ್ತು ಸುತ್ತಣ ಹಳ್ಳಿಗಳಲ್ಲಿ ಯಾವುದಾದರೂ ಸಾಂಕ್ರಾಮಿಕ ರೋಗ ದನಗಳಿಗೂ ಮನುಷ್ಯರಿಗೂ ಕಾಣಿಸಿಕೊಂಡರೆ ಚೌಡಮ್ಮನ ಪರ ಮಾಡುತ್ತಾರೆ. 'ಪರ' ಎಂದರೆ ಎಲ್ಲ ಹಳ್ಳಿಗಳವರೂ ಸೇರಿ ಅಕ್ಕಿ, ಅಸಿಟ್ಟು ಮತ್ತು ಹಣ ಹಾಕಿ ಚೌಡಮ್ಮನ ಗುಡಿಯ ಬಯಲಿನಲ್ಲಿ ಎಲ್ಲ ಊರಿನವರಿಗೂ 'ದೊಡ್ಡ ಊಟ' ಮಾಡುವುದು. ಕೊಪ್ಪರಿಕೆ, ಕೂನಿ, ಕಡಾಯಗಳಲ್ಲಿ ಅಡುಗೆ ಮಾಡುತ್ತಾರೆ. ಸಾವಿರಾರು ಜನ ಬಂದು ಉಂಡು ಚೌಡಮ್ಮನನ್ನು ದರ್ಶಿಸಿ ಹೋಗುತ್ತಾರೆ.

**ಪೂಜಾರಯ್ಯ**

ಉಜ್ಜನಿಯಲ್ಲಿ ನಾಲ್ಕಾರು ಬ್ರಾಹ್ಮಣ ಮನೆತನಗಳಿದ್ದರೂ ಚೌಡಮ್ಮನ ಪೂಜೆ ಮಾಡುವವರು ಎರಡು ಮನೆಗಳವರು ಮಾತ್ರ. ಅವರಲ್ಲಿಯೂ ಒಬ್ಬರು ಹೇಮಗಿರಿ ಭೈರವನನ್ನು ಅರ್ಚಿಸಿದರೆ ಇನ್ನೊಬ್ಬರು ಚೌಡಮ್ಮನ ಅರ್ಚಕರು. ಈ ಇಬ್ಬರೂ ತಮ್ಮ ಪೂಜೆಯನ್ನು ಹಂಚಿಕೊಂಡಿದ್ದಾರೆ. ಒಂದು ವರ್ಷ ಚೌಡಮ್ಮನಿಗೆ ಅರ್ಚಕರಾಗಿದ್ದವರು ಮತ್ತೊಂದು ವರ್ಷ ಹೇಮಗಿರಿ ಭೈರೂವನಿಗೆ ಅರ್ಚಕರು. ಇದು ಅದಲುಬದಲಾಗುತ್ತಿರುತ್ತದೆ. ಈ ಅರ್ಚಕರಿಗೆ ಕೊಡಿಗೆ ಹೊಲಗಳುಂಟು. ಅವುಗಳಲ್ಲಿ ಬರುವ ಆದಾಯ ಅವರವರಿಗೇ, ಅಲ್ಲದೆ ವರ್ಷಕ್ಕೊಮ್ಮೆ



ಸುಗ್ಗಿಯಲ್ಲಿ ಸುತ್ತಲ ಊರಿನ ಪ್ರತಿ ಮನೆಯವರೂ 'ಅಡದೆ ರಾಗಿ'ಯನ್ನು ಕೊಡುತ್ತಾರೆ, ಈ ಆಡದೆ ರಾಗಿ ನಿಗದಿಯಾದದ್ದು.

**ತೋಟಿ**

ಉಜ್ಜನಿಗೇ ಅಲ್ಲದ ಉಜ್ಜನಿ ಸುತ್ತಿನ ಎಲ್ಲ ಹಳ್ಳಿಗಳಿಗೂ ನಿಗದಿಯಾದ ತೋಟಿ ಗಳಿರುತ್ತಾರೆ. ಇವರೆಲ್ಲರೂ ಉಜ್ಜನಿಯ ಹರಿಜನ ಮನೆತನದವರೇ ಆಗಿರುತ್ತಾರೆ. ಚೌಡಮ್ಮನ ಯಾವುದೇ ಆಚರಣೆಯ ಸಂದರ್ಭದ ವಿಚಾರಗಳನ್ನು ಜನರಿಗೆ ತಿಳಿಸಬೇಕಾದಾಗ ತೋಟಿ ಒಂದು ತಮಟೆ ಬಡಿಯುತ್ತಾ ಸಾರುತ್ತಾರೆ. ಅಲ್ಲದೆ ಊರಿನ ಇತರ ಯಾವುದೇ ವಿಷಯಗಳನ್ನೂ ಸಾರುತ್ತಾನೆ.

ಇವರಿಗೂ 'ಕೊಡಿಗೆ ಹೊಲ' ಮತ್ತು 'ಅಡದೆ ರಾಗಿ'ಯ ವರಮಾನ ಉಂಟು. ವರ್ಷಕ್ಕೊಮ್ಮೆ ಅಥವಾ ಎರಡು ವರ್ಷಕ್ಕೊಮ್ಮೆ ಕೆಲವು ಸರ ಊರಿಂದೂರಿಗೆ ತೋಟಿಗಳು ಬದಲಾಗುವುದೂ ಉಂಟು.

## ಚೌಡಮ್ಮನ ಸಂಬಂಧಗಳು

**ಚೌಡಮ್ಮ-ಹೇಮಗಿರಿ ಭೈರುವ**

ವಾಡಭೇರುವ, ಹೇಮಗಿರಿಭೇರುವ ಎಂದೆಲ್ಲ ಕರೆಯುವ ಬೋರೇದೇವರು ಉಜ್ಜನಿ ಮತ್ತು ಹುಲಿಯೂರುದುರ್ಗದ ನಡುವೆ ಇರುವ ಹೇಮಗಿರಿ ಬೆಟ್ಟದ ಗುಹೆಯಲ್ಲಿ ಇರುವ ದೇವರು. ನಡುಬೆಟ್ಟದ ಗುಹೆಯಲ್ಲಿ ಇರುವುದರಿಂದಲೇ 'ವಾಡೇಭೈರುವ' ಎಂದು ಕರೆಯುತ್ತಾರೆ. ದಟ್ಟವಾದ ಕಾಡಿನ ನಡುವೆ ಬೃಹದಾಕಾರದ ಕರೀಬಂಡೆಯ ಅಡಿಯಲ್ಲಿ ಪ್ರಕೃತಿ ದೇವನೇ ಬೋರಪ್ಪ ಎಂಬಂತೆ ಇರುವ ಈ ದೇವರು ತುಂಬ ಶಿಸ್ತಿನ ದೇವರಂತೆ. ಈ

ಬೆಟ್ಟ ನಮ್ಮ ಉಜ್ಜನಿಗೆ ಎರಡು ಮೈಲಿಗಳ ದೂರದಲ್ಲಿದೆ. ಬೋರಪ್ಪ ನಮ್ಮ ಚೌಡಮ್ಮನಿಗೆ ಖಾಸ ಅಣ್ಣ ಎಂದು ಹೇಳುತ್ತಾರೆ. ಈ ಬೆಟ್ಟದ ಭೈರುವನಿಗೂ ಚೌಡಮ್ಮನಿಗೂ ಇರುವ ಸಂಬಂಧವನ್ನು ನಮ್ಮ ಜನಪದ ಹಾಡುಗಳಲ್ಲಿಯೇ ತಿಳಿಯೋಣ.

ವಲ್ಲೀನ ವದಕೊಂಡು ಮಲ್ಲಿಗೆ ತಕ್ಕೊಂಡು

ಎಲ್ಲೀಗೆ ಭೈರೂವ ದೂರಪಯಣ | ನಾಯಕ್ಕೊಂಡು

ತೌರಿಗೆ ಚೌಡಮ್ಮ ಅರಮನೆಗೆ

ಅಣ್ಣ ಬೋರಯ್ಯ ತಂಗಿ ಚೌಡಮ್ಮ

ತೆಂಗೀನ ಅಣ್ಣ ಒಲೆವೂಡಿ | ಅಟ್ಟಾರಲ್ಲೆ

ಅಣ್ಣ ಬೋರಯ್ಯನ ಮದುವೇಗೆ

---

* ಬೋರೇದೇವರ ಹೆಚ್ಚಿನ ಪರಿಚಯಕ್ಕೆ ಶ್ರೀ ಡಿ. ಲಿಂಗಯ್ಯನವರ "ಬೋರೇದೇವರು" ಪುಸ್ತಕವನ್ನು ನೋಡಿ.



ಚೌಡಮ್ಮನ ಹಬ್ಬದಲ್ಲಿ ಭೈರುವನಿಗೂ ಪಾಲುಂಟು. ಸ್ವತಹ ಭೈರುವನ ಪೂಜೆಯನ್ನು ಹೊತ್ತುಕೊಂಡು ಕೊಂಡ ಹಾಯದಿದ್ದರೂ ಭೈರುವನಿಗೇ ಎಂದು ಮೀಸಲಾದ 'ಧೂಪುಂಡಿಗೆ ಗುಡ್ಡರ ಜೊತೆಯಲ್ಲಿ ಇದ್ದೇ ಇರುತ್ತದೆ. ಹಿಂದೆಯೇ ತಿಳಿಸಿರುವಂತೆ ಈ ಧೂಪುಂಡಿಗೆ ದೊಡ್ಡ ಭೈರುವನ ಒಕ್ಕಲಿಗ 'ಜೋಗಪ್ಪ'ನೇ ಆಗಬೇಕು.

**ಚೌಡಮ್ಮ-ವರದರಾಜಸ್ವಾಮಿ**

ಉಜ್ಜನಿಯ ದೊಡ್ಡ ಬೀದಿಯ ಒಂದು ಪಕ್ಕದಲ್ಲಿ ಒಂದು ಸಣ್ಣ ಗುಡಿ ಇದೆ. ಇದೇ ವರದರಾಜಸ್ವಾಮಿಯ ಗುಡಿ. ಶ್ರೀಕೃಷ್ಣ ಬೇರೆ ಹೆಸರನ್ನು ಇಟ್ಟುಕೊಂಡು ಉಜ್ಜನಿಯ ಈ ದೇವಸ್ಥಾನದಲ್ಲಿ ಸೇರಿಕೊಂಡಿದ್ದಾನೆ ಎಂದು ಜನರ ನಂಬಿಕೆ. ಆದ್ದರಿಂದ ವರದರಾಜಸ್ವಾಮಿ ಚೌಡಮ್ಮನ ಗಂಡ ಎಂದು ಹೇಳುತ್ತಾರೆ. ಹಬ್ಬದಲ್ಲಿ ಚೌಡಮ್ಮನ ಪೂಜೆಯನ್ನು ಮೊದಲು ಈ ಗುಡಿಗೆ ಹೊತ್ತುಕೊಂಡು ಹೋಗಿ ಪೂಜೆ ಸಲ್ಲಿಸಿದ ನಂತರವೇ ಇತರ ಕಾರ್ಯಗಳು.

**ಚೌಡಮ್ಮ - ಉಳಿದ ಆರುಜನ ಚೌಡಮ್ಮಗಳು**

ನಿಡಸಾಲೆ ಚೌಡಮ್ಮನನ್ನು ಬಿಟ್ಟರೆ ಉಳಿದ ಯಾವ ಚೌಡಮ್ಮನ ಸಂಬಂಧವೂ ಉಜ್ಜನಿ ಚೌಡಮ್ಮನಿಗೆ ಇರುವುದು ಕಾಣುವುದಿಲ್ಲ. ಹಬ್ಬದ ಆಚರಣೆಗಳಲ್ಲಾಗಲೀ ಯಾವ ಪದದಲ್ಲಾಗಲೀ ನಿಡಸಾಲೆ ಚೌಡಮ್ಮನ ಹೊರತಾಗಿ ಬೇರೆ ಚೌಡಮ್ಮಗಳ ವಿಷಯ ಬರುವುದಿಲ್ಲ.

ಈ ಸಂಬಂಧಗಳಲ್ಲದೆ ಚೌಡಮ್ಮ ವೆಂಕಟರಮಣನಿಗೆ ತಂಗಿ ಎಂದೂ ಕೆಲವರು ಹೇಳುತ್ತಾರೆ. ಆದರೆ ಆಚರಣೆಗಳೆಲ್ಲಾಗಲೀ ಪದಗಳಲ್ಲಾಗಲೀ ಈ ವಿಷಯ ಬರುವುದಿಲ್ಲ. ನಂಜುಂಡೇಶ್ವರನೂ ಚೌಡಮ್ಮನಿಗೆ ಅಣ್ಣ ಎಂದು ಹೇಳುತ್ತಾರೆ. ಕೆಲವರು ಇಲ್ಲ ಎನ್ನುತ್ತಾರೆ. 'ಚಾಮುಂಡಿಯೇ ಚೌಡಮ್ಮ ಎಂದು ಹೇಳಿದಮೇಲೆ, ಚೌಡಮ್ಮ ನಂಜಪ್ಪನಿಗೆ ತಂಗಿ ಹೇಗೆ ಆಗುತ್ತಾಳೆ' ಎಂದೂ ಕೆಲವರು ವಾದ ಮಾಡುತ್ತಾರೆ. ಒಟ್ಟಿನಲ್ಲಿ ಮನುಷ್ಯರಲ್ಲಿ ಸಂಬಂಧಗಳು ಇರುವಂತೆಯೇ ದೇವರುಗಳಿಗೂ ಸಂಬಂಧಗಳು ಇರುತ್ತವೆ ಎಂದು ಕಲ್ಪಿಸಿಕೊಂಡ ನಮ್ಮ ಜನ ಈ ರೀತಿಯ ಸಂಬಂಧಗಳನ್ನು ಗಂಟುಹಾಕಿದ್ದಾರೆ.

**ಚೌಡಮ್ಮನ ಪದಗಳಿಂದ ತಿಳಿದುಬರುವ ಹೆಚ್ಚಿನ ವಿಷಯಗಳು**

ಜನಪದ ಹಾಡುಗಳು ಕೇವಲ ದೈವಾರಾಧನೆಗೆ ಮಾತ್ರ ಹುಟ್ಟಲಿಲ್ಲ. ಅವರ ಕಷ್ಟಸುಖಗಳ, ಭಯಭಕ್ತಿಗಳ, ಪ್ರೇಮಕಾಮಗಳ, ಆವೇಶ ಆಕ್ರೋಶಗಳ, ಉದ್ವೇಗ ಉನ್ಮಾದಗಳ ಫಲವಾಗಿವೆ. ಅವರು ಕಂಡುಂಡು ಅನುಭವಿಸಿದ ಸುಖದುಃಖಗಳನ್ನು ದೇವರೊಂದಿಗೂ ಬೆರೆಸಿ, ದೇವರಿಗೂ ತಮಗೂ ಅಭೇದವನ್ನು ಕಲ್ಪಿಸುತ್ತಾರೆ. ತನ್ನಂತೆಯೇ ದೇವರೂ ಎಂಬುದನ್ನು ಕೆಲವೊಮ್ಮೆ ಮನಗಾಣುತ್ತಾರೆ. “ಮನುಷ್ಯರ ಪ್ರೇಮವನ್ನು ದೇವರಲ್ಲಿಯೂ ಕಲ್ಪಿಸಿ ಊರಿಗೆ ಸ್ತ್ರೀಪುರುಷ

ಸಂಬಂಧವನ್ನು ಹಚ್ಚುವ ಮೂಲಕ ಪ್ರೇಮವನ್ನು ನೀತಿ ಅನೀತಿಗಳ ಚೌಕಟ್ಟಿನಿಂದ ಬೇರೆ ಮಾಡಿ ಅದಕ್ಕೆ ಒಂದು ಬಗೆಯ ದೈವೀಕ ಕತೆಯನ್ನು ಕಲ್ಪಿಸಿಬಿಡುತ್ತಾರೆ."* "ಅವನ ದೃಷ್ಟಿಯಲ್ಲಿ ದೇವರು ಸರಸಿ ವಿರಸಿ, ಕರುಣಿ ಕ್ರೂರಿ, ಉಣ್ಣುತ್ತಾನೆ ಉಡುತ್ತಾನೆ, ಮದುವೆಯಾಗುತ್ತಾನೆ, ಪ್ರಣಯ ಲೀಲೆಯಲ್ಲಿ ತೊಡಗುತ್ತಾನೆ; ಓಡಿದರೆ ಆಯಾಸಗೊಳ್ಳುತ್ತಾನೆ. **** ಅವರ ದುಡಿಮೆಯ ಕಾಲದಲ್ಲಿ ಇಂತಹ ದೇವರ ಪದಗಳನ್ನು ಹಾಡುತ್ತ ಹಾಡುತ್ತಾ ದುಡಿದರೆ ಅವರ ಆಯಾಸ ಗೊತ್ತಾಗುವುದಿಲ್ಲ. ಕಷ್ಟಕಾಲದಲ್ಲಿ ದುಃಖ ಬಂದಾಗ ದೇವರ ಹಾಡನ್ನು ನೆನೆಸಿಕೊಂಡು ಹಾಡುತ್ತಾ ಕುಳಿತರೆ ಅವರ ಕಷ್ಟವನ್ನು ದೇವರಲ್ಲಿ ತೋಡಿಕೊಂಡಂತಾಗುತ್ತದೆ. ಮನಕ್ಕೆ ನೆಮ್ಮದಿಯೂ ಸಿಗುತ್ತದೆ.

ಈ ಎಲ್ಲಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಜನಪದ ಕವಿಗಳು ಚೌಡಮ್ಮನ ಮೇಲು ಹಾಡು ಕಟ್ಟಿದ್ದಾರೆ. ತಮ್ಮ ಕಷ್ಟವನ್ನು ತೋಡಿಕೊಂಡಿದ್ದಾರೆ, ಸುಖವನ್ನು ಪ್ರಕಟಗೊಳಿಸಿದ್ದಾರೆ. ಚೌಡಮ್ಮನನ್ನು ಹೊಗಳಿದ್ದಾರೆ, ಬೇಡಿದ್ದಾರೆ, ಕೊಟ್ಟಿದ್ದಾರೆ.

**ಚೌಡಮ್ಮನಿಗೆ ಜಾತಿಭೇದವಿಲ್ಲ**

ಚೌಡಮ್ಮನಿಗೆ ಎಲ್ಲ ಜಾತಿಯವರೂ ಒಂದೇ. ಎಲ್ಲರೂ ಅವಳ ಮಕ್ಕಳೇ, ಚೌಡಮ್ಮನ ಈ ಸಮತಾಭಾವವನ್ನು ಹಾಡುಗಳಲ್ಲಲ್ಲದೆ ಸಂಪ್ರದಾಯಗಳಲ್ಲೂ ಕಂಡಿದ್ದೇವೆ. ಬಹುಶಃ ಹೊಲೆಯರು ಎಂದು ಕರೆಸಿಕೊಂಡು, ಕೀಳುಜನರು ಎನಿಸಿಕೊಂಡು ಸಮಾಜದಲ್ಲಿ ಬಹು ಕಷ್ಟವನ್ನು ಅನುಭವಿಸಿದ ಹರಿಜನರು ಹಬ್ಬಗಳಲ್ಲಿ ಭಾಗವಹಿಸುವುದು ಕಡಿಮೆ. ಆದರೆ ಚೌಡಮ್ಮನ ಹಬ್ಬದಲ್ಲಿ ಹೆಬ್ಬಾರಮ್ಮನ ಹೆಸರಿನಲ್ಲಿ ಹಬ್ಬದ ಅರ್ಧಪಾಲು ಇವರಿಗೇ ಸಲ್ಲುತ್ತದೆ.

ಚೌಡಮ್ಮ ಎಲ್ಲ ಜಾತಿಯವರ ಮನೆಬಾಗಿಲಿಗೂ ಹೋಗುತ್ತಾಳೆ, ವಿಚಾರಿಸುತ್ತಾಳೆ.

ಅಗಸರ ಕೇರಿಗೆ ವೋದಾಳೆ ಚೌಡಮ್ಮ

ಅಗಸರ ಮಗನ ಕರದಾಳೆ | ಏನಂದಾಳು

ಎಲ್ಲಪ್ಪ ಮಗನೆ ನಡಮುಡಿ

ವಲೇ ಕೇರಿಗೆ ವೋದಾಳೆ ಚೌಡಮ್ಮ

ವಲೇರ್ ಮಗನ ಕರೆದಾಳೆ......

ಹೀಗೆಯೇ ವಾಜರು, ಗೌಡರು, ಆರುವರ ಕೇರಿಗಳಿಗೆ ಚೌಡಮ್ಮ ಹೋಗುತ್ತಾಳೆ. ಅವರವರ ಕೆಲಸವನ್ನು ಅವರವರು ಮಾಡುವಂತೆಯೂ ಹೇಳುತ್ತಾಳೆ. ಎಲ್ಲ ಜಾತಿಯವರೂ ಚೌಡಮ್ಮನಿಗೆ ಬೇಕು. ಆದರೆ ಈ ಬುದ್ಧಿ ಅಲ್ಲಿನ ಜನಗಳಿಗೇ ಇಲ್ಲ.

---

* ಡಾ. ಎಲ್. ಆರ್. ಹೆಗಡೆ, ಕನ್ನಡ ಜನಪದ ಸಾಹಿತ್ಯ : ಪುಟ. ೮೬

** ಡಾ. ದೇ. ಜವರೇಗೌಡ, ಜಾನಪದ ಅಧ್ಯಯನ : ಪು. ೨೪



**ಅತಿ ರೂಪವಂತ ಚೌಡಮ್ಮ**

ಚೌಡಮ್ಮ ಬರುವ ಚಂದ ಎಷ್ಟು ಅಂದವಾಗಿರುತ್ತದೆ. ಚೌಡಮ್ಮನ ಕಾಲು ಉಂಗುರದ ಕಾಲು. ನಡು ಬಂಗಾರದ್ದು, ಅವಳು ಬಳುಕುತ್ತಾ ನಡೆಯುತ್ತಾಳೆ.

ಉಂಗುರದ ಕಾಲ ಊರುತ್ತ ಜಾರುತ್ತ
ಬಂಗಾರದ ನಡುವ ಬಳುಕುತ್ತ | ಚೌಡಮ್ಮ
ಬಂದಾಳ ಬಳಿಯ ಅಸುರಾಕೆ

ನಡು ಸಣ್ಣಗಿದ್ದರೆ ಹೆಣ್ಣಿನ ರೂಪ ಬಹು ಚೆನ್ನ. ಬಳುಕುವ ನಡುವೆಂದ ಮೇಲೆ ಅದು ಸಣ್ಣಗೂ ಇರಬೇಕಲ್ಲವೆ? ಕೂದಲು ಉದ್ದವಿದ್ದಷ್ಟೂ ಹೆಣ್ಣಿನ ಸೌಂದರ್ಯ ಹೆಚ್ಚುತ್ತದೆ. ಚೌಡಮ್ಮ ಇದಕ್ಕೇನೂ ಹೊರತಲ್ಲ.

ನಡುವೊಂದು ಯಿಡಿಯಲ್ಲೆ ಜಡೆಯೊಂದು ಮಾರಲ್ಲೆ
ಗಡಿಯಾರದೆಣ್ಣೆ ಚೌಡಮ್ಮ | ಉಜ್ಜನಿಯ
ಗಡಿಗೇಗೆ ತನಿಯ ಎರೆದಾಳೆ

ಇಲ್ಲಿ 'ಗಡಿಯಾರದೆಣ್ಣು' ಎನ್ನುವುದರ ಅರ್ಥವೇನಿರಬಹುದು? ಬಹುಶಃ ಗಡಿಯಾರದಂತೆ ಅವಿಶ್ರಾಂತ ದುಡಿಮೆಗಾರ್ತಿ, ಕಟ್ಟುನಿಟ್ಟಾದವಳು ಎಂದಿರಬಹುದು.

ತಾವು ಬೆಳೆಯುವುದು ರಾಗಿ, ತಮಗೆ ಎಟಕದ್ದನ್ನು, ನೋಡದ್ದನ್ನು ಇವರು ವರ್ಣಿಸಲು ಹೋಗುವುದಿಲ್ಲ. ಆದ್ದರಿಂದ ರಾಗಿಕಡ್ಡಿಯ ಬಣ್ಣವನ್ನು ಚೌಡಮ್ಮನಿಗೆ ಹೋಲಿಸಿದ್ದಾರೆ. ಚೆನ್ನಾಗಿ ಬಲಿತು ಒಣಗಿದ ರಾಗಿಕಡ್ಡಿ ಚೆನ್ನದ ಬಣ್ಣದಿಂದ ಹೊಳೆಯುತ್ತದೆ.

ರಾಗಿ ಕಡ್ಡಿಯ ಬಣ್ಣ ರನ್ನಮುತ್ತಿನ ಬಣ್ಣ

ತಾಯೀ ಚೌಡಮ್ಮ ಬೆನ್ನು ಬಣ್ಣ

ತಾವು ನೋಡುವ ಸರ್ವಸ್ವದಲ್ಲಿಯೂ ಚೌಡಮ್ಮನನ್ನು ಕಾಣುತ್ತಾರೆ, ಅಣು ರೇಣು ತೃಣಾಕಾಷ್ಟಗಳಲ್ಲಿಯೂ ಕಾಣುವಂತೆ.

ವೊಂಬಾಳೆಲ್ಲೊಡದಿ ಬಾರೇss

ಚೌಡಮ್ಮ ನಂಚಕ್ಕಿಲಿ ನುರುದಿ ಬಾರೇ

ನೀ ಕುದುರೇ ಮ್ಯಾಲ್ ಕುಣುದಿ ಬಾರೇss

ಚೌಡಮ್ಮ ನೀ ಚೂಜಿಮ್ಯಾಲೇರಿ ಬಾರೇ

**ಚೌಡಮ್ಮನ ಹುಲಿ ಬೇಟೆ**

ಚೌಡಮ್ಮ ಹುಲಿ ಬೇಟೆಯನ್ನೂ ಮಾಡುವಂತಹ ಸಾಹಸಿ, ಅದೂ ಒಂಟಿಯಾಗಿ ಒಬ್ಬಳೇ ಬೇಟೆಯಾಡುತ್ತಾಳಂತೆ!

ಮುದ್ದು ಚೌಡಮ್ಮ ಎದ್ದೆಲ್ಲಿಗೋದಾಳ

ಇಬ್ಬಾಣಿ ವುಲ್ಲ ತುಳಕೊಂಡು | ಚೌಡಮ್ಮ

ಅವಳೊಬ್ಬಳಾಡಾಳೆ ಉಲಿಬ್ಯಾಟೆ

ಮಲಗಿದ್ದ ಹುಲಿಯನ್ನು ಕೆಣಕುವರುಂಟೆ? ಆದರೆ ಚೌಡಮ್ಮ ಕೆಣಕುತ್ತಾಳೆ. ಆದ್ದರಿಂದಲೇ ನಿನ್ನದು ದೊರೆಬುದ್ಧಿ ಎಂದು ಚೌಡಮ್ಮನನ್ನು ಹೊಗಳುತ್ತಾರೆ.

ಒಳಗೆರೆ ಒಳಗೆ ಒಡ್ಡಿ ಚಂಡಾಡೋಳೆ

ಮಲಗಿದ್ದ ಉಲಿಯ ಕೆಣಕೋಳೆ | ಚೌಡಮ್ಮ

ಸರಿಕಾಣೆ ನಿನ್ನ ದೊರೆ ಬುದ್ಧಿ

ಹೀಗೆ ಚೌಡಮ್ಮನನ್ನು ಬೇಟೆಗಾರ್ತಿಯನ್ನಾಗಿ ಮಾಡಿದ್ದಾರೆ.

**ಚೌಡಮ್ಮನ ಯುದ್ಧ**

ಹುಲಿ ಬೇಟೆಯಾಡುವ ಸಾಹಸ ಧೈರ್ಯವಿದ್ದವಳು ಯುದ್ಧ ಮಾಡಲು ಹೆದರುವಳೆ? ಚೌಡಮ್ಮನಿಂದ ಯುದ್ಧವನ್ನೂ ಮಾಡಿಸಿದ್ದಾರೆ. ನಮ್ಮ ಜನಪದರು ಯುದ್ಧ ಮಾಡುವ ಚೌಡಮ್ಮನಿಗೆ ಬುದ್ಧಿ ಮಾತನ್ನೂ ಹೇಳಿದ್ದಾರೆ. ಉತ್ತಮರ ಮಗನ ಕೊಲಬೇಡ ಎಂದು'

ಕೋಳಿ ಕೂಗಿವೆ ಕುಂಬಳದೂವಿಗೆ

ಬೆಟ್ಟ ಸಾರೀದ ಬಿದರೀಗೆ | ಚೌಡಮ್ಮ

ಕತ್ತಿ ಕೂಗೀದ ಜಗಳಾಕೆ | ಚೌಡಮ್ಮ

ಉತ್ತಮರ ಮಗನ ಕೊಲಬೇಡ | ಚೌಡಮ್ಮ

ಯೆಚೀನ ಬಾಗ್ಯಾವ ಕೊಡಸೇವು

ಯುದ್ಧ ಮಾಡುತ್ತಿರುವ ವೈರಿ ಉತ್ತಮನಾಗಿದ್ದರೆ ಕೊಲ್ಲಬೇಡ, ಬಿಟ್ಟುಬಿಡು ಎಂದು ಹೇಳಿರುವುದು ನಿಜವಾದ ಕ್ಷತ್ರಿಯ ಮನೋಧರ್ಮವನ್ನು ಸೂಚಿಸುತ್ತದೆ. ಚೌಡಮ್ಮ ಯುದ್ಧಕ್ಕೆ ಹೋಗಿ ದೂರದಲ್ಲಿ ಯುದ್ಧ ಮಾಡುವಾಗ ಸಮಾಚಾರವನ್ನು ತಿಳಿಸುವವರು ಯಾರು? ಈ ಕೆಲಸವನ್ನು ಗಿಣಿಗಳಿಗೆ ವಹಿಸಿದ್ದಾರೆ. ಎಷ್ಟೇ ಆಗಲಿ ಗಿಣಿಗಳೆಂದರೆ

ರಾಜಕುಮಾರಿಯರ ಆಪ್ತ ಸೇವಕಿಯರಲ್ಲವೇ? ನಮ್ಮ ಚೌಡಮ್ಮನಿಗೂ ಗಿಣಿಗಳೇ ಸಮಾಚಾರ ತಲುಪಿಸುವ ಅಂಚೆ ಸಾಧನಗಳು.

ದುಂಡಿ ಚೌಡಮ್ಮ ದಂಡಿಗೋದೇನಿಂದ

ದಂಡಿನಿಂದೇಳು ಗಿಣಿ ಬಂದೋ | ಚೌಡಮ್ಮ

ದುಂಡೀ ನೀನಿದ್ದ ಬಗೆಯೇಗೆ

**ಚೌಡಮ್ಮನ ಸಂಸಾರ**

ರೂಪವತಿಯಾದ ಸಾಹಸಿಯಾದ ಚೌಡಮ್ಮ ಸಂಸಾರಿಯೂ ಹೌದು. ಚೌಡಮ್ಮನಿಗೆ



ಗಂಡನುಂಟು, ಮಕ್ಕಳುಂಟು. ಎಲ್ಲರ ಸಂಸಾರದಂತೆಯೇ ಚೌಡಮ್ಮನ ಸಂಸಾರವೂ, ಚೌಡಮ್ಮನ ಗಂಡ ಕ್ರಿಷ್ಣನಲ್ಲವೇ, ಎಲ್ಲಿ ಬಿಟ್ಟಾನು ಅವನ ಸರಸದ ಬುದ್ಧಿಯನ್ನು!

ಅರಸೆ ಚೌಡಮ್ಮ ಪುರುಸಾರೆಲ್ಲಿಗೋದ್ರು

ನರಸೀಪುರದ ನಡುವೊಳೆ | ತೋಪಲ್ಲಿ

ಸರಸಾನಾಡಾಕೋಗಿ ಬರಲಿಲ್ಲ

ಚೌಡಮ್ಮ ಬಸುರಿಯಾಗಿದ್ದಾಳೆ, ಬಾಣಂತಿಯೂ ಆಗಿದ್ದಾಳೆ. ಬಾಣಂತಿಗೆ ದಿನವೂ ನೀರು ಉಯ್ಯಬೇಕು. ಅಂತೆಯೇ ಚೌಡಮ್ಮನೂ ನೀರು 'ಉಯ್ದುಕೊಳ್ಳುತ್ತಾಳೆ'

ತೆಂಗಿನ ಮರಕೆ ತಿಂಗಳಿಂದ ನೀರಿಲ್ಲ

ತಿಂಗಳ ಬಾಣಂತಿ ಚೌಡಮ್ಮ | ಉಯ್ದುಕೊಂಡ ನೀರು

ತಂಗಿನಮರಕೆ ಅದವಾದೊ

ಚೌಡಮ್ಮನ ಮಗ ಈಗ ದೊಡ್ಡವನಾಗಿದ್ದಾನೆ. ಆಡಲು ಹೋಗಿದ್ದಾನೆ, ಅಥವಾ ಎಲ್ಲೋ ದೂರ ಹೋಗಿದ್ದಾನೆ. ತನ್ನ ಮಗ ಎಲ್ಲಿ ಹೋದ ಎಂದು ಎಲ್ಲ ತಾಯಿಯರಂತೆ ತಾನೂ ತವಕದಿಂದ ನೋಡುತ್ತಿದ್ದಾಳೆ.

ಊರಮುಂದೆ ನಿಂತುಕೊಂಡು ಯಾರನೋಡಿ ಚೌಡಮ್ಮ

ದೂರಕೋಗುವನೆ ನಿನ್ನ ಮಗ

ಚೌಡಮ್ಮನ ಮಗನ ಹೆಸರು 'ಮಲ್ಲಿಗೆ' ಎಂಥ ಮೋಹಕ ಹೆಸರು! ಯಾವ ಜಾತಿಯ ಯಾವ ಪಂಥ ಪಂಗಡದ ಸೊಂಕೂ ಇಲ್ಲ ಈ ಹೆಸರಿಗೆ!

ಮಗನೆಸರು ಮಲ್ಲೀಗೆ ತಾಯಿ ಚೌಡಮ್ಮ

ಸತಿಪುರುಸರೆಸರು ಕ್ರಿಷ್ಣಾರು

ನಮ್ಮ ಹಳ್ಳಿಗರ ದೃಷ್ಟಿಯಲ್ಲಿ ಚೌಡಮ್ಮನ ಜೀವನವೂ ಮನುಷ್ಯ ಜೀವನವೇ ಕೆಲವು ಸಂದರ್ಭಗಳನ್ನು ಬಿಟ್ಟರೆ ಚೌಡಮ್ಮ ಅತಿಮಾನುಷಳಾದ ವ್ಯಕ್ತಿ ಅಲ್ಲ ಎಂಬುದನ್ನು ತೋರಿಸಿದ್ದಾರೆ. ಅವರ ಪ್ರಕಾರ ಚೌಡಮ್ಮನೂ ಜನಸಾಮಾನ್ಯರಂತೆ ಜೀವನ ನಡೆಸುತ್ತಾಳೆ. ಚೌಡಮ್ಮನನ್ನು ಹೀಗೆ ಹಾಡಿ ಹೊಗಳಿದ ಜನ ಚೌಡಮ್ಮನಲ್ಲಿ ತಮ್ಮನ್ನೇ ಕಂಡಿದ್ದಾರೆ.

## ಉಜ್ಜನಿ ಚೌಡಮ್ಮನ ಪದಗಳು

ಮಾನವ ಬಹು ಹಿಂದಿನಿಂದಲೂ ದೈವವನ್ನು ಆರಾಧಿಸುತ್ತಾ ಬಂದಿದ್ದಾನೆ. ಜೊತೆಗೆ ತನ್ನ ಹುಟ್ಟಿನಿಂದ ಸಾವಿನವರೆಗೆ ಅನೇಕ ಕಟ್ಟುಪಾಡುಗಳಿಗೆ ಒಳಗಾಗಿದ್ದಾನೆ. ತನ್ನ ಜೀವನಕ್ಕೆ ಪೂರಕವಾದ ಸಾಂಪ್ರದಾಯಿಕ ಆಚರಣೆಗಳಾದ ಮದುವೆ, ಮುಂಜಿ, ಶೋಭನ ಇವುಗಳನ್ನು ನೆರವೇರಿಸಿದ್ದಾನೆ, ಹಬ್ಬಗಳನ್ನು ಮಾಡಿದ್ದಾನೆ. ಹರಿದಿನಗಳನ್ನು ಆಚರಿಸಿದ್ದಾನೆ. ಮನುಷ್ಯ ಎಂದಿನಿಂದ ಈ ಎಲ್ಲ ಆಚರಣೆಗಳನ್ನು ಮಾಡುತ್ತ ಬಂದನೋ ಅವುಗಳಿಗೆ ಸಂವಾದಿಯಾಗಿ ಜನಪದ ಹಾಡುಗಳನ್ನೂ ಸೃಷ್ಟಿಸಿಕೊಂಡಿದ್ದಾನೆ. ಸಾಮಾನ್ಯ ಜೀವಿಯಾದ ಹಳ್ಳಿಗನಿಗೆ ಸಂಸ್ಕೃತಮಯವಾದ ಅಥವಾ ಶಿಷ್ಟ ಭಾಷೆಯ ಗ್ರಂಥಗಳನ್ನು ಅರ್ಥಮಾಡಿಕೊಳ್ಳಲಾರದ ನಿರಕ್ಷರ ಕುಕ್ಷಿಯಾದ ಅವನಿಗೆ ಜನಪದ ಹಾಡುಗಳೇ ವೇದಗಳಾದವು, ಮಂತ್ರಗಳಾದವು. ಈ ಕಾರಣದಿಂದ ಅವನು ತನ್ನದೇ ಆದ ಒಂದು ಬಾಯಿ ಗ್ರಂಥವನ್ನು ತಯಾರಿಸಿಕೊಂಡ, ಅದನ್ನು ಆಗಾಗ್ಗೆ ಹಾಡಿ ಹಾಡಿ ಆನಂದ ಪಟ್ಟ, ಅವುಗಳನ್ನೇ ಎಲ್ಲ ಸಂಪ್ರದಾಯಗಳಿಗೂ ಅಳವಡಿಸಿಕೊಂಡ.

'ಸೋಬಾನೆ ಚಿಕ್ಕಮ್ಮ' ಹೇಳುವಂತೆ "ಸೋಬಾನ ಈ ಹೊತ್ತು ಆದೋವಲ್ಲ, ಶಿವನೂ ಪಾರ್ವತಿಯೂ ಮದುವೆಯಾದಾಗ ಹುಟ್ಟಿ ಬೆಳೆದೋವು" .* ನಮ್ಮ ಜನರಲ್ಲಿರುವ ಹಾಡುಗಳ ಉಗಮವನ್ನು ಕುರಿತು ಅವರನ್ನೇ ಕೇಳಿದಾಗ ಮೇಲಿನಂತೆ ಹೇಳುತ್ತಾರೆ. ಹಾಡುಗಳ ಹುಟ್ಟು ಬೆಳವಣಿಗೆಗೆ ಪೂರಕವಾಗಿ ಒಂದೊಂದು ಐತಿಹ್ಯಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಶಿವನೂ ಪಾರ್ವತಿಯೂ ಮದುವೆಯಾದಾಗ ಅಲ್ಲದಿದ್ದರೂ ಮನುಷ್ಯರಲ್ಲಿ ಮದುವೆ ಎಂಬ ಸಂಪ್ರದಾಯ ಬಂದಾಗಿನಿಂದ ಸೋಬಾನ ಹುಟ್ಟಿದವು ಎಂದಂತೂ ಹೇಳಬಹುದು. ಹೀಗೆಯೇ 'ಹಬ್ಬ' ಆಚರಣೆಗೆ ಬಂದಾಗಿನಿಂದ ಅದಕ್ಕೆ ಸಂಬಂಧಪಟ್ಟ ಪದಗಳು ಹುಟ್ಟಿದವು. ಮನುಷ್ಯನೊಡನೆ ಹಾಡು ಹುಟ್ಟಿತು. ಜೀವ ಹಾಗೂ ಗೀತಗಳು ಕೈಕೈ ಹಿಡಕೊಂಡು ಬಂದವು. ಆದರೆ ಮುಂದೆ ಜೀವ ಹೊರಟುಹೋಯಿತು. ಗೀತೆ ನಿಂತುಬಿಟ್ಟಿತು. ಜೀವನದ ಬೆನ್ನೇರಿ ಬಂದ ಗೀತವು ಜೀವನಕ್ಕೆ ನೆಲವಾಯಿತು. ನೆಲೆಯಾಯಿತು. ಜನಪದ ಗೀತವಾಯಿತು."**

ಹೀಗೆ ಜೀವನದ ಬೆನ್ನೇರಿ ಬಂದ ಈ ಗೀತವು ಶಿಷ್ಟ ಸಾಹಿತ್ಯ ರಚನೆಗೆ ಕಾರಣವಾಯಿತು. ಲಿಪಿ ಎಂಬ ಸಾಧನ ದೊರಕಿದ ಮೇಲೆ ಜನಪದ ಗೀತೆಗಳಿಂದ ಪ್ರೇರೇಪಿತರಾದ ಕವಿಹೃದಯ ವಿದ್ದವರು ಜನಪದ ಗೀತೆಗಳಿಂದ ಸ್ವಲ್ಪ ಶಿಷ್ಟವಾಗಿ ಸ್ವಪ್ರತಿಭೆಯೊಡನೆ ಕಾವ್ಯರಚನೆ ಮಾಡಿದರು. ನಮ್ಮ ರಾಮಾಯಣ, ಮಹಾಭಾರತ ಕಾವ್ಯಗಳ ರಚನೆಯೂ ಹೀಗೆಯೇ ಇರಬೇಕೆಂದು

---

* ಎಚ್. ಎಲ್. ನಾಗೇಗೌಡ, ಸೋಬಾನ ಚಿಕ್ಕಮ್ಮನ ಪದಗಳು : ಪು. ೧೨೧

** ಸುವರ್ಣ ಸಂಚಯ : ಪು. ೩೪, (ಸಿಂಪಿ ಲಿಂಗಣ್ಣನವರ ಲೇಖನ)

ಊಹಿಸಬಹುದು. ಆದ್ದರಿಂದ ಸಾಹಿತ್ಯ ವೃಕ್ಷಕ್ಕೆ ಜನಪದ ಕಾವ್ಯ ಬೊಡ್ಡೆ ಬೇರು, ಅಭಿಜಾತ ಕಾವ್ಯ, ಹೂ ಹಣ್ಣು ಅವೆರಡೂ ಭಿನ್ನವಲ್ಲ. ಪರಸ್ಪರ ಪೂರಕವಾದವು.

ಚಂಪೂ ಕಾವ್ಯಗಳೂ ಕಥನ ಕಾವ್ಯಗಳೇ ಆಗಿವೆ. 'ಚೆನ್ನಿಗರಾಮ', 'ಶಂಕಮ್ಮ' ಇಂತಹ ಗದ್ಯ ಪದ್ಯ ಮಿಶ್ರಿತ ಜನಪದ ಕಥನ ಕಾವ್ಯಗಳು ಶಿಷ್ಟ ಸಾಹಿತ್ಯದ ಚಂಪೂ ಶೈಲಿಗೆ ಪ್ರೇರಕವಾಗಿರಬಹುದು. ಗುಣಸಾಗರಿ, ನಾಗರಗನ್ನೆ, ಬಂಜೆ ಹೊನ್ನಮ್ಮ ಇಂತಹ ಸರಳ ಕಥನ ಗೀತೆಗಳು ಹರಿಹರನ ಸರಳರಗಳೆಗಳಿಗೆ ಪೂರಕವಾಗಿರಬಹುದು ಎಂಬ ಊಹೆಗೆ ಅನುವು ಮಾಡಿಕೊಡುತ್ತವೆ. ಜನಪದ ಸಾಹಿತ್ಯದಲ್ಲಿ ಬೃಹತ್ ಪ್ರಮಾಣದಲ್ಲಿರುವ ತ್ರಿಪದಿಗಳಿಂದ ಬಸವಣ್ಣನವರ ವಚನಗಳು ಹಾಗೂ ಸರ್ವಜ್ಞನ ತ್ರಿಪದಿಗಳು ಪ್ರಭಾವಿತವಾಗಿವೆ. “ವಚನ ಸಾಹಿತ್ಯದ ಉಗಮ ತ್ರಿಪದಿಯ ಮೂಲಕ ಆಯಿತು ಎನ್ನುವ ಸಾಕಷ್ಟು ಸಕಾರಣಗಳ ಪ್ರಸಿದ್ಧವಾದ ವಾದ ನಮ್ಮಲ್ಲಿದೆ. ಒಟ್ಟಿನಲ್ಲಿ ಜನತೆಯ ಆಗುಹೋಗುಗಳ ಬಗ್ಗೆ ಪ್ರಾಮಾಣಿಕವಾಗಿ ಚಿಂತಿಸಿದ ನಮ್ಮ ವಚನಕಾರರು ಜನತೆಯ ಮಟ್ಟುಗಳಾದ ತ್ರಿಪದಿಯಂತಹ ದೇಶೀಯ ಮಟ್ಟುಗಳ ಮೂಲಕ ತಮ್ಮ ಸಶಕ್ತ ಸಾಹಿತ್ಯ ರೂಪವನ್ನು ಕಂಡುಕೊಂಡವರು.” ಹೀಗೆ ಎಲ್ಲ ಶಿಷ್ಟ ಸಾಹಿತ್ಯ ರಚನೆಗೆ ಜನಪದ ಸಾಹಿತ್ಯವೇ ಪೂರಕವಾಗಿದೆ. ಈಗಲೂ ಸಾಮಾನ್ಯ ಜನಜೀವನ ನಡೆಸುವ ಹಳ್ಳಿಗರಿಗೆ ಜನಪದ ಸಾಹಿತ್ಯವೇ ದಿನನಿತ್ಯದ ನಿಜ ಸಾಹಿತ್ಯವಾಗಿದೆ. ಆದ್ದರಿಂದ “ಮುತ್ತಜ್ಜನೆಂತು ಮುಮ್ಮಗನಿಗೆ ಪೂಜ್ಯನೋ ಅಂತೆಯೇ ಶಿಷ್ಟಪದಕ್ಕೆ ಜಾನಪದ ಆರಾಧ್ಯವಾಗುತ್ತದೆ.

ಇನ್ನು ಈ ಹಾಡುಗಳನ್ನು ಕಟ್ಟಿದವರು ಯಾರು ಎಂಬ ಬಗ್ಗೆ ಸ್ವಲ್ಪ ವಿಚಾರ ಮಾಡಬಹುದು. ಜನಪದ ಹಾಡುಗಳನ್ನು ಒಬ್ಬ ಸೃಷ್ಟಿಸಿ ನಂತರ ಅವು ಎಲ್ಲರಿಗೂ ಪಸರಿಸಿದವೆ? ಇಲ್ಲ ಸಮಾಜದ ಕೆಲವಾರು ವ್ಯಕ್ತಿಗಳು ಸೃಷ್ಟಿಸಿ ಹಲವಾರು ಜನಗಳಿಗೆ ಹರಡಿದವ? ಅಥವಾ ಹಳ್ಳಿಗರಾದ ಎಲ್ಲರೂ [ಅಂದರೆ ಹಾಡು ಹೇಳುವವರು] ಹಾಡುಗಳನ್ನು ಕಟ್ಟಿದರೆ? ಈ ಮಾತುಗಳನ್ನು ನಮ್ಮ ಹಲವಾರು ವಿದ್ವಾಂಸರು ಯೋಚಿಸಿದ್ದಾರೆ. ಅವರಲ್ಲಿ ಒಬ್ಬರ ಅಭಿಪ್ರಾಯ ಹೀಗಿದೆ - “ಜನಪದ ಸಾಹಿತ್ಯ ಜನತೆಗೆ ಸೇರಿದ್ದು ಎಂಬುದು ನಿಸ್ಸಂದೇಹ. ಅದು ಜನತೆಯದು. ಜನತೆಗೋಸ್ಕರ ಆದದ್ದು. ಆದರೆ ಸಂಪೂರ್ಣ ಜನತೆಯೇ ಅದನ್ನು ಎಂದೂ ವಿರಚಿಸಲಿಲ್ಲ. ವಿರಚಿಸಲಾರದು. ಒಬ್ಬ ಜನತೆಯ ಪ್ರತಿನಿಧಿ, ಶಕ್ತಿ ಸಾಮರ್ಥ್ಯವುಳ್ಳವನಾಗಿ ಜನತೆಯ ವಾಣಿಯಾಗಿ ಪದವನ್ನು ಕಟ್ಟಿಕೊಟ್ಟ, ಜನರು ಬಳಸಿ ಸಂತಸಗೊಳ್ಳಲೆಂದು.

---

೧. ಎಂ.ಎಸ್. ಸುಂಕಾಪುರ - ಜೀವನ ಜೋಕಾಲಿ : ಗರತಿಯ ಗಿರಿಮ

೨. ಕಾಲೇಗೌಡ ನಾಗವಾರ - ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ

೩. ದೇ. ಜವರೇಗೌಡ - ಜಾನಪದ ಅಧ್ಯಯನ, ಪೀಠಿಕೆ ix.

೪. ಎಸ್. ವಿ. ರಂಗಣ್ಣ - ಕೋಲ್ ಕೋಲ್ ಕೂಡಿ ಬರಲಿ : ಪುಟ. ೫

ಈ ಮೇಲಿನ ವಾದ ಸಮಂಜಸವಾಗಿ ತೋರುವುದಾದರೂ ಸಂಪೂರ್ಣ ಸತ್ಯವಲ್ಲ. ಏಕೆಂದರೆ ಸಾಮರ್ಥ್ಯವುಳ್ಳ ಜನತೆಯ ಪ್ರತಿನಿಧಿ ಕಟ್ಟಬಹುದು, ಆದರೆ ಅದು ಅವನು ಕಟ್ಟಿದಂತೆಯೇ ಉಳಿಯುವುದಿಲ್ಲ. ಜನಸಾಮಾನ್ಯರನೇಕರ ಬಾಯಿಂದ ಪದ ಹೊರಬರುವಾಗ ಸಾಕಷ್ಟು ರೂಪಾಂತರ ಹೊಂದಿರುತ್ತದೆ. ಪಂಗಡದಿಂದ ಪಂಗಡಕ್ಕೆ, ಜಾತಿಯಿಂದ ಜಾತಿಗೆ, ನಾಡಿನಿಂದ ನಾಡಿಗೆ ಅದು ದಾಟಿದಾಗ ಸಂಪೂರ್ಣವಾಗಿ ಹೊಸದಾಗಿ, ಹಲವರಿಂದ ಹೊಸ ರಚನೆಯಾಗಿ ಮಾರ್ಪಾಟನ್ನು ಪಡೆದಿರುತ್ತದೆ. ಉದಾಹರಣೆಗೆ 'ಬಂಜೆ ಹೊನ್ನಮ್ಮ', 'ಕರಿಭಂಟ ಇಂತಹ ಹಾಡುಗಳನ್ನು ಪರಿಶೀಲಿಸಿದರೆ ಅವುಗಳ ಐದು ಆರು ರೂಪಗಳು ಒಂದಕ್ಕಿಂತ ಒಂದು ಭಿನ್ನವಾಗಿ ಒಂದೊಂದು ಕಡೆ ದೊರೆಯುತ್ತವೆ.

ಈ ಮಾರ್ಪಾಟಿಗೆ ರೂಪಾಂತರಕ್ಕೆ ದೇವರ ಪದಗಳು ಹೊರತಲ್ಲ. ಈ ದೇವರ ಪದಗಳ ರೂಪಾಂತರವಾಗುವುದು ಹೆಚ್ಚಾಗಿ ಹೆಣ್ಣು ಮಕ್ಕಳಿಂದ. ಒಂದು ಊರಿನಿಂದ ಮತ್ತೊಂದು ಊರಿಗೆ ಮದುವೆಯಾಗಿ ಹೋದ ಹೆಣ್ಣು ಮಕ್ಕಳು ತಮ್ಮ ಊರಿನ ದೇವರ ಪದಗಳನ್ನು ರೂಪಾಂತರ ಮಾಡಿ ಅಲ್ಲಿನ ದೇವರಿಗೆ ಹೊಂದಿಸುತ್ತಾರೆ. ಅಲ್ಲಿಯವುಗಳನ್ನು ಇಲ್ಲಿಯ ದೇವರಿಗೆ ಸೇರಿಸುತ್ತಾರೆ. ಇದಕ್ಕೆ ಹಲವಾರು ಉದಾಹರಣೆಗಳು ನಮ್ಮಲ್ಲಿವೆ. ಹೀಗೆ ಚೌಡಮ್ಮನ ಪದಗಳಲ್ಲೂ ರೂಪಾಂತರಗೊಂಡ ಪದಗಳಿವೆ; ಉಜ್ಜನಿಯಲ್ಲಿಯೇ ಸೃಷ್ಟಿಯಾದ ಪದಗಳಿವೆ. ದೂರದಿಂದ ವಲಸೆ ಬಂದ ಪದಗಳೂ ಇವೆ. ಆದರೆ ಚೌಡಮ್ಮನ ಪದಗಳನ್ನು ಪರಿಶೀಲಿಸಿ ನೋಡಿದರೆ ಉಜ್ಜನಿಯಲ್ಲಿ ಮತ್ತು ಅದರ ಸುತ್ತಮುತ್ತಣ ಹಳ್ಳಿಗಳಲ್ಲಿಯೇ ಸೃಷ್ಟಿಯಾದ ಪದಗಳು ಹೆಚ್ಚಾಗಿವೆ ಎಂಬುದು ತಿಳಿಯುತ್ತದೆ.

ಇಲ್ಲಿ ನಾನು ಸಂಗ್ರಹಿಸಿರುವ ಚೌಡಮ್ಮನ ಪದಗಳನ್ನು ಹೀಗೆ ವಿಂಗಡಿಸಬಹುದು : ೧) ತ್ರಿಪದಿಗಳು, ೨) ಪಲ್ಲವಿಗಳು, ೩) ಹೆಳವರ ಪದಗಳು, ೪) ಭಾಗವಂತಿಕೆ ಮೇಳದ ಪದಗಳು.

**ತ್ರಿಪದಿಗಳು**

ಇವು ಹೆಚ್ಚಾಗಿ ಹೆಂಗಸರು ಹಾಡುವ ಪದಗಳು, ಉಜ್ಜನಿ ಸುತ್ತಿನಲ್ಲಿ ಸಾಮಾನ್ಯವಾಗಿ ಗಂಡಸರು ಈ ತ್ರಿಪದಿ ರೂಪದ ಪದಗಳನ್ನು ಹಾಡುವುದು ಕಂಡುಬಂದಿಲ್ಲ. ಹಬ್ಬದ ಸಮಯದಲ್ಲಿ ಹಾಗೂ ಕಳೆ, ನಾಟಿ, ಕಟ್ಟುವ ಕುಯ್ಯುವ ಸಮಯದಲ್ಲಿ ಚೌಡಮ್ಮನ ತ್ರಿಪದಿಗಳನ್ನು ಹಾಡುತ್ತಾರೆ. ಈ ತ್ರಿಪದಿಗಳನ್ನು ಸಂದರ್ಭಕ್ಕೆ ತಕ್ಕಹಾಗೆ ಹಬ್ಬದ ಪದಗಳು ಮತ್ತು ಬಿಡಿ ಪದಗಳು ಇತ್ಯಾದಿಯಾಗಿ ವಿಂಗಡಣೆ ಮಾಡಲಾಗಿದೆ. ಆದರೆ ಆರತಿ ದಿನ ಆರತಿಗೆ ಸಂಬಂಧಪಟ್ಟ ಪದಗಳನ್ನೇ ಹಾಡುತ್ತಾರೆಂದಾಗಲಿ, ಕೊಂಡದ ದಿನ ಕೊಂಡಕ್ಕೆ ಸಂಬಂಧಪಟ್ಟವು ಗಳನ್ನೇ ಹಾಡುತ್ತಾರೆಂದಾಗಲಿ ಭಾವಿಸಬಾರದು. ಹಾಡುವ ಸಮಯದಲ್ಲಿ ಯಾವ ಪದ ಜ್ಞಾಪಕಕ್ಕೆ ಬರುವುದೋ ಅದನ್ನು ಹಾಡುತ್ತಾ ಮುಂದುವರಿಸಿಕೊಂಡು ಹೋಗುತ್ತಾರೆ. ಪ್ರತ್ಯೇಕವಾಗಿ ಆಯಾ

ದಿನ ಆಯಾ ಕಾರ್ಯಕ್ರಮಗಳಿಗೆ ಅನುಗುಣವಾಗಿಯೇ ಅವರು ಹಾಡುವುದಿಲ್ಲ. ಬಾಯಿಗೆ ಬಂದವುಗಳನ್ನು ಹಾಡುತ್ತಾರೆ.

ಇಲ್ಲಿನ ಕೆಲವು ತ್ರಿಪದಿಗಳು ಬೇರೆ ಕಡೆಯಿಂದ ವಲಸೆ ಬಂದವುಗಳಾಗಿವೆ. ಹೀಗೆ ವಲಸೆ ಬಂದ ಪದಗಳು ರೂಪಾಂತರವಾಗಿರುವುದರ ಜೊತೆಗೆ ತಮ್ಮ ಸಾಲುಗಳನ್ನೂ ಹೆಚ್ಚಿಸಿಕೊಂಡಿವೆ. ಉದಾಹರಣೆಗೆ ಒಂದು ಪದ್ಯವನ್ನು ಇಲ್ಲಿ ಗಮನಿಸಬಹುದು -

ಕೋಳಿ ಕೂಗಿವೆ ಕುಂಬಳದೂವಿಗೆ

ಬೆಟ್ಟ ಸಾರಿದೆ ಬಿದರೀಗ | ಚೌಡಮ್ಮ

ಕತ್ತಿ ಕೂಗಿದ ಜಗಳಾಕೆ | ಚೌಡಮ್ಮ

ಉತ್ತಮರ ಮಗನ ಕೊಲಬೇಡ | ಚೌಡಮ್ಮ

ಯೆಚ್ಚಿನ ಬಾಗ್ಯ ಕೊಡಸೇವು.

ಈ ಪದ್ಯದ ಮೊದಲ ಮೂರು ಸಾಲುಗಳು ಪ್ರಸಿದ್ಧವಾದ ತ್ರಿಪದಿಯ ಸಾಲುಗಳು, ಈ ಪದ್ಯ ಎಷ್ಟೋ ಕಡೆ ಸಿಗುತ್ತದೆ. ಆದರೆ ಈ ಪದ್ಯ ಉಜ್ಜನಿಗೆ ವಲಸೆ ಬಂದ ಮೇಲೆ ತನ್ನ ಎರಡು ಸಾಲುಗಳನ್ನು ಹೆಚ್ಚಿಸಿಕೊಂಡಿತು. ಇಲ್ಲಿ ಮೂಲ ಪದ್ಯದ ಅರ್ಥಕ್ಕೆ ಭಂಗತರದಂತೆ ಮತ್ತೆರಡು ಸಾಲುಗಳನ್ನು ಹೆಚ್ಚಿಸಿಕೊಂಡಿರುವುದನ್ನು ನಾವು ವಿಶೇಷವಾಗಿ ಗಮನಿಸಬಹುದು. ಹೀಗೆಯೇ ಎಷ್ಟೋ ತ್ರಿಪದಿಗಳು ತಮ್ಮ ಸಾಲುಗಳನ್ನು ಹೆಚ್ಚಿಸಿಕೊಂಡಿವೆ. ಅಂತಹವುಗಳನ್ನು ಅಡಿ ಟಿಪ್ಪಣಿಯಲ್ಲಿ ಕೊಡಲಾಗಿದೆ.

ಒಂದೇ ತ್ರಿಪದಿಯನ್ನು ಎರಡು ಮೂರು ಜನಗಳಿಂದ ಹಾಡಿಸಿದಾಗ ಕೆಲವೊಮ್ಮೆ ಪದಗಳು ಹಾಗೂ ಸಾಲುಗಳು ಒಬ್ಬರಿಗಿಂತ ಒಬ್ಬರಲ್ಲಿ ಭಿನ್ನವಾಗಿ ಸಿಗುತ್ತವೆ. ಉದಾಹರಣೆಗೆ ಒಬ್ಬರಲ್ಲಿ 'ಆರುತಿ ವೊರಟಾವೆ ಕೀರುತಳ್ಳಾದೊಳಗೆ' ಎಂಬುದಾಗಿ ತ್ರಿಪದಿಯ ಒಂದು ಸಾಲು ದೊರೆತರೆ ಮತ್ತೊಬ್ಬರಲ್ಲಿ, ಆರುತಿ ವೊರಟಾವ ಕೀರುತಿ ವುಳ್ಳೋಳಿಗೆ' ಎಂದು ದೊರೆಯುತ್ತದೆ. ಇಂತಹವುಗಳನ್ನೂ ಅಡಿ ಟಿಪ್ಪಣಿಯಲ್ಲಿ ಸೂಚಿಸಲಾಗಿದೆ. ಒಂದೇ ಪದ್ಯ ಎರಡು ಮೂರು ಜನರಲ್ಲಿ ಸಿಗುವಂತಿದ್ದರೆ, ಆ ಪದ್ಯ ವಲಸೆ ಹೋಗಿರುವ ಪ್ರದೇಶಗಳನ್ನೂ ಜನಗಳನ್ನೂ ಪತ್ತೆ ಮಾಡಿ, ಮೂಲ ರೂಪವನ್ನು ಗುರ್ತಿಸಿ ಉಳಿದವುಗಳನ್ನು ಪಾಠಾಂತರಗಳನ್ನಾಗಿ ಸೂಚಿಸಬಹುದು. ಇದರಿಂದ ಪದ್ಯದ ಮೂಲರೂಪ ಗೊತ್ತಾಗುತ್ತದೆ. ಅನಂತರದ ಮಾರ್ಪಾಟುಗಳು ತಿಳಿಯುತ್ತವೆ" . *

ಈ ತ್ರಿಪದಿಗಳನ್ನು ಮೂರು ನಾಲ್ಕು ಧಾಟಿಯಲ್ಲಿ ಹಾಡುತ್ತಾರೆ. ಒಕ್ಕಲಿಗರೇ ಒಂದು

*	ಡಿ. ಲಿಂಗಯ್ಯ - ಕರ್ನಾಟಕ ಜನಪದ ಕಾವ್ಯಗಳು, ಪುಟ ೪೩.



ರೀತಿ ಹಾಡಿದರೆ ಹರಿಜನರೇ ಒಂದು ರೀತಿ ಹಾಡುತ್ತಾರೆ. ಮುದುಕಿಯರು ಒಂದು ರೀತಿ ಹಾಡಿದರೆ ಯುವತಿಯರು ಇನ್ನೊಂದು ರೀತಿ ಬೆಡಗಿನಿಂದ ಹಾಡುತ್ತಾರೆ. ಹೀಗೆ ರಾಜ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಹರಿಜನರಲ್ಲಿ ರಾಗ ಹೆಚ್ಚು ನೀಳವಾಗಿರುತ್ತದೆ. ಒಕ್ಕಲಿಗರಲ್ಲಿ ರಾಗ ಅಲ್ಲಲ್ಲಿ ಮೊಟಕಾಗುತ್ತಿರುತ್ತದೆ. ಇತ್ತೀಚಿನ ಯುವತಿಯರು ಸಿನಿಮಾ ಹಾಡುಗಳ ಪ್ರಭಾವದಿಂದ ಮೂಲರಾಗವನ್ನೇ ಮರೆತಿದ್ದಾರೆ.

**ಪಲ್ಲವಿಗಳು**

ತ್ರಿಪದಿಗಳನ್ನು ಹಾಡುವಾಗ ಒಂದೊಂದು ಸಾಲಿನ ಕೊನೆಯಲ್ಲಿ ಅಥವಾ ಎರಡೆರಡು ಸಾಲಿನ ಕೊನೆಯಲ್ಲಿ ಈ ಪಲ್ಲವಿಗಳನ್ನು ಸೇರಿಸಿಕೊಂಡು ಹಾಡಿದರೆ ಹಾಡಿನ ಸೊಬಗು ಇನ್ನಷ್ಟು ಹೆಚ್ಚುತ್ತದೆ. ಈ ಪಲ್ಲವಿಗಳು ಒಂದೇ ಲಯದಲ್ಲಿದ್ದು ಹೆಚ್ಚು ಪ್ರತಿಭಾವಂತರಾದ ಜನಪದ ಕವಿಗಳು ಕಟ್ಟಿದವುಗಳಾಗಿವೆ. ಇವುಗಳ ಇಂಪನ್ನು ಕೇಳಿಯೇ ಆನಂದಿಸಬೇಕು. ಈ ಪಲ್ಲವಿಗಳು ಎರಡು ಮೂರು ನಾಲ್ಕು ಸಾಲಿನವುಗಳಾಗಿರುತ್ತವೆ.

ಉದಾಹರಣೆಗೆ -

ಎರಡು ಸಾಲಿನ ಪಲ್ಲವಿಗಳು :

ದೂಪಾದ ಏರು ಕಾಣೆ

ಚೌಡಮ್ಮ ತೋಪೆಲ್ಲ ಗಮಲಾ ಕಣೆ

ಮೂರು ಸಾಲಿನ ಪಲ್ಲವಿಗಳು :

ನಗಾರಿ ಬಡುದಾವೆ

ನವನಿವಿಯ ಗುಡಿಯ ಮುಂದೆ

ನವಿಲು ಕುಣುದಾವೆ

ನಾಲ್ಕು ಸಾಲಿನ ಪಲ್ಲವಿಗಳು :

ಉರಿಯೋದ ಕೊಂಡ ಕಾಣೆ

ಉರಿಯೋ ಕೊಂಡಾವ

ತಿರುಗಿ ನೋಡಲು ಬ್ಯಾಡ

ತುಳಿಯೋದ ಕೆಂಡ ಕಾಣೆ

ಈ ಪಲ್ಲವಿಗಳನ್ನು ತ್ರಿಪದಿಗಳ ಜೊತೆಯಲ್ಲಿ ಹೀಗೆ ಸೇರಿಸಿಕೊಂಡು ಹಾಡುತ್ತಾರೆ -

ಕರಿಯಂಚಿನ ಸೀರೆ ತಿರುಗಿ ಕಾಸಿಯ ಹಾಕಿ

ಸಿಡಿಯನಾಡುವ ಇವಳಾರೆ || ನಗಾರಿ ಬಡುದಾವ ||

ಸಿಡಿಯನಾಡುವ ಇವಳಾರೆ ಚೌಡಮ್ಮ

ಸುರುವೊನ್ನೆ ಬೆಳೆಯೋ ಬಯಲಲ್ಲಿ | ನಗಾರಿ ಬಡುದಾವೆ ||



ತ್ರಿಪದಿಯ ಎರಡು ಸಾಲುಗಳನ್ನು ಒಂದು ಗುಂಪಿನವರು ಹಾಡಿ ಮುಗಿಸುತ್ತಿದ್ದಂತೆಯೇ ಇನ್ನೊಂದು ಗುಂಪಿನವರು ಪಲ್ಲವಿಯನ್ನು ಹಾಡುತ್ತಾರೆ. ಪಲ್ಲವಿ ಮುಗಿಯುತ್ತಿದ್ದಂತೆಯೇ ತ್ರಿಪದಿಯ ಮತ್ತೆರಡು ಸಾಲಿನ ಪ್ರಾರಂಭವಾಗುತ್ತದೆ. ಹೀಗೆ ತ್ರಿಪದಿ ಮತ್ತು ಪಲ್ಲವಿಗಳ ಸಾಮರಸ್ಯದ ಹಾಡು ಬಲು ಇಂಪಾಗಿರುತ್ತದೆ.

**ಹೆಳವರ ಪದಗಳು**

ಹೆಳವರ ವೃತ್ತಿ ಹಾಡುವುದು, ದವಸ ಧಾನ್ಯಗಳನ್ನು ಬೇಡುವುದು. ಒಕ್ಕಲಿಗರನ್ನು ಹಾಡಿ ಹೊಗಳಿ ಅವರ ಆಶ್ರಯದಲ್ಲಿ ಇವರು ಬದುಕುತ್ತಿದ್ದರು. ವರ್ಷಕ್ಕೆ ಒಮ್ಮೆ ಇವರು ರೈತರ ಮನೆಗಳಿಗೆ ಬಂದು ಅವರ ವಂಶಾವಳಿ ಮತ್ತು ಮನೆದೇವರ ಮೇಲೆ ಹಾಡಿ ಧಾನ್ಯಗಳನ್ನು ಸ್ವೀಕರಿಸುತ್ತಿದ್ದರು. ಇವರು ಹಿಂದೆ ಒಕ್ಕಲಿಗರ ಮಕ್ಕಳೇ ಆಗಿದ್ದರು ಎಂಬ ಕತೆಯೂ ಪ್ರಚಾರದಲ್ಲಿದೆ. ಹೆಳವ ಎಂದರೆ ಕುಂಟ. ಈ ಕುಂಟ 'ದಿಳ್ಳಿ ವಿಜೇನಗರದ ಒಬ್ಬ ಗೌಡನ ಹದಿನೆಂಟು ಮಕ್ಕಳಲ್ಲಿ ಒಬ್ಬ ಎಂದು ಕತೆ ಇದೆ. ಅದರಿಂದಲೇ ಗೌಡರ ಯಾವ ಕತೆಯನ್ನು ಹೇಳಹೊರಟರೂ 'ದಿಳ್ಳಿ ವಿಜೇನಗರ'

ಎಂದು ಪ್ರಾರಂಭಿಸುತ್ತಾರೆ. ಆದರೆ ಇತ್ತೀಚೆಗೆ ಈ ಸಂಪ್ರದಾಯ ಕಣ್ಮರೆಯಾಗುತ್ತಿದೆ. ವರ್ಷಕ್ಕೊಮ್ಮೆ ಮನೆಬಾಗಿಲಿಗೆ ಬರುತ್ತಿದ್ದ ಹೆಳವರು ಈಗ ಬರುವುದಿಲ್ಲ. ಆಕಸ್ಮಿಕವಾಗಿ ಬಂದರೆ ಅವರಿಗೆ ದವಸ ಕೊಟ್ಟು ತಮ್ಮ ಕುಲವನ್ನು ಹೊಗಳಿಸಿಕೊಳ್ಳುವ ತಾಕತ್ತು ಒಕ್ಕಲಿಗರಲ್ಲಿಯೂ ಇಲ್ಲ. ಹೀಗಾಗಿ “ಗಂಟೆಯನ್ನು ಹಿಡಿದು ಹಾಡಿ, ವಂಶಾವಳಿಗಳನ್ನು ಹೇಳಿ ಬದುಕುವ ಅನಿವಾರ್ಯತೆ ಹೆಳವರಿಗೂ ಇಲ್ಲ, ಹೊಗಳುವ ಪದವನ್ನು ಕೇಳುವ ಆಸಕ್ತಿ ರೈತರಿಗೂ ಇಲ್ಲ. ಹೀಗಾಗಿ ಹೆಳವರ ಹಾಡುಗಾರಿಕೆಯ ಸಂಪ್ರದಾಯ ಸಂಪೂರ್ಣವಾಗಿ ಕಣ್ಮರೆಯಾಗುತ್ತಿದೆ'* ಈಗ ಹೆಳವರೂ ಬೇಸಾಯದಲ್ಲಿ ತೊಡಗಿ ಸ್ವತಂತ್ರ ಜೀವನ ನಡೆಸುತ್ತಿದ್ದಾರೆ.

ಇವರು ಹಾಡುವಾಗ ಕೈಯ್ಯಲ್ಲಿ ಗಂಟೆಯೊಂದನ್ನು ಹಿಡಿದು ಹಾಡಿನ ಗತಿಗೆ ತಕ್ಕಂತೆ ಅಲ್ಲಾಡಿಸುತ್ತಾರೆ. ಗಂಟೆಯ ಚೆಲಕಕ್ಕೆ ಒಂದು ಗೇಣುದ್ದದ ದಪ್ಪನಾದ ರಟ್ಟಿನಂತಹ ಬಟ್ಟೆಯನ್ನು ಬಿಗಿದು ಆ ಬಟ್ಟೆಯಿಂದ ಗಂಟೆಯನ್ನು ಹಿಡಿದುಕೊಂಡಿರುತ್ತಾರೆ. ಇದು ನಾದ ಕೆಡದಿರಲಿ ಎಂದು. ಸಾಮಾನ್ಯವಾಗಿ ಇಬ್ಬರು ಅಥವಾ ಮೂವರು ಗಂಟೆಯನ್ನು ಬಾರಿಸುತ್ತಾ ಮುಮ್ಮೇಳ ಹಿಮ್ಮೇಳವನ್ನು ಹಾಡುತ್ತಾರೆ. ಹಳ್ಳಿಯ ನುಡಿಗಟ್ಟುಗಳನ್ನು ಈ ಪದಗಳು ಒಳಗೊಂಡಿರುತ್ತವೆ. ಹಾಡುವ ರೀತಿ -

---

* ಜೀ. ಶಂ. ಪರಮಶಿವಯ್ಯ - ಹೆಳವರ ಕಾವ್ಯಗಳು, ಪು. ೩



ತ್ರಿಪುರಾಪುರಿ ಪಟ್ಟಣವೆಂದರೆ ಆಕಾಶದಲ್ಲಿ ಇಲ್ಲಾ

(ಮೊದಲನೆಯವನು)

ಆಕಾಸದಲ್ಲಿ ಇಲ್ಲಾ

(ಹಿಮ್ಮೇಳದ ಇಬ್ಬರು)

ಆಕಾಸದಲ್ಲಿ ಇಲ್ಲಾ ಭೂಮಿಯ ವಳಗೇ ಇಲ್ಲಾ

(ಮುಮ್ಮೇಳದವನು)

ಭೂಮಿಯ ವಳಗೇ ಇಲ್ಲಾ

(ಹಿಮ್ಮೇಳದವರು)

ಮುಮ್ಮೇಳದವನು ಆಕಾಸದಲ್ಲಿ ಇಲ್ಲಾ' ಎನ್ನುತ್ತಿದ್ದಂತೆಯೇ ಹಿಮ್ಮೇಳದವರು ಅವನ ಜೊತೆಯಲ್ಲಿಯೇ 'ಆಕಾಸದಲ್ಲಿ ಇಲ್ಲಾ' ಎಂದು ಹೇಳಿ, ಮತ್ತೊಮ್ಮೆ ಹೇಳುತ್ತಾರೆ. ಇವರ ರಾಗಕ್ಕೆ ತಕ್ಕಂತೆ 'ಟಿಣ್ ಟಿಣ್ ಟಿಣ್ ಟಿಣ್' ಗಂಟೆಯ ನಾದ ಹಾಡಿನ ಪ್ರಾರಂಭದಿಂದ ಕೊನೆಯವರೆಗೂ ಒಂದೇ ಸಮನಾಗಿರುತ್ತದೆ. ಮುಮ್ಮೇಳ ಹಾಡುವವನು ಒಬ್ಬನೇ. ಅವನು ತುಂಬ ಅನುಭವಿಕನಾಗಿರಬೇಕು.

**ಭಾಗವಂತಿಕೆ ಪದಗಳು**

ದೀಪಾವಳಿ ಕಳೆದ ನಂತರದ ಒಂದು ತಿಂಗಳನ್ನು ನಮ್ಮ ಹಳ್ಳಿಗಳಲ್ಲಿ 'ಕಿರುದೀವಳಿಗೆ' ಎಂದು ಕರೆಯುತ್ತಾರೆ. ಈ ತಿಂಗಳಿನಲ್ಲಿ ಭಾಗವಂತಿಕೆ ಮೇಳದವರು ತಮ್ಮ ಊರುಗಳಿಂದ ಬೇರೆ ಊರುಗಳಿಗೆ ಹಾಡಿ ಕುಣಿಯಲು ಹೋಗುತ್ತಾರೆ. ಸುಮಾರು ಐವತ್ತು ವರ್ಷಗಳ ಹಿಂದೆ ಈ ಸಂಪ್ರದಾಯ ಉಜ್ಜನಿ ಸುತ್ತಿನಲ್ಲಿ ಬಹು ಪ್ರಸಿದ್ಧವಾಗಿತ್ತಂತೆ. ಆದರೆ ಈಗ ಈ ಕಲೆಯ ಸುಳಿವೇ ಇಲ್ಲದಂತಾಗಿದೆ. ಈ ಪದಗಳನ್ನು ಕೇಳಲು ಮತ್ತು ಇದರ ಬಗ್ಗೆ ವಿವರಣೆ ಪಡೆಯಲು ಸುಮಾರು ಎಂಬತ್ತು ವರ್ಷದ ಇಬ್ಬರು ಮುದುಕರನ್ನು, ನನ್ನ ತಂದೆಯವರ ಸಹಾಯದಿಂದ ಹುಡುಕಿದ್ದಾಯಿತು. ಉಜ್ಜನಿಯಲ್ಲಿ ಚೌಡಮ್ಮ, ಆಂಜನೇಯ, ಮಾರಮ್ಮ, ವಿಶ್ವೇಶ್ವರ ಹಾಗೂ ರಾಮಾಯಣ ಮಹಾಭಾರತಗಳ ಮೇಲೆ ಭಾಗವಂತಿಕೆ ಪದಗಳನ್ನು ಹಾಡುತ್ತಿದ್ದರಂತೆ. ಈಗ ಈ ವಯಸ್ಸಾದ ಮುದುಕರು ಹಾಡುವುದು ಸ್ಮೃತಿಪಟಲದಲ್ಲಿ ಕಳೆದುಳಿದ ನಾಲ್ಕು ಹಾಡುಗಳನ್ನು ಮಾತ್ರ.

ಭಾಗವಂತಿಕೆ ಪದಗಳು ಕೆಲವರು ಶಿಷ್ಟರು ರಚಿಸಿದ ಹಾಡುಗಳೆಂದು ನಮ್ಮ ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಹಾಡುಗಳು ಹಳ್ಳಿಗರ ಭಾಷೆಗಿಂತ ಸ್ವಲ್ಪ ಭಿನ್ನವಾಗಿದ್ದು ಸುಲಭವೂ ಅಲ್ಲದ ಕ್ಲಿಷ್ಟವೂ ಅಲ್ಲದೆ ಶೈಲಿಯಲ್ಲಿವೆ. ದಾಸರ ಪದಗಳ ಛಾಯೆಯೂ ಈ ಪದಗಳಲ್ಲಿ ಕಾಣುತ್ತದೆ. ಅಲ್ಲದೆ ಹಳ್ಳಿಗಳಲ್ಲಿ ಹಾಡುವ ಬಯಲು ನಾಟಕದ ಪದಗಳಿಂದಲೂ ಪ್ರೇರೇಪಿತವಾಗಿವೆ ಎಂದು ಊಹಿಸಬಹುದು. ಉದಾಹರಣೆಗೆ -

ಅಬ್ಧಿಯ ತಡಿಗೆ ಬಂದನು ಹನುಮ

ನಿಂದು ನೋಡಿದನು ಶರಧಿಯನು

ಬಾಲವ ಬಿಟ್ಟು ಆಳವ ನೋಡಿ

ಭಳಿರೇ ಸಮುದ್ರ ಎಂದನು ಹನುಮ

ಇಲ್ಲಿ 'ಅಬ್ಧಿ, ಶರಧಿ ಈ ಪದಗಳು ಸಂಸ್ಕೃತ ರೂಪದವುಗಳಾದರೆ 'ತಡಿಗೆ ಬಂದನು' 'ಬಾಲವ ಬಿಟ್ಟು ಆಳವ ನೋಡಿ' ಪದಗಳು ಸಾಮಾನ್ಯರ ಆಡುಭಾಷೆಯಲ್ಲಿವೆ. 'ಭಳಿರೇ ಸಮುದ್ರ' ಇದು ಸಾಮಾನ್ಯವಾಗಿ ಬಯಲು ನಾಟಕದಲ್ಲಿ ಉಪಯೋಗಿಸುವಂತಹ ಪದವಾಗಿದೆ. ಹೀಗೆ ಈ ಪದಗಳು ಶಿಷ್ಟರಿಂದಲೇ ರಚಿತವಾಗಿದ್ದರೂ ಜನ ಸಾಮಾನ್ಯರಲ್ಲಿ ಪ್ರಿಯವಾದ ಪದಗಳಾಗಿವೆ.

ಕಿರು ದೀವಳಿಗೆ ತಿಂಗಳಿನಲ್ಲಿ ಭಾಗವಂತಿಕೆ ಮೇಳದವರು ತಮಟೆ ನಗಾರಿ ವಾದ್ಯ ಮತ್ತು ಜವಳ ಕುಣಿತದವರೊಂದಿಗೆ, ಊರಿನ ಮನೆಗೊಬ್ಬರಂತೆ ಜೊತೆಗೆ ಕರೆದುಕೊಂಡು ಅಕ್ಕಪಕ್ಕದ ಹಾಗೂ ದೂರದ ಬೇರೇ ಹಳ್ಳಿಗಳಿಗೆ ಹೋಗುತ್ತಾರೆ. ಹೋಗಲು ಉದ್ದೇಶಿಸಿದ ಹಳ್ಳಿಗೆ ಮೊದಲೇ ಸೂಚನೆಯಾಗಿ 'ಹಿಟ್ಟಿನ ಪಟ'ವನ್ನು ಕಳುಹಿಸುತ್ತಾರೆ. ಒಂದು ಉದ್ದನಾದ ಬಿದಿರು ಜವಳೆಗೆ ತುದಿಯಲ್ಲಿ ಮಾವಿನ ಸೊಪ್ಪನ್ನು ಕಟ್ಟಿ ಒಬ್ಬನ ಕೈಯ್ಯಲ್ಲಿ ಕೊಟ್ಟು ಮುನ್ಸೂಚನೆಯಾಗಿ ಕಳುಹಿಸುವುದೇ ಹಿಟ್ಟಿನ ಪಟ. ಈ ಹಿಟ್ಟಿನ ಪಟವನ್ನು ತೆಗೆದುಕೊಂಡು ಹೋದವನಿಂದ ಇಂತಹ ಸಮಯಕ್ಕೆ ಬರುತ್ತಾರೆ ಎಂದು ತಿಳಿದುಕೊಂಡ ಬೇರೆ ಹಳ್ಳಿಯವರು ತಮಟೆ ನಗಾರಿಗಳ ಸಹಿತವಾಗಿ ಊರ ಹೊರಗೆ ಬಂದು ಮೇಳದವರನ್ನು ಸ್ವಾಗತಿಸುತ್ತಾರೆ. ಮೇಳದವರು ಆ ಊರಿನ ಪ್ರಮುಖ ದೇವಸ್ಥಾನದ ಮುಂದೆ ಮೊದಲು ಹಾಡುತ್ತಾರೆ. ಜವಳ ಕುಣಿಯುತ್ತಾರೆ. ಆನಂತರ ಆ ಊರಿನಿಂದ ಈ ಊರಿಗೆ ಹೆಣ್ಣು ತಂದಿರುವವರ ಮತ್ತು ಕೊಟ್ಟಿರುವವರ ಮನೆಗಳ ಮುಂದೆ ಪದಗಳನ್ನು ಹಾಡಿ ದಕ್ಷಿಣೆಯನ್ನು ವಸೂಲು ಮಾಡುತ್ತಾರೆ. ಹೀಗೇ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುತ್ತಾರೆ. ಅಲ್ಲಿಯೂ ಹಾಗೆಯೇ ಹಾಡಿ ಅಲ್ಲಿಯೇ ಉಂಡು ತಿಂದು ಮುಂದಿನ ಊರಿಗೆ ಹೋಗುತ್ತಾರೆ. ಹೋಗುವ ಮೊದಲು ಆಯಾ ಊರಿಗೆ ಹಿಟ್ಟಿನ ಪಟವನ್ನು ಕಳುಹಿಸುತ್ತಾರೆ. ಒಂದು ತಿಂಗಳಿನೊಳಗಾಗಿ ತಮ್ಮೂರಿಗೆ ಹಿಂದಿರುಗುತ್ತಾರೆ.

**ಹಾಡುವ ರೀತಿ**

ಎಳೆಸೊಸಿ ಎಲೆಯೋಳೆ ಮಳೆಪೈರ ಮುಡಿಯೋಳೆ

(ಮುಮ್ಮೇಳ)

ಪದ್ಮವೊಂದಣ ತೋರ ರಾಣಿಯೇ (ಹಿಮ್ಮೇಳ)

ತಳತಳಿಪ ಸೂರ್ಯನಂತ ರತ್ನದುಪು ರಿಕೆಯಾ

(ಮುಮ್ಮೇಳ-ನಂತರ ಹಿಮ್ಮೇಳ)

ಉಜ್ಜನಿ ಚೌಡಮ್ಮ/೯೭

ಸಂಬ್ರಮದ ಹರಿಬಂದ ಮಾತಾಡಮ್ಮ

(ಹಿಮ್ಮೇಳ ಮುಮ್ಮೇಳ ಒಟ್ಟಿಗೆ)

ಕುಂದಾಣದ ಕೋಣೆ ಮನೆಯೋಳೆ (ಎಲ್ಲರೂ ಹಾಡುವುದು)

ಹೀಗೆ ಒಂದು ಗುಂಪಿನವರು ನಿಲ್ಲಿಸುತ್ತಿದ್ದಂತೆಯೇ ಮತ್ತೊಂದು ಗುಂಪಿನವರಿಗೆ ಇವರಲ್ಲಿ ಮುಖ್ಯನಾದ ಕೋಡಂಗಿ* ಪದಗಳನ್ನು ಎತ್ತಿ ಕೊಡುತ್ತಾನೆ. ಈ ಕೋಡಂಗಿ ಒಬ್ಬ ನಿರ್ದೇಶಕನಿದ್ದಂತೆ. ಹಾಡುವವರೆಲ್ಲ ಕೈಯಲ್ಲಿ ತಾಳಗಳನ್ನು ಹಿಡಿದುಕೊಂಡು ಹಾಕುತ್ತಿರುತ್ತಾರೆ. ಕೋಡಂಗಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತಿರುತ್ತಾನೆ. ಕೋಡಂಗಿ ಮನೆ ಮನೆಗೆ ನುಗ್ಗಿ ಕೈಯೊಡ್ಡಿ ಕಾಡಿಬೇಡಿ ದಕ್ಷಿಣೆಯನ್ನು ವಸೂಲು ಮಾಡುತ್ತಾನೆ.

---

"ಕೋಡಂಗಿ ಎಂದರೆ ಮೇಳದವರಲ್ಲಿ ಮುಖ್ಯನಾದವನು. ಈ ಕೋಡಂಗಿ ಅಡಕೆ ಎಲೆಯಿಂದ ಮಾಡಿದ ಟೋಪಿಯನ್ನೂ ಸೆಣಬಿನ ಕೆಲವು ಉಡುಪುಗಳನ್ನು ಹಾಕಿಕೊಂಡಿರುತ್ತಾನೆ. ಹಣೆಗೆ ವಿಭೂತಿ ಬಳಿದುಕೊಂಡು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತಿರುತ್ತಾನೆ. ಕೆಲವೊಮ್ಮೆ ಕೋತಿಯ ರೀತಿ ನಟನೆ ಮಾಡುತ್ತಾನೆ. ಆದ್ದರಿಂದಲೇ ಇವನನ್ನು ಕೋಡಂಗಿ ಎಂದು ಕರೆಯುತ್ತಾರೆ."

## ಹಬ್ಬದ ಪದಗಳು

ಆರತಿ

ದೀಪss ಬೆಳಕ ತರುವುದುss ||ಪಲ್ಲವಿ||*

ವಂಬಾಳೆಗೋಗಿ ಎಂಬತ್ತೆ ದಿನವಾದೋ

ರಂಬೆ ನಿನ್ನಮಗ ಬರಲಿಲ್ಲ | ಚೌಡಮ್ಮ

ಆರುತಿಗೊಂಬಾಳೆ ತರಲಿಲ್ಲ

ಆರುತಿ ಬಂದಾವೆ | 'ಕೀರುತಳ್ಳಾದೊಳಗೆ' |

ಗೀರು ಗಂದಾದ ಗರತಿಗೆ 1 ಚೌಡಮ್ಮಗೆ

ಆರುತಿ ಬಂದಾವ ಐನೂರು

ಆರುತಿ ಐನೂರು ಕೀರುತಿ ಮುನ್ನೂರು

ಅಣ್ಣಿನ ಎಡಗೆ ಅದಿನ್ನೈದು | ಬಂದಾವೆ

ಇನ್ನೇನು ಬರಬೇಕ ಚೌಡಮ್ಮ

ಅಕ್ಕಿ ವೊಂಬಾಳೆ ಲೆಕ್ಕವಾದೋ ನಮ್ಮಲ್ಲಿ

ಅಕ್ಕ ಚೌಡಮ್ನ  ಕರಗಾದ | ವೊಂಬಾಳೆ

ಲೆಕ್ಕವಾದೋ ನಮ್ಮ ಮನೆಯಲ್ಲಿ

ಮಾತೆ ವೊಂಬಾಳೆ ಮಾಲಾವ ನಮ್ಮಲ್ಲಿ

ರಾಣಿ ಚೌಡಮ್ಮ ಕರಗಾದ | ವೊಂಬಾಳೆ

ಮಾಲಾವ ನಮ್ಮ ನಡುಮಲ್ಲಿ

ಅಕ್ಕ ವೊಲಿದಾಳೆ ಅಕ್ಕಿ ವೊಂಬಾಳೆಗೆ

ಅಕ್ಕೂರು ತೋಟಾದ ಅಡಕೇಯ | ವೊಂಬಾಳೆಗೆ

ಅಕ್ಕ ಚೌಡಮ್ಮ ವೊಲಿದಾಳೆ

ಮಂದಲಿಗಾವೆ ಮಣಿಯಾವ ಚೌಡಮ್ಮ

ನೀಕೂಟ್ಟ ಕಂದ ತೊಡೆಮ್ಯಾಲೆ | ಆಕ್ಕೊಂಡು

ನಿನ್ನಾರತಿಗೂವ ಮುಡಿಸೇನು

ತಾಯವಳೆ ಎಂದು ಸ್ನಾನಕ್ಕೆ ನಾನೋದ

ತಾಯಿ ಇಲ್ವಲ್ಲೆ ಗುಡಿಯಲ್ಲಿ | ಚೌಡಮ್ಮ

ಕಾಯಿ ವೊಂಬಾಳೆಗೆ ಕೈಯ್ಯ ಮುಗುದೇನು

---

* ಪ್ರತಿ ಎರಡು ಸಾಲಿಗೊಮ್ಮೆ ಈ ಪಲ್ಲವಿಯನ್ನು ಹಾಡಿಕೊಳ್ಳಬೇಕು. | 'ಕೀರುತುಳ್ಳೋಳಿಗೆ

ಅಕ್ಕ ಅವಳ ಅಂದು ಅಂಗಳಕೆ ನಾನೋದ

ಅಕ್ಕ ಇಲ್ವಲ್ಲೇ ಗುಡಿಯಲ್ಲಿ | ಚೌಡಮ್ಮ

ಅಕ್ಕಿ ವೊಂಬಾಳೆಗೆ ಕಯ್ಯ ಮುಗುದೇನು

ಏರಿಮ್ಯಾಲೆ ನಿಂತ್ಕಂಡು ಏರಿನೋಡ ಚೌಡಮ್ಮ

ದೂರಕೋಗವನ ನಿನ್ನ ಮಗ | ಚೌಡಮ್ಮ

ದಂಡಿಗೊಂಬಾಳೆ ತರುವೋ

ಸೊಸೆಯರಾರುತಿ ಎಸಳು ಚಿಕ್ಕದಂದು

ಮುಂದೆ ಬರುವಾಗ ಯೆಣ್ಣು ಮಕ್ಕು ! ಆರುತಿ

ಮುಂಗಾರು ಮಿಂಚಿನಂಗೆ ವೊಳೆದಾವೆ

ತೋಪಲಾಡೋರು ಯಾತಾರ ಸೂಳೇರು

ನೂತನದ ಗೊಂಬೆ ನರುಗೋರು | ಚೌಡಮ್ಮ

ತೋಪಲಾಡಾರ ಪಗಡೇಯ

ತೋಪಲಾಡಾರೆ ಪಗಡೇಯ ಪಂಚಂಗದರುಳ

ತಾಯಿ ಚೌಡಮ್ಮ ಜಲನಾಡಿ | ಬರುವಾಗ

ಯೆಣ್ಣುಮಕ್ಕಳಾರುತಿ ಯಿಡಿದಾರ

ಆರುತಿ ವೂರಟಾವ ಕೀರುತುಳ್ಳೋಳಿಗೆ

ಬೇವಿನ ಮರದ ಬೆಡಗೀಗ | ಚೌಡಮ್ಮನಿಗೆ

ಆರುತಿ ವೊರಟಾವೆ ಐನೂರು | ಚೌಡಮ್ಮ

ಅಯನೂರು ಅಡಕೆ ದಸಿಯಂಗ*

ಜಾಲದ ಮರವ ಜಗತಿಜಾಲದ ಮರವ

ಜಗತಿ ಕಲ್ಲಿನಮ್ಯಾಲೆ ಚೌಡಮ್ಮ | ಆರುತಿಗೆ

ಜಾಲದ ಮೊಗ್ಗು ವುದುರಾವೋ

ತಂಬಿಟ್ಟಿಗೆ ಅಕ್ಕಿ ತೊಳಸುವುದು

ಕೆಂಬುತ್ತಿ ಬತ್ತ ತೆಂಬಿಟ್ಟಿಗದವಾದೋ

ಕುಂಬಾರ ಮನೆಯ ವೊಸಮಡಿಕೆ | ವೊಳೆಯೂ ನೀರು

ಆರುವರ ಚೌಡಮ್ಮನಿಗೆ ಅದವಾದೋ

---

* ಕೆಲವೊಮ್ಮೆ ಹೀಗೆ ಮೂರು ಸಾಲಿನ ಪದ್ಯದಿಂದ ನಾಲ್ಕನೇ ಸಾಲಿಗೂ ಮುಂದುವರಿಯುವುದುಂಟು.

ದೇವರೋರೋರ ಮಲ್ಲಿ ದೇವಗಿರಿ ವಳಚಿಲಕ
ಬಾರಾನಿ ವನಕೆ ವಳಚಿಲಕ | ಆಡ್ಕೊಂಡು
ವಾಮಾಕಕ್ಕೀಯ ತಳಿಸಾರ

ಆಚೆ ಕೋಡೀಲಿ ಯಾಕೆನಿಂತೆ ಚೌಡಮ್ಮ
ಕಾಕಂಬಿ ಕೈಲಿ ಬಿಡುಬಿಲ್ಲ | ನಿಡಕೊಂಡು
ಯಾಕೆ ನಿಂತೆ ಮಾಗೆ ಇವಲಲ್ಲಿ

ದ್ಯಾವಾರ ಗುಡಿಯಲ್ಲಿ ದೇವಾಂಗದೊಳಕಲ್ಲು
ತೂಕಾನಿ ವನಕೆ ವಳಚಿಲಕ | ಆಡ್ಕೊಂಡು
ತಳಿಗೆಗಕ್ಕೀಯ ತಳಿಸಾರ

ದ್ಯಾವರಲಿ ನಾವಣದ ಒಳಕಲ್ಲು
ಬಾರೀಯ ವನಗೆ ವಳಚಿಲಕ | ಚೌಡಮ್ಮ
ವಾಮಾಕೆ ಅಕ್ಕಿಯ ತಳಿಸಾಳೆ

ಅಂಕದರುಗ್ವಾಡೆ ಬಿಂಕಾದ್ಯಾವರುಕ್ಷಾಣೆ
ಕೆಂಪೆಚೌಡಮ್ಮ ನಡುಮನೆ | ಮುಂದೆ
ನಿನಗೆ ಸಂಪಿಗೆ ವೂವ ಬರೆದಾರ

ಅಸಿಯಗ್ವಾಡೆಮ್ಯಾಲೆ ಮಸಿಯಾರ ಬರೆದೋರು

ನಿನಗೆ ಅಸುಕೊಂಡು ಚೌಡಮ್ಮ | ತಳಿಗೆಗೆ

ನನ್ನೆಣ್ಮಕ್ಕು ಚಿತ್ತಾರ ಬರೆದಾರ

ಕೊಂಡದ ಸೌದೆ ತರುವುದು

ಅಣ್ಣ ತಮ್ಮದೀರು ವೊನ್ನೆ ಬೆಟ್ಟಕ್ಕೆ ವೋಗಿ

ಚನ್ನಂಗಿ ಮರವ ಬೆವರಡ್ಡಿ | ಕಡದಾರ

ಕನ್ನೆಚೌಡಮ್ಮ ಕದಲೀಗೆ

ಏರಿಮ್ಯಾಂಡ್ಕೊಂಡು ಯಾರ್‌ಕೂಗಿ ಚೌಡಮ್ಮ

ದೂರಕೋಗವನೆ ನಿನ್ನಮಗ | ಚೌಡಮ್ಮ

ದೂಪದ ಮರವೇರಿ ದಣಿತೋರೆ

ಗಂಡುಮಕ್ಕಳಿರ ಇಕ್ಕೊಳಿರಿ ಗಂದಾವ

ಗಂಡುಕೊಡಲೀಯ ಯೆಗಲಮ್ಯಾಲೆ | ಮಡಿಕೊಂಡು

ಅವರೋಗವರ ವೊನ್ನೆಗಿಡಮೇರಿ

ಯಾಕೆ ಚೌಡಮ್ಮ ಇಷ್ಟು ಕೋಪಾಗಿದ್ದಿ .

ಸೀಳಿತುಂಬವರ ಸಿರಿಗಂಧ | ಮರಗಂದ

ಬಂದವಲ್ಲ ನಿನ್ನ ವೊಲದಲ್ಲಿ

ಕೊಂಡದ ಸೌದ ಮರವಣಿಗೆ

ದೂಪಾದ ಏರು ಕಾಣೆss

ಚೌಡಮ್ಮ ತೋಪೆಲ್ಲ ಗಮಲಾಕಾಣೆss ||ಪಲ್ಲವಿ|*

ಕೊಂಡೆಸೌದೆ ಬರುವಾಗ ತುಂಡೆ, ಚಂದನೋಡಿ

ಕೊಂಬೀಗ ಕಳಸ ಕೊರಳೀಗ | ವೊವಿನಮಾಲೆ

ಬಂದವಲ್ಲ ಚೌಡಮ್ಮ ''ವೊಲದಲ್ಲಿ'

'ಕರಿ ಎತ್ತು ಕಾಮಣ್ಣ ಬಿಳಿಎತ್ತು ಬೀಮಣ್ಣ'

ನನ ಕಂದನೂರ ಶಿವನಂದಿ ಬರೋವಾಗ

ನನ್ನೂರ ಬೀದಿ ದಣಿರೆಂದೂ

ಅಕ್ಕ  ಚೌಡಿಗೆ ಅಡಕೆ ಬೆಮ್ಮರ ಬಂದೋ

ತೆಂಕ ಚೆರಿಯ ಗಳ ಬಂದೋ | ಚೌಡಮ್ಮ

ನಿನ್ನಂಕಳಕೆ ಬಂದೋ ನವಿಲಿಂಡು

ಕೊಂಡಾ ಬಂಡೀ ಬಂದೋ ಕೊಂಡುಕ್ ಸೌದೆ ಬಂದೋ

ನಿಮ್ಮುಂಗೊಂಡನಾಯೋ ಮಗಬಂದ | ಚೌಡಮ್ಮ

ಕೈತಪ್ಪೆ ಬಡಿದು ಕರಕೊಳೆ

ಅಕ್ಕ ಚೌಡಮ್ಮನೀಗೆ ಅಡುಕೇಯ ಮರಬಂದೋ

ದಪ್ಪದಪ್ಪಾದ ಮರಬಂದೋ | ಚೌಡಮ್ಮ

ನಿನ್ನಂತರಕ್ಕೆ ಬಂದೋ ಮುಡಿವಾಳ

ವೊಸಮರ ಬಂದೋ ಅಸಿಯಾ ಸೊಡ್ಡಲು ಬಂದೋ

ಸೊಸಿಮರದೊಂಬಾಳೆ ಗೊನೆಬಂದೋ| ಚೌಡಮ್ಮ

ದೆಸಮಕದ ರಾಣಿ ವಳಗೇಳೆ

---

* ಪ್ರತಿ ಎರಡು ಸಾಲಿಗೊಮ್ಮೆ ಈ ಪಲ್ಲವಿಯನ್ನು ಹಾಡಿಕೊಳ್ಳಬೇಕು. ಬಲದಲ್ಲಿ'.

೧. 'ಕಂಚತ್ತು ಕೆಂಚಣ್ಣ ಮಿಂಚೆತ್ತು ಮಂಚಣ್ಣ' ಹೀಗೆ ಹಲವಾರು ಹೆಸರುಗಳನ್ನು ಸೇರಿಸಿಕೊಂಡು ಹಾಡುತ್ತಾರೆ.

೧೦೨ / ಉಜ್ಜನಿ ಚೌಡಮ್ಮ

ಒಂದು ಬಂಡಿ ಸೌದೆ ಒಂದೇ ಮೂಲೆಗಾದೋ ನ

ಮತ್ತೊಂದ ಬಂಡಿ ತರಸವ್ವ

ಮಡೆ

ದುಂಡಿ ಅಬ್ಬಾಕೆ ಬಂಡೀಲಿ ವೊವೆ ಬಂದೊ

ತಿಂಗಳಿಗೆ ನೂರು ಮಡೆಬಂದೋ | ಚೌಡಮ್ಮ

ದುಂಡಿ ನಿನ್ನಬ್ಬ ಐಬೋಗ

ಅರಸೆ ಚೌಡಮ್ಮನಿಗೆ ವರುಸದಿಂದ ಅರಸಿ ಬಂದೋ

ವರುಸಕ್ಕೆ ನೂರು ಮಡೆಬಂದೋ | ಚೌಡಮ್ಮ

ಅರಸೇ ನಿನ್ನಬ್ಬ ಐಬೋಗ

ಕುರ್ಜುನ ಗಾಡಿಗಳು*

ಕರಿಯ ಕಬ್ಬಿನ ಜೊಲ್ಲೆ ಗರಿಗರಿಗೆ ಸುಂಗಾರ

ಕುರ್ಜನ ಗಾಡೀಲಿ ಬರುವೋಳೆ | ಚೌಡಮ್ಮ

ನಿನ್ನ ಮಾಯಾ ಒಬ್ಬರಿಗೆ ತಿಳಿಯಾವೋ

ಹಸರು ಮಾವಿನ ಸೊಪ್ಪು ಕೆಸರು ತಾವರೆ ವೂವು

ಬಣ್ಣಾದ ಕುರ್ಜಲಿ ಬರುವೋಳೆ | ಚೌಡಮ್ಮ

ನಿನಗೆ ಅಡ್ಡ ಬೀಳೋರು ಗಡವಿಲ್ಲ

ಏಳೂವೆ ಕುರ್ಜು ಐಭೋಗದಲ್ಲಿ ಬರುವಾಗ

ಸೇರಿ ಬರುವೋಳು ಇವಳ್ಯಾರೆ | ಬೆಟ್ಟಾದ

ಚಾಮುಂಡಿ ಕಾಣೆ ಚಲತಾತಿ

ವಾಮ ಸುಡುವ ಅಯ್ಯ

ವಾದ್ಯದೋರು ಬಂದರು ಅರಮೋರಿ ಬಂದೋ

ವಾಮ ಸುಡುವ ಐಬಂದ | ಆರೂರ

ತಾಯಿ ಚೌಡಮ್ಮ ಗುಡಿಮುಂದೆ

---

* 'ಕುರ್ಜು' ಎಂದರೆ ಒಂದು ಸಣ್ಣ ರಥ, ವಿಧವಿಧವಾದ ಕತ್ತನೆಯಲ್ಲಿ ಮರದಿಂದ ಮಾಡಿರುತ್ತಾರೆ. ಕೆಳಗಡೆ ನಾಲ್ಕು ಮರದ ಚಕ್ರಗಳಿರುತ್ತವೆ. ಪಿರಮಿಡ್ಡಿನಾಕಾರದಲ್ಲಿದ್ದು, ತುದಿಯಲ್ಲಿ ಕಳಸವಿರುತ್ತದೆ. ಬಣ್ಣ ಬಣ್ಣದ ಬಟ್ಟೆಗಳಿಂದ, ಬಾವುಟಗಳಿಂದ, ಮಾವಿನ ಸೊಪ್ಪು ಕಬ್ಬಿನ ಜೊಲ್ಲೆಗಳಿಂದ ಅಲಂಕರಿಸುತ್ತಾರೆ. ಗಡದ್ದಾದ ಎತ್ತುಗಳನ್ನು ಕಟ್ಟಿ ಇಲ್ಲವೇ ಹತ್ತಾರು ಜನಗಳು ಸೇರಿಕೊಂಡು ದೇವಸ್ತಾನದ ಸುತ್ತಲೂ ರಥವನ್ನು ಓಡಾಡಿಸುತ್ತಾರೆ. ಹಿಂದೆ ಸುತ್ತಲಿನ ಪ್ರತಿ ಹಳ್ಳಿಯವರೂ ಒಂದೊಂದು ಕುರ್ಜುವನ್ನು ಓಡಾಡಿಸುತ್ತಿದ್ದರು. ಹಬ್ಬದಲ್ಲಿ ಕೊಂಡದ ದಿನ ಮಧ್ಯಾಹ್ನದಿಂದ ಸಂಜೆಯವರೆಗೆ ಒಂದೇ ಸಮನೆ ಈ ಮನರಂಜನೆ ನಡೆಯುತ್ತಿತ್ತು. ಈಗ ಹತ್ತು ವರ್ಷಗಳಿಂದೀಚೆಗೆ ಈಕೆ ಸಂಪ್ರದಾಯ ಸಂಪೂರ್ಣವಾಗಿ ನಿಂತು ಹೋಗಿದೆ.

ವಾಮಾದಯ್ಯನಿಗೆ ಗಂದಾದ ಆ ಬಟ್ಟು
ಬೆಳ್ಳಿರ ದಾರ ಜನಿವಾರ | ಚೌಡಮ್ಮ
ವಾಮ ಸುಡುವ ಅಯ್ಯನಿಗೆ

ಕೊಂಡ ಬೇಯಿಸುವುದು

ಅಸಿಯಾ ಕಗ್ಗಲಿಸೌದೆ ರಸಬುಟ್ಟಿ ಬೇಯುವಾಗ
ನಿನ್ನ ಸುಮಕ್ಕು ಕೊಂಡಾಕೆ ಬರುವಾಗ | ಚೌಡಮ್ಮ
ರಸವ ಮುಕ್ಕಳಿಸಿ ಉಗುದಾಳೆ

ಮಂಗಳಾರದ ದಿನ ತಿಂಗಳುದ್ದಿ ವೊತ್ತಿನಲ್ಲಿ
ಕೆಂಡ ಸುರುದಾವ ಮುಗುಲುದ್ದ | ಚೌಡಮ್ಮ
ಕೊಂಡಾವ ಆಯೋರ ದುಡದಿಂದ

ಕೊಂಡ ಬೇಯಿಸುವಾಗ ಮಕ್ಕಳು ಮುಗ್ಗರಿಸಿದೋ
ಅಂಜಬೇಡ ತಾಯಿ ಗೆಲುವಾಗೆ | ಚೌಡಮ್ಮ
ಕೊಂಡಕ್ಕೆ ದಾರ ಎರೆದಾರ

ಕೊಂಡಕ್ಕೆ ಬರುವಾಗ

ಉರಿಯೋದ ಕೊಂಡಾಕಣೆಽಽ
ಉರಿಯೋ ಕೊಂಡಾವ
ತಿರುಗಿ ನೋಡಲುಬ್ಯಾಡ

ತುಳಿಯೋದೆ ಕೆಂಡ ಕಾಣೆss ||ಪಲ್ಲವಿ||*

ಕರಿಯಂಚಿನ ಸೀರು ತಿರುಗಿ ಕಾಸಿಯ ಆಕಿ

ಸಿಡಿಯನಾಡುವ ಇವಳಾರ | ಚೌಡಮ್ಮ

ಸುರುವೊನ್ನೆ ಬೆಳೆಯೋ ಬಯಲಲ್ಲಿ

ಕರಿಯಂಚಿನ ಸೀರೆ ಕಣಕಾಲಿಗರುಸನ

ಕೆಣಕಿ ನೋಡವಳ ಕಿಡಿಗಣ್ಣಿ | ಚೌಡಮ್ಮ

ಮರೆತೋರ ಮನೆಯಾ ಮುರಿಯೋಲಾ

ಬಂದಾಳೆ ಚೌಡಮ್ಮ ನಿಂದಾಳ ನಡು ಬೀದೀಲಿ

ಬಂಡು ಮಾಡಾಳೆ ಬಡವಾರ | ಅಣ್ಣಯ್ಯದೀರ

ಪಂಜಿಗೆ ಎಣ್ಣೆ ತರಯೇಳಿ

---

* ಪ್ರತಿ ಎರಡು ಸಾಲಿಗೊಮ್ಮೆ ಈ ಪಲ್ಲವಿಯನ್ನು ಹಾಡಿಕೊಳ್ಳಬೇಕು.

ಕೊಂಡಾದ ಸುತ್ತ ಗಜನಿಂಬಿ ಗಿಡವುಟ್ಟಿ
ಕೊಂಬೆ ಕೊಂಬೆಗೂ ಏಳಗಾಯಿ | ಚೌಡಮ್ಮ
ನಿನ ಗಂಡ ಕೂದಾನೆ ಗಜನಿಂಬಿ

ಕೊಂಡಾದ ಸುತ್ತ ತೆಂಗಿನ ಮರವುಟ್ಟಿ
ಕಂಡೋರು ಕೂದಾರ ಕಸುಗಾಯ | ಚೌಡಮ್ಮ
ನಿನ ಗಂದ ತೇಯೋಕೆ ಎಳನೀರು

ಮುಂದೆ ಚೌಡಮ್ಮ ಗೆಜ್ಜೆ ತಂದಾಳಲ್ಲೆ
ಗಂಡು ಮಕ್ಕಾಳ ಕರಸಾಳೆ | ಕೇಳಾಳ
ಎಲ್ಲಪ್ಪ ಮಗನೆ ಅರಮೋರಿ

ಕರಗ ಬರುವಾಗ ಕಣ್ಣಿಗೆ ನಿಗರಿಲ್ಲ
ತಾಯಿ ಚೌಡಮ್ಮ ತರುವಾಗ

ಅರಗಾದ ವೊಲದಲ್ಲಿ ಬರಗಾದ ಕೂಳೆಲ್ಲಿ
ದೊರೆಗೋಳು ಮಾಡೋ ವೊಲದಲ್ಲಿ | ಚೌಡಮ್ಮ
ನಿನ್ನ ಕರಗ ಸಾಲಿಟ್ಟಿ ಬರುತಾವೆ

ಯಾಕೆ ಚೌಡಮ್ಮ ಏನು ಬುದ್ಧಿ ಕಲಿತೇ

ಏಳು ವರುಸಾದ ಅಸುಳೇಯ | ಕಂದನಮ್ಯಾಲೆ

ಬಾರನಿ ಗಿಂಡಿ ಎತ್ತಬವುದೇ

ಗಿಂಡಿ ಬರುವಾಗ ಬೀದೀಲಿ ನಿಂತಿದ್ದೆ

ಗಂದ ಚಂದುರವಾ ಯಿಡಿದಿದ್ದ | ಚೌಡಮ್ಮ

ಗಿಂಡೀಯ ವೊರುವಾ ಮಗನೀಗ

ಕೊಂಡಕ್ಕೆ ಬರುವಾಗ ಕುದುರೆ ಮುಗ್ಗರಿಸಿದೋ

ಅಂಜ ಬೇಡ ತಾಯಿ ಗೆಲುವಾಗ 1 ಚೌಡಮ್ಮ

ಕೊಂಡಾಕೆ ದಾರೆ ಎರೆದಾರೆ

ಸೋಮಾರಾರುತಿ ಮಂಗ್ಳಾರ ಕೊಂಡ ಬಂಡಿ

ಬುದುವಾರದ ದಿನ ತಿಂಗ್ಳುದ್ದಿ | ವೊತ್ತಿನಲ್ಲಿ

ಕೆಂಡ ಸುರುದಾವೆ ಮುಗುಲುದ್ದ

ವುಣಸೆ ತೋಪಲ್ಲಿ ವೋರಾಡಳಿವಳ್ಯಾರೆ

ವಾಲಗದ ಮಕ್ಕಳು ಬರಲಿಲ್ಲ | ಅಂತೇಳಿ

ಅವಳೋರಾಡುತ್ತಾಳೆ ವೊಲದಲ್ಲಿ

ಅಳ್ಳಿಮರದಡುಗೆ ಕೂಗಾಡಳಿವಳ್ಯಾರೆ
ಆರೂರ ಮಕ್ಕಳು ಬರಲಿಲ್ಲ | ಅಂತೇಳಿ
ಅವಳೋರಾಡುತ್ತಾಳೆ ವೊಲದಲ್ಲಿ

ಆಲದ ಮರದಡುಗೆ ವಾಲಾಡಳಿವಳ್ಯಾರೆ
ವಲೇರ ಮಕ್ಕಳು ಬರಲಿಲ್ಲ | ಅಂತೇಳಿ
ಅವಳು ಕಡೆಗಣ್ಣಲಿ ನೀರ ಕೆಡವಾಳ

ಕೊಂಡದ ಬಾಗಿಲಲ್ಲಿ ದುಂಬೆದ್ದು ಕುಣಿಯೋಳೆ
ದಂಡೆ ಬಾಡಾವೋ ಬಿಸಲಿಗೆ | ಚೌಡಮ್ಮ
ಗೊಂಡೇದ ಸೆರಗ ಮರೆಮಾಡ

ಕೊಂಡ ಹಾಯುವುದು

ಕೊಂಡ ಕೊಣವಾದೋ ಕೆಂಡ ತಾವರೆಯಾದೋ
ಕೊಂಡಾಕೆ ಬಂದ ಸೌದೆ ವನವಾ | ಚೌಡಮ್ಮ
ಅಸುಮಗನ ನೀನು ಕರೆಯವ್ವ

ತಾಯಿ ಚೌಡಮ್ಮ ಕೊಂಡದಲ್ಲಿ ಆಸಿಗಾಸಿ
ಕ್ರಿಷ್ಣದೇವರು ತಾನು ಪಗಡೇಯ | ನಾಡುಕೊಂಡು
ಅವಳು ನಂಗಣಿಸಿ ಗುಡಿಗೆ ವೊರಟಾಳು

ಚೌಡಮ್ಮ ಬರುವಾಗ ಕೊಂಡೆಲ್ಲ ಗಮ್ಮೆಂತು

ತಾಯಿ ಚೌಡಮ್ಮ ಬರುವಾಗ | ದಾರೀಲಿ

ನಾನಣ್ಣೀನಾರುತಿಯ ಯಿಡಿದಿದ್ದೆ

ದೇವರು ಮರಿಯುವುದು

ನಗಾರಿ ಬಡುದಾವೆ

ನವ ನಿವಿಯ ಗುಡಿಯ ಮುಂದೆ

ನವೀಲು ಕುಣುದಾವ ||ಪಲ್ಲವಿ||*

---

1. ನಿಟ್ಟುಸಿರ ಬಿಡುತಾಳೆ

2. ಹೀಗೆಯೇ ಹಲವಾರು ಮರಗಳು ಮತ್ತು ಹಲವಾರು ಜಾತಿಗಳನ್ನು ಸೇರಿಸಿಕೊಂಡು ಪದಗಳನ್ನು ಮುಂದುವರಿಸುತ್ತಾರೆ.

3. 'ಕೈತಪ್ರೆವೂದಿ ಬರಮಾಡೆ'

* ಪ್ರತಿ ಎರಡು ಸಾಲಿಗೊಮ್ಮೆ ಈ ಪಲ್ಲವಿಯನ್ನು ಹಾಡಿಕೊಳ್ಳಬೇಕು.

ಅದಿನೇಳು ಜವಳಿ ದುಂಬೆದ್ದಿ ಮೆರಿವಾಗ
ದುಂಬು ದೂಳಲ್ಲಿ ಮೆರೆದಾವು | ಚೌಡಮ್ಮ
ಕವುದಾವು ಕಳಸಾಕೆ ದುಂಬು

ಒಂದು ಪೂಜೆ ಮೆರೆದಾರೆ ಚಂದಕಾಣೆ ಉಜ್ಜಿನಿ
ಬೆಂಡಿನೋವೆರಡು ವೊಸಪೂಜೆ | ಮರದಾರ
ಚಂದಕಾಣೆ ಉಜ್ಜಿಣಮ್ಮ ರಾಜಬೀದಿ

ಉಜ್ಜನಿ ಅಮ್ಮನಿಗೆ ಗಗ್ರಾದ ಉಯ್ಯಾಲೆ
ಇಬ್ಬರು ತೂಗಿದರೆ ಮಲಕಾದ | ಚೌಡಮ್ಮ
ಯೇಮಗಿರಿ ಸಿದ್ದರು ತೂಗಿದರೆ ಗಲಿರಂದೋ

ಪೂಜೆ ವೊರುವವನಿಗೆ ಗಾಜೀನ ನಿಲುವಂಗಿ
ಸೂಜಿ ಮಲ್ಲಿಗೆ ನಡುಕಟ್ಟು | ಚೌಡಮ್ಮ
ಗಿಂಡಿ ವೊರೂವ ಮಗನೀಗೆ

ಬಾಳೇ ಎಲೆಯಂಗ ಬಳುಕೀತು ದೊಡ್ಡಕೆರೆ
ಬಾಣತಿ ಚೌಡಮ್ಮ ವಳಮೆಟ್ಟಿ | ಬರುವಾಗ
ಕುಂಕುಮದ ತಟ್ಟೆ ಎದುರಾದೋ

ಉಟ್ಟಿರುವುದು ಪಟ್ಟೆಸೀರೆ ಮೆರಿಯೋದು ಕಾಗಿನ ಸೀರೆ

ಕೊಂಡಕ್ಕೆ ಬರುವಾಗ ಚಂದ್ರಗಾವಿ | ಸೀರೆ ತಂದ್ರು

ನಮ್ಮ ತೌರೀನ ಊರೋರು

ಎಳ್ಳು ವೂನಂಗೆ ಎಳೆಬಸುರಿ ಚೌಡಮ್ಮ

ಅವಳಳ್ಳಾವ ದಾಟಿ ಬರನಾರು | ಚೌಡಮ್ಮ

ನೀವು ಸಾರಿ ಬಿಡ್ರಯ್ಯ ಕುದುರೇಯ

ಯಾಕೆ ಚೌಡಮ್ಮ ರೇಕೇಲೂಬತ್ತಿಲ್ಲ

ತೋಳೇಲಿ ತಾತಿ ಮಣಿ ಇಲ್ಲ | ಚೌಡಮ್ಮ

ರಾಜ ಬೀದೀಲಿ ಸುಳಿವಿಲ್ಲ

ಬಾಳೆ ಪಟ್ಟಿನ ಬಣ್ಣ ಸೀಗೆ ವೂವಿನ ರವಕೆ

ಬಣವಾರದ ಗಿಂಡಿ ಬಲಗೈಲಿ | ಯಿಡಕೊಂಡು

ನಾಗರಿಗೆ ತನಿಯ ಎರೆದಾಳೆ

---

೧. 'ಚಂದಾದೋವೆರಡು

ಗುಬ್ಬಿ ತಲೆಯೋಳೆ ತಬ್ಬಿದೊಂಬಾಳೆಯೋಳ
ನೀನಿಬ್ಬರ ನಡುವೆ ಬರುವೋಳೆ | ಚೌಡಮ್ಮ
ನಿನ ಗುಬ್ಬಿ ವೊಳೆದಾವ ಬಿಸಿಲಿಗ

ಪಿಲ್ಲಿ ಕಾಲಿನೋಳೆ ಪಿರಿಯಾ ಪಟ್ಟಣದೋಳೆ
ಕಲ್ಲ ಮ್ಯಾಲೆ ಕಾಲ ತೊಳೆಯೋಳೆ | ಚೌಡಮ್ಮ
ನಿನ ಪಿಲ್ಲಿ ವೊಳೆದಾವೆ ಬಿಸಿಲಿಗ

ಕೋಟೆ ಕೊತ್ತಲದಲ್ಲಿ ಕುಂತವಳ ಚೌಡಮ್ಮ
ಕುಂಕುಮದ ಸೀರೆ ನರುಗೋಳು | ಚೌಡಮ್ಮ
ಕುಂತು ನೋಡಾಳೆ ಕುಣಿತಾವ

ಯಾಕೆ ಚೌಡಮ್ಮ ಮಕವೆಲ್ಲ ಸಪ್ಪಿಗೆ
ನಿನ್ನ ರಂಗಕ್ಕೆ ಬಂದೋರು ನಗುತಾರೆ | ಚೌಡಮ್ಮ
ನಿನ್ನ ಕಾಲಿಗೆ ಬಿದ್ದೇನು ಕಲಿಯಾಗೆ

ಗುರುಗಂಜಿ ಗುಟ್ಟೇಲಿ ಗುಡುಗಾಡೋ ಇವಳಾರೆ
ಗುರುಗಂಜಿಗಿಂತ ನಿಜಗೆಂಪೆ | ಚೌಡಮ್ಮ
ಗುಡುಗಾಡಿ ಗುಡಿಗೆ ವೊರಟಾಳೆ

ತಾಯಿ ಚೌಡಮ್ಮನ ತಾಲಿಯಾರೆ ಮಾಡಿದೋರು

ತಾಯೂರ ಚನ್ನ ತಳವಾಡಿ | ಮಾಡಿದ ತಾಲಿ

ತಾಯಿ ಚೌಡಮ್ಮನ ಎದೆಮ್ಯಾಲೆ

ಪೂಜೇಯ ನೋಡೆ ತಾಲಿಸರು ನೋಡೆ

ಪೂಜೆ ಮ್ಯಾಲಿರುವ ಕಿರುಗೆಜ್ಜೆ | ಬಾರಾಕೆ

ಬಿನ್ನಾಣಿ ಚೌಡಮ್ಮ ಬೆವತಾಳೆ

ಪೂಜೆ ಪೊರುವೋರಿಗೆ ಗಾಜಿನ ನಿಲುವಂಗಿ

ತಾಯಿ ಚೌಡಮ್ಮನ ಪೊರುವೋರಿಗೆ | ಪೂಜಾರಿಗೆ

ದುಂಡು ಮಲ್ಲೀಗ ತಲಿಸಿವುದು

ತಾಯೀ ಚೌಡಮ್ಮನ ತಾಲಿ ತೂಬಿನ ಮ್ಯಾಲೆ

ಕೋಲಾಟದೋರು ಕೊರಳೋರು | ಯೆಣ್ಣು ಮಕ್ಕು

ತಾಯೀ ವಾಲೇಸಿ ಮೆರೆದಾಳೆ

ಕರಗ ಬರುವಾಗ ಕಣ್ಣಿಗೆ ನಿಗರಿಲ್ಲ
ಕರಗಾದ ಗುಡ್ಡ ವಳಮೆಟ್ಟಿ | ಬರುವಾಗ
ಇಳ್ಳೇದ ತಟ್ಟೆ ಎದುರಾದೋ

ಉಡುವಾಗ ಅರಿಸೀನ ಸೀರೆ ಮೆರೆವಾಗ ಪಟ್ಟೆ ಸೀರೆ
ಕೊಂಡಕ್ಕೆ ಬರುವಾಗ ಚಂದ್ರಗಾವಿ | ಸೀರೆಯ
ತಂದಾರು ಚೌಡಮ್ಮ ತವರೋರು

ಚಂದ್ರಗಾವಿ ಸೀರೆ ಚಂದಾಗಿಲ್ಲವೆಂದು
ಚಂಡಿಯಿಡಿದು ಕುಂತವಳ ಮೊಳೆಯಲ್ಲಿ | ಚೌಡಮ್ಮ
ಗುರುಗಂಜಿ ಸೀರೆ ತರಯೇ

ಉಂಡೆ ಮೆರೆದಾವು ಊಬತ್ತಿ ಮೆರೆದಾವು
ದಂಡೆ ಮೆರೆದಾವು ಕೊರಳಲ್ಲಿ | ಚೌಡಮ್ಮ
ಕುಚ್ಚು ಕುಣಿದಾವು ಮುಡಿಯಲ್ಲಿ

ಗದ್ದಿಗೆ ಮ್ಯಾಲಿಂದ ಎದ್ದೆಲ್ಲಿಗೋದಿಯೇ
ಮುಗ್ಗು ತಂದಾರೆ ಮುಡಿಬಾರೆ | ಚೌಡಮ್ಮ
ಗೆಜ್ಜೆ ತಂದಾರ ಮೆರಿಬಾರೆ

ಕಾಯಲಿ ವುಟ್ಟವಳ ಅಣ್ಣಲ್ಲಿ ಬೆಳೆದವಳ

ಕರುಪುರದ ಗಮಲಕೆ ಕುಣಿದವಳೆ | ಚೌಡಮ್ಮ

ವೊವೀನ ದಂಡೇಲಿ ಮರದಾಳೆ

ತೇರುನ್ ಮ್ಯಾಲ್ ಬರುವಾಗ ಯಾರುನ್ ನೋಡಿ ಚೌಡಮ್ಮ

ಕ್ರಿಷ್ಣ ದೇವರು ಬಂದ ಬಲದಲ್ಲಿ | ಚೌಡಮ್ಮ

ನೀ ಸಂತೋಸದಲ್ಲಿ ಮರಿಯಪ್ಪ

ನಡು ತೋಪಿನಲ್ಲಿ ಜಲನಾಡಿ ಬರುವಾಗ

ಕ್ರಿಷ್ಣದೇವು ವೋಗಿ ಸೆರಗಿಡಿದ | (ದು) ಏನೆಂದಾನೆ

ನಿಂತೀ ಮಾತಾಡೆ ಚೌಡಮ್ಮ

ತಪ್ಪಾದ ಮ್ಯಾಲೆ ಜಲನಾಡೋಳ್ ಚೌಡಮ್ಮ

ತಾಯೀ ಚೌಡಮ್ಮ ಬರುವಾಗ | ಕ್ರಿಷ್ಣದೇವು

ಜಗವಾ ಜಗ್ಗರಿಸಿ ಮೆರೆದಾನೆ

---

೧. 'ನಿದ್ರಿಲ್ಲ'

೨. 'ಗುಡುಗನಾಡಾಳೆ ತೋಪಲ್ಲಿ'

ನಂದಿ ಮೂಲಿಂದ ಕುಂದಲದ ಮಳೆ ಬಂದೋ

ಬಂಗಾರ ನೆನೆದೋ ಬಲೆ ನೆನೆದೋ | ಚೌಡಮ್ಮ

ಸುಂಗಾರದ ತೋಪು ಕೆಸರೆದ್ದೊ

**ಹೆಬ್ಬಾರ***

ತಾಯಿ ಎಲ್ಲಿದ್ದಾಳೆಽಽ

ತಾಯಿ ವೂವಿನ ಗುಟ್ಟೇಲಿದ್ದಾಳೆ

ತಾಯಿ ಮೊಗ್ಗಿನ ಪೂಜೆಲಿದ್ದಾಳೆ ||ಪಲ್ಲವಿ|**

ಹೆಬ್ಬಾರೆ ಗುಡ್ಡರಿಗೆ ಯಗಲ ಮ್ಯಾಲೆ ಜನಿವಾರ

ತಾಯೀ ಚೌಡಮ್ಮ ವೊರುವೋರಿಗೆ | ಪೂಜಾರಿಗೆ

ದುಂಡು ಮಲ್ಲೀಗೆ ಬಳೆಸರ

ಯಬ್ಬಾರಮ್ಮನ ಅಬ್ಬಾವ ನೋಡುವ ಬನ್ನಿ

ಯಬ್ಬಾರೆ ಮುಂದೆ ನಡುಮುಡಿ | ಬಾಯಿ ಬೀಗದವರು

ನಿನ್ನ ಅಬ್ಬ ನೋಡೋರೆ ಎಡನಿಲ್ಲ

ಕಂಚೀನೆಬ್ಬಾರೆ ಮಿಂಚುಟ್ಟಿ ಮಳುಗಾವೋ

ಸಂತೋಸಗಾತಿ ಚೌಡಮ್ಮನ | ಯಬ್ಬಾರೆ

ಚಿಕ್ಕರೆವಳಗೆ ಮಳುಗಾವೋ

ಗಾಜಿನೆಬ್ಬಾರೆ ನಾಜೋಕಲಿ ಮರೆವಾಗ

ಸಂತೋಸಗಾತಿ ಚೌಡಮ್ಮ | (ನ) ಯಬ್ಬಾರೆ

ಸಂತೇ ಬೀದೀಲಿ ಮೆರೆದಾವ

ಮೂಡುಲಾಗೆ ವೋದೋ ಮುತ್ತೀನ ಯಬ್ಬಾರೆ

ಅಚ್ಚಂದಕೋಗಿ ಮಳುಗಾವೆ | ಬರುವಾಗ

ತಾಯಿ ಚೌಡಮ್ಮ ಗುಡಿಮುಂದೆ

ತೆಂಕಲಾಗೆ ವೋದೋ ಕಂಚೀನ ಯಬ್ಬಾರೆ

ತೆಂಕಾಲ ಬೀದಿಲ್ಲಿ ಮಳಗಾವೆ | ಯಬ್ಬಾರೆ

ಅಚ್ಚಂದಕೋಗಿ ಬರುವಾಗ

---

* ಹೆಬ್ಬಾರೆಯನ್ನು ಹೆಬ್ಬಾರಮ್ಮ' ಎಂದೂ 'ಮನೆಯಮ್ಮ' ಎಂದೂ ಕರೆಯುವುದು ವಾಡಿಕೆ. ಚೌಡಮ್ಮನ ಪದಗಳನ್ನೇ ತಿರುಗಿಸಿಕೊಂಡು ಹೆಬ್ಬಾರಮ್ಮನ ಮೇಲೆ ಹಾಡುತ್ತಾರೆ.

** ಪ್ರತಿ ಎರಡು ಸಾಲಿಗೊಮ್ಮೆ ಈ ಪಲ್ಲವಿಯನ್ನು ಹಾಡಿಕೊಳ್ಳಬೇಕು.

೧. 'ನಾಜೋಕಗಾತಿ ಚೌಡಮ್ಮ'

ಕಂಚಿನಬ್ಬಾರೆ ಯಚ್ಚಾಳದಲ್ಲಿ ಬರುವಾಗ
ಯೆಚ್ಚಾಳಗಾತಿ ಮನೆಯಮ್ಮ | (ನ) ಯಬ್ಬಾರೆ
ತೆಂಕಾಲ ಬೀದಿಲ್ಲಿ ಮಳಗಾವ

ಗುಡ್ಡರು ಬತ್ತರಂತ ತಾರಸಿದ್ದ ಗುಡಸಿದ್ದೆ
ಮುತ್ತುನ ರಂಗೋಲೆ ಬಿಟ್ಟಿದ್ದ | ಅವರ
ಪಾದಾವ ನಾನು ಸರಣೆಂದ

ತಾಯಿ ಮನೆಯನ್ನು ವೊರುವೋರು ಗುಡ್ಡರಿಗೆ
ಗಂದ ಚಂದರವ ಇಕ್ಕಿದ್ದ | ಮನೆಯಮ್ಮ
ವೂವಿನಾರತಿಯ ಯಿಡಿದಿದ್ದ

ತಾಯಿ ಯಬ್ಬಾರಮ್ಮ ಕುಣದಾಳ ಮರುದಾಳ
ತಾನೂ ದೀವಿಗೆಯ ಬೆಳಕಲ್ಲಿ | ಕೂತುಕೊಂಡು
ಅವಳೋಲೆಗೊಜ್ಜುರವ ಬಿಗಿದಾಳೆ

ವುಲಿಯಾ ವೊಡೆದಾಳ ವುಲಿಚರ್ಮ ಸುಲುದಾಳ
ಕರಡೀಯ ಕಣ್ಣ ಕಳದಾಳೆ | ಯಬ್ಬಾರಮ್ಮ
ವುಲಿವಾನನ ಮ್ಯಾಲೆ ಕಳುವಾಳೆ

ಮನೆಯಮ್ಮ ಬರುವಾಗ ಮನೆಯಲ್ಲ ಗಮ್ಮೆಂದೂ

ತಾಯಿ ಮನೆಯಮ್ಮ ಬರುವಾಗ | ದಾರೀಲಿ

ನಾನಣ್ಣೀನಾರುತಿಯಾ ಯಿಡಿದಿದ್ದೆ

**ಜಾತ್ರೆ**

ತುಂಬೆ ವೂನಂಗೆ ತುಂಬತಲ್ಲೆ ನಿನ್ನ ಪರಿಸೆ

ಕಡಲೆಕಾನಂಗೆ ಕಡಿತ | ನಿನ್ನ ಪರಿಸೆ

ವರುಸಕ್ಕೊಂದು ಸತಿ ತುಂಬೀತು

ಚಿಕ್ಕೆರ ಸುತ್ತ ಕಲ್ಲಿಲ್ಲ ಮುಳ್ಳಿಲ್ಲ

ಸೋಸಿ ಬಿತ್ತವಳೆ ಎಳೆಜವನ | ಚೌಡಮ್ಮ

ಜಾತರಿಗೆ ಬಂದೋರು ಕೊಂಡೋಗಿ

ಜಾತರಿಗೆ ಬಂದೋ ಚಿನ್ನರನ್ನಾದ ವಡವೆ

ಜಾತರಿಗೆ ಬಂದೋರು ಕೊಂಡೋಗಿ | ಚೌಡಮ್ಮ

ವರುಸಕ್ಕೊಂದ್ ಜಾತ್ರೆಗೆ ಬಂದೋಗಿ

ಬಣ್ಣಾದ ಬಳೆಬಂದೋ ನನ್ನಣ್ಣ ಊರಲ್ಲಿಲ್ಲ
ಈ ನಾಡಲಿಂತ ಬಳೆಯಿಲ್ಲ | ಚೌಡಮ್ಮ
ಜಾತರಿಗೆ ಬಂದು ತೊಡುಬಾರ

ಬಿಡಿ ಪದಗಳು

ಬಾರೆ ಚೌಡಮ್ಮ ನೀರಿಗೆ ವೋಗಾನಾ
ಸಾಗಬೇಗೂರ ಕಣಗಾಲ | ಏರಿಯಮ್ಯಾಲೆ
ಆಗ್ರವ ನೋಡಿ ತಿರುಗಾನ

ಆಗ್ರಿದ್ದರೇನು ಅಡಕೆ ವೊಂಬಾಳಿಲ್ಲ
ನೀನದ್ದರೇನೇ ನಿಜವಿಲ್ಲ | ಚೌಡಮ್ಮ
ಸೀರಿದ್ದರೇನೇ ಸೆರಗಿಲ್ಲ

ವಡ್ಡನಾ ಕರಸಾಳ ವಳಮಾತ ಏಳಾಳೆ
ಗುದ್ದು ಮಂಕರಿಯ ತರಸಾಳೆ | ಚೌಡಮ್ಮ
ಮಜ್ಜನು ಬಾವಿನು ಕಟ್ಟಸಾಳೆ

ಮಜ್ಜನ ಬಾವಿನು ಕಟ್ಟಸಾಳೆ ಚೌಡಮ್ಮ
ಬಗ್ಗಿ ನೋಡಾಳೆ ತವರೂರ | ನಿಡಸಾಲೆ
ಅವರಕ್ಕ ಸಿಂಗರಿಸಿ ಬರುವೋದಾ

ಮುಗ್ಗುನ ತೋಟಕ್ಕೆ ನುಗ್ಗಾಳೆ ಚೌಡಮ್ಮ

ಮುಗ್ಗು ಮಾಣಿಕದಾ ಮಣಿಗುಂಬಾ | ತಕ್ಕೊಂಡು

ಮುಗ್ಗೀಗೆ ಗಣಿಯಾ ಏರೆದಾಳೆ

ಉಜ್ಜನಿ ಚೌಡಮ್ಮ ಉಟ್ಟಾಳೆ ದೇವಾಂಗ

ಅತ್ತಿ ನೋಡಾಳೆ 'ಗಡುಗಂಬ ಚೌಡಮ್ಮ

ರಾಮ್‌ಗೋಳ ಮಕ್ಕಾ ಮದುವೆಯಾ

ತುಂಬಿದ ಕೆರೆಯಲ್ಲಿ ತೂಬೆತ್ತನಿವನಾರ

ರಂಬೆ ನಿನ್ನ ಮಗ ಚೌಡಮ್ಮ | ನಿಂತ್ಕಂಡು

ವಂಬಾಳಿಗೆ ನೀರಾ ತಿರುವಾನೇ

ಆದಿಲೋಳಕಲ್ಲು ಬೀದೀಲಿ ಸೇದೇಬಾವಿ

ಆದಿ ಕುಟ್ಟಾಳೆ ಅರಿಸಿನವಾ | ಸೀಗೇಕಾಯ

ಓದೋ ಮಕ್ಕಳಿಗೆ ಜಯವಾಗಲೀ

---

೧. 'ಗೋಪುರವ

೧೧೨ / ಉಜ್ಜನಿ ಚೌಡಮ್ಮ

ಅಟ್ಟಲೊಳಕಲ್ಲು ಇತ್ತಲಲಿ ಸೇದೇಬಾವಿ
ಮೆಟ್ಟಿ ಕುಟ್ಟಾಳೇ ಅರಿಸಿನವಾ | ಸೀಗೆಕಾಯ
ತೊಟ್ಟಿಲ ಮಕ್ಕಳಿಗೆ ಜಯವಾಗಲಿ

ಊರು ಮುಂದಲ ಕೆರೆ ನೀರೆಲ್ಲ ತಾವರೆ
ನೋಡೇ ಚೌಡಮ್ಮ ನಿನ್ನಕೆರೆ | ಚಿಕ್ಕೆರೆಯ
ಜೂಜಾಡಿ ಕೋಡೀ ಅರಿದಾವು

ಉಜ್ಜನಿ ಚಂದಾ ಉಣಸೇ ತೋಪು ಚೆಂದ
ಉಜ್ಜನಿ ಅಮ್ಮನ ಗುಡಿ ಚೆಂದ 1 ನವಿಲಿಂಡ
ಯಾರೇ ಬರೆದೋರು ಚೌಡಮ್ಮ

ನೌಲಿಂಡ ಯಾರೇ ಬರೆದೋರು ಚೌಡಮ್ಮ
ಮೇಲುಗೋಟೆಯಾ ಗುರುಗೋಳು | ಬಂದಿ
ನೌಲಿಂಡನವರು ಬರದಾರ

ಗುಡಿಯಾ ಕಟ್ಟುವಾಗ ಗಡಿಗಡಿ ರಾಜುಗೋದೋ
ನಿನ್ನ  ಗುಡಿಕಟ್ಟಿ ಮ್ಯಾಲೇ ಸಿಕರಾವ | ಗೇಯುವಾಗ
ಊರಿಗುತ್ತರವಾ ಬರೆದಾಳೆ

ಊರಿಗುತ್ತರವಾ ಏನೆಂದು ಬರೆದಾಳೆ
ಊರಲ್ಲಿ ಇರುವಾ ಸೊಸೆದೀರ | ಯೆಣ್ಮಕ್ಕ
ವೂವಿನಾರತಿಯಾ ತರಯೇಳಿ

ಆರಳಾ ಉಜ್ಜನೀ ಏರಾಳೆ ಊಣಸೇ ತೋಪ
ಸಾರಾಳೇ ಸಣ್ಣ ದನಿಯಲ್ಲಿ ! ಚೌಡಮ್ಮ
ಸಾಲ ಮಡಿಯೋರ ಬರಹೇಳಿ

ಅರಕೆರೆ ಬನ್ನೂರು ತುರುಕರಿಲ್ಲದುದ್ದೀನಿ
ಸರಕಾರಕೋಗಿ ಬರುವೋಳೆ | ಚೌಡಮ್ಮ
ಸರಿಕಾಣೆ ನಿನ್ನಾ ದೊರೆತಾನ

ಕೋಣೇಲಿ ಕೂತ್ಕಂಡು ಏನ್ಮಾಡಿ ಚೌಡಮ್ಮ
ಸಾಲ ದೀವಿಗೆಯ ಬೆಳಕಲ್ಲಿ | ಚೌಡಮ್ಮ
ಅವಳೋಲೆಗೊಬ್ಚಾರ ಬಿಗಿಸಾಳೆ

---

೧. 'ಗುಡಿಮ್ಯಾಲಿರೊ

ಕಯ್ಯೆಣ್ಣೆ ಜೋತಿ ಕಣ್ಣೀಗೆ ಕತ್ತಾಲೆ
ಒಳ್ಳೆಣ್ಣೆ ಜೋತಿ ಮಕಸಿರಿಯೋ | ಚೌಡಮ್ಮ
ನಿನ್ನಂತೆ ಸಿರಿಯ ಕೊಡೆ ನಮಗೆ

ತೋಟಾದಲಿರೋದು ಯಾತಾರ ಮರವಮ್ಮ
ಗಂಡು ಬೂತಾಳೆ ಗಜನಿಂಬಿ | ತಾಳಲ್ಲಿ
ಅಲ್ಲಿ ಚೌಡಮ್ಮಗೇ ಕರೆದಾರ

ಊರೀಗೆ ದನ ಬಂದೋ ಉಟ್ಟುಕೊಳೇ ಸೀರೆಯಾ
ತೊಟ್ಟುಕೊಳ್ಳೋ ಸಣ್ಣ ರವಕೇಯ | ಚೌಡಮ್ಮ
ನಿನ್ನು ಮ್ಯಾಲೆ ವಡನಾಡಿ ಮಗ ಬಂದ

ಊರೆಲ್ಲಾ ಸೇರಿ ವೂವಿನ ಸೀರೆ ನೆಯ್ದಿ
ಉಡುಬಾರ ತಾಯಿ ನಡುಸಣ್ಣ | ಚೌಡಮ್ಮ
ತೊಡುಬಾರ ವಡವೆ ಚೆನ್ನಾವ

ಉದುರು ಕಂಚೋಳದೂವೆ ಉದುರುದುರು ಸೆರಗೀಗೆ
ಕುದುರೆ ಮೇಲೋಗೋ ಚೆದುರೇಯ | ಮಂಡೆಯ ಪೂವ
ಉದುರು ಅವಳ ಸಾಲೇ ಸೆರಗೀಗ

ಮುದ್ದು ಚೌಡಮ್ಮ ಎದ್ದೆಲ್ಲಿಗೋದಾಳ

ಇಬ್ಬಾಣಿ ಉಲ್ಲು ತುಳಕೊಂಡು | ಚೌಡಮ್ಮ

ಅವಳೊಬ್ಬಾಳಾಡಳ ವುಲಿಬ್ಯಾಟೆ

ಗುಡಿಯಿಂದುಗೂಟೆ ಗಮ್ಮನ್ನದೇನಮ್ಮ

ಗಂಡು ಭೂತಾಳೆ ಗಜನಿಂಬಿ | ವನದಲ್ಲಿ

ತಾಯಿ ಚೌಡಮ್ಮ ಒಲಿದಾಳೆ

ಊರೆಲ್ಲ ಸೇರಿ ವೂವಿನ ಸೀರೆ ತಂದು

ಬಿಟ್ಟಾರೆ ಒಂದು ಮುಗಿಲುದ್ದ | ಚೌಡಮ್ಮ

ಉಡುಬಾರೆ ನಿನ್ನ ನಡು ಸಣ್ಣ

ತಾಳವೂ ತಂದಿವುನಿ ತಾಳತಗಿಯೆ ಚೌಡಮ್ಮ

ತಾಳೆವೂವೆಲ್ಲ ತೆರಬಣ್ಣ | ಚೌಡಮ್ಮ

ತಗಿಯೇ ಚೆನ್ನದ ಅಗಿನೀಯ

'ಯಾಕೆ ಚೌಡಮ್ಮ ನನ್ನ ಮ್ಯಾಲೆ ಕೋಪಾವೆ
ಲೋಕಾದೋರೆಲ್ಲ ಇಡಿವೊನ್ನ । ಇಕ್ಕಿದರೆ
ನಿನ್ನ ದೂಪ ಕಾಣಿಕೆಯ ಮಗಳಲ್ಲೆ

ಸಾತಿಮಳೆ ವೂದಿ ತಾಯಮ್ಮನ ಕೆರೆತುಂಬಿ
ಜಾತಿ ಮುತ್ತೆಲ್ಲ ತಡಿಸೇರಿ 1 ಚೌಡಮ್ಮ
ಜಾತರೀಗೆ ಬಂದೋ ವೊಸಮುತ್ತು । ಚೌಡಮ್ಮ
ಜಾತರಿಗೆ ಬಂದೋರು ಕೊಂಡೋಗಿ

ಮಗನೆಸರು ಮಲ್ಲೀಗೆ ತಾಯೀ ಚೌಡಮ್ಮ
ಸತಿ ಪುರುಸರೆಸರು ಕ್ರಿಷ್ಣಾರು

ಉಜ್ಜನಿ ನಿಡಸಾಲೆ ಅಗಲಿ ಗೊಲ್ಲರ ದೊಡ್ಡಿ
ಬೆಡಗಲ್ಲಿ ಆಲ ಕರೆಯೋಳೆ । ಚೌಡಮ್ಮ
ನಿನ್ನ ಬ್ಯಾಡರಿಗೆ ಅರಿವಲ್ಲ

ತಾಯಿ ಚೌಡಮ್ಮ ಸರ್ಪನ ಕಾಲಿಡಿದು
ದೋತರೆ ಸೀರೆ ವಗದಾಳೆ । ಚೌಡಮ್ಮ
ನಿನ್ನ ಜಡೆಯ ಮುತ್ತೆಲ್ಲ ಗಲಿರಂದೋ

ಚೌಡಮ್ಮ ಬರುವಾಗ ಕಣ್ಣೀಗೆ ನಿಗರಿಲ್ಲ

ತಾಯೀ ಚೌಡಮ್ಮ ಬರುವಾಗ

ಇಂಬೀಯ ಮರಕೆ ನಿಲಸಮ್ಮ ಕುದುರೇಯ

ಇಂಬಿ ಮರಬಾಗಿ ಎಲಿಯುದುರಿ | ಚೌಡಮ್ಮ

ಅವಳಿಂಬ ಕೇಳಾಳ ತವರೂರ

ಮೂಗಾಳ ದೂಪ ಮಡಲಲ್ಲಿ ಕಟ್ಟುಕೊಂಡು

ಅವಳೊಕ್ಕಿ ಬರುವುದೆ ಬೆಳಗಾದೋ

ಆರೂರಟ್ಟಿಯ ಗಾರೆ ಪಡಸಾಲೆ ಮ್ಯಾಲೆ

ದಾಳ ನೋಡೋಳು ಇವಳಾರ | ಚೌಡಮ್ಮ

ದಾಳ ಬಂದಾವೆ ಬೆಲೆಮಾಡ

---

೧. ಒಂದು ಸಾಲು ಹೆಚ್ಚಾಗಿರುವುದನ್ನು ಗಮನಿಸಬಹುದು

ಉತ್ತುಮರಟ್ಟಿಯ ತೊಟ್ಟಿ ಪಡಸಾಲೆಮ್ಯಾಲೆ
ಪಗಡೆನಾಡೋಳು ಇವಳಾರ | ಚೌಡಮ್ಮ
ಪಗಡೆ ಬಂದಾವೆ ಬೆಲೆಮಾಡೆ

ಮುತ್ತು ಮಾರೋ ಸಟ್ಟಿ ಉತ್ತಮಗೇರಿಗೆ ಬಾರೋ
ಉತ್ತಮರ ಮಗಳು ಚೌಡಮ್ಮ | ಕಂಡಾರ
ಮುತ್ತು ಕೊಂಡಾಳ ಕೊರಳೀಗ

ಅವಳ ಮಾರೋ ಸಟ್ಟಿ ಆರುವರ ಕೇರಿಗೆ ಬಾರೋ
ಆರುವರ ಮಗಳು ಚೌಡಮ್ಮ | ಕಂಡಾರೆ
ಅವಳ ಕೊಂಡಾಳೆ ತವರೀಗೆ

ಬಾಳೇಯ ಮರಕೆ ಬಗ್ಗ ಸಮ್ಮ ಕುದುರೇಯ
ಬಾಳೆ ಮರಬಾಗಿ ಎಲೆಬಾಗಿ | ಚೌಡಮ್ಮ
ಅವಳು ಬಾಗ ಕೇಳಾಳ ತವರೂರ

ಚೌಡಮ್ಮ ವೊರಟಾಳೆ ಮಳವಳ್ಳಿ ಸೀಮೆಗೆ
ಮಳೆ ಬಂದರಲ್ಲಿ ತಳಗಾಳೆ | ಚೌಡಮ್ಮ
ಅವಳೆಳೆಯ ವೊಂಬಾಳೆ ಸುಳಿಯಲ್ಲಿ

ಬ್ಯಾಗೆ ನೆಟ್ಟವಳೆ ಬೀದೀಲಿ ನಿಂದವಳೆ

ನಾನಲ್ಲವೆಂದು ನಗುತ್ತಾಳೆ

ಮುತ್ತೀನ ಬಟ್ಟು ಸುತ್ತಾಕಿದ ಎಣೆಗಂಟು

ಉತ್ತಮರ ದಿನಸು ಮೈಗೆಂಪು | ಚೌಡಮ್ಮ

ಉತ್ತಾಳೆ ತನಿಯ ಎರದಾಳೆ

ಮಾಯಕಾರ ಚೌಡಮ್ಮನ ನ್ಯಾಯಾಕೆ ಬರಯೇಳಿ

ಅವಳ ಮಾಯಾದ ಬೂದಿ ಮಡಿಲಲ್ಲಿ | ಕಟ್ಟಿಕೊಂಡು

ನ್ಯಾಯಾಕೆ ಚೌಡಮ್ಮನ ಬರಯೇಳಿ

ಊರು ಚಿಕ್ಕದಲ್ಲೆ ನೂರೊಂದು ಒಕ್ಕಲಲ್ಲೆ

ಊರೋಲಿರುವಾರು ಬಡವಾರು | ಚೌಡಮ್ಮ

ನೋಡಿ ಸಂತರಿಸೆ ಪ್ರಜೆಗೋಳಾ

ಮಲ್ಲಿಗೂವ ಮುಡಕೊಂಡು ಎಲ್ಲಿಗೋದಿ ಚೌಡಮ್ಮ

ಮಲ್ಲನ ಮೂಲೇಲಿ ಅವರಣ್ಣ | ಬರಹೇಳಿ

ಕಾಗದವನ್ನು ಕಳುವವನೆ

ಕಡೆಯಾ ಮನೆಯಲ್ಲಿ ಬಡವಾಳೊಬ್ಬಳಲ್ಲೆ
ಟಗರು ನೀನು ಬರುವುದು ತಡವಲ್ಲೆ | ಚೌಡಮ್ಮ
ಬಾಗಲಗಂಟ ಕಳುವಮ್ಮ

ಬಂದ ಕಷ್ಟಕಾಯೇ ಬಂಜೆಗೆ ಮಕ್ಕಳ ಕೊಡೆ
ಬೀದಿ ಬೀದೀಲಿ ಮರವೋಳೆ | ಚೌಡಮ್ಮ
ಬಂಜೆನ್ನ ಸೊಲ್ಲ ಬಿಡಿಸು,

ಕರಿಯಂಚಿನ ಸೀರೆ ಕಣಕಾಲಿಗರುಸನ
ಕೆಣಕಿನೋಡವಳು ಚೌಡಮ್ಮನ | ಗುಡಿಯಿಂದ
ಮರೆತೋರ ಮನೆಯಾ ಮುರಿಯೋಳ

ಅಗಸರಗೇರಿಗೆ ವೋದಾಳೆ ಚೌಡಮ್ಮ
ಅಗಸರ ಮಗನ ಕರದಾಳ | ಏನಂದಾಳು
ಎಲ್ಲಪ್ಪ ಮಗನೆ ನಡುಮುಡಿ

ವಲೇರ್‌ಗೇರಿಗೆ ವೋದಾಳ ಚೌಡಮ್ಮ
ವಲೇರ ಮಗನ ಕರೆದಾಳೆ | ಕೇಳಾಳೆ
ಎಲ್ಲಪ್ಪ ಮಗನೆ ಅರಮೋರಿ

ವಾಚಾರ ಕೇರಿಗೆ ವೋದಾಳ ಚಡಮ್ಮ

ವಾಜಾರ ಮಗನ ಕರೆದಾಳೆ | ಕೇಳಾಕೆ

ಎಲ್ಲಪ್ಪ ಮಗನೆ ಅರುದಾಲಿ

ಗೆಜ್ಜೆ ತಂದಿವುನಿ ಎದ್ದು ಬಾರೆ ಚೌಡಮ್ಮ

ದುಡ್ಡಿನ ದೂಪ ಮಡಲಲ್ಲಿ ಕಟ್ಟಿಕೊಂಡು

ಸುತ್ತಿ ಬರಲಾರೆ ದನಿತೋರೆ

ಉಜ್ಜನಿ ಚಿಕ್ಕೆರೊಳಗೆ ಚಕ್ಕಂದ ಆಡೋಳೆ

ಜಡೆ ಜಡೆಗೆ ವೂವ ಕುಯ್ಯೋಳೆ | ಚೌಡಮ್ಮ

ನಿನ್ನ ಬೆಡಗು ಚೆಂದ ಬ್ಯಾಡರಿಗೆ

ಊಟಕ್ಕೆ ಉಜ್ಜನಿ ನೋಟಕ್ಕೆ ನಿಡಸಾಲೆ

ಗಂದ ಪುಣಗೀನ ನನ್ನೂರು | ಊರ ಮುಂದೆ

ಗೊಂಬೆ ಚಿತ್ರಾದ ಮಳೆ ಬಂದೋ

ದುಂಡೀ ಚೌಡಮ್ಮ ಗಂಡ ಎಲ್ಲಿಗೋದ
ಗಂಡುಗತ್ತಾರ ವನ್ನರುಳಿ | ತಾಳಲ್ಲಿ
ಚೆಂಡಾಡಕೋಗಿ ಬರಲಿಲ್ಲ

ಅರಸ ಚೌಡಮ್ಮ ಪುರುಸರಲ್ಲಿಗೋದ್ರು
ನರಸಿ ಪುರಾದ ನಡುವೊಳೆ | ತೋಪಿನಲ್ಲಿ
ಸರಸಾನಾಡಕೋಗಿ ಬರಲಿಲ್ಲ

ಏರೀಯ ಕೆಳಗೆ ಯಾಲಕ್ಕಿ ತೂರೋಳೆ
ಅರಳಾಕಿದೋಲೆ ಕಿವಿಯೋಳ | ಚೌಡಮ್ಮ
ಇಸ್ತ್ರೆ ನಿನ್ನೂರ ಯೆಸರೇಳೆ

ನನ್ನೂರ ಯೆಸರ ನಾನೇನ ಯೇಳಾನೆ
ಇಕ್ರಮರಾಜ ಆಳುವ | ಪಟ್ಟಣ
ಅಷ್ಟುಲ್ಲಾಸವೇನೇ ನನ್ನೂರು

ಉತ್ತರ ವೊಲದಲ್ಲಿ ಉತ್ರಾಣಿ ಕುಯ್ಯೋಳೆ
ಮುತ್ತಾಕಿದೋಲೆ ಕಿವಿಯೋಳೆ

ಚೌಡಮ್ಮನೆನ್ನೋಳು ಯೆಣ್ಣುಮಕ್ಕಳಲ್ಲಿ ಪುಣ್ಯವಂತೆ

ಪುಣ್ಯೇದ ಪುಸ್ತಕ ಬಲಗೈಲಿ | ಯಿಡಕೊಂಡು

ಯೆಣ್ಣು ಮಕ್ಕಳ ತಿರುವಾ ಬರಹೇಳಿ

ಆರುತಿ ಚೌಡಮ್ಮ ಆದೀಲಳ್ಯಾತೋಡಿ

ಆದಿ ಕುಟ್ಟಾಳೆ ಅರಿಸಿನವಾ | ಸೀಗೇಕಾಯ

ಓದಾಕೋಗುವಾ ಮಗನೀಗ

ಮಲ್ಲೀಗೆ ವೂವು ಎಲ್ಲಿಗೆ ಗಮ್ಮೆಂದೋ

ಮುದ್ದು ಚೌಡಮ್ಮ ಗುಡಿಯಿಂದ 1 ಮಲ್ಲೀಗೆ

ಮುಗ್ಗರಳಿ ಗಮಲ ನಿಲುಬಾರ

ಉದ್ದಾನಿ ಮಲ್ಲೀಗೆ ರುದ್ರಾಕ್ಷಿ ಸಂಪಿಗೆ

ಇಬ್ಬನೀಲಿ ಬೆಳೆಯೋ ಮುರುಗಾ | ಮಲ್ಲಿಗವೂವು

ಇದ್ದಾವು ಚೌಡಮ್ಮ ಗುಡಿಯಿಂದ

ಒಳಗೆರೆವಳಗೆ ಒಡ್ಡಿ ಚೆಂಡಾಡೋಳೆ

ಮಲಗಿದ್ದ ಉಲಿಯಾ ಕೆಣಕೋಳೆ | ಚೌಡಮ್ಮ

ಸರಿಕಾಣೆ ನಿನ್ನ ದೊರೆಬುದ್ಧಿ

ಊರು ಮುಂದಲ ಕೆರೆ ನೀರೆಲ್ಲ ತಾವರೆ
ನೋಡೇ ಚೌಡಮ್ಮ ನಿನ್ನ ಕೆರೆಯಾ । ಮುತ್ತಿನ
ಜೂಜೂಡಿ ಕೋಡಿ ಅರಿಯೋದಾ

ತುಂಬಿದೇರಿಮ್ಯಾಲೆ ತೂಬೆತ್ತಳಿವಳ್ಯಾರ
ಗಂಗಮ್ಮ ತಾಯಿ ನಿನ್ನ ಮಗ । ಪೂಜಾರಿ
ವೊಂಬಾಳಿಗೆ ನೀರ ಬುಡುತಾನೆ

ದಾರಿ ಮನೆಯೋಳೆ ದಾರಿಗೆಂಬಲಿನೋಳೆ
ದಾರಕಿಂತ ಸಣ್ಣ ದನಿಯೋಳೆ । ಚೌಡಮ್ಮ
ದಾರ ಬಂದಾವೆ ಬೆಲೆ ಮಾಡ

ಬೀದಿ ಮನೆಯೋಳೆ ಬೀಸಣಿಗೆ ನರಿಗೋಳ
ಜಾಲದೂವೀನ ಜಡೆಯೋಳೆ । ಚೌಡಮ್ಮ
ಜಾಣೆ ತೇರುತವ ಕೊಡುಬಾರ

ಇತ್ತಲ ಬಾಕಲೋಳೆ ಈರೆಕಾಯ ನರುಗೋಳ
ಸುತ್ತ ಪೌಳೀಯ ಗುಣಿಯೋಳೆ । ಚೌಡಮ್ಮ
ಸುತ್ತಿ ಬರಲಾರೆ ದಣಿತೋರೆ

ಕಗ್ಗನ ಕಣಿವೇಲಿ ಒಬ್ಬೋಳೆ ವೋಯ್ತಿದ್ದೆ

ಯೆಬ್ಬುಲಿ ಕರಡಿ ಎದುರಾದೋ । ಚೌಡಮ್ಮ

ಕಗ್ಗಲ್ಲ ಅತ್ತಿ ದಣಿತೋರೆ

ಕಗ್ಗಲ್ಲಲವಳ ಕಂಚೇನಲಗೇಲವಳ

ಅಲ್ಲವಳೆ ನನ್ನ ಯೆಸರೋಳು । ಚೌಡಮ್ಮ

ಇಲ್ಲಿಂದ ಕೈಯ್ಯಾ ಮುಗಿದೇನು

ಅಡ್ಡಗುಡ್ಡಲಿ ಗರುಡಾಳ ಮಟ್ಟೆ ಇಕ್ಕಿ

ಅವನಡ್ಡಾಡುತಾನೆ ಕ್ರಿಷ್ಣದೇವರು । ಚೌಡಮ್ಮ

ಗೆಡೆಯ ಜಂಗಮರ ಮಗಳಲ್ಲೆ

ತಾಯಿ ಚೌಡಮ್ಮ ತಾಲಿ ಮಾಡಿದೋರ್ಯಾರೆ

ಏಳೂರವಾಜ ಎಸಳೆತ್ತಿ । ಮಾಡಾನಲ್ಲ

ತಾಯಿ ಚೌಡಮ್ಮ ಸರದಾಲಿಯ

ಅರಮೊಳದ ಸೀರೆ ನ್ಯಾಕೆ ಮ್ಯಾಲೆ ಆಕವೆ
ಯಾಕೆ ಚೌಡಮ್ಮ ಉಡಲಿಲ್ಲ | ಸೀರೆಯಾ
ರೇಕು ಬಂದಾವ ಸೆರಗೀಗೆ

ವಡೆಗಾಯಿ ವಡಸೇನು ಇಡುಗಾಯಿ ವಡೆಸನು
ಎಳನೀರ ಕೋಡಿ ಅರಸೇನು

ತಂಗೀನ ಮರಕೆ ತಿಂಗಳಿಂದ ನೀರಿಲ್ಲ
ತಿಂಗಾಳ ಬಾಣಂತಿ ಚೌಡಮ್ಮ | ಉಯ್‌ಕೊಂಡನೀರು
ತಂಗೀನ ಮರಕೆ ಅದವಾದೋ

ಅಲಸೀನ ಮರಕ್ಕೆ ವರುಸದಿಂದ ನೀರಿಲ್ಲ
ವರುಸಾದ ಬಾಣಂತಿ ಚೌಡಮ್ಮ | ಉಯ್‌ಕೊಂಡ ನೀರು
ಅಲಸೀನ ಮರಕೆ ಅದವಾದೋ

ದುಂಡೀ ಚೌಡಮ್ಮ ದಂಡೀಗೋದೇನಿಂದ
ದಂಡೀನಿಂದೇಳು ಗಿಣಿ ಬಂದೊ | ಚೌಡಮ್ಮ
ದುಂಡೀ ನೀನಿದ್ದ ಬಗೆಯಂಗೇ

ರಾಣಿ ಚೌಡಮ್ಮ ರಾಜ್ಯಾಕೋದೇನಿಂದ
ರಾಜ್ಯದಿಂದೇಳು ಗಿಣಿಬಂದೋ । ಚೌಡಮ್ಮ
ರಾಣಿ ನೀನಿದ್ದ ಬಗೆಯೇನ

ಊರು ಅಗ್ರಾರ ಊರಮುಂದೆ ಅರಳಿಮರ
ಆರುವರು ಏಳು ಜಪಕೇಳಿ । ಮನೆಯಮ್ಮನ
ಆಲುಸಾಗರದ ಕೆರಗಳಿ

ಗುಂಡೀನ ಸರದೋಳ ಗರುಗಂಜಿ ನರುಗೋಳ
ನಿನ್ನ ಗುಂಡು ಸಾವಿರಕೆ ಬೆಲೆಯಾದೋ

ಕುದುರೆ ಕುಣಿಯುತ್ತಾ ಕುಂಕುಮ ಚೆಲ್ಲುತ್ತ
ಉಗುರಲ್ಲಿ ಬಗುರಿ ತಿರುವುತ್ತ । ಚೌಡಮ್ಮ
ನಿನ್ನೆದುರು ಬಣ್ಣಾಕೆ ಇದಿರಾರ

ಏರಿಯ ಕೆಳಗೆ ಎಳೆಬಾಳೆ ಸುಳಿಬಾಳೆ
ಮದುರಂಗದ ಬಾಳೆ ಮರು ಬಾಳೆ । ಚೌಡಮ್ಮ
ನಿನ್ನಬ್ಬಾದೊತ್ತಿಗೆ ಗೊನೆಬಾಳೆ

ಒಪ್ಪೋತ್ತಿಗಷ್ಟೇ ಎಷ್ಟೊತ್ತೊಂದಡುಗೆಯ
ಅರಿವೇ ಸೊಪ್ಪಿಗೆ ಉಪ್ಪು ಮರತೆ । ಚೌಡಮ್ಮ
ಸರುತಪ್ಪು ತಾಯಿ ಸಲ್ಲಿ ಸೇಳೆ

ತಪ್ಪು ಅಂದಾರೆ ಯಾರಮ್ಮ ಸಲ್ಲಿಸೋರು
ಮರೆತಿದ್ದ ಉಪ್ಪು ಎಡೆಗೆ ಮಡಗಿ

ಅತ್ತು ಕಾಲೇಣಿ ಅತ್ತು ಲಾರೆ ಇಳಿಲಾರೆ
ಮೆಟ್ಟುಗಲ್ಲತ್ತಿ ಬರಲಾರೆ । ಚೌಡಮ್ಮ
ನನ್ನಟ್ಟೇಲಿ ಕೈಯಾ ಮುಗಿದೇನು

ಆರು ಕಾಲೇಣಿ ಆರಲಾರೆ ಇಳಿಲಾರ
ಜಾರುಗಲ್ಲತ್ತಿ ಬರುಲಾರ । ಚೌಡಮ್ಮ
ನನ್ನದಾರೀಲಿ ಕೈಯಾ ಮುಗಿದೇನು

ಉಜ್ಜನಿ ನಿಡಸಾಲೆ ದಸರಕಲ್ಲಿನ ಮ್ಯಾಲೆ
ಅಸುಕೊಂಡು ವಾಲೇ ಬರೆಯೋಳೆ । ಚೌಡಮ್ಮ
ದಸರಾ ಮೈಸೂರಿಗೆ ಹೆಸರಲ್ಲೇ

ಚೌಡಮ್ಮ ಬರುವಾಗ ಬಿಸಲಿಲ್ಲ ಬೆಂಕಿಲ್ಲ

ಅಸು ಮಕ್ಕಳಿಲ್ಲಾ ಸಿಸುವಿಲ್ಲ

ಊರು ಮುಂದೆ ನಿಂತ್ಕಂಡು ಯಾರ ನೋಡಿ ಚೌಡಮ್ಮ

ದೂರ ವೋಗವನೆ ನಿನ್ನ ಮಗ

ಚೌಡಮ್ಮ ಇರೋದೆ ಏಳುಸುತ್ತಿನ ಕ್ವಾಟೆ

ಮೇಲೇ ದೊಂಕಾಣಿ ಉಲಿಮಟ | (ದ) ತೋಟ

ಚೌಡಮ್ಮನಿರುವುದೇ ಕೈಲಾಸ

ಬೀದೀಲಾಡೋದೊಂದು ಬಿಲ್ಲೂರಿ ಆವು

ಬಿಲ್ಲೂರಿ ಆವ ಕಂಡು ಬೀದೀಲಿ | ಆಡೋಮಕ್ಕು

ಬೆದುರಾವೋ ಬೆಚ್ಚಾವೋ ಚೌಡಮ್ಮ

ತಾಲೀಗೈನೂರು ದಾರಕೊಂಬೈನೂರು

ಮ್ಯಾಗಾಳ ಕೆಲಸ ತೊಂಬೈನೂರು | ಚೌಡಮ್

ಕೊಂಡಿಕೊಳುವೋರು ಬರಯೇಳಿ

ಮುದ್ದು ಚೌಡಮ್ಮ ಜಡೆಯಲ್ಲಿ ವೊದುರಾಳ
ಶ್ರೀರಂಗಪಟ್ಟಣದ ಸೇತುವೆಯ | ಕಲ್ಲಿನಮ್ಯಾಲೆ
ಅವಳೂ ಕಂಡೀ ಜಡೇಯ ವೊದುರಾಳ

ಉತ್ತ ವೊಲದಲ್ಲಿ ಉತ್ರಾಣಿ ಕೂಳ್ಳೆಲ್ಲಿ
ಸೆಟ್ಟೋರು ಮಾಡೋ ವೊಲದಲ್ಲಿ | ಚೌಡಮ್ಮ
ನಿನ್ನ ಚೆತ್ರಿ ಸಾಲಿಟ್ಟು ಬರುತಾವೆ

ಅತ್ತೀಯ ಮರಕೇ ಅತ್ತೋಗೋ ಸರ್ಪಾನ
ಬಾಲವಾ ಯಿಡಿದು ಮೈಸವರಿ | ಚೌಡಮ್ಮ
ತಾನಾಕೆ ವೋಗೆಂದು ಕಳುವಾಳೆ

ಬೀದೀ ಚೆಂದಾಕೆ ಬಿಟ್ಟಾಳ ಸರ್ಪಾನ
ಬೀದೀಯ ಮಕ್ಕು ಬೆದುರಾವೆ | ಚೌಡಮ್ಮ
ಕೈತಪ್ಪ ವೊಡೆದು ಕರಕೋಳ

ಎಲ್ಲ ದೇವರಿಗೂ ನೆಲ್ಲುಲ್ಲ ಮಾಳೀಗೆ
ನಮ್ಮಪ್ಪಾನ ಮನೆಯಾ ಕುಲತಾಯಿ | ಚೌಡಮ್ಮಗೆ
ಜಂತಿ ವುಲ್ಲಿನ ಅರಮನೆ

ತಾನದಲ್ಲಿ ಕೂತುಕೊಂಡು ನೀನೇನ ಮಾಡೀಯ

ತೂಗು ದೀವಿಗೆಯ ಬೆಳಕಲ್ಲಿ | ಕೂತುಕೊಂಡು

ಅವಳೋಲೆಗೊಜ್ಜುರವಾ ಬಿಗಿಸಾಳೆ

ಮುಂಚೆ ನೆನೆದೇನು ಕೆಂಚೆ ಸುವ್ವಾರಿಯಾ

ಮದಿಗದಿಂದಾಚೆ ಮನೆಯೋಳಾ | ಚೌಡಮ್ಮ

ಮುಂಚೆ ಸೊಲ್ಲೀಗೆ ನೆನೆದೇನು

ಮೊದಲೆ ನೆನೆದೇನು ಮದಗಾ ಸುಬ್ಬಾರಿಯಾ

ಮದಗದಿಂದಾಚೆ ಮನೆಯೋಳಾ | ಚೌಡಮ್ಮ

ಮೊದಲಾ ಸೊಲ್ಲಿಗೆ ನೆನೆದೇನು

ಕಯ್ಯೆಣ್ಣೆ ಜ್ಯೋತಿ ಕಣ್ಣಿಗೆ ಮಂಜಲ್ಲೆ

ಒಳ್ಳೆಣ್ಣೆ ಜ್ಯೋತಿ ಮಕಸಿರಿ | ಚೌಡಮ್ಮ

ನಿನ್ನಂತ ಸಿರಿಯಾ ಕೊಡೆ ನಮಗೆ

ಅಣ್ಣಾ ಬೋರಯ್ಯಾ ತಂಗೀ ಚೌಡಮ್ಮ

ತೆಂಗೀನ ಅಣ್ಣ ವೊಲೆ ವೂಡಿ | ಅಟ್ಟಾರಲ್ಲೆ
ಅಣ್ಣಾ ಬೋರಯ್ಯನ ಮದುವೇಗೆ

ಕಡಜಾದ ಗೂಡಿನಂಗೆ ಕಿರಿದು ಕಾಣೇ ಉಜ್ಜನಿ
ಕಡೆದು ನಿಲುಸಾರ ಕಲುಕಂಬ | ಚೌಡಮ್ಮ
ಒಡೆದು ಮೂಡವಳ ಗುಡಿ ತುಂಬ

ಕಣ್ಣ ಕಪ್ಪ ಇಕ್ಕೊಂಡು ಕಡಲೇಯ ಉರಿಯೋಳೆ
ಕಡೆಗಣ್ಣಲಿ ಬೆವರ ಕೆಡುವೋಳೆ | ಚೌಡಮ್ಮ
ತಡವೀ ಬಂದವರ ತೌರೋರು

ಅಂತಂತಗೆ ಸುಣ್ಣ ಜೆಂತೀಗೆ ಕೆಮ್ಮಣ್ಣು
ಸಂತೇಗೆ ಬಂದೋರು ತಿರುಗಾರ ! ನೋಡಾರಲ್ಲಿ
ಕೆಂಪೇ ಚೌಡಮ್ಮ ಅರಮನೆಯಾ

ತಾಯೀ ಚೌಡಮ್ಮ ಮಟವಾ ನೋಡವ ಬನ್ನಿ
ಅಂತಂತರಕೆಲ್ಲ ಅರಳೋಲೆ | ಬೆಳ್ಳಿಗೆಜ್ಜೆ
ಆಂತೀ ನೋಡೋರೆ ಗಡುವಿಲ್ಲ

ಬಾಳೇ ಅಣ್ಣಂಗೆ ಬಾಗೀತು ಉಜ್ಜನಿ

ಬಾಳೇ ಅಣ್ಣ ಬೆಳೆವಾ ಗೌಡಾರ | ಬೀದೀಲಿ

ಬಾಗೀ ಮೆರೆದಾಳೆ ಚೌಡಮ್ಮ

ಇಂಬಿ ಅಣ್ಣಂಗೆ ತುಂಬೀತು ಉಜ್ಜನಿ

ಇಂಬಿ ಅಣ್ಣ ಬೆಳೆವಾ ಗೌಡರಾ | ಬೀದೀಲಿ

ಇಂಬಾಗಿ ಮೆರೆದಾಳೆ ಚೌಡಮ್ಮ

ಅನ್ನೆರೊಡೂರುಸದ ಅರಕೆ ನಿನ್ನ ಗುಡಿಗೆ ಚೆನ್ನದ ಕಳಸ

ವುಟ್ಟಿದ ಮಕ್ಕಳು ನಿನ್ನೆಸರು | ಕರೆದಾರು

ಜ್ಯೋತಿ ಎನ್ನೋದು ನಿನಗಲ್ಲಿ

ಜ್ಯೋತಿ ಇಲ್ಲದ ಮನೆ ರೀತಿ ಇಲ್ಲವಮ್ಮ

ಜ್ಯೋತೆತ್ತಿ ಕೈಯ್ಯಾ ಮುಗಿಯೋಗು

ಮಕ್ಕಳಿಲ್ಲದ ಬಂಜೆ ವೋದಾಳು ತಾಯನಿದಿಗೆ

ಕೊಪ್ಪನ ಕೋಳಲ್ಲಿ ಕೈನೋಡಿ ! ಎನೆಂದಾಳೆ ``

ಪಲವಿಲ್ಲ ಮಗಳೆ ಪಟ್ಟೆ, ಉಡೆ

ಪಟ್ಟೆ ಉಟ್ಟು ಪಲವೇನೆ ಕಟ್ಟುಮುಟ್ಟಿ ಸಲವೇನೆ
ಎತ್ತಿ ಮುದ್ದಾಡೋ ಪಲವಿಲ್ಲ 1 (ದ) ಮೇಲೆ
ವೋಗಾಬಾರದೇ ವೈಕುಂಟ

ಬಾಳೇ ಅಣ್ಣಕೊಡುವೆ ಬಾಗಲಿಗೋಸ್ಕರ ಕೊಡುವೆ
ಬಾಲಾನ ಕೊಡೆ ನಮಗೊಂದ | ಚೌಡಮ್ಮ
ಬಾಕಾಲ ರಜವಾ ವೊಡೆದೇನು

ಇಂಬಿ ಅಣ್ಣಕೊಡುವೆ ಲಿಂಗಾಕೊಸ್ಕರ ಕೊಡುವೆ
ಕಂದಾನ ಕೊಡ ನಮಗೊಂದ | ಚೌಡಮ್ಮ
ನಿನ್ನ ಮಟ್ಟಾಲ ರಜವಾ ವೊಡೆದೇನು

ಚಿಕ್ಕ ಉಜ್ಜಿನಿ ಚೆನ್ನದ ಯೆಬ್ಬಾಕಲು
ಚಿಕ್ಕಣ್ಣ ಗೇದ ಜಗತೀಯ / ಕಲ್ಲಿನ ಮ್ಯಾಲೆ
ಚಿಕ್ಕ ಚೌಡಮ್ಮನ ದೊರೆತಾನ

ಮೂಗುತಿ ಮುಂಬಾರ ಎಣೆಗಂಟು ಯಿಂಬಾರ
ಎಂಟೆಳೆ ಗುಂಡು ಎದೆಬಾರ | ಚೌಡಮ್ಮ

ಸಣ್ಣಂಚಿನ ಸೀರೆ ನರಿಬಾರ

ಬಾರೋ ಬಳೆಗಾರ ಉಡಯ್ಯ ಗುಡಾರ

ನೀಡೇ ಚೌಡಮ್ಮ ನಿಜದೋಳ | ಬಾವಾಕೆ

ಅವರೀಡು ಕಳುವಾರ ದೊರೆಗೋಳು

ಉಂಗುರದ ಕಾಲ ಊರುತ್ತ ಜಾರುತ್ತ

ಬಂಗಾರದ ನಡುವಾ ಬಳುಕುತ್ತಾ | ಚೌಡಮ್ಮ

ಬಂದಾಳ ಬಳಿಯಾ ಅಸುರಾಕೆ

ಕಟ್ಟೇ ಕೆಳಗಾಲ ಪಟ್ಟೆ ಕಣಗಲು ವೂವ

ನಾನತ್ತೆಂಟು ಕೂದೆ ಕೈತುಂಬ | ಚೌಡಮ್ಮ

ನಿನ್ನ ಬಾಕಾಲಲಿರುವ ಬಂಟರಿಗೆ

ಏತದ ಬಾವೀಲಿ ಜೋತುರವ ವೊಗಿಯೋನೆ

ರಾತಾಗಿ ವೊಗಿಯೋ ಮಡುವಾಳಿ | ಚೌಡಮ್ಮ

ತಾರೇ ತೋಳೀನ ರವಕೇಯ

ಜೋತುರ ಸೀರೆ ನ್ಯಾಕೆ ಮ್ಯಾಲೆ ಆಕಾವೆ

ಯಾಕೇ ಚೌಡಮ್ಮ ಉಡಲಿಲ್ಲ । ಸೀರೆಯಾ
ಜ್ಯೋತಿ ಬಂದಾವ ಸೆರಗೀಗೆ

ತಾಳೇ ಚೌಡಮ್ಮ ತಾಲಿಯ ನೋಡೇವು
ತಾಲಿ ಮೇಗಳಾ ಬಸವನ । ನೋಡೇವು
ತಾಳವ್ವ ತಾಳೆ ವನದಲ್ಲಿ

ನಿಲ್ಲೆ ಚೌಡಮ್ಮ ಪಿಲ್ಲಿಯಾ ನೋಡೇವು
ಪಿಲ್ಲಿ ಮೇಗಲ ಬಸವನ । ನೋಡೇವು
ನಿಲ್ಲ ನೀರ ವೊಳೆಯಲ್ಲಿ

ನಡುವೊಂದು ಯಿಡಿಯಲ್ಲಿ । ಜಡೆಯೊಂದು ಮಾರಲ್ಲಿ
ಗಡಿಯಾರದೆಣ್ಣೆ ಚೌಡಮ್ಮ । ಉಜ್ಜನಿಯ
ಗಡಿಗೇಗೆ ತನಿಯ ಎರೆದಾಳೆ

ಕೈಯ್ಯಾ ಕಂಕಳದೋಳೆ ಮಯ್ಯ ಬೂಸಣದೋಳ
ವೈಯ್ಯಾರಿ ಸಣ್ಣ ದನಿಯೋಳೆ । ಚೌಡಮ್ಮ
ಉಯ್ಯಾಲೆನಿಳಿಯೇ ದನ ಬಂದೋ

ಯೆಬ್ಬಾಕಲಲ್ಲಿ ಅಬ್ಬಿತೆ ಮಲ್ಲಿಗೆ

ಅವಳಬ್ಬದೊತ್ತಿಗೆ ಕೆದರಿತೆ । ಮಲ್ಲಿಗೆ

ಅವರಿಬ್ಬರ ಮ್ಯಾಲೆ ಉದರೀತ

ಬಾಕಲು ಚಿಕ್ಕದಂದು ಬಗ್ಗಿ ಬಾರೆ ಚೌಡಮ್ಮ

ಬಾಗ್ಯವುಳ್ಳೋನು ನಿನ್ನ ಮಗ । ಚೌಡಮ್ಮ

ಬಾಗಲಿಗೆ ಮುತ್ತು ಬಿಗಸಾನ

ಎಂಜಲು ಎಂದು ಅಂಜಬೇಡ ಚೌಡಮ್ಮ

ಗಂಜಾಳನಾಕಿ ತೊಳಿದೇವು 1 ಚೌಡಮ್ಮ

ಅಂಜದೇನೆ ನಮ್ಮನೆಗೆ ದಯವಾಗೇ

ಒಕ್ಕಳಣೀಗೆ ಕಟ್ಟಿತೆ ದೊಡ್ಡಕೆರೆ

ಬಚ್ಚಲುಗೇದ ಬಡಗಾಲು । ಕೋಡಿಯವಳಗೆ

ಕಟ್ಟಿತು ಚೌಡಮ್ಮ ಅರಮನೆ

ನಡೆಯೇ ಚೌಡಮ್ಮ ನಡಿಗೆಯ ನೋಡೇವು

ನಡು ಬೆನ್ನಲಿರುವ ಕಿರು ಜಡೆಯ । ನೋಡೇವು
ನಡದಾಳೆ ನವಲ ಗರಿಯಾಂಗೆ

ರವಕೆಯ ಇಕ್ಕವಳ ಇಂಗ್ಲೀಸ ತೊಟ್ಟವಳೆ
ಜೋರು ಮಾಡವಳೇ ಕುದುರೆಯ । ಚೌಡಮ್ಮ
ಜೋರಾಗಿ ಗುಡಿಗೆ ವೊರಟವಳೇ

ಬಂಡಿ ಮ್ಯಾಲೆ ಕುತುಕ್ಕೊಂಡು ಮಂಡೆಸಿಕ್ಕ ವೊದರವಳೇ
ಮಂಡೋದರಿ ಕಾಣೆ ಚೌಡಮ್ಮ । ನಿನ್ನ
ಬಂಡಿಗಳು ಬಳಸು ಬರುತ್ತಾವೆ.

ಆನೆ ಕಾಲಿಗೆ ಬಣ್ಣ ಅವಳ ಕಾಲಿಗೆ ರನ್ನ
ಆಡಕೋಗೋಳ ಅತಿರಂಬೆ । ಚೌಡಮ್ಮ
ನೋಡಕೆ ಬಂದವರ ದೊರಗೋಳು

ಬಸಿರು ಚೌಡಮ್ಮನಿಗೆ ಅಸಿರು ಸೀರೆಯ ತಂದು
ಮಸಿಯಾಯ್ತುದೆಂದು ಮಡಗವಳ । ಚೌಡಮ್ಮ
ವೊಡೆಯೆ ವೊಂಬಾಳೆಯ ಸುಳಿಯಲ್ಲಿ

ಕೋಳಿ ಕೂಗಿವೆ ಕುಂಬಳದೂವಿಗೆ

ಬೆಟ್ಟ ಸಾರಿದೆ ಬಿದರೀಗೆ | ಚೌಡಮ್ಮ

ಕತ್ತಿ ಕೂಗಿದೆ ಜಗಳಾಕೆ

ಅಳ್ಳಿಮನೆಯೋಳೆ ಬೆಳ್ಳಿಯ ಮಕದೋಳೆ

ಅನ್ನೆರಡಂಕಳ ಗುಡಿಯೊಳ | ಚೌಡಮ್ಮ

ಬಟ್ಟು ವೊಳೆದಾವು ಬಿಸಲಿಗೆ

ಅವರೆಯ ವೊಲದಲ್ಲಿ ಅವರೆಯ ಕೊಳದಲ್ಲಿ

ಆರೋರು ಮಾಡೋ ವೊಲದಲ್ಲಿ | ನಮ್ಮ

ಮುಗ್ಗು ಸಾಲಿಟ್ಟು ಮರದಾ

ತಾಯಿ ಚೌಡಮ್ಮ ಏನುಟ್ಟಿ ಮೆರೆದಾಳೆ

ಅವಳು ವೂಬಣ್ಣ ವುಟ್ಟಿ ಮೆರೆದಾಳೆ

ಏಳು ವೂವಿನಂಗೆ ಎಳಬಸರಿ ಚೌಡಮ್ಮ

ಅಳ್ಳವ ದಾಟಿ ಬರನಾರು | ಪೂಜಾರಿ

ಸಾರಿ ಬಿಡಯ್ಯ ಕುದುರೆಯ

ವನ ವದಕೊಂಡು ಮಲ್ಲಿಗೆ ತಕ್ಕೊಂಡು
ಎಲ್ಲಿಗೆ ಬೈರೂವ ದೂರಪಯಣ | ನಾಯಕ್ಕೊಂಡು
ತೌರಿಗೆ ಚೌಡಮ್ಮನ ಅರಮನೆಗೆ

ಕಣ್ಣ ಕಪ್ಪಿಟ್ಟುಕೊಂಡು ಕದವನ್ನು ಅಯಿಕ್ಕೊಂಡು
ಸಂದೇಲಿ ಕಡ್ಲೆ ಉರಿಯೋಳೆ | ಚೌಡಮ್ಮ
ನಿಮ್ಮಣ್ಣ ಬಂದವನೆ ಕದ ತಗಿಯೇ

ಚಿಂತಾಕ ಇಟ್ಟುಕೊಂಡು ಸಂತೆಗೆ ವೋಗವಳ
ಚಿಂತಿಲ್ಲವೇನೆ ಮನದಲ್ಲಿ | ಚೌಡಮ್ಮ
ಯೆಣ್ಣು ಮಕ್ಕಳು ಅಳ್ತಾರೆ

ವೊಸಗೆರೆ ಚೆಂದ ವೊಡೆದ ವೊಂಬಾಳೆ ಚೆಂದ
ತಾಯಿ ಚೌಡಮ್ಮನ ಗುಡಿಚೆಂದ

ಬಾಗು ಬಾಗರಿಗೆಲ್ಲ ಬಾಳೆಅಣ್ಣಿನ ಗಾರೆ
ಬಾಲೆ ಕುಂತಾಳೆ ಗುಡಿಯಲ್ಲಿ | ಚೌಡಮ್ಮ
ವುಟ್ಟು ಸೂರ್ಯನಿಗೆ ಎದುರಾಗಿ

ಸಂದಿಸಂದಿಗೆಲ್ಲ ಇಂಬಿ ಅಣ್ಣಿನ ಗಾರೆ

ರಂಬೆ ಕೂತವಳೆ ಗುಡಿಯಲ್ಲಿ | ಚೌಡಮ್ಮ

ಬರುವಾ ಸೂರ್ಯನಿಗೆ ಎದುರಾಗಿ

ಮಾಡೋರು ಸೊಸೆದೀರು

ಮಲಗಿರೋರು ಯೆಣ್ಣು ಮಕ್ಕು | ಚೌಡಮ್ಮ

ಪಗಡೇಯನಾಡೋರು ಅಳಿಯಾರು

ಬಾಗಲಲೊಂದು ಬಾಗು ಬನ್ನಿಯ ಮರ

ಇತ್ತಲಲೊಂದು ಕಿರುನಲ್ಲಿ | ಮರವುಟ್ಟೆ

ಕೆನ್ನೆ ಚೌಡಮ್ಮ ಕದಲೀಗೆ

ವಳ್ಳೆ ತಾಳೆಯ ಪೂವೆ ಮುಳ್ಳಲ್ಲಿ ಯಾಕೆ ನೆಲಗೊಂಡ

ಎಲ್ಲ ದೇವರಿಗೆ ಸಲ್ಲೋವು | ತಾಳೆಯ ಪೂವೆ

ಮಲ್ಲೆ ದೇವರಿಗೆ ಮರಿಯಾದೆ

ಏರಿಚಂದಾಕ್ಕೆ ನೀರಿನ ಬಾವಕ್ಕೆ

ಜೀರು ಮೆಣಸಿಗೆ ಗಮಲಕ್ಕೆ | ಚೌಡಮ್ಮ

ಅತ್ತಾಳೆ ನೀಲ ಕುದುರೇಯ

ಪಟ್ಟೆಸೀರೆಯ ಕಟ್ಟಿ ನೀ ಮಡಲಕ್ಕೆ
ಸೆಟ್ಟಿಗೌಡನ ಮನೆ ಮುಂದೆ । ಚೌಡಮ್ಮ
ಪಟ್ಟೆ ಸೀರೇಗೆ ಮಣಿದಾಳ

ಕಟ್ಟಮೆಟ್ಲು ಕಲ್ಲಿಳಿಯೋಳೆ ಮೆಟ್ಟಿ ನೀರು ಮೊಗೆಯೋಳೆ
ಸೊಟ್ಟಗಾತಿ ನಿನ್ನ ಕುಲವೇಳೆ । ಚೌಡಮ್ಮ
ಮೆಟ್ಟೀದ ಕಲ್ಲೆಲ್ಲ ಅಪರಂಜಿ

ಅಪರಂಜಿಪರಂಜಿ ತಿಪುರಾದ ಸುಣ್ಣ ಕಾಯಿ
ಮಕರಂಬೆ ಕುದುರ ಬಲಗೈಲಿ । ಯಿಡಕೊಂಡು
ತಿಪುರಾಕೆ ದಂಡು ತಿರುಗಾಳ

ಪಿಲ್ಲಿ ಕಾಲಿನೋಳ ಚೆಲ್ಲಿದ ನರಗೋಳ
ಕಲ್ಲು ಮೇಲೆ ಕಾಲ ತೊಳೆಯೋಳೆ । ಚೌಡಮ್ಮ
ಪಿಲ್ಲಿ ಮೊಳೆದಾವು ಬಿಸಲೀಗೆ

ತಾಯಿ ಚೌಡಮ್ಮನ ತೋಳಿನ ರವಕೆಯ ಮ್ಯಾಲೆ
ಯಾತಾದ ಬಾವಿ ಎಲೆತೋಟ । (ದ) ಮ್ಯಾಲೆ
ಕೊಂತಮ್ಮ ಕೊಳವ ಬರೆದಾರ

ತಾಯಿ ಚೌಡಮ್ಮನ ತೋಲಿನ ರವಕೆಯ

ಅವನ್ಯಾವ ಚುಟುಕಾನ ವೊಲಿದೋನು | ಚೌಡಮ್ಮ

ಬೆಂಗಳೂರು ಬಿಗಿದಾರೆ ಬೆನ್ನ ಬಿಗಿದಾವು

ಅವರೆಕಾಳಗಾತ್ರ ಲಿಂಗ ಉಗರೆಲ್ಲ ತುಂಬೆವೂವು

ಆರೂರ ಮಗಳು ಚೌಡಮ್ಮ | ಬರುವಾಗ

ವುತ್ತಕ್ಕೆ ತನಿಯೆ ಎರೆದಾಳೆ

ಇಂಬಿಕಾಯಗಾತ್ರದ ಲಿಂಗ ತೋಳಲ್ಲಿ ತುಂಬೆವೂವು

ಉತ್ತಮರ ಮಗಳು ಚೌಡಮ್ಮ | ಬರುವಾಗ

ಉತ್ತಕ್ಕೆ ತನಿಯ ಎರೆದಾಳೆ

ರಾಗಿಕಡ್ಡಿ ಬಣ್ಣ ರನ್ನ ಮುತ್ತಿನ ಬಣ್ಣ

ತಾಯಿ ಚೌಡಮ್ಮನ ಬೆನ್ನು ಬಣ್ಣ

ದೊಡ್ಡದೊಡ್ಡ ಸೀರೆ ದೊಡ್ಡ ಬಿಳಿಯ ಸೀರೆ

ದೊಡ್ಡಳ ಚೌಡಮ್ಮನ ಬೆನ್ನುಬಣ್ಣ | ಮಾರಾವ

ದೊಡ್ಡ ಮೈಸೂರ ಮಳಗೆಲ್ಲಿ

ಚಿಕ್ಕ ಚಿಕ್ಕಸೀರೆ ಚಿಕ್ಕ ಚೀಟಿಯ ಸೀರೆ
ಚಿಕ್ಕ ಚೌಡಮ್ಮನ ಬೆನ್ನು ಬಣ್ಣ : ಮಾರಾವಲ್ಲೆ
ಚಿಕ್ಕ ಮೈಸೂರ ಮಳಗೆಲ್ಲಿ

ಬೆಟ್ಟಳ್ಳಿಯಣ್ಣೆ ಚಿಕ್ಕಪ್ರಾಯದ ಯೆಣ್ಣೆ
ಚಿಕ್ಕೋಳು ಕುಂತವಳ ಗುಡಿಯಲ್ಲಿ | ಚೌಡಮ್ಮ
ಉಟ್ಟು ಸೂರ್ಯನಿಗೆ ಎದರಾಗಿ

ದೊಡ್ಡಳ್ಳಿ ಯೆಣ್ಣೆ ದೊಡ್ಡ ಪ್ರಾಯದ ಯೆಣ್ಣೆ
ಡೊಡೋಳು ಕುಂತವಳ ಗುಡಿಯಲ್ಲಿ | ಚೌಡಮ್ಮ
ಬರುವ ಸೂರ್ಯನಿಗೆದುರಾಗಿ

ಏರಿ ಕೆಳಗಾಲ ದಾರ ಕಣುಗಾಲುವ
ನಾನಾರೇಳ ಕೂದೆ ಕೈತುಂಬ | ಚೌಡಮ್ಮ
ನಿನ್ನ ತಾನದಲ್ಲಿರುವ ಬಂಟರಿಗೆ

ತಂಕಲ ಸೀಮಿಂದ ಕೆಂಪೆ ಬರುವೋದ ಕಾಣಿರ
ತೆಂಕಲ ಮಿಂಚು ಕೈತೊಳದಂಗೆ | ಚೌಡಮ್ಮ
ಕೆಂಪೆ ಬರುವೋದ ಐಭೋಗ

ಬಡಗಲ ಕದಿಂದ ಬಡವೆ ಬರೋದ ಕಾಣಿರ
ಬಡಗಲ ಮಿಂಚು ಕೈತೊಳೆದಂಗೆ | ಚೌಡಮ್ಮ
ಬಡವೆ ಬರೋದೆ ಐಬೋಗ

ಚಿಕ್ಕ ಚೊಂಬಿಡುಕೊಂಡು ಬೀದೀಲಿ ಬರುವೋಳೆ

ಬುಟ್ಟನು ಬಾರೆ ಕೆನೆಆಲ | ಚೌಡಮ್ಮ

ಸುಕ್ರವಾರ ಮಾಡೋ ಮಗನಿಗೆ

ಬಟ್ಟಲು ಯಿಡಕೊಂಡು ಬೀದೀಲಿ ಬರುವೋಳೆ

ಬುಟ್ಟನು ಬಾರೆ ಕೆನೆಮೊಸರು | ಚೌಡಮ್ಮ

ಮಂಗಳವಾರ ಮಾಡೋ ಮಗನೀಗೆ

ಏರಿಮ್ಯಾಲೆ ಏರಿ ಕೆರೆಮ್ಯಾಲೆ ತಾವರೆ

ತಾವರೆ ಕೆಳಗೆ ಪರಿಮಳ | ತುಳಚಿಯ ದಂಡೆ

ಅಂಗಯ್ಯ ತುಂಬ ಕುಡಿತಾಯಿ

ಅಗಳವ ಕೊಡಲಲ್ಲೆ ಜಗಳಕೆ ಬರಲೋಲ್ಲೆ

ಜಗಳಗಂಟಿ ರಾಣಿ ಚೌಡಮ್ಮ | ಉಜ್ಜನಿಯ
ಕೋಟೆ ಒಬ್ಬರಿಗೆ ಕೊಡಲೊಲ್ಲೆ

ಕೋಟೆ ಕೊಡಲಲ್ಲಿ ಮಾತಿಗೆ ಬರಲೊಲ್ಲೆ
ಮಾತಗಾತಿ ರಾಣಿ ಚೌಡಮ್ಮ | ಉಜ್ಜನಿಯ
ಕೋಟೆ ಒಬ್ಬರಿಗೆ ಕೊಡಲೊಲ್ಲೆ

ಕೊಪ್ಪಾದ ತೋಟಕ್ಕೆ ವಕ್ಕಾಳ ಚೌಡುಮ್ಮ
ಒಪ್ಪಿ ಒಂಬಾಳೆ ಸಿಗದಾಳೆ | ಚೌಡಮ್ಮ
ಲೆಕ್ಕಿ ಮುಡದಾಳ ತುರುಬಿಗೆ

ನಂದಿ ಮೂಲಿಂದ ಕುಂದಾನಿ ಮಳೆ ಬಂದೋ
ಬಂಗಾರನೆಂದು ಬಳೆನೆಂದು | ಚೌಡಮ್ಮ
ಸುಂಗಾರ ತೋಪು ಕೆಸರಿದ್ದು

ಯೌಕೆ ಚೌಡಮ್ಮ ಕೋಪಿಸಿ ಯೇಳಿದ್ದಿ
ರೇಸಿಮೆ ಸೀರೆ ಬರಯೇಳಿ 1 ಬಂದಿವ
ಒಪ್ಪಿ ವಾಡಂಬೆ ಬರವೋಗ

ಬೇವೂನ ತಾಳೋಳೆ ಬೆಡಗಿ ಕಾಣೆ ಚೌಡಮ್ಮ

ಮೂಗಾಳ ಅಕ್ಕಿ ನೆಲಗಡಲೆ | ತಕ್ಕೊಂಡು

ಅವಳ ತಾಯೀ ಮಾಡೋರು ಗಡವಿಲ್ಲ

ಯಿಪ್ಪೆ ತಾಳೋಳೆ ಬೆಡಗಿ ಕಾಣೆ ಚೌಡಮ್ಮ

ನಾಗಾಳ ಅಕ್ಕಿ ನೆಲಗಡಲೆ | ತಕ್ಕೊಂಡು

ಅವಳು ನಾಗುರುಗ ತನಿಯಾ ಎರದಾಲೆ

ಕಣ್ಕಪ್ಪಿಕ್ಕೊಂಡು ಕಡಲೆಯ ಉರುವೋಳೆ

ಕಡಗಣ್ಣೆಲಿ ಬೆವರ ಕೆಡವೋಳೆ | ಚೌಡಮ್ಮ

ನಿನ ಕಡಕಡೆಗೆ ಪಂಜ ಯಿಡಿಸೇನು

ದಂಡೆ ತಂದಿವುನಿ ಎಲ್ಲಿಗೋದೆ ಚೌಡಮ್ಮ

ಸುತ್ತಿ ಬರಲಾರೆ ದನಿತೋರೆ | ಚೌಡಮ್ಮ

ಮುಗ್ಗ ತಂದಿವುನಿ ಮುಡಿಬಾರ

ಬೂಮುಟ್ಟುಕ್ ಮೊದಲೆ ಬೂಲೋಕವುಟ್ಟುಕ್ ಮೊದಲೆ

ತಾನೇ ವುಟ್ಟವಳೆ ಚೌಡಮ್ಮ | ಪರಸೇಲಿ

ವಾಲಾಡುತಾಳೆ ಗುಡಿಯಲ್ಲಿ

ಇದ್ದಿಯೇನವ್ವ ನಿದ್ರೆ ಮಾಡ್ತೀಯೇನೆ
ಸದ್ದಿಲ್ಲವಲ್ಲೆ ಗುಡಿಯಲ್ಲಿ । ಚೌಡಮ್ಮ
ಸದ್ದ ತೋರವ್ವ ಸಬೆಗೆಲ್ಲ

ಗಾಳಿಗಂಟಾಕಿ ನೀರು ಮುಟ್ಟೆಕಟ್ಟಿ
ಸೂಲಗದ ಯಣವ ನಗಸೋಳೆ । ಚೌಡಮ್ಮ ಗಿಡ
ನಿನ ಮಾಯ ಒಬ್ಬರಿಗೆ ತಿಳಿಯಾವು

ಮೊಸರಿಗಕ್ಕಿ ಇಕ್ಕಿ ಎಸರಿಗೆ ನಾನೋದ
ಬಸರೀಯ ಮರದ ನೆರಳಲ್ಲಿ । ಕೂತುಕೊಂಡು
ಬಸವನ ಸುಂಗರಿಸಿ ಬೆವತಾಳೆ

ಆಲೀಗಕ್ಕೀ ಆಕಿ ನೀರಿಗೆ ನಾನೋದ
ಆಲಾದ ಮರದ ನೆರಳಲ್ಲಿ 1 ಚೌಡಮ್ಮ
ಆನೇ ಸುಂಗರಿಸಿ ಬೆವತಾಳೆ

ಅಳ್ಳಿಯಾ ಮರದಡಿ ಕಾಲಿಗೆ ಮಣೆಅಕ್ಕೊಂಡು
ವಾಲೇ ಪಂಚಾಂಗ ಬಲಗೈಲಿ । ಯಿಡಕೊಂಡು
ಉರುಗ್ ನೂರಾಳ ಕಳುವಾಳೆ

ಅಸರು ಬಳೆಯೋಳೆ ಯೆಸರಿಗೆ ದೊಡ್ಕೊಳೆ

ಯೆಣ್ ಮನ್ಸೂರಲ್ಲಿ ಮರಿಯೋಳೆ | ಚೌಡಮ್ಮ

ನೀನುಟ್ಟಿರೋ ಸೀರೆ ಯೆಸರೇಳೆ

ಯೆಸರೇಳೋದಲ್ಲ ಬಿಸಲಿಗೆ ತೋರೋದಲ್ಲ

ಅಸರಲೆ ಒಳಗೆ ಮಡಚೋದು | ಚೌಡಮ್ಮ

ಅಗಸನಿಗಿಕ್ಕಿದರೆ ಅದವಲ್ಲ

ಬಾರೋ ಬಳಗಾರ ವೂಡಯ್ಯ ಗುಡಾರವ

ನೀಡೆ ಚೌಡಮ್ಮ ನಿಜದೋಳ | ಬಾವಾಕೆ

ಈಡು ಕಳುವಾರ ದೊರಗೋಳು

ಬಳೆಯ ತೊಟ್ಟಾಳೆ ಬಣ್ಣಾವ ಉಟ್ಟಾಳೆ

ಚೆನ್ನದ ತೂಬಾನ ದರಿಸಾಳೆ | ಚೌಡಮ್ಮ

ಬಿಳಿಕುದುರೆಮ್ಯಾಲೆ ವೊರಟಾಳೆ

ಬಿಲ್ಲ ಯಿಡಕೊಂಡು ಬೀದೀಲಿ ಬರುವೋಳೆ

ಬಿಲ್ ಕಂಡರಕ್ಕಿ ಬೆದರಾವೋ | ಚೌಡಮ್ಮ

ನಿನ್ನ ಸೋಲ್‌ಕಂಡು ಕ್ರಿಷ್ಣ ಸುಳುದಾನು

ಒಡವೆ ದರಸ್‌ಕೊಂಡು ಎಲ್ಲಿಗೋದಿ ಚೌಡಮ್ಮ
ಊರಲ್ಲಿ ಮಕ್ಕು ಅಳುತಾರೆ । ಚೌಡಮ್ಮ
ಯಾವಾಗ ಬಂದಿ ಯೇಳೋಗು

ಈಗ ವೊಯಿತೀನಿ ನಾಳೀಕೆ ಇರುತೀನಿ
ನಾಳಿದ್ದು ನಾನು ಬರುತೀನಿ । ನನ್ನ ಮಕ್ಕ
ಬೀದೀಲ್ಲಿ ನೀವು ಸುಕಿಬಾಳು

ಪಲ್ಲವಿಗಳು

ಅಬ್ಬಾಕೆ ಸಾರಾರಲ್ಲಿ
ನಾಲೋರ್ ಅಣ್ಣದೀರು
ಬಾಳೆ ಚಪ್ಪರನಾಕಿ
ಅಬ್ಬಾನೆ ಮಾಡ್ತಾರಲ್ಲೆ

ಮೊಂಬಾಳೆಲ್ಲೊಡದಿ ಬಾರೇss
ಚೌಡಮ್ಮ ನುಚ್ಚಕ್ಕಿಲಿ ನುರುದಿ ಬಾರೇ
ನೀ ಕುದುರೇಮ್ಯಾಲ್ ಕುಣಿದಿಬಾರss

ಚೌಡಮ್ಮ ನುಚ್ಚಕ್ಕಿಲಿ ನುರುದಿ ಬಾರೇ

ನೀ ಕುದುರೇಮ್ಯಾಲ್ ಕುಣಿದಿಬಾರss

ಚೌಡಮ್ಮ ನೀ ಚೂಜೀಮ್ಯಾಲೇರಿ ಬಾರೆ

ಮನೆಗೆ ಬಾರೋ ತಮ್ಮss

ಮಗನಾ ಮುದ್ದಾಡಿ ಮೋಗೋ

ಮಲ್ಲೀಗೆ ಪೂವ ತಂದಿss

ಚೆಲ್ಲೋ ರಾಣಿಯ ಮೇಲೆ

ಬಾರಕ್ಕ ನೀರಿಗೋಗಾನss

ಕೆಂಪೀನ ಕುದುರೋರು

ಸಂಪನ್ನೋ ವೊರಟವರೆ

ತಾಳಕ್ಕ ನೋಡೋಗೋಣss

ನಿಲ್ಲವ್ವ ನಿನ್ನೆ ತಾಯಿss

ಕಿನ್ನುಡಿ ಕಿರುಗೆಜ್ಜೆ

ಕಿವಿಗೆ ನಾಗರ ಮುತ್ತು

ನಿಲ್ಲಂದರೋಗುತ್ತಾಳೆss

ಗಂಧ ಬಂದಾವೆ ನೋಡss
ಸಾಮಂಜಿ ದುರ್ಗಾದ
ಶ್ರೀರಾಮು ತ್ವಾಟಾದ
ಮೊಗ್ಗೆ ಬಂದಾವೆ ಮುಡಿಯೇss

ಅವಳುದ್ದ ಕಾಲಲಿ ವೊಯಿತಾಳಲ್ಲೆ ss
ದಕ್ಕಾದ ವೊಯಿತಾಳಲ್ಲಿ
ದೊಡ್ಡದೊಂದುದ್ದೀನಿ ಚಿಕ್ಕೆರೆ ಬಯಲಲ್ಲಿ
ಸಿಕ್ಕಾದ ವೊಯಿತಾಳಲ್ಲೆ ss

ಏಳವ್ವ ಏಳುತಾಯಿss
ಏಳು ಲಿಂಗನ ಪೂಜೆ
ಎಷ್ಟೊತ್ತು ಶಿವಪೂಜೆ
ಏಳವ್ವ ಬೆಳಗಾಯಿತುss

ಅನ್ನದಿರಿ ಅನ್ನದರುಳss
ಕೆಂಜರುಗಣ್ಣಮ್ಮಾನ

ಕೆಂದಾವರ ಮುಕದೋಳ

ಮುಟ್ಟದಿರಿ ಮುತ್ತಿನರುಳss

ಉರಿಯೋದ ಕೊಂಡಾಕಾಣೆss

ಉರಿಯೋ ಕೊಂಡಾವ

ತಿರುಗಿ ನೋಡಲು ಬ್ಯಾಡ

ತುಳಿಯೋದೆ ಕೆಂಡ ಕಾಣss

ಬದ್ರೆ ಬಜ್ಣಾಣೆ ಕಾಣೆss

ಅವಳಿದ್ದ ಗೌಡಾನಾ,

ಮಂಕು ಮರುಳು ಮಾಡಿ

ಮಜ್ಜನಕೆ ವೊರಟಾಳಲ್ಲೇ ss

ಏನೇನ ಇಕ್ಕಿದಾಳೆss

ಚಿನ್ನದ ಕಿರೀಟ ತೊಟ್ಟಿದಾಳೆ

ಗಿಲಿಗಿಲಿ ಅಂಬೋ ಗಿಲಾಕು ಮಂಚಕ್ಕೆ

ಚೌಡಮ್ಮ ಏರ್‍ಯೆss

ಅವಳ್ಯಾಕೆ ನಿಂತವಳ್ss
ಬಲು ಜೋಕಲಿ ನಿಂತವಳ
ಕಾಸಿ ಸೀರೆ ಕೈಯ್ಯಲ್ಲಿಡಕೊಂಡು
ಮಾತಿಗೆ ನಿಂತವಳss

ಅಕ್ಕ ಬಾರೇ ಜಾತರಿಗೆ
ಶಿವರಾತರೀiss
ದುಂಡಿ ಚೌಡಮ್ಮನ ತೇರಿಗೆ
ಅಂದಾದ ಬೆಂಗಳೂರಿಗೆss

ತಾಯಿ ಎಲ್ಲಿದ್ದಾಳೆss
ತಾಯಿ ವೂವಿನ ಗುಡ್ಡಲಿದ್ದಾಳೆ
ತಾಯಿ ಮೊಗ್ಗಿನ ಪೂಜೆಲಿದ್ದಾಳೆss

ಬೀದಿಬೀದಿಂಬ ಬುಡುರss
ಬಿನ್ನಾಣಿ ಚೌಡಮ್ಮ ಬೀದೀಲಿ ಬರುವಾಗ
ರಾಜ ಬೀದೀಯ ಬುಡುರss

ನಗಾರಿ ಬಡುದಾವೆ

ನವನಿವಿಯ ಗುಡಿಯ ಮುಂದೆ

ನವೀಲು ಕುಣುದಾವ

ದೂಪಾದ ಏರು ಕಾಣೆss

ಚೌಡಮ್ಮ ತೋಪಲ್ಲ ಗಮಲಾ ಕಾಣೆss

ಒಂದೊಂದೆ ಯಚ್ಚೆ ಕಾಣೆss

ಚೌಡಮ್ಮ ಮುಗ್ಗುನ್ ಪಲ್ಲಕ್ಕಿ ಕಾಣೆss

ತ್ವಾಟಕೋದಾಳೆ ವಳ್ಳ ವೂವ ಕೂದಾಳೆss

ಕುಕ್ಕೆ ತುಂಬಾಳೆ ಅವಳು ಶಿವನ ಬೇಡಾಳೆ

ಜಗ್ಗು ತಾಳೆ ಜಂಪನಾಡುತ್ತಾಳೆss

ಬಾಗುತ್ತಾಳೆ ಅವಳು ಗುಡಿಗೋಗುತಾಳೆss

## ಹಳವರ ಪದಗಳು

### ಪ್ರಾರ್ಥನೆ

ನಂಬಿದಾ ಸರುಣರಿಗೆ ನಿಂಬುನಾಗಿ ಬಾರೋ ಸ್ವಾಮೀ

ಸುರುವಂತ ಮಳುದೇವರೇ ಬೆಳೆವಂತೆ ಬೂಮುತಾಯೇ

ನಿನ್ನ ಪಾದಕೆ ತಾಯಿ ಮತ್ತೊಂದು ಸರುಣಮ್ಮಾ

ಅಕ್ಕ ನಾಗಮ್ಮನ ಮಗನೇ ಚಿಕ್ಕವನೇ ಚನ್ನಬಸವಾ

ಯಾರಿಗುಂಟು ಯಾರಿಗಿಲ್ಲಾ ಲೆಕ್ಕವಾದಾ ಬಸವಣ್ಣಾ

ಮತ್ತೊಂದು ಸಾರೀ ನಿನಗೇ ಸರಣಂದು ಪದ ಯೇಳುವ

## ಚೌಡಮ್ಮ ಬಂದು ನೆಲೆಸಿದ್ದು

ತ್ರಿಪುರಾಪುರಿ ಪಟ್ಟವೆಂದರೆ ಆಕಾಸದಲ್ಲಿ ಇಲ್ಲಾ

ಆಕಾಸದಲ್ಲಿ ಇಲ್ಲಾ ಬೂಮೀಯಾ ವಳಗೇ ಇಲ್ಲಾ

ಮಧ್ಯ ಅಂತರಿಕ್ಷದಲ್ಲಿ ತೂಗಾಡುತಾ ಇರುವೋದಲ್ಲ

ತೂಗಾಡುತ್ತಾ ಇರುವೋದು ತ್ರಿಪುರಾನ ಮಕ್ಕಳಲ್ಲ

ತ್ರಿಪುರಾನ ಮಕ್ಕಳು ಏಳುಮಂದಿ ಇರುವೋರಲ್ಲ

ತ್ರಿಪುರಾನ ಮಕ್ಕಾಳು ಸಿವಸರಣೇರೇಳು ಮಂದೀ

ಏಳುಮಂದಿ ಮಕ್ಕಾಳೆಲ್ಲ ಒಬ್ಬಾರೀಗೆ ಮಕವನ್ನೇ

ಒಬ್ಬಾರೀಗೇ ಮಕಾವನ್ನೇ ತೋರದೇ ಇರುವರಲ್ಲಾ

ಮಾಯಾಕಾರ ಕ್ರಿಷ್ಣನೂ ಸಾವಕಾರ ಮಂದೀಯನ್ನೇ

ಸಾವಕಾರ ಮಂದೀಯಾ ಸಿರಿಯರ ಮಾನುಬಂಗ

ಮಾನುಬಂಗ ಮಾಡಿದನಲ್ಲ ತ್ರಿಪುರಾನ ಮಕ್ಕಳು ಮಾತ್ರ

ತ್ರಿಪುರಾನ ಮಕ್ಕಾಳು ಸಿವಸರಣೇರ್ ಮಕಾವ ದರ್ಸನ

ಮಕದರ್ಸನ ಮಾಡಲಿಲ್ಲ ಇದಕೇನು ಉಪಾಯವಾ

ಇದಕೇನು ಉಪಾಯ ಮಾಡಬೇಕು ಎಂದು ಕೃಷ್ಣ

ಆಗಾಲೆ ತನ್ನಲ್ಲಿ ತಾನೇ ಯೋಚನೇ ಮಾಡಾನಲ್ಲಾ

ತನ್ನಲ್ಲಿ ತಾನೇಯ ಯೋಚನೆ ಮಾಡಿದೋನು

ಒಂದಾನೆ ಕಪ್ಪೆಯ ವಡದೂ ಕೊಂಡಾನಲ್ಲಾ

ಕಪ್ಪೆಯ ವಡಕೊಂಡು ಚರ್ಮಾವ ಸುಲಕೊಂಡು

ಚರ್ಮಾವ ಸುಲಕೊಂಡು ಬಿದುರಾ ಕಡ್ಡಿಯಾ ವರದೂ

ಬಿದುರಾ ಕಡ್ಡಿಯ ವರದೂ ಮಾಯಕಾರ ಕೃಷ್ಣನಲ್ಲಾ

ಮಾಯಾಕಾರ ಕೃಷ್ಣನು ಬುಡುಬುಡಕೆ ಮಾಡವನಲ್ಲಾ

ಬುಡುಬುಡಕೆ ಮಾಡುಕೊಂಡು ವಯಾ ಸಪ್ಪಾಡಾ

ಸಪ್ಪಾಡಾ ಸರುವೊತ್ತುನೊಳಗಲ್ಲಿ ವೋದಾನಾ

ತ್ರಿಪುರಾಪುರೀ ಪಟ್ಟದಲ್ಲಿ ಏಳಿದಾನೆ ಬೀದಿಯಲ್ಲಿ

ಏಳಾನ ಬೀದಿವಳಗೇ ಏನಂತ ಸಾರನಲ್ಲಾ

"ಈ ತ್ರಿಪುರಾಪುರಿ ಪಟ್ಟ ಆಳಾಗೀ ವೊಯ್‌ತಾದಲ್ಲ

ಆಳಾಗಿ ವೊಯ್‌ತಾದೆ ಇದಕೇನು ಮಂತ್ರವನ್ನೂ

ಇದಕೇನು ಮಂತ್ರಾವು ಇದಕೇನು ತಂತ್ರವನ್ನೂ

ಮಾಡಬೇಕು ಏಂದಾರೆ ತ್ರಿಪುರಾನ ಮಕ್ಕಾಳೆಲ್ಲಾ

ತ್ರಿಪುರಾನ ಮಕ್ಕಾಳು ಏಳು ಜನ ಸಿವ ಸರಣೇರು

ಸಿವಸರಣೀರು ಏಳು ಜನ ಕಲ್ಲು ನೀರು ಕರಗೋ ವೊತ್ತು

ಕಲ್ಲು ನೀರು ಕರಗೋ ವೊತ್ತಿ ಒಳಗವರೀಗಾ

ಮೂಡು ಚಾರಿರುವಂತೆ ಕೆರೆಯಾನ ಏರಿಮ್ಯಾಲೆ

ಸುಕ್ರವಾರದ್ದಿನ ನಿಸಿರಾತ್ರೆ ಯಾಳ್ಯದಲ್ಲಿ

ಕೆರೆಯ ಏರಿಯಮ್ಯಾಲೆ ಒಂದೊನ್ನಳ್ಳಿ ಸಸಿಯಾದ್ರೆ

ಒಂದಾನೆ ಬೆಟ್ಟುಗಾತ್ರ ವುಟ್ಟಾನೆ ಇರುವೋದಲ್ಲಾ

ವೊನ್ನಳ್ಳಿ ಸೊಸಿಯಾನೆ ಸುಕ್ರುವಾರದಾ

ರಾತ್ರೆಗೋಗಿ ರಾತ್ರೆಗೆ ವೋಗೀ ಅವರು ಅಕ್ಕಸಾಗಂದಾವಲಾ

ತಿಗುಳಿಯ ತಂಬಿಟ್ಟು ಗೊನೆಬಾಳೆ ಅಣ್ಣ ತಗದೂ

ಸುಕವಾರ್‍ದ ರಾತ್ರೆಗೋಗಿ ಅವರಾದ್ರೆ ತಣ್ಣೀರ್‌ಸ್ತಾನ

ತಣ್ಣೀರ್‌ಸ್ತಾನ ಮಾಡೀ ಉಟ್ಟಿದಾ ನಿರ್ವಾಣ ಬಂದೂ

ಏಳುಜನ ಸಿವಸರಣೀ ವೊನ್ನಳ್ಳಿ ಸಸಿಯಾನಲ್ಲಾ

ಅಕ್ಕಷ್ಟೇ ಗಂದವನ್ನೇ ಇಟ್ಟಿಗ ಸೊಸಿಗೇ ಅವರು

ಗಂದಾ ಚಂದ್ರವನ್ನೇ ಇಟ್ಟು ಪೂಜೆಯ ನಡೆಸೀ

ಏಳುಜನ ಸಿವಸರಣೀರ್ ಅಳ್ಳಿ ಸಸಿಯಾನೆ ತಬ್ಬಿ

ಅಳ್ಳಿಯ ಸಸಿಯಾನೆ ತಬ್ಬು ತ್ರಿಪುರಾಪುರಿ

ತ್ರಿಪುರಾಪುರಿ ಪಟ್ಟಣಾವು ಉಳ್ಳುದೇಯ ಕೊಳ್ಳುವುದೂ

ಇಲ್ಲಾದೆ ವೋದರೆ ಪಟ್ಟ ಆಳಾಯ್ತುದೇ?

ಎಂದು ಕೃಷ್ಣಾನವನೂ ಸಾರುತ ಬಂದನಲಾ

ಸಾರುದ್ದ ನೋಡುಕೊಂಡು ಏಳುಜನ ಸಿವಸರಣೀರು

ಏಳು,ಜನ ಕುಂತುಕೊಂಡು ಮಾತನೇ ಆಡಾರಲಾ

"ಬಾರು ಬಾರೆ ನನ್ನಕ್ಕ ತಂಗೇದೀರೇ ಕೇಳಿರಮ್ಮಾ

ನಮ್ಮ ಪಟ್ಟವೂ ಆಳಾಗುವುದೆಂದೂ ಈಗ

ಬುಡುಬುಡುಕೆ ತಿಮ್ಮಣ್ಣ ಸಾರುಬುಟ್ಟು ವೋದನಲಾ

ನಮ್ಮಿಂದ ಯಾಕಮ್ಮ ಪಟ್ಟ ಆಳಾಗಬೇಕು
ಬುಡುಬುಡುಕೆ ತಿಮ್ಮಣ್ಣ ಹೇಳಿದಂಗೆ ಸುಕ್ರುವಾರ
ಸುಕ್ರುವಾರ ರಾತ್ರೆಗೋಗಿ ವನ್ನಳ್ಳಿ ಸಸಿಯಾನಾದ್ರೂ
ವನ್ನಳ್ಳಿ ಸಸಿಯಾನಾದ್ರೂ ಪೂಜೇಯ ನಡಸಾಬೇಕು?
ಪೂಜೇಯ ನಡುಸಾಬೇಕು ಅಂತಾವ ಮಾತನಾಡುದ್ರು
ಸುಕ್ರುವಾರದ್ದಿನ ಅಕ್ಕಸಾದ ಗಂದ ಚಂದ್ರಾ
ಸಪ್ಪಡಾ ಸರುವೊತ್ತು ನಿಸುರಾತ್ರೆ ಯಾಳ್ಯದಲ್ಲಿ
ಮೂಡಚಾರೀ ಕೆರೆಯಾ ಏರಿಮ್ಯಾಲೆ ವೋದಾರಲ್ಲಾ
ಏರಿಮ್ಯಾಲೇ ನೋಡುತಾರೆ ಬೆಟ್ಟು ಗಾತ್ರ ಸೊಸಿಯಲ್ಲ
"ಬನ್ನಿರೆ ನಮ್ಮಕ್ಕಾ ಬುಡುಬುಡುಕೆ ತಿಮ್ಮಯ್ಯ
ಏಳೀದಾ ಮಾತಮ್ಮ ನಿಜವಾಗೀ ಬಂದೀತಲ್ಲಾ
ಬನ್ನಿರೆ ನಮ್ಮಕ್ಕ ನೀರಾನೆ ಮುಳುಕಿ ನಾವೂ
ಅಳ್ಳಿಯ ಸೊಸಿಯನ್ನ ಪೂಜೇಯ ನಡೆಸಾಬೇಕು
ಆಗಲೇ ಏಳುಜನ ಬಟ್ಟೆ ಬರೀ ಕಳೆದಾರಲ್ಲಾ
ಬಟ್ಟೆಬರೀ ಕಳಾದವರೂ ಕೆರೆಯಲ್ಲಿ ಸ್ನಾನಮಾಡೀ
ಕೆರೆಯಲ್ಲಿ ಸ್ನಾನಮಾಡೀ ಏರಿಮ್ಯಾಕೆ ಬಂದಾರಲ್ಲಾ
ವನ್ನಳ್ಳಿ ಸೊಸಿಯಾ ಉಟ್ಟಿದಾ ನಿರ್ವಾಣದಲ್ಲಿ
ಉಟ್ಟಿದಾ ನಿರ್ವಾಣದಲ್ಲಿ ಅಕ್ಕಸ್ತೇಗಂದಾವಲ್ಲಾ
ಗಂದಾ ಚಂದ್ರಾ ಇನ್ನೂ ಪೂಜೇಯ ನಡುಸಾರಿಲ್ಲಾ

ಪೂಜೇಯ ನಡುಸೂಬುಟ್ಟು ಏಳೂ ಜನ ಮಾತನಾಡೀ

ಏಳು ಜನೂ ಕೈಕಟ್ಟೆ ಕಟ್ಟೆಯಕೊಂಡಾರಲ್ಲಾ

ಏಳು ಜನೂ ಕೈಕಟ್ಟೇ ಕಟ್ಟುಕೊಂಡು ನಿಲ್ಲುವಾಗಾ

ಏಳಾ ತೆಬ್ರೂಗೆ ಅಡೀದಂಗೆ ಆಗೋಯ್ತುಲ್ಲಾ

ಏಳಾ ತಬ್ಬಿಗೆ ಅಡೀದಂಗೆ ಆಯ್ತು ಅಂದೂ

ಅಳ್ಳಿಯ ಮರವನ್ನೇ ಅಮ್ರುಸಮ್ರುಸೇ ತೆಬ್ಬಾರಲ್ಲಾ

ಅಮ್ರುಸಮ್ರುಸೀ ತಬ್ಬವಾಗಾ ಮಾಯಾಕಾರ ಕೃಷ್ಣನಲ್ಲಾ

ಇವರೊಬ್ಬರಿಗೇ ಒಬ್ಬರು ತಬ್ಬಾದ ನೋಡುಬುಟ್ಟು

ಪಕ್ಕಾರನೆ ನಕ್ಕಾನಲ್ಲಾ ಮಾಯಾಕಾರ ಕೃಷ್ಣನಲ್ಲಾ

"ಮಾಯಾವಿ ಕೃಷ್ಣನಿವನೂ ಅಯಾ ಸೊಸಿಯಾಗಿ

ನಮ್ಮಾನೆ ಮಾನುಬಂಗ ಮಾಡೇಯ ಬುಟ್ಟಾನಲ್ಲಾ

ನಮ್ಮಾನೆ ಪತಿವ್ರತ ದರ್ಮಾವ ತೀರಿಸಿದನಲ್ಲಾ

ಕೃಷ್ಣಾನ ಸೆರೆಗೆ ಸಿಕ್ಕೀ ಇನ್ನಾದ್ರೆ ಈ ಪಟ್ಟಣದೊಳಗೇ

ತ್ರಿಪುರಾಪುರಿ ಪಟ್ಟಾನೆ ಸೇರಾಕೆ ಇಲ್ಲ"  ಅಂದೂ

ಒಬ್ಬಾಳೆ ಚೌಡಮ್ಮನ ಒಡ್‌ಸ್ಕೊಂಡು ವೋದಾನಲ್ಲಾ

ಯಮ್ಮನಳ್ಳಿ ಬೂಮಿಯಲ್ಲಿ ಮುಚ್ಚು ಮಾಳೆ ಆಕಿ ಅವಳೂ

ಮುಚ್ಚ ಮಾಳೇವಳಿಗೇ ಸೇರೆಯಾ ಕೊಂಡಾಳಲ್ಲಾ

ಇನ್ನೊಬ್ಬ ಚೌಡಮ್ಮ ಬೇವೂರೂ ಬೂಮೀಗೋದ್ಲು

ಬಲ್ಲೇ ಚವಡೀ ಅಂದೂ ಬಲೆಬುಡುಸಿ ಸೇರಾಳಲ್ಲಾ

ಇನ್ನೊಬ್ಬ ಚೌಡಮ್ಮ ವಳಸೀಮೆ ಬಿದ್ದಾಳಲ್ಲಾ

ವೊಳೆಯಾ ಚೌಡೀ ಅಂದೂ ಯಸರಾನೆ ಪಡೆದಾಳಲ್ಲಾ

ಇನ್ನೊಬ್ಬ ತಾಯಿಯವಳು ನಿಡಸಾಲೆಗೆ ಬಂದಾಳಲ್ಲಾ

ನಿಡಸಾಲೆ ಬೂಮಿಯಲ್ಲಿ ಸೇರೇಯಾ ಕೊಂಡಾಳಲ್ಲಾ

ಇನ್ನೊಬ್ಬ ಚೌಡಿಯೂ ಕಸ್ತುಗ ಗೋದಾಳಲ್ಲಾ

ಕಸ್ಲುಗರೇಬೂಮಲ್ಲಿ ನೆಲಗೊಂಡು ನಿಂತಾಳಲ್ಲಾ

ಮತ್ತೊಬ್ಬ ಚೌಡಮ್ಮ ಹೊನಗಾನಗೋದಾಳಲ್ಲಾ

ಹೊನಗಾನಳ್ಳಿ ಬೂಮೀಯಲ್ಲಿ ವಾಸವಾಗಿ ಇದ್ದಾಳಲ್ಲಾ

ಇನ್ನೊಬ್ಬ ಚೌಡಮ್ಮ ಹಿಂದೂವೇ ಇದ್ದಂತಾ

ಹಿಂದೂವೇ ಇದ್ದಂತೆ ವಿಕ್ರಮರಾಜ್ಯ ಪಟ್ಟವಲ್ಲಾ

ವಿಕ್ರಮನ ಪಟ್ನಾದಲ್ಲಿ ಸಾಸನಾದಾ ಕಲ್ಲು ಇತ್ತು

ಸಾಸುನಾದಾ ಕಲ್ಲಾನೋ ಓದ್ದಂತ ಮನುಸೋನೀಗೇ

ತಲೆಯೇ ಸಾಸ್ತು ಕೋಟೇ ಹೋಳೆಂದು ಬರುದಿತ್ತು

ಅಂತಾ ವಿಕ್ರಾಮನ ಪಟ್ಟದಲ್ಲಿ ಬಂದೂ ತಾಯೀ

ಅಲ್ಲೇಯ ಉಜ್ಜನೀ ಚೌಡಿ ನೆಲೆಸಿಕೊಂಡಾಳಲ್ಲಾ

ಎಡದಲ್ಲಿ ರಾಕ್ಸಿಯೂ ಬಲದಲ್ಲಿ ರಾಷ್ಟ್ರೀಯೂ

ರಾಕ್ಸರಾ ಪಡೆದೂ ಉಜ್ಜನೀ ಬೂಮಲ್ಲೇ

ಉಜ್ಜನೀ ಮಾನ್ಯವರೂ ನಮ್ಮನೆ ದೇವರೆಂದೂ

ತಾಯನ್ನೇ ಪೂಜಿಸಿಕೊಂಡು ಮುಂಗೊಂಡ ಮಾಡರಲ್ಲಾ

ಅಂತಂಬೋ ಚೌಡೇಸ್ವರಿಯಾ ಪಡೆದಂತ ಮಾನ್ಯವರೆಲ್ಲಾ

**ಹೆಬ್ಬಾರಮ್ಮ**

ಉಜ್ಜನಿಯಾ ನಗರಾದಲ್ಲಿ ಮನ ಬಾಗದಾ ಯಬ್ಬಾರಮ್ಮ

ಮನಬಾಗದಾ ಯಬ್ಬಾರಮ್ಮ ಬ್ರಾಂಬ್ರಾ ಮಗಳಲ್ಲಾ

ಅಂತೆಂಬೋ ಯಬ್ಬಾರಮ್ಮಾ ಒಬ್ಬಾ ತಂದೆಗೊಬ್ಬಳು ಮಗಳೂ

ಒಬ್ಬಾ ತಂದೆಗೊಬ್ಬಾ ಮಗಳೂ ತಂದೇ ಜೊತೆಲೇ ಇರುವಾಗ

ಜಾತೀಯೂ ಗೊತ್ತಿಲ್ಲಾ ಕುಲುವಾದ್ರೆ ಗೋತ್ತು ಇಲ್ಲಾ
ಪರದೇಶದಿಂದ ಒಬ್ಬಾ ಹುಡುಗ ಅಲ್ಲಿಗೆ ಬಂದಾನಲ್ಲಾ
ಹುಡುಗನ್ನ ಕೇಳೋದ್ರಲ್ಲಿ ನಾನೂವೇ ಬ್ರಾಂಟ್ರೋನು
ನಾನುವೆ ಬ್ರಾಂಬು ಎಂದು ಯೇಳಿಯೆ ಬುಟ್ಟಾನಲ್ಲಾ
ಬಂದಂತೆ ಹುಡುಗನಾ ಗಂಡೂಮನ್ನು ನನಾಗಿಲ್ಲಾ
ಗಂಡೂಮನ್ನು ನನಾಗಿಲ್ಲ ನಮ್ಮನೆಲೇ ಇರು ಎಂದಾನಲ್ಲಾ
ಇರು ಎಂದು ಯೇಳೀದಾಗ ಉಂಡುತಿಂದು ಬೆಳೆದಾನಲ್ಲಾ
ಬ್ರಾಹ್ಮಣಯ್ಯ ತನ್ನ ಮಗಳಾ ಅವನಿಗೆ ಕೊಟ್ಟಾನಲ್ಲಾ
ಅವನೀಗೆ ಲಗ್ನ ಮಾಡೀ ತನ್ನಾನೆ ಸತ್ತೂವಂದೂ
ಸ್ವತ್ತು ಸ್ವಾದೀನ ಇವನಿಗೇ ಮಾಡಾನಲ್ಲಾ
ಬ್ರಾಂಬ್ರಯ್ಯ ಮಗಳಾ ಮನೆಯಲ್ಲಿ ಇದ್ದಾ ಮನುಜಾ
ಆಗಾಲೇ ಮನೆಯಲ್ಲಿ ಸುಕವಾಗಿ ಬಾಳುತ್ತಾರೆ
ಸುಕವಾಗಿ ಬಾಳಿದರೂ ಒಂದು ಎರಡು ಮಕ್ಕಳಾದೋ
ಒಂದು ಎರಡು ಮಕ್ಕಳಾದೋ ಇವನ್ನೆತ್ತಾ ತಾಯಲ್ಲಾ
ದೇಸಾದೇಸಾದ ಮ್ಯಾಲೆ ತಡೀಕೊಂಡು ಬರುತಾಳಲ್ಲಾ
ದೇಸದಲ್ಲಿ ಜನಗೋಳು ಉಜ್ಜನಿಯಾ ನಗರಾದಲ್ಲಿ
ಉಜ್ಜನಿಯಾ ನಗರಾದಲ್ಲಿ ಮಗನಿರುವಾ ಎಂದಾರಲ್ಲಾ
ಕೇಳುಕೊಂಡು ಬಂದವಳು ವೊಲಮಾಳಕೆ ಮಗನ್ ಕರದೂ
ನೆಲೆಯಾನ ಕೇಳಾದ್ರಲ್ಲಿ ಸಣ್ಣಹುಡುಗಾನ

“ನೀನಾದ್ರೆ ಕಂದಾ ಇಲ್ಲಿ ಬಂದು ಈಗಾ

ನೀನಾದ್ರೆ ಯಾರ ಮಲ್ಲಿ ಸೇರಿದ್ದಿ ಏಳಪ್ಪಾ ಅಂದ್ಲು”

“ಬಾರೆ ಬಾರೆ ನನ್ನ ತಾಯಿ ತಡಕೀಹುಡಕೀ ಬಂದೆ ನೀನು

ಬಂದಂತಾ ಮಗನಿಗೆ ನೋಡುದಲ್ಲಾ ತಾಯಿ ನೀನೂ

ನಾನದ್ರೆ ಇರುವೋದು ಬ್ರಾಮರಾ ಮನೆಯಲ್ಲಿ

ಈತರ್‌ದಲ್ಲಿ ನೀನು ಬಂದ್ರೆ ನಿನ್ನಾನೆ ಸೇರೋದಿಲ್ಲಾ

ತಲೆಯನ್ನೇ ಚವುರಾ ಮಾಡಸಿ ವೊಸಬಟ್ಟೆ ತಂದಾನಲ್ಲಾ

ವೊಸಬಟ್ಟೆ ತಂದೂ ಅವಳಿಗೆ ಉಡಸಾಕೊಂಡೂ

“ನಿನಾದ್ರೆ ನನ್ನ ತಾಯಿ ನನ್ನತ್ತೆ ಮಾವ ಕೇಳುದ್ರೇ

ನಾನೂವೇ ಬ್ರಾಂಬ್ರೋಳು ಅಂತಾವ ಯೇಳಮ್ಮ”

ಅಂಗಂದು ತಾಯಿಗೆ ಬುದ್ಧಿವಾದವನ್ನೇ ಹೇಳಿ

ಆಗಾ ಕಂಗಾಮಗನೂ ಮಾವಾನ ಮನೆಗೆ ಕರದೂ

ತಾಯನ್ನೇ ಕರಕೊಂಡು ವೋದಂತಾ ಕಾಲದಲ್ಲೀ

ಅತ್ತೆ ಮಾವನೂ ತನ್ನ ಯೆಂಡತೀ ಎಲ್ಲಾ

ಈವಮ್ಮ ಯಾರಿವಳು ಈಗ ಬಂದಿರುವೋಳೆಂದೂ

ನಿಂದಿಸೀ ಅವರೂ ಕೇಳುವಂತಾ ಕಾಲದಲ್ಲಿ

"ಸಣ್ಣಾ ಹುಡುಗಾನಲ್ಲಿ ಮುನುಸ್‌ಕೊಂಡು ನಾಬಂದೇ

ನನ್ನಾನೇ ತಾಯಿ ಕೈಗೆ ಇಲ್ಲಿವರೆಗೆ ಸಿಕ್ಕಾಲಿಲ್ಲಾ

ಈಗಲಾದ್ರೆ ನನ್ನ ತಾಯಿ ತಡಕೀ ಹುಡಕೀ ಬಂದಾಳಲ್ಲಾ

ನನ್ನಾನೇ ತಾಯಿ ಕೈಗೆ ನಾನಾದ್ರೆ ಸಿಕ್ಕಿವನಲ್ಲಾ

ನನ್ನಾನೇ ಕಂಡೀಗ ನನ್ನ ತಾಯಿ ದುಕ್ಕ ಮಾಡೀ

ದುಕ್ಕವ ಮಾಡಬ್ಯಾಡ ಸುಕವಾಗಿ ಇವನೀನಾನೂ

ಎರಡಾರೇ ದಿವಸಾ ನೀನೂ ಬ್ಯಾಸಾರಾವ ಕಳಕೊಂಡೂ

ನಿನ್ನಾನೆ ಸೊಸೆಯನ್ನೇ ನಿನ್ನಾನ ಮೊಮ್ಮಕ್ಕಳನ್ನೇ

ನೀನಾದ್ರೆ ನೋಡಿಕೊಂಡೂ ವೋಗುವೇ ಬಾ ತಾಯಿ

ಎಂದೂ ನಾನಿಲ್ಲಿಗೆ ಕರಕೊಂಡೂ ಬಂದೇ ಎಂದ

ಬ್ರಾಂಬ್ರಯ ಬಾಂಬೊನ್ ಯೆಂಡತೀ ಇಬ್ಬರೂವೇ

ಬಾಳ ಪ್ರೀತಿಯನ್ನೇಗೊಂಡಾರು ಈಗ ಗುರುವೇ

ಇಷ್ಟು ದಿನೂವೆ ಬರದಿದ್ದ ಅಮ್ಮ ನೀನೂ

"ಈಗೆಂಗೆ ಕಂಡೂ ಬಂದಮ್ಮ ನೀನೂ' ಅಂದು

ಯುವರಾಸೀ ಆ ಮುದುಕಿಯ ಕೇಳಿಯಾ ಕೊಂಡಾರಲ್ಲಾ

ಅಜೀಬಾಜೀ ಜನವೂ ಇಲ್ಲವನೆ ಏಂದೀಗಾ

ಹೇಳಿದಾ ಮಾತನ್ನ ಕೇಳಿನ್ನು ಬಂದೆನಲ್ಲಾ

ನನ್ನಾನೆ ಮಗನೂ ನನ್ನ ಕಣ್ಗೆ ಕಂಡಾನಲ್ಲಾ

ನನ್ನಾನೇ ಮಗನೂ ನೋಡೀ ಸಂತೋಸ ಪಟ್ಟಾನಲ್ಲಾ

ಅಂಗಂದಾ ಮಾತಿಗೆ ಬ್ರಾಂಬ್ರನು ಏನಂದಾ

"ಬಾರಮ್ಮ ತಾಯಿ ನೀನೂ ನಮ್ಮಲ್ಲಿ ನಾಲ್ಕು ದಿವಸಾ

ಇದ್ದಾವ್ರೆ ನಿನ್ನ ಮನೆಗೆ ವೋಗೂವೇ"   ಎಂದನಲ್ಲಾ

ಅಂಗಂದಾ ಮತಿಗೆ ಬ್ರಾಂಬ್ರೋನ ಮನೆಯಲ್ಲಿ

ಮುದುಕೀಯೂ ಇದ್ದಾಳು ನಾಲ್ಕಾರು ದಿವಸಾವಲ್ಲಾ

ಸೇರೇಯಾ ಕೊಂಡಾಳು ಸೇರುವಾ ಕಾಲದಲ್ಲಿ

ಕಣ್ಣೀಗೇ ಬೇಕಾದ ಅಡುಗೇಯ ಮಾಡ್ತಾರಲ್ಲಾ

ದಿನ ಒಂದು ತರದಡಗೆ ಊಟಾನೆ ಬುಡುಸಾರಿಲ್ಲಾ

ನಾಲ್ಕಾನೇ ದಿವಸದಾ ವ್ಯಾಲೆ ಮುದುಕೀಯ ಸೊಸೆಯಲ್ಲಾ

"ಬಾರೇ ಬಾರೇ ಅತ್ತಮ್ಮ ಊಟಾದ ರುಚಿ ಎಂಗೇ

ಊಟಾದ ರುಚಿ ಎಂಗ ಯೇಳಮ್ಮ"   ಅಂದಾಳಲ್ಲಾ

ಅಂಗಂದಾ ಮಾತಿಗೆ ಈ ಮುದುಕಿ ಇದ್ದವಳಲ್ಲಾ

"ಬಾರೇ ಬಾರೇ ಸೊಸೆ ನೀನು ಎಂತೇಯ ಊಟಾ ಮಾಡೇ

ಎಂತೇ ಊಟಾ ಮಾಡುದ್ರೆ ಏನಮ್ಮ ಅಂದಾಳಲ್ಲಾ

ಒಂದೆಮ್ಮೆ ಕರುವೀನ ಕರೀಕಾಲು ಸಮ್ಮಂದಾವೂ

ಕರ್‌ಕಾಲನ ಸಮ್ಮಂದ ಬರೋದಿಲ್ಲ"   ಎಂದಾಳಲ್ಲಾ

ಅಯ್ಯಯ್ಯೋ ಬಗವಂತಾ ನಮ್ಮನೇ ತಂದೆತಾಯಿ

ನಮ್ಮನೆ ತಂದೆತಾಯಿ ಇಂತಾವರೂ ಎಂದು

ಇಂತಾವರೂ ಎಂದು ಯುವಾರಿಸಿ ನೋಡಾದ

ಯುವಾರಿಸಿ ನೋಡಾದೆ ನನ್ನನ್ನೇ ಲಗ್ನ ಮಾಡೀ

ಲಗ್ನಾವ ಮಾಡ್‌ಬುಟ್ರು ನಮ್ಮ ತಂದೆ ತಾಯಿದೀರೂ

ನಾನಾದ್ರೆ ಇನ್ನೀಗ ಜನ್ಮಾವ ಮಡುಗಬಾರೂ

"ಬಾರೋಬಾರಯ್ಯ ನೀನು ನಿನ್ನ ಜಾತಿ ಯೇಳಾದೇ

ನಿನ್ನ ಕುಲವಾ ಯೇಳಾದ ನನ್ನ ಲಗ್ನವಾದೇ ನೀನೂ

ಆದಾರೆ ನೀನು ನನಗೆ ಮಾಡುದಾ ತಪ್ಪಿಗೇ

ಇನ್ನು ನಾನಾದರೆ ಜನುಮಾನ ಮಡುಗೋದಿಲ್ಲಾ

ನಾನಾದ್ರೆ ಪ್ರಾಣಾವಾ ಬುಟ್ಟೆಯಾ ಬುಡುವೇನಲ್ಲಾ

ನಾನಾದ್ರೆ ಮನೆದೇವು ಹೆಬ್ಬಾರಮ್ಮನಾಗುವೆನಲ್ಲಾ

ಹೆಬ್ಬಾರಮ್ಮನಾದರೇ ನನಗಾದ್ರೆ ನೀನು ಈಗ

ನನಗಾದ್ರೆ ನೀನೀಗ ವರುಸಕೊಂದೂ ಸಾರಿಯಲ್ಲಾ

ಅನ್ನೆರಡೂ ದಿವಸಾವೂ ಅರ್ಧ ಊಟವು ನಿನಗೇ

ಬಾಯ್‌ಕಟ್ಟು ನಿನಗಿರಲಿ ಮೇಲುಮುಸುಗು ನಿನಗಿರಲಿ

ಅನ್ನೆರಡೂ ದಿನದವರಗೂ ಜನಿವಾರ ನಿನಗಿರಲಿ

ನನ್ನಾನೇ ನೀನೀಗ ವೊತ್ತು ಮೆರುಸೋ ಅಂದ್ಲು

ನನ್ನಾನೇ ನಿನಾದ್ರೆ ವೊತ್ತು ಕುಣಿಯೋ" ಅಂದ್ಲು ತಾಯಿ

ಮಜ್ಜಿಗೆ ಕಡೀವಂತೆ ಕಡಿಯಾನೇ ಕಂಬವಲ್ಲಾ

ಅಗ್ಗಾವಾ ತಕ್ಕೊಂಡು ನೇಣಾಕಿ ಕೊಂಡಾಳಲ್ಲಾ

ನೇಣಾಕಿ ಅವಳಿನ್ನು ಪ್ರಾಣಾವಾ ಬಿಟ್ಟಾಳಲ್ಲಾ

ಅಂತ ಉಜ್ಜನಿ ಬೂಮಲ್ಲಿ ಹೆಬ್ಬಾರಮ್ಮನೆಂದೂ

ಬ್ರಾಂಬ್ರಾ ಮಗಳೂ ಹೆಬ್ಬಾರಮ್ಮ ವಡದೂ ಮೂಡೀ

ಆಗಲೇ ಅವಳೂ ನೆಲೆಗೊಂಡಾ ಯಾಳ್ಯಾದಲ್ಲಿ

ಅವಳಾ ಗಂಡಾನೂ ಹೊಲೆರೋನು ಪೂಜಾರೀ

ಅಂತೆಂಬೋ ಹೆಬ್ಬಾರಮ್ಮನ್ ವೊತ್ತಿನ್ನು ಮೆರಸಾನಲ್ಲಾ
ಅಂತಂಬೋ ಹೆಬ್ಬಾರಮ್ಮನ ಸರಣೂ ಸರಣ

**ಉಜ್ಜನಿಗೆ ಗೌಡರು ಬಂದು ನೆಲೆಸಿದ್ದು**

ದಿಲ್ಲಿ ವಿಜೇನಗ್ರಾ ಪಟಾದಿಂದಾ ಬಂದವರಲ್ಲಾ
ಬಂದೂ ಅವರೀಗ ಅಮೃತೂರ ಸೇರಾರಲ್ಲಾ
ಅಮೃತೂರಾ ಬೂಮಿಯಲ್ಲೇ ಅವರಾದ್ರೆ ಮನೆಯಮಾಡಿ
ಅಮೃತೂರಾ ಬೂಮಿಯಲ್ಲಿ ನೆಲಗೊಂಡು ನಿಂತಾರಲ್ಲಾ
ಚಿಕ್ಕನಾರಸೀಗೌಡನೂ ಚಿಕ್ಕಕೆರೆ ಕಟ್ಟುಸ್ತಾನಲ್ಲಾ
ದೊಡ್ಡನಾರಸೀಗೌಡನೂ ದೊಡ್ಡಾಕೆರೆ ಕಟ್ಟುಸ್ತಾನಲ್ಲಾ
ದೊಡ್ಡಕೆರೆ ಕಟ್ಟುಸ್ತಾ ಇರುವಂತೇ ಕಾಲದಲ್ಲಿ
ವತ್ತಾರೆ ಯಿಡುದೂ ಸಂದೇಯವರೆಗೂ ಗುರುವೇ
ಕೆರೆಯಾ ಏರಿಯನ್ನೇ ಸರಿಯಾಗಿ ಮಾಡೀ ವೋದ್ರೇ
ಕೆರೆಯೂ ಆದ್ರೆ ಮದ್ಯಾದಡದೂ ವೋಗುತ್ತದಲ್ಲಾ
ಮದ್ಯಾದಲ್ಲಿ ವಡರೂ ಪ್ರತಿನಿತ್ಯ ವೋಗುತದಲ್ಲಾ
ಕೆರೆಯಾದ್ರೆ ನಿಲ್ಲಾದಿಲ್ಲಾ ಕುಣಿಗಲ್ ಚಿಂತಾಮಣಿಯಾ
ಚಿಂತಾಮಣಿಯಾ ಸಾಸ್ರಾನಾದ್ರೆ ಕೇಳಾಬೇಕು ಎಂದೂ ಗೌಡಾ
ಪೋದೋನು ಕಣಿಯಾ ಚಿಂತಾಮಣಿಯಲ್ ಕೇಳವನಲ್ಲಾ
ಚಿಂತಾಮಣಿ ಸಾಸ್ತ್ರಾದಲ್ಲಿ ಏನಂದು ಯೇಳಾನಲ್ಲಾ
"ನಿನ್ನಾನೆ ಹಿರಿಯಾ ಸೊಸೆಯಾದ್ರೆ ಹೊನ್ನಮ್ಮ ಇರುವಾಳಲ್ಲಾ

ಹಿರಿಯಾ ಸೊಸೆ ಹೊನ್ನಮ್ಮನ ಆವತಿಯಾ ಕೊಟ್ಟರೀಗಾ

ಕೆರೆಯಾದ್ರೆ ನಿಲ್ಲುತಾದೆ ನರಸಗಯ್ಯಾ ಗೌಡಾ ನೀನೂ

ಇಲ್ಲಾದೇ ವೋದರೇ ನಾರಸೀಗೌಡ ಕೆರೆಯೆಲ್ಲಾ ನಿಲ್ಲೋದಿಲ್ಲ"

ಅಂಗಂದ ಮಾತೀಗೇ ನಾರಸೀಗೌಡ ಇದ್ದವನೂ

ಕೆರೆಯಾನೆ ಯಿಡಿದು ನಮಗೇ ಅವಮಾನ ಆಯಿತಲ್ಲಾ

ನನ್ನಾನೆ ಹಿರಿಯಾ ಸೊಸೆಯನೆಂಗೆ ಅವತೀಯಾ ಕೊಡಲೀ

ಎಂದವನು ಬಹು ದುಕ್ಕ ಮಾಡಿದ ನಾರಸೀಗೌಡಾ

ಬಹುಚಿಂತೆ ಮಾಡಿಕೊಂಡು ಮನೆಗಾದ್ರೆ ಬಂದಾನಲಾ

ಮನೆಗಾದ್ರೆ ಬಂದವನು ಅನ್ನವಾ ಉಣ್ಣಾಲಿಲ್ಲ

ಅನ್ನವನ್ನು ಉಣ್ಣಾದೆ ಅವನೂ ತಲೆಮ್ಯಾಲೇ ಬಟ್ಟೆ ಆಕೀ

ಮಕವನ್ನೇ ಸಪ್ಪಗೆ ಮಾಡೀ ಮಾತಾಡ್ದೆ ಕುಂತವನಲ್ಲಾ

ಹಿರಿ ಸೊಸೆ ಹೊನ್ನಮ್ಮ ಬಂದವಳು ಕುಂತೂಕೊಂಡೂ

"ಬನ್ನಿ ಬನ್ನಿ ಮಾವಯ್ಯ ಮಕವೆಲ್ಲಾ ಸಪ್ಪಾಗದೇ

ಕೆರೆಯಾದ್ರೆ ನಿಲ್ಲಲಿಲ್ಲ ಅಣವಾದ್ರೆ ತೀರೋಯ್ತುಂದೂ
ಯೋಚನೆ ಬಂದೀತೆ ಕೊರಯೂ ಬಂದೀತೇನೋ
ಏಳಿ ಏಳೀ ಮಾವ ಯೋಚನೆಯಾ ಮಾಡಬೇಡೀ"   ಅಂದ್ಲು
"ಬಾರೇ ಬಾರೇ ಸೊಸೆಯಮ್ಮ ಏನಂದು ಯೇಳಲಿ ತಾಯಿ
ಕೆರೆಯಾದ್ರೆ ನಿಲ್ಲೋದಿಲ್ಲಾ ಸಾಸ್ತ್ರಕ್ಕೆ ನಾನೋದೇ
ನನ್ ಮನೆ ಹಿರಿಸೊಸೆ ಹೊನ್ನಮ್ಮನ ನಾನೀಗಾ
ಅವುತೀಯಾ ಕೊಡಬೇಕೆಂದೂ ಕೇಳೇಯ ಕೊಂಡೀತಲ್ಲಾ
ನಿನ್ನನ್ನೆ ನಾನೀಗ ಕೆರೆಗಾವುತೀ ಕೊಟ್ಟೂತಾಯಿ
ನಾನೆಂಗೆ ಬೂಮಿಮ್ಯಾಲೆ ಜೀವಿಸಿ ಇರಾಲೆಂದೂ
ನನಗಾದ್ರೆ ಚಿಂತೆ ಬಂತು ದುಕ್ಕಾವು ಬಂದೀತಲ್ಲಾ"
"ಇದಕ್ಯಾಕೆ ಚಿಂತೆ ಮಾವ ಇದಕ್ಯಾಕೆ ದುಕ್ಕಾ ಮಾವ
ನಾನಾದ್ರೆ ಆ ಕೆರೆಯಾ ನಡುವೀಗ ವೋಗಿ ನಾನೂ
ನಡುವೀಗೆ ವೋಗಿನ್ನು ಕುಂತೇಯಾ ಕೊಳ್ಳುವೇನೂ
ನೀನಾದ್ರೆ ಕೆರೆಯನ್ನೇ ಸರಿಯಾಗಿ ಕಟ್ಸ್ ಮಾವಾ
ಅಂಗಂದ ತಾಯಿ ಅವಳು ಹೊನ್ನಮ್ಮ ಇದ್ದವಳೂ
ವಡವೇ ಆಬರಣಾವ ತೊಟ್ಟೆಯ ಕೊಂಡೂತಾಯಿ
ದೊಡ್ಡಕೆರೆ ನಡುವಿಗೆ ವೋಗೇ ಕುಂತಾಳಲ್ಲಾ
ವಡ್ಡಾರು ಆಗಾಲೇ ಕೆರೆಯಾ ಕಟ್ಟದಾರೂ
ವಡುವಿನಾತಾವೋಗಿ "ತಾಯಿ ಹೊನ್ನಮ್ಮ"   ಎಂದೂ

ಅತ್ತೆಮಾವಂದೀರೂ ಅಕ್ಕತಂಗೇದೀರೂ

ಕೂಗಿ ಮಾತಾಡ್ಸುದ್ರೆ ಮಾತನ್ನೇ ಆಡುವಳಲ್ಲಾ

ಒಂದಾನೇ ಕಾರ್ಯಾಕೆ ನಿನ್ನೊಡವೆ ಬೇಕು ಅಂದ್ರೇ

ತೂಬಾನಾ ಕಲ್ಲಿನಮ್ಯಾಲೆ ಬೆಳಕರಿಯೋ ಹೊತ್ತಿಗಲ್ಲಾ

ವಡವೇನಾದ್ರೆ ಹೊನ್ನಮ್ಮ ಗುಟ್ಟೇನೇ ಆಕಾಳಲ್ಲಾ

ವಡವೇ ತಕ್ಕೊಂಡು ವೋಗಿ ಅವರ ಕಾರ್ಯಮಾಡೀಕೊಂಡೂ

ಅವರಾದ್ರೆ ವಡವೇ ತಂದೂ ಅಲ್ಲಿನ್ನು ಮಡುಗುತಾರಪ್ಪಾ

ಆ ವಡವೇ ಹೊನ್ನಮ್ಮ ತಗದಿನ್ನು ಮಡುಗುವಳಲ್ಲಾ

ಹೊನ್ನಮ್ಮಾ ಹೊನ್ನಮ್ಮ ಅಂತಾವಾ ವೋದಬಂದ ಜನವೆಲ್ಲಾ

ಎಲ್ಲಾರು ಕೂಗುದುರೆ ಮಾತಾನೇ ಆಡುವಳಲ್ಲಾ

ಹತ್ತಾರು ದಿನವೂ ಅದನೇ ಮಾಡ್ತಾರಲ್ಲಾ

ಅಲ್ಲೊಬ್ಬ ಕೆಟ್ಟು ಮುಂಡೆ ಹೊನ್ನಮ್ಮಾ ಎಂದು ಕೂಗೀ

ಏನವ್ವಾ ಅಂದಾಗ ಅವಳೇನು ಅಂದಾಳಲ್ಲಾ

"ಇನ್ನೂವೆ ನಿನ್ನಾನೇ ಸೊಲ್ಲು ಬೆಲ್ಲಾವಂದೂ
ಆಗಲಿಲ್ಲವೇ ಹೊನ್ನಮ್ಮ" ಅಂತಾವ ಅಂದಾಳಲ್ಲ
ಅಲ್ಲಿಂದ ತಾಯಿಗೆ ಹೊನ್ನಮ್ಮನ ಸದ್ದಲ್ಲೀಗೇ
ತೀರೇಯಾ ವೋಯಿತಲ್ಲಾ ಮುಗದೇಯ ವೋಯಿತಲ್ಲಾ
"ಹೊನ್ನಮ್ಮಾ ಹೊನ್ನಮ್ಮಾ ವಡುವಿನಾ ಹೊನ್ನಮ್ಮಾ" ಎಂದು
ಎಷ್ಟಂದ್ರೂ ಆಗಿನ್ನೂ ಕೂಗಿದ್ರು ಮಾತಿಲ್ಲಾ
"ನಾವೂ ಇನ್ನಿಗಾ ಅಮೃತೂರ ಬೂಮಿಲ್ಲಿ
ಅಮೃತೂರ ಬೂಮಿಲ್ಲಿ ಇರುವೋದೇ ಸರಿಯಿಲ್ಲಾ
ಇರುವೋದೇ ಸರಿಯಿಲ್ಲಾ" ಎಂದೀಗ ಅಣ್ಣತಮ್ಮಾ
ಅಣ್ಣತಮ್ಮದೀ ಮಾತಾಡಿ ಗಾಡೀಯ ಕಟ್ಟುಕೊಂಡು
ಮುಂದಾಲಾ ದಿಸಕಾದ್ರೆ ನಾವಿನ್ನೂ ಹೋಗಬೇಕೆಂದೂ
ಗಾಡೀಯ ವಡಕೊಂಡು ಬರುವಂತಾ ಕಾಲದಲ್ಲಿ
ಉಜ್ಜನಿ ಎಂಬವ ಸ್ಥಳಕೆ ಅವರು ಬಂದಾರಲ್ಲಾ
ಉಜ್ಜನಿಯ ಭೂಮಿಯಲ್ಲಿ ಗಾಡೀಯ ಬುಟ್ಟು ಇವರೂ
ಅಡುಗೆ ಅನ್ನವಾ ಮಾಡೀ ಉಣ್ಣುವಾ ಕಾಲದಲ್ಲಿ
ಮಣ್ಣಾನೆ ಹಿಡುದಾರೆ ಹೊನ್ನಾಯ್ತಾ ಬತ್ತೂಗುರುವೇ
"ಇದೇಯಾ ಬೂಮಿಯಲ್ಲಿ ತಳವನ್ನೇ ಮಾಡಬೇಕೂ"
ಎಂದವರು ಉಜ್ಜನಿಯ ಬೂಮಲ್ಲಿ ನೆಲಗೊಂಡೂ

ತರಗಾನೇ ಗುಡಸೀ ಮನೆಯನ್ನೇ ಮಾಡಿದರಲ್ಲಾ

ಮನೆಯನ್ನೇ ಮಾಡಿದುರೂ ತ್ರಿಪುರಾರಿಯ ಪಟ್ಟಣದಿಂದ

ತ್ರಿಪುರಾಪುರಿ ಪಟ್ಟಣದಿಂದ ಬಂದಲ್ಲಿ ಸೇರಿದ್ದಳಲ್ಲಾ

ಬಂದಲ್ಲಿ ಸೇರಿದ್ದವಳಲ್ಲಾ ಮನೆಬಾಗ್ಲ ಚೌಡೇಶ್ವರಿಯೂ

ಅಂತೆಂಬೋ ಚೌಡೇಶ್ವರಿಗೆ ಕರವೆತ್ತಿ ಕಯ್ಯ್ಯಾಮುಗುದೂ

"ತಾಯೀ ಚೌಡೇಶ್ವರಿಯೆ ನನ್ನ ಕಷ್ಟ ಕಾಯಿ ತಾಯಿ

ನಿನಗೇ ನಾವಾದ್ರೆ ಕೊಂಡಾಬಂಡೀ ಮಾಡೇವ

ಮುಂದೆ ಹುಟ್ಟಿದಾ ಮಕ್ಕ ಹೆಸರನ್ನೇ ಕೊಟ್ಟೇವಮ್ಮಾ

ನಿನ್ನಾನೆ ಹಬ್ಬ ಜಾತ್ರೆ ನಡಸೇ ನನ್ನವು ತಾಯಿ

ಎಂದವರು ಇವರೀಗ ಕರವೆತ್ತಿ ಕೈಯಾಮುಗುದೂ

ಚೌಡೇಶ್ವರಿಯನ್ನೇ ಮನೆದೇವರೂ ಅಂದುಕೊಂಡು ಅವರೂ

ಉಜ್ಜನಿ ಬೂಮಲ್ಲಿ ವಾಸಾವಾ ನಡಸಾರಲ್ಲಾ

ಅಂತೆಂಬೋ ಚೌಡೇಶ್ವರಿಯೇ ವಂಸ ಉದ್ದಾರ ಮಾಡೀ

ಮುಂಗೊಂಡಾ ಕುಲದೋಳೂ ಮೂಡು ಬಾಕಲಿನೋಳೂ

ಅಂತೆಂಬೋ ಚೌಡೇಶ್ವರಿಯಾ ಕಾದೂ ಪಡದವರಲ್ಲಾ

ಬಂದ ಕಷ್ಟ ಬಯಲಮಾಡೀ ಇದ್ದ ಕಷ್ಟ ಪರಿಹರಿಸೀ

ಮನೆಗೇ ಮಕ್ಕಳಾಕೊಟ್ಟು ಮತ್ತೂ ಭಾಗ್ಯವಕೊಟ್ಟು

ಉದ್ಧರಿಸೂವಂತೇ ಚೌಡೇಶ್ವರಿ ಪಡದಾರಲ್ಲಾ

## ಭಾಗವಂತಿಕೆ ಪದಗಳು

**ಪ್ರಾರ್ಥನೆ**

ಗಜಮುಕ ಪಾಲಿಸೋ ಗನಮತಿಯ

ಗಜವೊಂದು ನಿಪಕೊಡೋ ನಿಜಗುಣ ಮತಿಯ ||ಪಲ್ಲವಿ|*

ಹೊನ್ನುವಾದದ ಗೆಜ್ಜೆ ಕಡಗ ಕಾಲಂದಿಗೆ

ಚೆನ್ನಾದ ವೊಡ್ಡಿವಾಣ ಭರಣ ಕಿರೀಟಕೆ

ಎಳ್ಳು ಸಕ್ಕರೆ ಬೆಲ್ಲ ಒಳ್ಳೆ ತೆಂಗಿನಕಾಯಿ

ಒಳ್ಳೊಳ್ಳೆ ಪಾಲು ಬಾಳೆಯ ಹಣ್ಣು

ಬಳ್ಳಾಬಳ್ಳಾದಿಂದ ದಿಳ್ಳಿದಿಳ್ಳಿ ದೂಪಕೆ

ಒಂದಿರುಳಿಗೆ ತಂದರು ಮೊದಲಿರುಳೆ

**ಚೌಡಮ್ಮ**

ಚೌಡಮ್ಮ ಕುಂದಾಣದ ಕೋಟೆ ಮನೆಯೋಳೆ ||ಪಲ್ಲವಿ|| *

ಎಳೆಸೊಸಿ ಎಲೆಯೋಳೆ ಮಳೆಪೈರ ಮುಡಿಯೋಳೆ

ಪದ್ಮವೊಂದಣ ತೋರ ರಾಣಿಯೇ

ಸಾಜ ಹರಿಬಂದ ಮಾತಾಡಮ್ಮ

ಬೃಂದಾವನ ದೇವಿ ರುಘುಬಂದ ಮಾತಾಡಮ್ಮ

ಪಚ್ಚೆಯ ಮುಡಿಯೋಳೆ ಪಾಲಿಸಿ ಮೆರಿಯೋಳೆ

ಅಚ್ಚ ಕಂಕಣನ್ಯಾರ ಕೋಮಾಲೆ

ಮಚ್ಚರವಾನರಿಯಾದ ಮರದಲ್ಲಿರುವೆ

ಅಚ್ಯುತ ಹರಿಬಂದ ಮಾತಾಡಮ್ಮ

ಕಂಕಣ ಕೈಯೊಳೆ ಬಂದೀಯ ಸುಖದಂಡೆ

ಕುಂಕುಮ ಕಸ್ತೂರಿ ಮೈಯ್ಯವಲೆ

ಅಂಕಾದ ಲೆಂಖೆಯ ಪರಿಮಳ ಶಿವಶಂಖು

ಚಿತ್ರಾದ ಹರಿಬಂದ ಮಾತಾಡಮ್ಮ

---

* ಪ್ರತಿ ಎರಡು ಸಾಲಿಗೊಮ್ಮೆ ಮೇಲಿನ ಪಲ್ಲವಿಗಳನ್ನು ಹಾಡಿಕೊಳ್ಳಬೇಕು.

ಮೀರಬಾರದೋ ವಿಧಿಯ ಮೀರಬಾರದೋ

ಸೇರುಸ್ಥ ಹಣೆಯಲ್ಲಿ ಬರೆದಂತ ಬರಹ ||ಪಲ್ಲವಿ|*

ಮಾರಿ ಮಸಣಿ ದುರ್ಗಿ ಚೌಡಿ ಕೋಣವಾ ಕಾಯಲೀ

ವೀರಭದ್ರ ತಮ್ಮತಾಯ ಶಿರವ ಹರಿಯಲಿ

ವಿನಾಯಕನೊಬ್ಬನಾ ಹೊಟ್ಟೆ ಹೊಡೆಯಲಿಲ್ಲವೇ

ಕಾಲಬೈರವವೆಂಬರೆಲ್ಲ ಕದ್ದೆ ಹೋದರೋ**

---

* ಪ್ರತಿ ಎರಡು ಸಾಲಿಗೊಮ್ಮೆ ಮೇಲಿನ ಪಲ್ಲವಿಯನ್ನು ಹೇಳಿಕೊಳ್ಳಬೇಕು.

* ಈ ಪದವನ್ನು ಹೆಚ್ಚಾಗಿ ಮಾರಮ್ಮನ ಮೇಲೆ ಹಾಡುತ್ತಾರೆ. ಕೆಲವರು ಚೌಡಮ್ಮನಿಗೂ ಅನ್ವಯಿಸಿ ಹಾಡುತ್ತಾರೆ. ಆದರೆ ಇಲ್ಲಿ 'ಮಾರಿಮಸಣಿ' ಎಂದೂ 'ಕೋಣನಕಾಯಲಿ' ಎಂದೂ ಬರುವುದರಿಂದ ಈ ಪದ ಮಾರಮ್ಮನಿಗೇ ಅನ್ವಯಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

**೪. ತಿಮ್ಮಮ್ಮ**

ಹಿತ್ತಲಪುರದಲ್ಲಿ ಈಗ ಎಲ್ಲರಿಗಿಂತ ಹೆಚ್ಚಾಗಿ ವಯಸ್ಸಾದ ಮದುಕಿ ಇವರೇ, ವಯಸ್ಸು ಸುಮಾರು ೧೦೦ರ ಮೇಲೆ. ಹುಟ್ಟಿದ ಊರು ಉಜ್ಜನಿಯ ಸನಿಹದಲ್ಲೇ ಇರುವ ದೇವಸಂದ್ರ. ಕೊಟ್ಟದ್ದು ಹಿತ್ತಲಪುರಕ್ಕೆ, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳುಗಳನ್ನು ನೋಡುವ ಭಾಗ್ಯ ಇವರದು. ಆದರೂ ಮಕ್ಕಳೆಲ್ಲ ಬಡವರಾದರು, ಕಾಲ ಮೊದಲಿನ ಹಾಗಿಲ್ಲ ಎನ್ನುವ ಕೊರಗು. ಹಿಂದೆ ಸೋಬಾನ ಪದ ಹಾಡುವುದರಲ್ಲಿ, ಚೌಡಮ್ಮನ ಪದಗಳನ್ನು ಹಾಡುವುದರಲ್ಲಿ ಇವರು ಪ್ರಸಿದ್ಧಿ. ಇವರಿಂದ ಇವರ ಮೊಮ್ಮಕ್ಕಳನೇಕರು ಪದ ಕಲಿತಿದ್ದಾರೆ. ಇವರಿಗೆ ಅನೇಕ ನಾಟಿ ಔಷಧಿಗಳೂ ಗೊತ್ತು. ಇವರಿಂದ ಜಾನಪದ ಕ್ಷೇತ್ರಕ್ಕೆ ಇನ್ನೂ ಉಪಕಾರವಾಗಬೇಕಾಗಿದೆ. ಇವರು ಜೀವಿಸಿರುವಾಗಲೇ ಅವುಗಳನ್ನು ಸಂಗ್ರಹಿಸಬೇಕೆಂಬುದೇ ನನ್ನ ಆಸೆಯಾಗಿದೆ.

**೫. ನಾಗಮ್ಮ**

ಪ್ರಸಿದ್ಧ ಹಾಡುಗಾರ್ತಿ ಆಲಮ್ಮನ ಮಗಳು ಈಕೆ. ಹರಿಜನರು. ವಯಸ್ಸು ಸುಮಾರು 25. ಹುಟ್ಟಿದು ಉಜ್ಜನಿ, ಕೊಟ್ಟದ್ದು ಉಜ್ಜನಿ, ಈಗ ಕೂಲಿಮಾಡಿ ಜೀವನದ ಮುನ್ನಡೆ ಇವರ ತಾಯಿಯಿಂದ ಅನೇಕ ಮಾದರಿಯ ಹಾಡುಗಳನ್ನು ಈಕೆ ಕಲಿತಿದ್ದಾರೆ.

**೬. ಮಲ್ಲಯ್ಯ ಮತ್ತು ಸಂಗಡಿಗರು**

ಮದ್ದೂರು ತಾಲ್ಲೂಕು ಮಲ್ಲನಾಯ್ಕನಹಳ್ಳಿಯ 'ಹಳವರ ಮನೆತನದ ಹಿರಿಯರು. ವಯಸ್ಸು ಸುಮಾರು ೭೫ ವರ್ಷ. ಮೊದಲು ಒಕ್ಕಲಿಗರ ಮನೆಗಳಿಗೆ ಹೋಗಿ ಕುಲವನ್ನು ಮನೆದೇವರನ್ನು ಹಾಡಿಹೊಗಳಿ ಜೀವನ ಸಾಗಿಸುತ್ತಿದ್ದರು. ಈಗ ವ್ಯವಸಾಯದಿಂದ ಸ್ವತಂತ್ರ ಜೀವನ ನಡೆಸುತ್ತಿದ್ದಾರೆ. ನಾನು ಹೋಗಿ ಇವರನ್ನು ಕಂಡು ನನ್ನ ಅಪೇಕ್ಷೆಯನ್ನು ತಿಳಿಸಿದಾಗ ನಮ್ಮೂರಿಗೆ ಬಂದು ರಾತ್ರಿಯೆಲ್ಲ ತಾಳ್ಮೆಯಿಂದ ಹಾಡಿದರು. ನಂತರ ಆಶೀರ್ವದಿಸಿ ಅವರ ಊರಿಗೆ ಹೋದರು.

**೭. ಉಜ್ಜನಿ ಟೋಪಿಹುಚ್ಚೇಗೌಡ**

ವಯಸ್ಸು ಸುಮಾರು ೮೦ ವರ್ಷ, ಒಕ್ಕಲಿಗರು, ಕಣ್ಣು ಆಗಲೇ ಮೊಬ್ಬಾಗಿವೆ. 'ಗುರುಬೋಧನೆ' ತೆಗೆದುಕೊಂಡು ಶಿವಶರಣರಾಗಿದ್ದಾರೆ. ನನ್ನ ತಂದೆಯವರೂ ಗುರುಬೋಧನೆ ತೆಗೆದುಕೊಂಡಿರುವುದರಿಂದ ಹುಚ್ಚೇಗೌಡರಿಗೆ ಆತ್ಮೀಯ ಸ್ನೇಹಿತರು. ಇವರು ನಮ್ಮ ಸಂಬಂಧಿಗಳೂ ಹೌದು.

ಭಾಗವಂತಿಕೆ ಪದಗಳ ಅಳಿವಿನ ಬಗೆಗೆ ಇವರಿಗೆ ತುಂಬಾ ದುಃಖವಾಗಿದೆ. ಅವುಗಳನ್ನು ಉಳಿಸುವವರು ಒಬ್ಬರೂ ಇಲ್ಲದೇ ಹೋದರು ಎಂಬ ಕೊರಗು. ಸುಮಾರು ೫೦ ವರ್ಷಗಳ ಹಿಂದೆ ಹಾಡುತ್ತಿದ್ದ ಪದಗಳನ್ನು

ಇಂದಿಗೂ ಜ್ಞಾಪಕದಲ್ಲಿಟ್ಟುಕೊಂಡಿರುವುದು ತುಂಬಾ ವಿಸ್ಮಯವಾಗಿದೆ. ಇವರು ಯಾವಾಗಲೂ ಒಂದು ಟೋಪಿಯನ್ನು ತಲೆಗೆ ಅಡ್ಡ ಹಾಕಿಕೊಂಡಿರು ವುದರಿಂದ ಇವರಿಗೆ ಮೇಲಿನ ಅಡ್ಡಹೆಸರು ಬಂದಿದೆ.



**೮. ಉಜ್ಜನಿ ತೊಳ್ಳಿ ಬೋರೇಗೌಡ**

ಸುಮಾರು ೨೧ ಬಾರಿ 'ಕರಗ' ಹೊತ್ತು ಚೌಡಮ್ಮನ ಕೊಂಡ ಹಾಯ್ದಿರುವ ಇವರು ಈಗ ೮೦ ವರ್ಷದ ಮುದುಕರು, ಮುದುಕರಾದರೂ ಹರಯದ ಉತ್ಸಾಹ ಇದೆ. ಭಾಗವಂತಿಕೆ ಪದ, ಕೋಲಾಟ, ಜವಳಿಕುಣಿತ ಇಂತಹ ಕಲೆಗಳನ್ನು ಕಲಿಯದ ಈಗಿನ ಯುವಕರ ಬಗ್ಗೆ ಇವರಿಗೆ ಜಿಗುಪ್ಸೆ. ಊರಿನ ಅನೇಕ ಧಾರ್ಮಿಕ ಕಾರ್ಯಗಳಲ್ಲಿ ಮುಖ್ಯರಾಗಿ ಪಾಲ್ಗೊಳ್ಳುತ್ತಾರೆ. ಈಗ ಸಾಕಷ್ಟು ಬಡತನವಿದ್ದರೂ ದೇವರು ಕೊಟ್ಟಿದ್ದು ಸಾಕು' ಎನ್ನುವ ತತ್ವ ಇವರದು. ಆಧ್ಯಾತ್ಮದ ಬಗೆಗೆ ತುಂಬಾ ಒಲವು. ಇವರೂ ಗುರುಬೋಧನೆ ತೆಗೆದುಕೊಂಡಿದ್ದಾರೆ. ನನ್ನ ತಂದೆಯವರಿಗೆ ಆಪ್ತಸ್ನೇಹಿತರು.

ಇವರೂ ಹುಚ್ಚೇಗೌಡರೂ ನಮ್ಮ ಮನೆಗೆ ಬಂದು ಒಂದು ದಿನವಿದ್ದು ಒಟ್ಟಾಗಿ ಭಾಗವಂತಿಕೆ ಪದಗಳನ್ನು ಹಾಡಿ ನನ್ನನ್ನು ಆಶೀರ್ವದಿಸಿ ಹೋದರು. ಈ ಮುದುಕರಲ್ಲಿರುವ ಉತ್ಸಾಹ ನಮ್ಮ ಹಳ್ಳಿಯ ತಾರುಣ್ಯದಲ್ಲಿರುವವರಿಗೆ ಇಲ್ಲದಿರುವುದು ತುಂಬಾ ದುಃಖದ ವಿಷಯವಾಗಿದೆ. ಈ ಇಬ್ಬರು ಮುದುಕರೂ ಸಂಪ್ರದಾಯ ನಂಬಿಕೆಗಳ ಬಗೆಗೆ ಹಲವಾರು ವಿಷಯಗಳನ್ನು ತಿಳಿಸಿದ್ದಾರೆ.

**ಶಾಸನ**

ಸಉುಮ್ಯ ಸಂವತ್ಸರದಚಮಿತ್ರಸುಂಗು

ಶ್ರೀಮಂನುಮಹಾರಾಜಾಧಿರಾಜರಾಜಪ

ರಮೇಶ್ವರವಿಜಯಬುಕ್ಕರಾಯೊಡೆಯರಕುಮಾರರು

ಶ್ರೀವೀರಪ್ರತಾಪರಾಯಮಹಾರಾಯರಕಾಲ

ದಲಿಉಜೆನಿಯಬಯಿಚರಸರಮಕ್ಕಳುಚೇಮರಸರಿಗೆಆ

ಉಜೆನಿಯರಾಮಗುಡರಮಕ್ಕಳುಬಯಿಚರಸರಮಸ

ಣಗುಡರಮಕ್ಕಳುಮುತ್ತು ಗುಡನೊಳಗಾದ ಉಚನಿ

ಯಹಳಿಹಿರಿಯರಗಉಡುಪ್ರಜೆಗಳುಹೊಯ್ದಿಕೊಟ್ಟಕೊ
ಡಗಿಯಶಾಸನಾಚೇಮಗೃಹಾಸ್ತಾನಿಕರುವಂನಿಕ್ಕಿಊರಿಂದೂ

ಡಲು ಕೆರೆಯಕಟ ಹೇಳಿಒಡಂಬಡಿಸಿ ಕೊಡಗೆಯನುಸಾ

.....ಡಾಗಿ ಆಚೇಮರಸರ.....ನಾಗಿ ಅವರು ಕೆರೆಯಕಟಿಸಿ

..ಆಕೊಡುಗೆಯಗದ್ದೆ ಹೊಲಮನೆಆಗದ್ದೆ......ಯಿಕ್ಕುವಂ......

ಸಹವಾಗಿಯಿದ್ದನುಮುಗಚಂದ್ರನುನಕಸರ್ವಮಾನ್ಯವಾಗಿ ನಡಿಸಿ

ಬಡಉಆಕೊಡಗೆಯಚತುಸೀಮೆಕಲನುಹೂಯಿ....ಯಿಶಾಸ
ನವನುಹೊಯಿಸಿಕೊಟೆವಾಗಿಆರೋಬರುಯಿಕೊಡಗೆಯ ನಡೆಸೆ......

ದವರುವಾರಣಾಸಿಯತಡಿಯಲಿಕಪಿಲೆಯಕೊಂದುತಂನಶ್ರೀಗು



ರವತಲೆಯಹರಿಯಹೊಯಿದದೋಶಕ್ಕೆ ಹೋಹರು ಸ್ವಾಸನಮಾಂಸಕ್ಕುಸುರೆ

ಗುಯೆಲುಗಿದವರುಅನಾಮಿಕರಹುಟ್ಟಿದವರುರಾಯರು ದುಣಾಯ

ಕವಡೆಯರಪಾದಕೆಹದಿನೆಂಟುಸಮಹಕೆತಪ್ಪಿದವರುಯಿದನುಮಿ
ರೆಯಿಕೊಡಗೆಯನಡೆಸೆನೆಂದವ.....ನಾಡಾಗಿಕೊಂಡುಉಗಚಂದ್ರನು
ಳನಕಾಚೇಮರಸರಿಗೆನಾಉನಾಡಾಗಿಯಕೊಡಗೆಯನಡಸಿಕೊಂಡು

ವುವೆಂದುನಂಮಸ್ವರುಚಿಯಿಂದೊಡಂಬಟ್ಟುಹೊಯಿಸಿಕೊಟ್ಟಕೊಡ
ಗಿಯಸ್ವಸ್ತೆಯಿಶಸನವಹೊಯಿದಹುಲಿಊರಸೋಮನಾಥನಮ

ಗಾಆಲೋಜಗುಡಗಳೊಪ್ಪಶ್ರೀಚ ಉಡೇಶ್ವರೀದೇವಿ

## ಅರ್ಥಕೋಶ

ಅಂಕಳ - ಮನೆಯ ಒಂದು ತೊಲೆಗೂ ಮತ್ತೊಂದು ತೊಲೆಗೂ ಇರುವ ಅಂತರ

ಅಗಳ - ಅನ್ನದ ಅಗಳು ಅಗ್ಗಳ - ಹೆಚ್ಚಾದುದು

ಅಗ್ರಾರ - ಪಟ್ಟಣದ ಪಕ್ಕದ ಹಳ್ಳಿ

ಅಚ್ಚಂದ - ?

ಅಟ್ವಾರಲ್ಲ - ಅಡಿಗೆ ಮಾಡಿದರು

ಅಡ್ಡ - ಬಾಗಿದ ಬಿದಿರು ಕಡ್ಡಿಯ ಎರಡೂ ಕಡೆಗೆ ಕಟ್ಟುವ ಬಾರವಾದ ವಸ್ತು

ಅನ್ನದರುಳ -?

ಅಮ್ರುಸಮ್ರುಸೀ - ಬಿಗಿಯಾಗಿ ಹಿಡಿದುಹಿಡಿದು

ಅಯನೂರು - ಐನೂರು ಅರಮೋರಿ - ತಮಟೆವಾದ

ಅರುದಾಲಿ - ಕೊರಳಿಗೆ ಹಾಕುವ ತಾಲಿ

ಅಸುಮಕ್ಕು - ಎಳೆಯ ಮಕ್ಕಳು

ಆಡ್ಕೊಂಡು - ತೊಟ್ಟುಕೊಂಡು

ಆಗ್ರ - ಸುತ್ತಮುತ್ತಲ ಬಯಲು

ಆಂತಿ - ಕತ್ತೆತ್ತಿ ನೋಡುವುದು

ಆದಿ - ಒಟ್ಟಾಗಿ ಸೇರಿಸಿ (ಆಯ್ದುಕೊಂಡು)

ಆರಾಳ - ಹಾರುವುದು

ಆರೂರ - ಹಾರುವರ (ಬ್ರಾಹ್ಮಣರ)

ಆವರೆ - ಆಹುತಿ (ಬಲಿ) ಆಸಿಗಾಸಿ - ಓಡಿ ಬಂದು

ಆಳಾಯ್ತದೆ - ಹಾಳಾಗುತ್ತದೆ

ಇಕ್ಕಿದ್ದಾಳೆ - ತೊಟ್ಟುಕೊಂಡಿದ್ದಾಳೆ

ಇಂಗ್ಲೀಸತೊಟ್ಟವಳೆ - ?

ಇಣಕಿ - ಬಾಗಿ ಇಂಬ - ಭಾಗ

ಇಬ್ಬಣಿ - ಇಬ್ಬನಿ (ಬೆಳಗಿನ ಸಮಯದ ನೀರ ಬಿಂದು)

ಇಂಬಾಗಿ - ಚೆನ್ನಾಗಿ, ಇಸ್ತೆ - ಪ್ರಸಿದ್ಧಳಾದವಳು

ಇದ ತಟ್ಟೆ - ವೀಳ್ಯದ ತಟ್ಟೆ

ಈಡುಗಾಯಿ - ಹರಕೆ ಹೊತ್ತ ತೆಂಗಿನಕಾಯನ್ನು ಚೆಚ್ಚುವುದು

ಉಟ್ಟಿದ ನಿರ್ಮಾಣ - ಬೆತ್ತಲೆಯಾಗಿ

ಉತ್ತಮರ - ಒಳ್ಳೆಯವರ

ಉತ್ರಾಣಿ - ರಾಗಿ ಹೊಲದಲ್ಲಿ ಹುಟ್ಟುವ ಒಂದು ಜಾತಿಯ ಹೂ

ಉದುರು - ಕೆಳಗೆ ಬೀಳು, ಎಡನಿಲ್ಲ - ಬಿಡುವಿಲ್ಲ

ಎಡಗೆ - ಸಾಮಾನು ತುಂಬುವ ಬಿದಿರು ಬುಟ್ಟಿ

ಎಡೆ - ದೇವರಿಗೆ ಇಡುವ ಮೀಸಲು ಆಹಾರ

ಒಕ್ಕಲು - ಒಂದೇ ಮನೆದೇವರಿಗೆ ಸಂಬಂಧಪಟ್ಟ ಕುಟುಂಬಗಳು

ಒಳ್ಳಣ್ಣ - ಎಳ್ಳಿನ ಎಣ್ಣೆ ಒಲಿದಾಳೆ - - ಮೆಚ್ಚಿದ್ದಾಳೆ,

ಒಳಕಲ್ಲು - ರುಬ್ಬುವ ಕಲ್ಲಿನ ಗುಳಿ

ಕಂಕಳ - ಕೈಗೆ ಕಟ್ಟುವ ರಕ್ಷಾಸೂತ್ರ

ಕಂಚೋಳದೂವು - ಕಂಚುವಾಳ ಜಾತಿಯ ಹೂ

ಕಟ್ಟುನಿಟ್ಟು - ನಿಯಮಬದ್ಧ, ಕಗ್ಗನ - ಕಾಡಿನ

ಕಡಗ - ಕೈಗೆ ಹಾಕಿಕೊಳ್ಳುವ ಬೆಳ್ಳಿಯ ಆಭರಣ

ಕಡಾಯ - ಹಿತ್ತಾಳೆಯ ಕೊಳಗ

ಕಣಿ - ಶಾಸ್ತ್ರ, ಕದ - ಬಾಗಿಲಿನ ಹಲಗೆ

ಕದಲು - ಕೊಂಡ, ಕನ್ನೆ - ಯುವತಿ

ಕಯ್ಯೆಣ್ಣೆ - ಹರಳೆಣ್ಣೆ ಕರಡಿ - ದೇವರ ಪೂಜೆ

ಕರಿಕಾಲು - ಕರುವಿನ ಕಾಲು

ಕಸುಗಾಯಿ - ಎಳೆಕಾಯಿ

ಕರುಪುರ - ದೇವರಿಗೆ ಇಡುವ ಕರ್ಪೂರ

ಕಳಸಿಕೆ - ಮಣ್ಣಿನಿಂದ ಮಾಡಿದ ದೊಡ್ಡ ಮಡಿಕೆ

ಕಾಕಂಬಿ - ಕಬ್ಬಿನ ಪಾಕ ಕ್ಷಾಣೆ - ಅಡುಗೆ ಮನೆ

ಕಾಲಂದಿಗೆ - ಕಾಲಿಗೆ ಹಾಕಿಕೊಳ್ಳುವ ಬಳೆ

ಕಿನ್ನುಡಿ - ವಾದ್ಯ ಕಿರುಗೆಜ್ಜೆ - ಚಿಕ್ಕ ಗೆಜ್ಜೆ

ಕೀರುತಳ್ಳಾದೊಳಗೆ - ಪ್ರಸಿದ್ಧವಾದ ದಾರಿಯಲ್ಲಿ

ಕೀರುತುಳ್ಳೋಳಿಗೆ - ಪ್ರಸಿದ್ಧವಾದವಳಿಗೆ

ಕುಕ್ಕೆ - ತೆಂಗಿನ ಗರಿಯಿಂದ ಹೆಣೆದ ಬುಟ್ಟಿ

ಕುರ್ಜು - ಚಿಕ್ಕತೇರು ಕುಂದಾಣದ - ಚಿನ್ನದ

ಕುಂದಾನಿ ಮಳೆ - ? ಕುಳ - ಕುಟುಂಬ

ಕೂನಿ - ಕಬ್ಬಿಣದ ಅಗಲ ಬಾಯಿನ ಪಾತ್ರೆ

ಕೆಂಬುತ್ತಿ ಬತ್ತ - ಹೊಲದಲ್ಲಿ ಬೆಳೆಯುವ ಮುಂಗಡನ ಬತ್ತ

ಕೆಮ್ಮಣ್ಣು - ಕೆಂಪುಮಣ್ಣು

ಕೊಂಡದಸೌದೆ - ಕೊಂಡದ ಮರಗಳ ಹೊರೆ

ಕೊಡಲಿ - ಮರಕಡಿಯುವ ಆಯುಧ

ಕೋಡಿ - ಕೆರೆ ತುಂಬಿದ ನಂತರ ನೀರು ಹೋಗುವ ಸ್ಥಳ

ಕೊಪ್ಪರಿಕೆ - ಅಗಲ ಬಾಯಿನ ದೊಡ್ಡದಾದ ಕಬ್ಬಿಣದ ಪಾತ್ರೆ

ಗಗ್ರಾದ - ಗೆಜ್ಜೆಯ ಗಜನಿಂಬಿ - ನಿಂಬೆ ಮೆಳೆ

ಗಂಜಾಳ - ಹಸುವಿನ ಮೂತ್ರ

ಗಡಾಬಾಜು - ಹೆಚ್ಚು ಶಬ್ದ ಬರುವ ಮದ್ದು

ಗಡದ್ದಾದ - ಶಕ್ತಿಯುತವಾದ

ಗಡುಗಂಬ - ಎತ್ತರದ ದೀಪಸ್ತಂಬ

ಗಂಡು ಬೂತಾಳೆ - ಕತ್ತಾಳೆ ಜಾತಿಯ ಮರ

ಗಡಿಗಡಿರಾಜುಗಾದೊ - ಎಲ್ಲ ರಾಜರಿಗೂ ಪತ್ರಗಳನ್ನು ಕಳುಹಿಸುವುದು

ಗಡಿಯಾರದೆಣ್ಣು - ಸಮಯವರಿತ ಹೆಣ್ಣು

ಗಣಿಯಾ - ನೀರು ಗನಮತಿ - ಹೆಚ್ಚಿನ ಬುದ್ಧಿ

ಗರುಡಾಳ - ಗರುಡ ಪಕ್ಷಿ ಗ್ವಾಡ - ಗೋಡೆ

ಗಳ - ಮರದ ದಪ್ಪನಾದ ಉದ್ದವಾದ ಕೋಲು

ಗಿಂಡಿ - ಕರಗ ಗುದ್ದು - ಗುದ್ದಲಿ

ಗಿಲಾಕುಮಂಚ - ಗೆಜ್ಜೆಯ ಮಂಚ

ಗುಡ್ಡೆ - ಗುಡ್ಡ (ಎತ್ತರ ಪ್ರದೇಶ)

ಗುಡುಗಾಡಿ - ಅಬ್ಬರಿಸಿ ಗುಡಿ - ದೇವಸ್ಥಾನ

ಗುನ್ನಂಪಟ್ಟೆ - ಬಣ್ಣದ ಕಾಗದ

ಗುರುಗಂಜಿ - ಒಂದು ರೀತಿಯ ಬಳ್ಳಿಯಿಂದ ಬರುವ ಬಣ್ಣದ ಬೀಜ

ಗೇಯುವಾಗ - ಕೆಲಸ ಮಾಡುವಾಗ

ಗೊಂಡೇದ - ಎದೆಯ ಭಾಗದ

ಚಲಕಾತಿ - ಹಟಗಾತಿ ಚವರಾವ - ಚಾಮರವ

ಚವುರ - ಕೂದಲು ತೆಗೆಯುವ ಕೆಲಸ ಚಿಕ್ಕರೆ - ಚಿಕ್ಕ ಕೆರೆ

ಚಿಂತಾಕು - ಕೊರಳಿಗೆ ಹಾಕುವ ವೃತ್ತಾಕಾರದ ಚಿನ್ನದ ಆಭರಣ

ಚಿತ್ತಾರ - ಚಿತ್ರ ಚುಟುಕ - ಸಣ್ಣದು, ಬೆಲೆಯಿಲ್ಲದ್ದು

ಚೂಜಿ - ಸೂಜಿ ಚೌಲಾವ - ಚಾಮರವ

ಜಗತಿ - ನೆಲದಿಂದ ಮೇಲಕ್ಕೆ ಕಟ್ಟಿದ ಕಲ್ಲಿನ ಪಡಸಾಲೆ

ಜಗವಾಜಗ್ಗರಿಸಿ - ಜಗವೇ ನಡುಗುವಂತೆ

ಜಂತಿ - ಮಾಳಿಗೆಯ ಒಳಭಾಗ

ಜಂಪನಾಡುತ್ತಾಳೆ - ಕುಣಿದಾಡುತ್ತಾಳೆ

ಜವಳೆ - ಉದ್ದವಾದ ಬಿದಿರು ಕೋಲು

ಜಾಗಟೆ - ದಾಸಯ್ಯನ ಗಂಟೆ ಜೂಜಾಡಿ - ಸ್ಪರ್ಧೆ ಹೂಡಿ

ತಕ್ಕೊಂಡು - ತೆಗೆದುಕೊಂಡು ತಡಿ - ಕೆರೆಯ ದಡ

ತನಿ - ಹಾಲು ತಳಗಾಳೆ - ತಂಗುವುದು

ತಳವಾಡಿ - ತೋಟಿ ತಳಿಗೆ - ಶ್ರೇಷ್ಠವಾದ ಅನ್ನ

ತಾನ - ಒಳಮನೆ, ಗರ್ಭಗುಡಿ

ತಾಳ - ವಾದ್ಯದ ಒಂದು ವಿಧ ತಾಳಲ್ಲಿ - ತಳದಲ್ಲಿ

ತಾಳು - ಕೆಳಭಾಗ ತಿಪುರ - ತ್ರಿಪುರ

ತಿಂಗಳುದ್ದಿ - ಚಂದ್ರನ ಉದಯದ ಸಮಯ

ತಿರುವಾನ - ತಿರುಗಿಸುತ್ತಾನೆ ತೆಂಕಲ - ದಕ್ಷಿಣದ

ತಪ್ಪ -- ನೀರಿನ ಮೇಲೆ ತೇಲುವ ಮರದ ಹಲಗೆಯ ದೋಣಿ

ತುಂಡೆ - ಗಿಡ್ಡವಾದ ಅಥವಾ ಕುಳ್ಳವಾದ ಎತ್ತುಗಳು

ತೂಬು - ಕೆರೆಯಿಂದ ಬಯಲಿಗೆ ನೀರು ಬರುವ ತೂತು

ತೋಪು - ಮರಗಳ ಗುಂಪು

ತೊಂಬೈನೂರು - ತೊಂಬತ್ತುನೂರು

ದಕ್ಕಾದೆ - ಕೈಗೆ ಸಿಕ್ಕದೆ ದಂಡ - ಹೂವಿನ ಹಾರ

ದಂಬಾಡಿ - ಪೂಜಾರಿ ದಸರಿ - ?

ದಸಿ - ಮೊಳಕೆ ದಾಳ - ಪಗಡೆ

ದಿಂಡು - ಕಲ್ಲು ದಿಳ್ಳಿ - ದೆಹಲಿ

ದಿಸೆ - ದಿವಸ ದುಂಡುದೋಳು - ದುಂಡಾದ ತೋಳು

ದುಂಬದ್ದಿ - ದೂಳು ಎಬ್ಬಿಸಿ

ದೂಪ - ಗಂಧದ ಚಕ್ಕೆಯ ಹೊಗೆ

ದೇವಾಂಗ - ವಸ್ತ್ರ (ಸೀರೆ)

ದೋತರ - ಬೆನ್ನು ಬಟ್ಟೆ

ದೊಂಕಾಣಿ - ?

ನಡಮುಡಿ - ಗುಡ್ಡರ ದಾರಿಯಲ್ಲಿ ಹಾಸುವ ಮಡಿಬಟ್ಟೆ

ನರಿಗೆ - ಸೀರೆ ಉಡುವಾಗ ಬರುವ ಸೊಕ್ಕು

ನವನಿವಿಯ - ಹೊಸದಾಗಿ ಕಟ್ಟಿದ

ನಾಗಾಲೋಟ - ಅತಿವೇಗ ನಾಜೋಕು - ಸುಂದರ

ನಾವಣದ - ಉಪ್ಪಿನ ನಿಗರಿಲ್ಲ - ಸಮಯವಿಲ್ಲ

ನಿಪಕೊಡೋ -? ನಿಲುಬಾರ - ಹೆಚ್ಚಾದ ಭಾರ

ನಿಲುವಂಗಿ - ಉದ್ದನೆಯ ಕೋಟು

ನಿಸಿರಾತ್ರಿ - ಅರ್ಧರಾತ್ರಿ   ನೀರುಮುಳುಕು - ಸ್ನಾನಮಾಡು

ನಂಬಿದ - ನಂಬಿರುವನೆಯಿ - ಹೊಲಿಸಿ (ನೇಯಿಸಿ)

ನೆಲ್ಲುಲ್ಲು - ಬತ್ತದ ಹುಲ್ಲು ನುರುದಿ - ಹುರಿದು

ನ್ಯಾಕೆ - ತೊಟ್ಟಿಲು ಕಟ್ಟುವ ಹಗ್ಗ

ನೌಲಿಂಡು - ನವಿಲುಗಳ ಗುಂಪು

ಪಚ್ಚೆ - ಹಸಿರು ಪಂಚಂಗದರಳು - ?

ಪಂಜು - ಬಟ್ಟೆಸುತ್ತಿ ಎಣ್ಣೆಯಿಂದ ಉರಿಸುವ ದೀಪ

ಪಟ್ಟೆ - ಮರದ ತೊಗಟೆ, ರೇಷ್ಮೆ ಸೀರೆ

ಪರಿಸೆ - ಜಾತ್ರೆ ಪಲ್ಲಕ್ಕಿ - ಪಾಲಕಿ

ಪಿಂಡಿ - ಸಾಮಾನುಗಳನ್ನು ಒತ್ತಟ್ಟಿಗೆ ಸೇರಿಸಿ ಕಟ್ಟುವುದು

ಪಿಲ್ಲಿ - ಕಾಲುಂಗುರದ ಪಕ್ಕದ ಗುಬ್ಬಿ ಪುಣುಗು -

ಪುಣಗಿನ ಬೆಕ್ಕಿನ ರೋಮ ಪುಟ ನೆಗೆಯುವುದು - ಹಾರುವುದು

ಪೌಳಿ - ಸುತ್ತಲೂ ಗೋಡೆ ಬಜ್ಞಾಣೆ - ಬಹುಜಾಣೆ

ಬಟ್ಟು - ಹಣೆಯ ಕುಂಕುಮ ಬಡಗಲ - ಉತ್ತರ ದಿಕ್ಕಿನ

ಬರಗಾದಕೂಳೆಲ್ಲಿ - ಕೂಳೆ ಕೀಳದಿರುವ ಹೊಲದಲ್ಲಿ

ಬಳ್ಳ - ಕೊಳಗ (ಅಳತೆಯ ಪರಿಮಾಣ)

ಬಾಗಬಾಗರಿಗೆಲ್ಲ - ಮೂಲೆಮೂಲೆಗೆಲ್ಲ

ಬಾಯ್‌ಕಟ್ಟು - ಬಾಯಿಗೆ ಬಟ್ಟೆ ಕಟ್ಟಿಕೊಳ್ಳುವುದು

ಬಾಳೇಪಟ್ಟು - ಬಾಳೇಗಿಡದ ನಾರು

ಬಾಳೇಹಣ್ಣಿನ ಗಾರೆ - ನಯವಾದ ಗಾರ

ಬ್ರಾಂಬ್ರಾ - ಬ್ರಾಹ್ಮಣರ ಬ್ಯಾಸರಾವ - ಬೇಸರವ

ಬ್ಯಾಗೆ - ಬೇಗೆ

ಬಿನ್ನಾಣಿ - ವಯ್ಯಾರಿ ಬೆದುರಾವೊ - ಹೆದರುತ್ತವೆ

ಬೆವರಡ್ಡಿ - ಬೆವರು ಸುರಿಸಿ

ಬೆಳಕರಿಯೋ ಹೊತ್ತು - ಬೆಳಕಾಗುವ ಸಮಯ

ಬುಟ್ಟನು - ಬಿಡುವೆನು     ಬುಡುಬುಡಕೆ - ಸಣ್ಣ ಡಮರುಗ

ಬೋರೆ - ಬಾರೆ (ಎತ್ತರದ ಸ್ಥಳ)

ಮಕರಂಬೆ - ಕಡಿವಾಣ     ಮಕಸಿರಿ - ಪ್ರಕಾಶಮಾನ

ಮಕವನ್ನೆ - ಮುಖವನ್ನು

ಮಚ್ಚರಿ - ದ್ವೇಷಪೂರಿತವಾದವಳು

ಮಡಿ - ತೋಟ     ಮಂಡೆ - ತಲೆ

ಮಣಿಗುಂಬ - ಮಾಣಿಕ್ಯದ ಮಣಿಯಿಂದ ಮಾಡಿದ ಕೊಡು

ಮರ - ? ಮಲಕಾದೆ - ಅಲುಗಾಡುವುದಿಲ್ಲ

ಮಲ್ಲಿ - ಮನೆಯಲ್ಲಿ ಮಳುದೇವರೆ - ಮಳೆದೇವರ

ಮಹಿಮೆ - ಪವಾಡ

ಮಾಗೆ ಇವಲಲ್ಲಿ - ಮಾಗೆಕಾಲದ ಯುವದಲ್ಲಿ

ಮಾಣಿಕದ - - ಮಾಣಿಕ್ಯದ ಮಾಲಾವ - ಭಾಗುವುದು

ಮಾವರು - ಮಾನವಂತ ಜನರು

ಮೂಗಳ - ಮೂವತ್ತು ಸೇರು ಮೊಗ - ತುಂಬಿಕೋ

ಮೂರಾಳುದ್ದಿ ಹೊತ್ತು - ಮೂರು ಆಳುಗಳ ಎತ್ತರದಲ್ಲಿರುವ ಸೂರ್ಯ

ಯಾಳ್ಯಾದಲ್ಲಿ - ವೇಳೆಯಲ್ಲಿ ಯುವಾರಿಸಿ - ವಿಚಾರಿಸಿ

ಯೀಡು - ಸಮನಾಗಿ ಹೊಂದಿಕೊಳ್ಳುವ

ರಜ - ಕಸರವಕೆ - ಕುಪ್ಪುಸ ರಾಕ್ಸಿ - ರಾಕ್ಷಸಿ

ರೇಕೇಲಿ - ಹಣೆಯಲ್ಲಿ

ಲಂಕೆ - ಲಂಕಾನಗರ

ವಕ್ಕಾಳ - ಸೇರವಳ ವಡದುಮೂಡು - ಉದ್ಭವಿಸು

ವಡು - ಕೆರೆ ವತ್ತಾರೆ - ಬೆಳಗ್ಗೆ

ವರದು - ಎರೆಯುವುದು ವಲ್ಲಿ - ದೋತ್ರ (ದುಪಟಿ)

ವಾಡಂಬೆ - ಒಪ್ಪಿಕೊಳ್ಳುವುದು ವಾಮ - ಹೋಮ

ವಾಲೇಸಿ - ಆವೇಶ ವುಟ್ಟೆ - ತೊಟ್ಟುಕೊಂಡು

ವೊಡ್ಡಿವಾಣ - ಡಾಬುವೊನ್ನು - ಚಿನ್ನ

ಸತ್ತು - ಸ್ವತ್ತು (ಆಸ್ತಿ) ಸಪ್ಪಡಸರುವೊತ್ತು - ಮಧ್ಯರಾತ್ರಿ

ಸಾಜ - ಸಾಕ್ಷಾತ್ ಸಾರಾಳೆ - ಕೂಗುವುದು

ಸಾಂಬ್ರಾಣಿ - ಸುವಾಸನೆಯ ಹೊಗೆ ಕೊಡುವ ವಸ್ತು

ಸಿಕ್ಕು - ಕೂದಲು ಅಂಟಿಕೊಳ್ಳುವುದು

ಸಿಡಿಯನಾಡುವ - ನೆಗೆದಾಡುವ ಸಿಸು - ಮಗು

ಸೂಲಗದ - ಶೂಲದ,  ಸುರುವಂತ - ಸುರಿಯುವಂತಹ

ಸುವ್ವಾರಿ - ಮಂಗಳಕರವಾದ ಹೆಣ್ಣು

ಸೊಡ್ಡಲು- ಮರದ ತುಂಡು ಸೊಲ್ಲು - ಮಾತು


ಹಾಲ್‌ಮಡ್ಡಿ - ಸುವಾಸನೆಯ ಮೇಣ  ಹಿಟ್ಟು - ಮುದ್ದೆ

ಹುಲ್ಲುಗುರು - ಮೈಮೇಲೆ ಏಳುವ ಗಂಧೆ

ಹೊಲಮಾಳ - ಊರ ಹೊರಗಿನ ಬಯಲು



ಗರ್ಭಗುಡಿಯಲ್ಲಿ ಚೌಡಮ್ಮನ ಆಗಿನ ಮೂರ್ತಿ



ಹೆಬ್ಬಾರಮ್ಮ



ಜನಿವಾರ ತೊಟ್ಟ ಹೆಬ್ಬಾರೆ ಗುಡ್ಡರು



ರಂಗ ತಾಲೀಮು

III



ಕೊಂಡದ ಸೌದೆ ಹೇರು



ಕೊಂಡದ ಹೆಬ್ಬಾಗಿಲಿನಲ್ಲಿ ಕೊಂಡದ ಸೌದೆಗಳು

IV




ಚೌಡಮ್ಮನ ಆಗಿನ ಗುಡಿ



ಬಂಡಿಗಳಲ್ಲಿ ಕೊಂಡದ ಸೌದೆ



ಮಡೆ ಬೇಯಿಸುವ ಆಚರಣೆ



ಮಡೆಯ ಹತ್ತಿರದ ನೋಟ



ಕೊಂಡದ ಸೌದೆಯ ರಾಶಿ




ಬೀದಿಯಲ್ಲಿ ದೇವರು ಮೆರೆಯುತ್ತಿರುವುದು




ದೇವರ ತಬ್ಬಾಟಿ



ಹೊರ ಊರಿನಿಂದ ಜವಳಿಗಳು ಹೊರಡುತ್ತಿರುವುದು.



ಶಾಸನದ ಕಲ್ಲು



ಜಾತ್ರೆಯ ಜನಜಂಗುಳಿ